ಭದ್ರಾ ಮೇಲ್ದಂಡೆ ಯೋಜನೆ : ಇತ್ತೀಚಿನ ಬೆಳವಣಿಗೆಗಳ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ಚಿದಾನಂದಪ್ಪ ಕೆ.

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಪ್ರವಾಚಕರು

ಚರಿತ್ರೆ ವಿಭಾಗ

ಚರಿತ್ರೆ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೮

277

ಭದ್ರಾ ಮೇಲ್ದಂಡೆ ಯೋಜನೆ : ಇತ್ತೀಚಿನ ಚಳವಳಿಗಳ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ಚಿದಾನಂದಪ್ಪ ಕೆ.

ಮಾರ್ಗದರ್ಶಕರು

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಪ್ರವಾಚಕರು

ಚರಿತ್ರೆ ವಿಭಾಗ

ಚರಿತ್ರೆ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೦೮

ಪ್ರಮಾಣ ಪತ್ರ

"ಭದ್ರಾ ಮೇಲ್ದಂಡೆ ಯೋಜನೆ : ಇತ್ತೀಚಿನ ಚಳವಳಿಗಳ ಅಧ್ಯಯನ" ಎಂಬ ನಿಬಂಧವನ್ನು **ಡಾ. ವಿರೂಪಾಕ್ಷಿ ಪೂಜಾರಹಳ್ಳಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 13/10/2008

ಚಿದಾನಂದಪ್ಪ. ಕೆ.
ಸಂಶೋಧಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ದೃಢೀಕರಣ ಪತ್ರ

"ಭದ್ರಾ ಮೇಲ್ದಂಡೆ ಯೋಜನೆ : ಇತ್ತೀಚಿನ ಚಳವಳಿಗಳ ಅಧ್ಯಯನ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಚಿದಾನಂದಪ್ಪ ಕೆ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ:

ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಕೃತಜ್ಞತೆಗಳು

ಭದ್ರಾ ಮೇಲ್ದಂಡೆ ಯೋಜನೆ : ಇತ್ತೀಚಿನ ಚಳವಳಿಗಳ ಅಧ್ಯಯನ ಎಂಬ ನಿಬಂಧವನ್ನು ಮಂಡಿಸುತ್ತಿರುವ ಈ ಸಂದರ್ಭದಲ್ಲಿ ಅನೇಕರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸಬೇಕಾಗಿದೆ.

ಸಂಶೋಧನೆಯ ಸಂದರ್ಭದಲ್ಲಿ ಸೂಕ್ತ ಸಲಹೆ ಸೂಚನೆ ನೀಡುವುದರೊಂದಿಗೆ ತಾಳ್ಮೆ ಸಹನೆಯಿಂದ ತಪ್ಪುಗಳನ್ನು ತಿದ್ದಿ ಸರಿಯಾದ ರೀತಿಯ ಮಾರ್ಗದರ್ಶನ ನೀಡುವುದರೊಂದಿಗೆ ಅತ್ಯಂತ ಕಾಳಜಿಯಿಂದ ಪ್ರೋತ್ಸಾಹ ಬೆಂಬಲ ನೀಡಿದ ಮಾರ್ಗದರ್ಶಕರೂ ಹಾಗೂ ವಿಭಾಗದ ಮುಖ್ಯಸ್ಥರೂ ಆದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರಿಗೆ ನನ್ನ ಕೃತಜ್ಞತೆಗಳು.

ಅಧ್ಯಯನದ ಅವಧಿಯಲ್ಲಿ ವಿವಿಧ ಆಯಾಮಗಳನ್ನು ಬೋಧಿಸಿದ ಪ್ರೊ. ಲಕ್ಷ್ಮಣ್. ತೆಲಗಾವಿ, ಪ್ರೊ. ತಂಬಂಡ ವಿಜಯ್ ಪೂಣಚ್ಚ, ಪ್ರೊ. ಸಿ.ಆರ್.ಗೋವಿಂದರಾಜು, ಡಾ. ಮೋಹನ್‌ಕೃಷ್ಣ ರೈ, ಡಾ. ಚಿನ್ನಸ್ವಾಮಿ ಸೋಸಲೆ, ಹಾಗೂ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರುಗಳ ಸಹಕಾರಕ್ಕೆ ನನ್ನ ಕೃತಜ್ಞತೆಗಳು.

ನನ್ನ ಸಂಶೋಧನೆಯನ್ನು ನಡೆಸಲು ಸೂಕ್ತ ವಾತಾವರಣವನ್ನು ಕಲ್ಪಿಸಿದ ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ, ಅಧ್ಯಯನಾಂಗದ ನಿರ್ದೇಶಕರಿಗೆ, ಗ್ರಂಥಪಾಲಕರಿಗೆ ಹಾಗೂ ಪ.ಜಾ., ಪ.ಪಂ. ಘಟಕದ ಸಂಯೋಜನಾಧಿಕಾರಿಗಳಿಗೆ ಅಭಾರಿಯಾಗಿದ್ದೇನೆ.

ಈ ಸಂಪ್ರಬಂಧ ಸಿದ್ದಗೊಳಿಸಲು ಆಕರಗಳನ್ನು ಸಂಗ್ರಹಿಸಲು ನೆರವು ನೀಡಿದ ಕೋದಂಡರಾಮಯ್ಯ ಮಾಜಿ ಸಂಸದರು, ಎಂ.ಜಯಣ್ಣ ಅಧ್ಯಕ್ಷರು, ಚಿತ್ರದುರ್ಗ, ಜಿಲ್ಲಾ ನೀರಾವರಿ ಹೋರಾಟ ಸಮಿತಿ, ಡಾ. ಬಂಜಿಗೆರೆ ಜಯಪ್ರಕಾಶ, ನೀರಾವರಿ ಹೋರಾಟ ಸಮಿತಿ, ಸಂಚಾಲಕರು, ಕೆ.ಆರ್.ದಯಾನಂದ, ಸಮಿತಿ ಖಜಾಂಚಿ, ಚಿಕ್ಕಪ್ಪನಹಳ್ಳಿ ಷಣ್ಮುಖ, ಪತ್ರಕರ್ತರು, ಕಸವನಹಳ್ಳಿ ರಮೇಶ್, ಪುಟ್ಟಲಿಂಗಪ್ಪ, ಬಸವರಾಜಪ್ಪ, ಪ್ರಧಾನ ಕಾರ್ಯದಲ್ಲಿ ಕರ್ನಾಟಕ ರಾಜ್ಯ ರೈತರ ಸಂಘ, ಸಂಶೋಧನಾರ್ಥಿಗಳಾದ ಹಿರೇಬಿದ್ರಿ ಹೊಳಿಬಸಪ್ಪ, ಹಣಮಂತ್ರಾಯ ದೊಡ್ಡಮನಿ, ದೇವರಕುರಿ ಓಬಯ್ಯ, ಹೂಲಪ್ಪ, ಇವರಿಗೆ ನನ್ನ ಕೃತಜ್ಞತೆಗಳು.

ಸದಾ ನನ್ನ ಶ್ರೇಯೋಭಿವೃದ್ಧಿ ಬಯಸುವಂತಹ ತಂದೆ ತಾಯಿಯರಾದ ದಿ॥ ಕರಿಯಪ್ಪ, ಶ್ರೀಮತಿ. ಶಿವಮ್ಮ ಹಾಗೂ ವಿದ್ಯಾಭ್ಯಾಸಕ್ಕೆ ಎಲ್ಲಾ ರೀತಿಯಿಂದಲೂ ಸಹಕಾರ ನೀಡುತ್ತಿರುವ ತಂದೆ ತಾಯಿ ಸಮಾನ ಅಣ್ಣ, ಅತ್ತಿಗೆಯರಾದ ಶ್ರೀ.ಕೆ. ನಾಗರಾಜಪ್ಪ ಮತ್ತು ಶ್ರೀಮತಿ ಪವಿತ್ರ ಹಾಗೂ ತಮ್ಮನಾದ ಹೇಮರಾಜ್, ಪುಟಾಣಿಗಳಾದ ಕಿಷನ್, ವಿಘ್ನೇಶ್, ಅಕ್ಕಂದಿರಾದ ದೇವಿರಮ್ಮ, ದ್ರಾಕ್ಷಾಯಣಮ್ಮ, ಮಾವರಾದ ಪರಮೇಶ್ವರಪ್ಪ, ಬಸವರಾಜಪ್ಪ ಇವರುಗಳಿಗೆ ನನ್ನ ಕೃತಜ್ಞತೆಗಳು.

ನನ್ನ ಯಶಸ್ಸನ್ನೆ ಬಯಸುತ್ತಿರುವ ಚಿಕ್ಕಪ್ಪರಾದ ರಾಮಪ್ಪ, ಚಿಕ್ಕಮ್ಮರಾದ ಪಾರ್ವತಮ್ಮ ಅವರಿಗೆ ನನ್ನ ಕೃತಜ್ಞತೆಗಳು. ಆತ್ಮೀಯ ಗೆಳೆಯರಾದ ಡಿ. ಮೋಹನ್ ಕುಮಾರ್, ಜಗದೀಶ್, ಎಸ್.ಕೆ.ಗಿರೀಶ್, ಸ್ವಾಮಿ.ಎಸ್., ಸೋಮನಾಥ, ಮಲ್ಲಿ, ಪ್ರಸನ್ನ, ನಟರಾಜ, ಗೆಳತಿ ಸವಿತ ಇವರಿಗೆ ನನ್ನ ಕೃತಜ್ಞತೆಗಳು.

ಈ ಸಂಪ್ರಬಂಧ ಪೂರ್ಣರೂಪವನ್ನು ಪಡೆಯಲು ಹೆಚ್ಚು ಶ್ರಮಿಸಿದ ಉತ್ಸುಕ ಗೆಳೆಯರಾದ ಜಿ.ಎಂ.ಲೋಕೇಶ್, ರಾಕೇಶ್. ಎಚ್.ಎಸ್., ಸಂತೋಷ್‌ಕುಮಾರ, ಸ್ವಾಮಿ.ಕೆ.ಎಸ್., ನಾರಾಯಣಸ್ವಾಮಿ, ರೇವಿಣ, ವಿಜಯಲಕ್ಷ್ಮೀ, ಉಮೇಶ್, ಕೆ. ಪರಮೇಶ್ವರ ಜಾನೆ, ಹಾಗೂ ನನ್ನ ಎಲ್ಲಾ ಸ್ನೇಹಿತರಿಗೂ ಹೃದಯಸ್ಪರ್ಶಿ ಕೃತಜ್ಞತೆಗಳು.

– ಚಿದಾನಂದಪ್ಪ. ಕೆ.

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಹಾಗೂ ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಹಾಗೂ ಸ್ವರೂಪ

ಪ್ರಸ್ತಾವನೆ

"ಜೀವಂ ಜೀವನಾಧಾರಂ" ಎಂಬ ಸಂಸ್ಕೃತ ವಾಣಿಯೊಂದಿದೆ. ಸಂಸ್ಕೃತದಲ್ಲಿ 'ಜೀವನ' ಎಂಬ ಪದಕ್ಕೆ ಜಲ ಅಥವಾ ನೀರು ಎಂದರ್ಥ."[೧] ನೀರಿಲ್ಲದೆ ಜೀವನವಿಲ್ಲ. ಒಂದು ನಾಡಿನ ಸರ್ವತೋಮುಖ ಅಭಿವೃದ್ಧಿಯು ಆ ನಾಡಿನ ನೀರಾವರಿ ಸ್ಥಿತಿಯನ್ನು ಅವಲಂಬಿಸಿದೆ. ನಿಸರ್ಗದ ಮಹಾ ವರದಾನವೆನಿಸಿರುವ ನದಿಗಳ ಉಪಯುಕ್ತತೆ ಮತ್ತು ಬಳಕೆಯ ಬಗ್ಗೆ ಪ್ರಾಚೀನ ಕಾಲದಿಂದಲೂ ಪ್ರಜ್ಞಾವಂತರು ಚಿಂತನೆ ನಡೆಸುತ್ತಾ ಬಂದಿದ್ದಾರೆ. ಕೃಷಿಕರ ಬದುಕಿಗೆ ಹಾಸುಹೊಕ್ಕಾಗಿರುವ ನದಿಗಳು ಕೈಗಾರಿಕೆಗಳ ಬೆಳವಣಿಗೆಗೂ ಸಹ ಪೂರಕವಾಗಿವೆ. ಮಾನವನ ವಿವಿದೊದ್ದೇಶ ಯೋಜನೆಗಳಿಗೆ ನದಿ, ನೀರು ಬಳಕೆಯಾಗುತ್ತದೆ.

'ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ
ರ್ಗ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆಯೆನ್ನುತ್ತಿಂತೆಲ್ಲನೊಪಿಂದೆ ತಾ(ಂ)
ಯೆರೆದಳಾಲೆರವಂದು ತೊಟ್ಟ ಕಿವಿಯೊಳ್ ಲಕ್ಷ್ಮೀಧರಾಮಾತ್ಯಾನಾ!"[೨]

ವಿಜಯನಗರದ ಅರಸ ಪ್ರೌಢಪ್ರತಾಪರಾಯನ (೧೪೦೬-೧೪೨೨) ಮಂತ್ರಿ ಲಕ್ಷ್ಮೀದರನು ಮಗುವಾಗಿದ್ದ ಅವಧಿಯಲ್ಲಿ ತಾಯಿ ಹಾಲೆರೆಯುವಾಗ ಹಾಡಿದ ನೀತಿ ಪಾಠ ಇದಾಗಿದೆ. ಇಂಥ ತಾಯಂದಿರ ಪ್ರೋತ್ಸಾಹ ಉತ್ಸಾಹಗಳಿಂದ ನಮ್ಮ ಪೂರ್ವಿಕ ರಾಜ ಮಹಾರಾಜರು ಕೆರೆ, ಕಟ್ಟೆ, ಅಣೆಕಟ್ಟು, ಒಡ್ಡುಗಳನ್ನು ಕಟ್ಟಿಸುವುದರಲ್ಲಿ ಆಸಕ್ತಿದಾಯಕರಾಗಿದ್ದರು.

ಜನತೆಯ ಆರ್ಥಿಕ ಉತ್ಕರ್ಷಕ್ಕೆ ಕಾರಣವಾಗುವಂತಹ ನದಿ ನೀರಿನ ವಿಚಾರ ಇತ್ತೀಚಿಗೆ ನಾಡಿನ ಎಲ್ಲ ವರ್ಗದವರ ಗಮನವನ್ನು ಸೆಳೆಯುತ್ತಿರುವುದು ಒಂದು ಸ್ವಾಗತಾರ್ಹವೂ ಶುಭ ಸೂಚಕವೂ ಆದ ವಿದ್ಯಮಾನ. ಇಂಥ ವಿಚಾರದಲ್ಲಿ ಭದ್ರಾನದಿ ಮತ್ತು ಜಲಾಶಯ ಹಾಗೂ ಮೇಲ್ದಂಡೆ ಯೋಜನೆಯೂ ಒಂದಾಗಿದೆ.

ಭದ್ರಾನದಿಯು ಕರ್ನಾಟಕದ ಪ್ರಮುಖ ನದಿಗಳಲ್ಲಿ ಒಂದು. ಇದು ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಹರಿಯುವುದು. ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಘಟ್ಟಗಳ ವರಹಾ

[illegible]

ಪರ್ವತದ ಗಂಗಾ ಮೂಲದಲ್ಲಿ ಉಗಮವಾಗಿ ಚಿಕ್ಕಮಗಳೂರು ಮೂಲಕ ಹರಿದು ಶಿವಮೊಗ್ಗ ಜಿಲ್ಲೆಯ ಕೂಡಲಿ ಹತ್ತಿರ ತುಂಗಾ ನದಿಯೊಂದಿಗೆ ಸಂಗಮಗೊಂಡು ತುಂಗಭದ್ರಾ ನದಿ ಎಂದು ಕರೆಸಿಕೊಳ್ಳುವ ಈ ನದಿಯ ಉದ್ದ ೧,೯೮.೮ ಕಿ.ಮೀ.

ಹಿಂದಿನ ಮೈಸೂರು ಸರ್ಕಾರ ೧೯೪೬ರಲ್ಲಿ ವಿವಿದೋದ್ದೇಶ ಯೋಜನೆಗಾಗಿ ಭದ್ರಾ ನದಿಗೆ ಅಡ್ಡಲಾಗಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಹತ್ತಿರ ಜಲಾಶಯ ನಿರ್ಮಿಸಲು ಪ್ರಾರಂಭಿಸಲಾಯಿತು. ಇದು ೧೯೫೩ರಲ್ಲಿ ಪೂರ್ಣಗೊಂಡಿತು. ಈ ಯೋಜನೆಯಿಂದ ಬಯಲು ಪ್ರದೇಶಗಳಾದ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ ಹಾಗೂ ತುಮಕೂರು ಜಿಲ್ಲೆಗಳಿಗೆ ನೀರಾವರಿ ಹಾಗೂ ಕುಡಿಯುವ ನೀರನ್ನು ಒದಗಿಸುವ ಉದ್ದೇಶವನ್ನು ಹೊಂದಿತ್ತು. ಆದರೆ ಈ ಜಲಾಶಯದಿಂದ ಕೇವಲ ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಗಳು ಮಾತ್ರ ಉಪಯೋಗ ಪಡೆಯುತ್ತಿದ್ದು, ಉಳಿದ ಚಿತ್ರದುರ್ಗ, ಬಳ್ಳಾರಿ, ತುಮಕೂರು ಜಿಲ್ಲೆಗಳು ನೀರಿನಿಂದ ವಂಚಿತವಾಗಿವೆ. ಈ ಸಮಸ್ಯೆ ಅರಿತ ರಾಜ್ಯಸರ್ಕಾರ ಬಯಲು ನಾಡಿಗೆ ನೀರನ್ನೊದಗಿಸುವ ಉದ್ದೇಶದಿಂದ ಭದ್ರಾ ಮೇಲ್ದಂಡೆ ಯೋಜನೆಯನ್ನು ೧೯೬೮ ರಲ್ಲಿ ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ಶಿಲಾನ್ಯಾಸ ಮಾಡಲಾಯಿತು.

ಭದ್ರಾ ಮೇಲ್ದಂಡೆ ಯೋಜನೆಯ ಮುಖ್ಯ ಉದ್ದೇಶ ಭದ್ರಾ ಜಲಾಶಯದ ಮೇಲ್ಭಾಗದಲ್ಲಿ ಮತ್ತೊಂದು ಅಣೆಕಟ್ಟನ್ನು ನಿರ್ಮಿಸಿ ಅದರ ಮೂಲಕ ಬರಪೀಡಿತ ಪ್ರದೇಶಗಳಾದ ಚಿತ್ರದುರ್ಗ, ಬಳ್ಳಾರಿ, ತುಮಕೂರು ಹಾಗೂ ಕೋಲಾರ ಜಿಲ್ಲೆಗಳ ಕೃಷಿ ಭೂಮಿಗೆ ನೀರನ್ನೊದಗಿಸಿ ಕೃಷಿಯನ್ನು ಅಭಿವೃದ್ಧಿ ಪಡಿಸುವುದಾಗಿತ್ತು. ಆದರೆ ಈ ಯೋಜನೆಗೆ ಪ್ರಾರಂಭದಲ್ಲಿಯೇ ವಿರೋಧಗಳು ಬಂದು ಯೋಜನೆ ನೆನೆಗುದಿಗೆ ಬಿತ್ತು. ಈ ಯೋಜನೆ ಸಾಧಕ ಬಾಧಕಗಳ ಬಗ್ಗೆ ವಿವರಗಳನ್ನು ಪಡೆಯಲು ತಜ್ಞರ ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳ ವಿವರಗಳನ್ನು ಆಧರಿಸಿ ಭದ್ರಾ ಮೇಲ್ದಂಡೆ ಯೋಜನೆಯಿಂದ ಸಾಕಷ್ಟು ಪರಿಸರ ನಾಶವಾಗುತ್ತದೆ ಎಂಬುದನ್ನು ಮನಗಂಡ ಸರ್ಕಾರ ೧೯೯೮ರಲ್ಲಿ ಮುಖ್ಯಮಂತ್ರಿ ಸ್ಥಾನದಲ್ಲಿದ್ದ ಜೆ.ಎಚ್. ಪಟೇಲರು ತುಂಗಾತೀರವು ಎಂಬ ಯೋಜನೆಗೆ ಅಸ್ತಿಭಾರ ಹಾಕಲಾಯಿತು. ಅಂದರೆ ತುಂಗಾನದಿಯಿಂದ ೧೫ ಟಿ.ಎಂ.ಸಿ. ನೀರನ್ನು ಭದ್ರಾಜಲಾಶಯಕ್ಕೆ ತಿರುಗಿಸುವುದು ಹಾಗೂ ಭದ್ರಾದಲ್ಲಿ ೬ ಟಿ.ಎಂ.ಸಿ. ನೀರನ್ನು ಉಳಿಸಿಕೊಂಡು ಒಟ್ಟು ೨೧ ಟಿ.ಎಂ.ಸಿ. ನೀರನ್ನು ಅಜ್ಜಂಪುರದ ಮೂಲಕ ಚಿತ್ರದುರ್ಗ ಹಾಗೂ ಇತರೆ ಪ್ರದೇಶಗಳಿಗೆ ನೀರನ್ನೊದಗಿಸುವುದಾಗಿತ್ತು. ಕೇವಲ ಇಂತಹ ಆಶ್ವಾಸನೆಗಳನ್ನು ಬಯಲು ಪ್ರದೇಶದ ಜನರಿಗೆ ಸರ್ಕಾರ ಹಾಗೂ ರಾಜಕೀಯ ಪಕ್ಷಗಳು ಹೇಳುತ್ತಲೇ ಬಂದವು. ಆದರೆ ಜಾರಿ ಮಾತ್ರ ಆಗಲಿಲ್ಲ.

ಈ ಯೋಜನೆ ಜಾರಿಗಾಗಿ ೧೯೬೮ರಿಂದಲೂ ಬಯಲು ಪ್ರದೇಶದ ಜನರು ಆಗ್ರಹಿಸಿರುವುದರ ವಿಚಾರವನ್ನು ಚರಿತ್ರೆಯಲ್ಲಿ ಕಾಣಬಹುದು. ಅಂದರೆ ಈ ಒಂದು ಯೋಜನೆಯ ಕೂಗು ರೈತಮುಖಂಡರಾದ ಎಲ್.ಸಿದ್ದಪ್ಪ, ಫಕ್ಕೀರಪ್ಪಗೌಡ, ಚೆನ್ನಪ್ಪ ಪಾಟೀಲ, ಜೆ. ಹಾಲಪ್ಪಗೌಡ ಇವರಿಂದ ಹೊರಬಂದಿತು. ಕೇವಲ ಕೆಲವೇ ಜನರು ಮಾತ್ರ ಈ ಯೋಜನೆಗೆ ಆಗ್ರಹಪಡಿಸಿದ್ದು ಸರ್ಕಾರದ ಕಿವಿಗೆ ಬೀಳಲಿಲ್ಲ. ಆಗ ಭದ್ರಾ ನೀರನ್ನು ಬಯಲು ನಾಡಿಗೆ ತರಲೇಬೇಕೆಂದು ಹಲವಾರು ಪ್ರಮುಖರು, ಹೋರಾಟದ ಹಾದಿಯನ್ನು ಹಿಡಿದರು. ನೀರಿಗಾಗಿ ಹೋರಾಟ ಇವತ್ತಿನ ಕಥೆಯಲ್ಲಿ ಪ್ರಾಚೀನ ಕಾಲದಿಂದಲೂ ನದಿ ನೀರಿಗಾಗಿ ಹಲವಾರು ಯುದ್ಧಗಳು, ಚಳವಳಿಗಳು, ಸತ್ಯಾಗ್ರಹ, ಬಂದ್‌ಗಳು ನಡೆಯುತ್ತಾ ಬಂದಿವೆ. ಅಂದರೆ ತಮ್ಮ ಹಕ್ಕನ್ನು ಪಡೆಯಬೇಕಾದರೆ ಹೋರಾಟ ಅತಿ ಮುಖ್ಯವಾಗಿ ಬೇಕಾಗುತ್ತದೆ. ಕೃಷ್ಣ ಜಲವಿವಾದದ ಪ್ರಕಾರ ಚಿತ್ರದುರ್ಗ, ಬಳ್ಳಾರಿ, ತುಮಕೂರು, ಕೋಲಾರ ಜಿಲ್ಲೆಗಳು ಕೃಷ್ಣಕೊಳ್ಳದಿಂದ ೧೮೦ ಟಿ.ಎಂ.ಸಿ. ನೀರನ್ನು ಪಡೆಯುವ ಹಕ್ಕನ್ನು ಪಡೆದಿದ್ದರೂ ಅದು ಸಾಧ್ಯವಾಗದಿದ್ದಾಗ ಬರಗಾಲದಲ್ಲಿ ಬೆಂದು ಬೆಂಗಾಡಾಗಿರುವ ಜನತೆಗೆ ಹೋರಾಟ ಅನಿವಾರ್ಯವಾಯಿತು. ಇಂಥ ಹೋರಾಟದ ಮನೋಭಾವನೆ ಮೂಡಿಸಿದವರಲ್ಲಿ ಪ್ರಮುಖರೆಂದರೆ, ರಾಜ್ಯಸಭಾ ಸದಸ್ಯರಾದ ಹೆಚ್.ಹನುಮಂತಪ್ಪ, ಮಾಜಿ ಸಂಸದರಾದ ಪಿ. ಕೋದಂಡರಾಮಯ್ಯ, ಮಲ್ಲಿಕಾರ್ಜುನಪ್ಪ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು, ನೀರಾವರಿ ತಜ್ಞ ಜಿ.ಎಸ್.ಪರಮಶಿವಯ್ಯ, ಇಂದಿನ ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ವಿ.ಎಸ್.ಉಗ್ರಪ್ಪ, ಪರಿಸರವಾದಿ ಡಾ. ಬಂಜಗೆರೆ ಜಯಪ್ರಕಾಶ್, ಪತ್ರಕರ್ತ ಚಿಕ್ಕಪ್ಪನಹಳ್ಳಿ ಷಣ್ಮುಖ, ಇಂದಿನ ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯ ಅಧ್ಯಕ್ಷರಾದ ಎಂ. ಜಯಣ್ಣ, ಕಾರ್ಯಾಧ್ಯಕ್ಷರಾದ ಮುರುಘರಾಜೇಂದ್ರ ಒಡೆಯರ್, ಕೆ.ಆರ್. ದಯಾನಂದ್, ರೈತ ಮುಖಂಡ ಈಚಗಟ ಸಿದ್ದವೀರಪ್ಪ, ನೂಲೆನೂರು ಶಂಕ್ರಪ್ಪ, ಹಿರಿಯೂರು ರೈತಸಂಘದ ಅಧ್ಯಕ್ಷ ಕಸವನಹಳ್ಳಿ ರಮೇಶ್ ಇನ್ನೂ ಮುಂತಾದ ಮುಖಂಡರ ಮೂಲಕ ಯೋಜನೆ ಜಾರಿಗಾಗಿ ಹೋರಾಟಗಳು, ಚಳವಳಿ, ರಸ್ತೆ ತಡೆ, ನಗರ ಪಟ್ಟಣಗಳ ಬಂದ್‌ಗಳು ನಡೆದಿವೆ. ಇಂಥ ಹೋರಾಟದ ಫಲವಾಗಿ ಅಂದರೆ ಸುಮಾರು ನಲವತ್ತು ವರ್ಷಗಳ ಇತಿಹಾಸ ಹೊಂದಿದ ಈ ಯೋಜನೆ ಇಂದು ಜಾರಿಗೆ ಸಚಿವ ಸಂಪುಟದಿಂದ ಸರ್ವಾನುಮತ ಪಡೆದು ಸರ್ವೆಕಾರ್ಯದ ಹಂತದಲ್ಲಿದೆ. ಇನ್ನು ಐದು ವರ್ಷಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬಯಲು ನಾಡಿಗೆ ನೀರು ಹರಿಯುವುದಾಗಿ ಸರ್ಕಾರ ಹೇಳುತ್ತಿದೆ ಹಾಗೂ ಚಿತ್ರದುರ್ಗದ ಇಂದಿನ ಜಿಲ್ಲಾ ಉಸ್ತುವಾರಿ ಸಚಿವರಾದ ಜಿ. ಕರುಣಾಕರರೆಡ್ಡಿ ಹಾಗೂ ಜಿಲ್ಲೆಯ ಇನ್ನಿಬ್ಬರು ಸಚಿವರಾದ ಗೂಳಿಹಟ್ಟಿ ಡಿ.ಶೇಖರ್ ಮತ್ತು ಡಿ.ಸುಧಾಕರ್ ಈ ಯೋಜನೆಯ ಬಗ್ಗೆ ಹೆಚ್ಚು ಆಸಕ್ತಿದಾಯಕರಾಗಿದ್ದಾರೆ. ಇವರ ಉತ್ಸಾಹ ಯಾವ ರೀತಿ ಕಾರ್ಯ ಸಾಧ್ಯವಾಗುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಈ ಯೋಜನೆ ಜಾರಿಯಾಗಿ ಬಯಲು ನಾಡಲ್ಲಿ ನೀರು ಹರಿದರೆ ಬರಗಾಲ ನಿವಾರಣೆಯಾಗಬಹುದು. ಹಾಗೂ ನೊಂದ ಜನತೆಯಲ್ಲಿ ಉತ್ಸಾಹ ಬಂದು ಅವರ ಸಾಮಾಜಿಕ ಜೀವನ ಉತ್ತಮಗೊಳ್ಳುತ್ತದೆ. ಈ ಬಗೆಯ ಅನೇಕ ಹೊಸ ಸಂಗತಿಗಳನ್ನು ತಕ್ಕ ಮಟ್ಟಿಗೆ ಈ ಅಧ್ಯಯನದಲ್ಲಿ ಬೆಳಕಿಗೆ ತರಲು ಪ್ರಯತ್ನಿಸಿದ್ದೇನೆ.

ಅಧ್ಯಯನದ ಉದ್ದೇಶ

'ಭಾರತವು' ಕೃಷಿ ಪ್ರಧಾನ ರಾಷ್ಟ್ರ. ಹೀಗಾಗಿ ಇಲ್ಲಿನ ಜನ ಸಾಮಾನ್ಯರ ಬದುಕಿನೊಂದಿಗೆ ವ್ಯವಸಾಯ ಬಿಡಸಲಾರದ ನಂಟಾಗಿ ಬೆಸೆದುಕೊಂಡಿದೆ. ಜಲಾಶಯಗಳು ರೈತರಿಗೆ ಕೃಷಿ ಹಾಗೂ ವಿವಿಧ ಉದ್ದೇಶಗಳಿಗೆ ಬಹು ಸಾಧ್ಯವಾಗಿವೆ. ಅದೇ ರೀತಿ ಕರ್ನಾಟಕ ರಾಜ್ಯದ ಚಿತ್ರದುರ್ಗ, ಬಳ್ಳಾರಿ, ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಬಯಲು ಸೀಮೆಯ ಪ್ರದೇಶಕ್ಕೆ ಭದ್ರಾ ಜಲಾಶಯದಿಂದ ಭದ್ರ ಮೇಲ್ದಂಡೆ ಯೋಜನೆಯಡಿಯಲ್ಲಿ ನೀರನ್ನೊದಗಿಸಬೇಕೆಂದು ಯೋಜನೆಯಿದ್ದರೂ ಅದು ಇಂದಿಗೂ ಸಾಧ್ಯವಾಗಿರುವುದಿಲ್ಲ. ಇದರ ಬಗ್ಗೆ ಈವರೆಗೆ ಅಧ್ಯಯನಗಳು ನಡೆದಿಲ್ಲ. ಇದರ ಬಗ್ಗೆ ಸಣ್ಣಪುಟ್ಟ ಲೇಖನಗಳು ಮಾತ್ರ ಪ್ರಕಟವಾಗಿವೆ. ಈ ಕುರಿತಂತೆ ಸಂಪೂರ್ಣ ಅಧ್ಯಯನ ಕಂಡುಬರುವುದಿಲ್ಲವಾದ್ದರಿಂದ ಈ ವಿಷಯವನ್ನು ಪ್ರಸ್ತುತ ಸಂಶೋಧನೆಗೆ ಅಧ್ಯಯನ ವಸ್ತುವನ್ನಾಗಿ ಆಯ್ದುಕೊಳ್ಳಲಾಗಿದೆ.

ಕರ್ನಾಟಕದ ಬರಪೀಡಿತ ಪ್ರದೇಶಗಳಾದ ಚಿತ್ರದುರ್ಗ ಹಾಗೂ ಇತರೆ ಜಿಲ್ಲೆಗಳಿಗೆ ನೀರುಣಿಸುವ ನಿಟ್ಟಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯನ್ನು ೧೯೬೮ರಲ್ಲಿ ಸರ್ಕಾರ ರೂಪಿಸಿತು. ಆದರೆ ಇದು ಜಾರಿಯಾಗಲು ಸುಮಾರು ನಲವತ್ತು ವರ್ಷ ತೆಗೆದುಕೊಂಡಿತು. ಇದರ ಹಿಂದಿನ ಸಾಧಕಬಾಧಕಗಳೇನು ಎಂಬುದನ್ನು ತಿಳಿಸುವುದು ಇದರ ಉದ್ದೇಶವಾಗಿದೆ.

ಈ ಒಂದು ಯೋಜನೆಗೆ ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಯ ಜನರು ಮೊದಲಿನಿಂದಲೂ ವಿರೋಧಿಸುತ್ತಾ ಬಂದಿದ್ದಾರೆ. ಇವರು ವಿರೋಧಿಸಲು ಕಾರಣಗಳೇನು? ಹಾಗೂ ಉದ್ದೇಶಗಳೇನು? ಎಂಬುದನ್ನು ತಿಳಿಸುವುದು ಅಧ್ಯಯನದ ಆಶಯವಾಗಿದೆ.

ಈ ಯೋಜನೆ ಜಾರಿಗಾಗಿ ಬರಪೀಡಿತ ಜನತೆ ಹೋರಾಟ, ಚಳವಳಿ, ರಸ್ತೆತಡೆ, ಬಂದ್‌ಗಳನ್ನು ನಡೆಸುತ್ತಾ ಬಂದಿದ್ದಾರೆ. ಈಗಲೂ ಹೋರಾಟ ನಡೆಸುತ್ತಿದ್ದಾರೆ. ಇಂಥ ಹೋರಾಟವನ್ನು ಯಾರು ನಡೆಸುತ್ತಿದ್ದಾರೆ? ಏಕೆ ನಡೆಸಿದ್ದಾರೆ? ಪ್ರಮುಖ ಹೋರಾಟಗಾರರು ಯಾರು? ಇವರ ಹೋರಾಟದ ಹಾದಿ ಯಾವ ರೀತಿ ಇತ್ತು. ಇದಕ್ಕೆ ಸರ್ಕಾರದ ಪ್ರತಿಕ್ರಿಯೆ ಏನು? ಹೋರಾಟದ ಪ್ರತಿಫಲ ಏನು ಎಂಬ ವಿಚಾರಗಳನ್ನು ಬೆಳಕಿಗೆ ತರುವುದು ಈ ಒಂದು ಅಧ್ಯಯನದ ಆಶಯವಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯು ದ್ವಿಮುಖ ಹೋರಾಟಕ್ಕೆ ಎಡೆಮಾಡಿಕೊಟ್ಟಿದೆ. ಅಂದರೆ ಒಂದು ಕಡೆ ಬರದ ಬೇಗೆಯಲ್ಲಿ ಬೇಯುತ್ತಿರುವ ಬಯಲು ನಾಡಿನ ಜನರು ಭದ್ರೆ ನೀರಿಗಾಗಿ ಹೋರಾಟ ಮಾಡಿದರೆ, ಮತ್ತೊಂದು ಕಡೆ ತಮ್ಮ ಸಂಪತ್ತನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮಲೆನಾಡು ಜನರು ಹೋರಾಟ ನಡೆಸುತ್ತಿದ್ದಾರೆ. ಇದರ ಹಿಂದಿನ ಉದ್ದೇಶಗಳೇನು? ಎಂಬುದನ್ನು ತಿಳಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಈ ಬಗೆಯ ಇನ್ನೂ ಅನೇಕ ಅಂಶಗಳನ್ನು ಅಧ್ಯಯನಕ್ಕೆ ಸಂಬಂಧಪಟ್ಟಂತೆ ಚರ್ಚಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ತನ್ನದೇ ಆದ ವೈಶಾಲ್ಯತೆಯನ್ನು ಹೊಂದಿದೆ. ಈ ಒಂದು ಅಧ್ಯಯನ ವ್ಯಾಪ್ತಿಯು ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬರುವ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಕಡೂರು ತಾಲ್ಲೂಕುಗಳು, ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳು, ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು, ತುಮಕೂರು ಜಿಲ್ಲೆಯ ಉತ್ತರಭಾಗ ಹಾಗೂ ಕೋಲಾರ ಜಿಲ್ಲೆಯ ಕೆಲವು ಪ್ರದೇಶಗಳನ್ನೊಳಗೊಂಡಿದೆ. ಹಾಗೆಯೇ ಈ ಬಗ್ಗೆ ಸಂಭವಿಸಿದ ಚಳವಳಿಗಳು, ಸಮಕಾಲೀನ ಸಂದರ್ಭದ ಹೋರಾಟಗಳು ಮತ್ತು ಹೋರಾಟಗಾರರು, ಹಾಗೂ ೧೯೬೮ರಿಂದ ೨೦೦೮ರವರೆಗಿನ ಭದ್ರಾ ಮೇಲ್ದಂಡೆ ಯೋಜನೆಗೊಳಪಟ್ಟ ಎಲ್ಲಾ ಸಂಗತಿಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗುವುದು.

ಅಧ್ಯಯನದ ವಿಧಾನ

'ಭದ್ರಾ ಮೇಲ್ದಂಡೆ ಯೋಜನೆ ಇತ್ತೀಚಿನ ಚಳವಳಿಗಳ ಅಧ್ಯಯನ' ಎಂಬ ಈ ಅಧ್ಯಯನವು ಚರಿತ್ರೆ ಸಂಶೋಧನೆಯ ವಿಧಿ ವಿಧಾನಗಳನ್ನು ಒಳಗೊಂಡಿದೆ. ಇಲ್ಲಿ ಪ್ರಾಥಮಿಕ ಹಾಗೂ ಆನುಷಂಗಿಕ ಆಕರಗಳನ್ನು ಬಳಸಿಕೊಳ್ಳಲಾಗುವುದು. ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ನಡೆದ ಚಳವಳಿಗಳ ವಿವರಗಳಿರುವ ಚಾರಿತ್ರಿಕ ದಾಖಲೆ ಮತ್ತು ವರದಿಗಳಿಂದಲೂ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಸರ್ಕಾರದ ಗೆಜೆಟೀಯರುಗಳು, ಸಂಶೋಧನಾ ಪ್ರಬಂಧಗಳು, ಪತ್ರಿಕೆ, ನಿಯತಕಾಲಿಕೆ, ಸ್ಮರಣ ಸಂಚಿಕೆ, ಬಿಡಿ ಬಿಡಿಯಾಗಿ ಪ್ರಕಟವಾದ ಲೇಖನಗಳು ಮುಂತಾದವುಗಳಿಂದ ಮಾಹಿತಿ ಸಂಗ್ರಹಿಸಲಾಗುವುದು. ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಕ್ಷೇತ್ರಕಾರ್ಯ ಕೈಗೊಂಡು ಹೋರಾಟ ನಡೆಸಿದ ಹೋರಾಟಗಾರರನ್ನು ಸಂದರ್ಶಿಸಿ ಅವರಿಂದ ಈ ಕುರಿತು ಮಾಹಿತಿ ಸಂಗ್ರಹಿಸಲಾಗುವುದು. ಈ ಯೋಜನೆಯ ಬಗ್ಗೆ ವಾದ ಪ್ರತಿವಾದಗಳನ್ನು ಚರ್ಚೆಗೆ ಎತ್ತಿಕೊಂಡು ವರ್ಗೀಕರಿಸಿ ಕಾಲಾನುಕ್ರಮವಾಗಿ ನಡೆದ ಘಟನೆಗಳನ್ನು ಇಲ್ಲಿ ವಿಶ್ಲೇಷಿಸಲಾಗುತ್ತದೆ.

ಅಧ್ಯಯನದ ಸ್ವರೂಪ

"ಭದ್ರಾ ಮೇಲ್ದಂಡೆ ಯೋಜನೆ ಇತ್ತೀಚಿನ ಚಳವಳಿಗಳ ಅಧ್ಯಯನ" ತನ್ನದೇ ಆದ ಸ್ವರೂಪವನ್ನು ಹೊಂದಿದೆ. ಇಲ್ಲಿ ಅಧ್ಯಯನದ ಅನುಕೂಲತೆಗಾಗಿ ಏಳು ಅಧ್ಯಾಯಗಳನ್ನಾಗಿ ರೂಪಿಸಿಕೊಳ್ಳಲಾಗಿದೆ. ಈ ಏಳು ಭಾಗಗಳು ಒಳಗೊಂಡ ವಿಷಯ ಮತ್ತು ಅದರ ತಾತ್ವಿಕ ಸ್ವರೂಪ ಹೀಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನವನ್ನು ವಿವರಿಸಲಾಗಿದೆ. ಇಲ್ಲಿ ಈ ಅಧ್ಯಯನದ ಅಗತ್ಯ ಮತ್ತು ಚರಿತ್ರೆಯ ಅಧ್ಯಯನದ ವಿಧಾನಗಳ ವಿಮರ್ಶಾತ್ಮಕ ಟೀಕೆಗಳ ಜೊತೆ ಅದನ್ನು ಮೀರುವ ಹೊಸ ವಿಧಾನಗಳ ಚರ್ಚೆ ಇದೆ.

ಭದ್ರಾ ನದಿಯ ಭೌಗೋಳಿಕ ಪರಿಚಯ ಹಾಗೂ ನದಿಯ ಚಾರಿತ್ರಿಕ ಹಿನ್ನೆಲೆಯನ್ನು ಗಮನದಲ್ಲಿರಿಸಿಕೊಂಡು ಇದಕ್ಕೆ ಪೂರಕವಾಗಿರುವ ನದಿಯ ಸಾಂಸ್ಕೃತಿಕ ಹಿನ್ನೆಲೆ ಹಾಗೂ ನದಿಯ ಚರಿತ್ರೆಯನ್ನು ಒಂದೆಡೆ ದಾಖಲಿಸಲು ಎರಡನೇ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಉದ್ದೇಶ, ಇದಕ್ಕಾಗಿ ಆಗ್ರಹ, ಸರ್ಕಾರದ ವಿಳಂಬ ನೀತಿಗೆ ನಡೆದ ಹೋರಾಟಗಳು, ಚಳವಳಿಗಳು, ರಾಜ್ಯಸರ್ಕಾರದ ನಿರ್ಣಯಗಳು, ಯೋಜನೆಯ 'ಎ' ಮತ್ತು 'ಬಿ' ಸ್ಕೀಂ ನೀರಿನ ಹಂಚಿಕೆ ಇಂತಹ ವಿಚಾರಗಳನ್ನು ಚರ್ಚಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಜಾರಿಗಾಗಿ ಹಲವಾರು ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಮಠಮಾನ್ಯಗಳು, ವಿದ್ಯಾರ್ಥಿಗಳು, ಮಹಿಳೆಯರು ತಮ್ಮ ಹಕ್ಕನ್ನು ಪಡೆಯುವ ನಿಟ್ಟಿನಲ್ಲಿ ಹೋರಾಟ ನಡೆಸಿದ ಪ್ರಮುಖ ಘಟನೆಗಳನ್ನು ವಿವರಿಸಲಾಗಿದೆ.

ಯೋಜನೆಗೆ ಒಳಪಡುವ ಪ್ರದೇಶಗಳು ಹಾಗೂ ಜನರ ಸಮಸ್ಯೆಗಳೇನು ಇದಕ್ಕೆ ಸರ್ಕಾರದ ಪರಿಹಾರವೇನು ಎಂಬ ವಿಚಾರಗಳನ್ನು ಐದನೇ ಅಧ್ಯಾಯದಲ್ಲಿ ತಿಳಿಸಲಾಗಿದೆ. ಆರನೇ ಅಧ್ಯಾಯದಲ್ಲಿ ಸಮಕಾಲೀನ ಸ್ಥಿತಿಯಲ್ಲಿ ಈ ಯೋಜನೆ ಯಾವ ರೂಪ ಪಡೆದುಕೊಂಡಿದೆ. ಹಾಗೂ ಸದ್ಯದ ಪರಿಸ್ಥಿತಿಯಲ್ಲಿ ಬಯಲು ನಾಡುಗಳಿಗೆ ಎಷ್ಟು ಅವಶ್ಯಕತೆ ಇದೆ ಎಂಬ ವಿಚಾರಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ಸಮಾರೋಪದಲ್ಲಿ ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ. ಅನುಬಂಧದಲ್ಲಿ, ಛಾಯಾಚಿತ್ರ, ನಕ್ಷೆ, ಭೂಪಟ, ಗ್ರಂಥಋಣವನ್ನು ಕೊಡಲಾಗಿದೆ.

ಅಡಿಟಿಪ್ಪಣಿಗಳು:

೧. ಗೋವಿಂದಯ್ಯ. ಟಿ. : ಕರ್ನಾಟಕ ನೀರಾವರಿ ಅರ್ಥಶಾಸ್ತ್ರ, ಪುಟ. ೧.

೨. ಡಾ. ವಿರೂಪಾಕ್ಷಿ ಪೂಜಾರಹಳ್ಳಿ : ವಿಜಯನಗರದ ಸಂಸ್ಕೃತಿ (ಬೇಟೆ, ಪಶುಪಾಲನೆ ಮತ್ತು ಕೃಷಿ).

ಅಧ್ಯಾಯ : ಎರಡು

ಭದ್ರಾ ನದಿಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನಲೆ

ಅಧ್ಯಾಯ : ಎರಡು

ಭದ್ರಾ ನದಿಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನಲೆ

ಕರ್ನಾಟಕದಲ್ಲಿ ನೆಲ, ಜಲ, ಸೇರಿದಂತೆ ಪ್ರಾಕೃತಿಕ ಸಂಪತ್ತು ಸಮೃದ್ಧವಾಗಿದೆ. ಸುಮಾರು ೬೦ ಕ್ಕೂ ಹೆಚ್ಚು ನದಿಗಳು ಈ ನಾಡಿನಲ್ಲಿ ಹರಿಯುತ್ತವೆ. ಕನ್ನಡ ನಾಡಿನ ಅತೀ ಪ್ರಮುಖವಾದ ನದಿಗಳಲ್ಲಿ 'ಭದ್ರಾ' ನದಿಯು ಒಂದು. ಈ ನದಿಯು ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿ ಅಗ್ರಸ್ಥಾನವನ್ನು ಪಡೆದುಕೊಂಡಿದೆ.[೧] ಪ್ರಸ್ತುತ ಅಧ್ಯಾಯದಲ್ಲಿ ಭದ್ರಾ ನದಿಯ ಭೌಗೋಳಿಕ ಪರಿಚಯವನ್ನು ಮಾಡಲಾಗಿದೆ.

ನಾಡಿನ ಜಲ ಸಂಪನ್ಮೂಲಗಳಲ್ಲಿ ನದಿಗಳ ಪಾತ್ರ ಅತ್ಯಂತ ಮಹತ್ವವಾದುದು. ಸರೋವರ ಮತ್ತು ಹಳ್ಳಗಳಲ್ಲಿ ಜಲಸಂಪತ್ತು ಸಂಗ್ರಹವಾಗಿದ್ದರೆ, ಸಮುದ್ರ ನದಿಗಳಲ್ಲಿ ಅದು ಪ್ರವಾಹ ರೂಪದಲ್ಲಿದೆ. ಹಿಮ ಕರಗಿ ನೀರನ್ನೊದಗಿಸುವ ಪ್ರದೇಶಗಳನ್ನು ಬಿಟ್ಟರೆ ಉಳಿದೆಡೆ ಮಳೆಯ ನೀರೇ ಜಲಸಂಪತ್ತಿನ ಮುಖ್ಯಾಧಾರ. ಆ ನೀರು ನೆಲದ ಇಳಿಜಾರಿಗನುಗುಣವಾಗಿ ಹರಿದು "ನದಿ, ಹಳ್ಳ, ಅಥವಾ ಸರೋವರಗಳಾಗುತ್ತವೆ. ನದಿಯ ನೀರಾದರೋ ಕೊನೆಯಲ್ಲಿ ಸಮುದ್ರವನ್ನೇ ಸೇರುತ್ತದೆ."[೨] ಇಂತಹ ನದಿಗಳಲ್ಲಿ ಭದ್ರಾ ನದಿಯು ಒಂದಾಗಿದೆ.

ಕರ್ನಾಟಕದ ಪ್ರಮುಖ ನದಿಗಳಲ್ಲಿ ಒಂದಾದ ಭದ್ರಾ ನದಿಯು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಕಳಸದಿಂದ ಪಶ್ಚಿಮಕ್ಕೆ ಸುಮಾರು ೨೫ ಕಿ.ಮೀ. ಪಶ್ಚಿಮಕ್ಕೆ ಪಶ್ಚಿಮ ಘಟ್ಟದಲ್ಲಿರುವ ವರಹಾ ಪರ್ವತದ ಗಂಗಾ ಮೂಲದಲ್ಲಿ ಉಗಮವಾಗುತ್ತದೆ. ಗಂಗಾ ಮೂಲದಲ್ಲಿ ಎತ್ತರದ ಕಲ್ಲು ಬಂಡೆಗಳ ಸಂದಿನಿಂದ ಚಿಕ್ಕದಾಗಿ ಉಗಮವಾಗುವ ಈ ಭದ್ರಾ ಮೂಲಕ್ಕೆ ವರಹಾಕ್ಷೇತ್ರ ತೀರ್ಥವೆನ್ನುತ್ತಾರೆ. ಇದೊಂದು ನಿರ್ಜನ ಸುಂದರ ಪ್ರದೇಶ. ಭದ್ರೆ ಜುಳು ಜುಳುನೆ ಇಳಿದು ವರಹಾ ತೀರ್ಥದಲ್ಲಿ ಪ್ರತ್ಯಕ್ಷಳಾಗುತ್ತಾಳೆ. ಗಂಗಾ ಮೂಲದಿಂದ ಪೂರ್ವಕ್ಕೆ ಹರಿದು ಸಂಗಮೇಶ್ವರದ ಕಡೆಯಿಂದ ಬರುವ ಆನೆ ಬಿದ್ದ ಹಳ್ಳವನ್ನು ಈಶಾನ್ಯದಲ್ಲಿ ಬಾಳೆ ಹೊನ್ನೂರು ತಾಲೂಕಿನ ಬಂಡೆಹಳ್ಳಿಯ ಜಾಗರಕಣಿವೆಯಲ್ಲಿ ಒಂದು ಹಳ್ಳವನ್ನು ಸೇರಿಸಿಕೊಂಡು ಖಾಂಡ್ಯ ನರಸಿಂಹರಾಜಪುರಗಳ ಮೂಲಕ ಹರಿಯುತ್ತದೆ. "ಹೆಬ್ಬೆಯಲ್ಲಿ ಜಲಪಾತವನ್ನುಂಟು ಮಾಡಿ ಸೋಮವಾಹಿನಿಯನ್ನು ಸೇರಿಸಿಕೊಂಡು ಲಕ್ಕವಳ್ಳಿಯ ಮಾರ್ಗವಾಗಿ ಸಾಗುತ್ತದೆ. ಕಲ್ಹತ್ತಗಿರಿಯ ಕಲ್ಲುದುರ್ಗ ಹಳ್ಳವನ್ನು ಸೇರಿಸಿಕೊಂಡು ಹರಿಯುತ್ತದೆ."[೩] ಲಕ್ಕವಳ್ಳಿಯಿಂದ ಮುಂದೆ ಉತ್ತರಗಾಮಿಯಾಗಿ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸಿ, ಭದ್ರಾವತಿ ಹೊಳೆಹೊನ್ನೂರುಗಳ

[illegible]

[illegible]

[illegible]

[illegible]

[illegible]

ಮೂಲಕ ಹರಿದು ಮುಂದೆ ಶಿವಮೊಗ್ಗದ ಈಶಾನ್ಯದಲ್ಲಿರುವ ಕೂಡಲಿಯ ಬಳಿ ತುಂಗಾನದಿಯನ್ನು ಕೂಡಿಕೊಂಡು ತುಂಗಭದ್ರಾ ನದಿಯೆಂದು ಕರೆಸಿಕೊಳ್ಳುತ್ತದೆ.

ಭದ್ರಾ ನದಿಯು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟಿ ಶಿವಮೊಗ್ಗ ಜಿಲ್ಲೆಯಲ್ಲಿ ಹರಿದು ಕೂಡಲಿಯ ಹತ್ತಿರ ತುಂಗಾ ನದಿಯೊಂದಿಗೆ ಸಂಗಮಗೊಂಡು ದಾವಣಗೆರೆ, ಬಳ್ಳಾರಿ, ಕೊಪ್ಪಳ, ರಾಯಚೂರು ಜಿಲ್ಲೆಗಳ ಮೂಲಕ ಆಂಧ್ರ ಪ್ರದೇಶವನ್ನು ಪ್ರವೇಶಿಸುತ್ತದೆ. ಹೆಚ್ಚಾಗಿ ಮಲೆನಾಡು ಪ್ರದೇಶದಲ್ಲಿ ಹರಿವ ಈ ನದಿಗೆ ಅನೇಕ ಸಣ್ಣಪುಟ್ಟ ಝರಿ, ಹಳ್ಳಗಳು ಸೇರುತ್ತವೆ. ಮುಡುಗೆರೆ ತಾಲ್ಲೂಕಿನಲ್ಲಿ ದಕ್ಷಿಣದಿಂದ ಬರುವ ಆನೆಬಿದ್ದ ಹಳ್ಳ ಭದ್ರಾ ನದಿಯ ಮುಖ್ಯ ಉಪನದಿಯಾಗಿದ್ದು ಇದು ಸಂಗಮೇಶ್ವರದಲ್ಲಿ ಭದ್ರಾ ನದಿಗೆ ಸೇರುತ್ತದೆ. ಮುಂದೆ ಚಿಕ್ಕಮಗಳೂರು ತಾಲೂಕಿನ ಜಾಗರ್ ಕಣಿವೆಯಿಂದ ಹರಿದು ಬರುವ ಸೋಮವಾಹಿನಿ ಹೆಬ್ಬೆಯ ಬಳಿಯಲ್ಲಿ ಸೇರುತ್ತವೆ. ಲಕ್ಕವಳ್ಳಿಯಲ್ಲಿ ಕಲ್ಲತ್ತಿಗಿರಿ ಹೊಳೆ ಮತ್ತು ಕಲ್ಲುದುರ್ಗದ ಹೊರಳೆಗಳು ಭದ್ರಾನದಿಯನ್ನು ಸೇರುತ್ತವೆ. ಚಿಕ್ಕಮಗಳೂರು ಒಂದು ಜಿಲ್ಲಾ ಕೇಂದ್ರವಾಗಿದ್ದು, ಪೂರ್ವದಲ್ಲಿ ಚಿತ್ರದುರ್ಗ, ತುಮಕೂರು, ಉತ್ತರದಲ್ಲಿ ಶಿವಮೊಗ್ಗ ಜಿಲ್ಲೆ, ದಕ್ಷಿಣದಲ್ಲಿ ಹಾಸನ ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟಿದ್ದು. ಮಲೆನಾಡು ಪ್ರದೇಶವಾಗಿದೆ. ಪರ್ವತ ಪ್ರದೇಶಗಳಿಂದ ಕೂಡಿದ ಈ ಜಿಲ್ಲೆಯ ಪಶ್ಚಿಮದಂಚಿನಲ್ಲಿ ಪಶ್ಚಿಮ ಘಟ್ಟದ ಸಾಲುಗಳು ಹಬ್ಬಿವೆ. ಇವುಗಳಲ್ಲಿ ಕೆಲವು ಶಿಖರಗಳು ಅತ್ಯಂತ ಎತ್ತರವಾಗಿವೆ. ಇವುಗಳಲ್ಲಿ ನೆಲ್ಲಿನಬಿಡು ಮತ್ತು ಗಂಗಾಡಿಕಲ್ಲು ಬೆಟ್ಟ ಬಾಬಾಬುಡನ್‌ಗಿರಿ, ಮುಳ್ಳಯ್ಯನಗಿರಿ, ಕಲ್ಲತ್ತಿಗಿರಿ, ಮೊದಲಾದವುಗಳು ಕುದರೆಮುಖ ಶಿಖರ ೧೮೯೪ ಮೀ. ಎತ್ತರವಾಗಿದೆ. ಈ ಕುದುರೆಮುಖ ಬೆಟ್ಟ ಶ್ರೇಣಿಯಲ್ಲಿ ೧೫೨೬ ಮೀ. ಎತ್ತರದ ಬಲ್ಲಾಳರಾಯನದುರ್ಗ ೧೪೫೪ ಮೀ. ಗಂಗಾಮೂಲ, ೧೫೨೬ ಮೀ. ಒಡ್ಡಿನ ಗುಡ್ಡ, ೧೨೨೦ ಮೀ. ಕಂಚಿಕಲ್ಲುದುರ್ಗ ೧೬೬೧ ಮೀ. ಮೈತ್ರಿಗುಡ್ಡ . ೧೪೨೧ಮೀ. ಲಕ್ಕೆಗುಡ್ಡ ೧೪೧೮ ಮೀ. ಎತ್ತರದ ಶಕುನಗಿರಿ, ದಕ್ಷಿಣದಲ್ಲಿರುವ ನೀಸಲುಗುಡ್ಡ ಎಪ್ಪತ್ತು ಮಂದಿ ಗುಡ್ಡ, ಮುಂತಾದ ಎತ್ತರದ ಗುಡ್ಡಗಳನ್ನು ಇಲ್ಲಿ ಕಾಣಬಹುದು. ಇಂಥ ಒಂದು ಪರ್ವತ ಶ್ರೇಣಿಗಳಿಂದ ಕೂಡಿದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಭದ್ರೆ ಜನಿಸುತ್ತಾಳೆ.

ತುಂಗಾ ನದಿಗೆ ಹೋಲಿಸಿದಾಗ ಭದ್ರಾ ನದಿಯು ದಟ್ಟ ಕಾಡಿನಲ್ಲಿ ಹರಿಯುವುದರಿಂದ ಅಷ್ಟೊಂದು ಉಪಯುಕ್ತವಲ್ಲವೆಂದು ಹೇಳಲಾಗುತ್ತದೆ. ನದಿಯ ದಡಗಳು ಬಹಳ ಕಡಿದಾಗಿವೆ. ಹೀಗಾಗಿ ಇದರ ನೀರು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲು ಅಷ್ಟಾಗಿ ಅನುಕೂಲಕರವಾಗಿಲ್ಲ. ಹೀಗಿದ್ದರೂ ಈ ನದಿಗೆ ಅಡ್ಡಲಾಗಿ ಸುಮಾರು ೧೮ ಸಣ್ಣ ಅಣೆಕಟ್ಟುಗಳನ್ನು ಕಟ್ಟಲಾಗಿದ್ದು, ಬೆಂಗಳೂರು, ಶಿವಮೊಗ್ಗ ರಸ್ತೆ ಮಾರ್ಗದಲ್ಲಿ, ಬಾಳೆಹೊನ್ನೂರು ಮತ್ತು ಭದ್ರಾವತಿಗಳಲ್ಲಿ ಈ ನದಿಗೆ ಸೇತುವೆಗಳನ್ನು ಕಟ್ಟಿದ್ದಾರೆ. ಲಕ್ಕವಳಿಯಲ್ಲಿ ಕಟ್ಟಿರುವ "ಭದ್ರಾ ಅಣೆಕಟ್ಟು ಇಂದು

ಕರ್ನಾಟಕದ ಬೃಹತ್ ನೀರಾವರಿ ಯೋಜನೆಗಳಲ್ಲಿ ಒಂದೆಂದು ಗುರುತಿಸಲ್ಪಟ್ಟಿದೆ."[೪] ಭದ್ರಾನದಿಯ ಪರಿಸರವು ವಾರ್ಷಿಕವಾಗಿ ೯೦೦ ಮಿ.ಮೀ. ಮಳೆಯನ್ನು ಪಡೆಯುತ್ತದೆ.

ಭದ್ರಾ ನದಿಯ ಚಾರಿತ್ರಿಕ ಹಿನ್ನೆಲೆ.

ನಾಗರಿಕತೆಯ ವಿಕಾಸದಲ್ಲಿ ನದಿಗಳ ಪಾತ್ರ ಹಿರಿದಾದದು. ನದಿ ತಟಗಳ ಸಮೃದ್ಧತೆ, ಫಲವತ್ತತೆ, ಅನುಕೂಲತೆಗಳು ಜೀವ ಜಗತ್ತಿನ ಬೆಳವಣಿಗೆಗೆ ಕಾರಣವಾಗಿವೆ. ಸಿಂಧೂ, ಈಜಿಪ್ತಿಯನ್, ಮೆಸಪಟೋಮಿಯನ್, ಬ್ಯಾಬಿಲೋನಿಯನ್, ರೋಮನ್, ಪರ್ಶಿಯನ್, ಚೀನಿ, ಮಯನ್ಮಾರ್ ಹೀಗೆ ಪ್ರಪಂಚದಾದ್ಯಂತ ಪ್ರಾಚೀನ ಸಂಸ್ಕೃತಿಗಳು ನದಿತಟಗಳಲ್ಲಿಯೇ ಮೈದಳೆದವು. "ವಿಶ್ವ ನಾಗರೀಕತೆಯ ತೊಟ್ಟಿಲುಗಳಾಗಿ ಸಿಂಧೂ, ಯೂಫ್ರಿಟಿಸ್, ಟ್ರೈಗಿಸ್, ನೈಲ್, ಯಾಂಗಿವ್ವಸಿಕಿಯಾಂಗ್, ಹೊಯಾಂಗ ಹೋ ನದಿಗಳು ನೀಡಿರುವ ಕೊಡುಗೆ ಅಪಾರವಾದುದು."[೫] ಹೀಗಾಗಿ ಸಂಸ್ಕೃತಿಯ ವಿವಿಧ ಸ್ಥಳಗಳಲ್ಲಿ ನದಿಯೊಂದಿಗಿನ ಸಂಬಂಧವು ಹಾಸುಹೊಕ್ಕಾಗಿ ಬಂದಿರುವುದು ಸಹಜವಾಗಿಯೇ ಕಂಡುಬರುತ್ತದೆ. ನದಿಗಳಿಂದ ಉಪಕೃತರಾದ ಪ್ರಾಚೀನ ಜನಸಮುದಾಯ ಅವುಗಳೊಂದಿಗೆ ಭಾವನಾತ್ಮಕ ಬೆಸುಗೆಯನ್ನು ಹೊಂದಿದ್ದರು. ಅವರಿಗೆ ದೈನಂದಿನ ಬದುಕಿನಲ್ಲಿ ನದಿಗಳಿಗೊಂದು ಮಹತ್ವದ ಸ್ಥಾನವಿತ್ತು. ವೇದ, ಪುರಾಣ, ಶಾಸ್ತ್ರ, ಸಂಹಿತೆಗಳಲ್ಲಿ ನದಿಗಳ ಬಗೆಗೆ ಉಲ್ಲೇಖಗಳಿವೆ. ಗ್ರೀಸ್‌ನ ಭೂಗೋಳಶಾಸ್ತ್ರಜ್ಞ ಟಾಲೆಮಿಯು ಸಹಾ ಭಾರತದ ನದಿಗಳ ಬಗೆಗೆ ಪ್ರಸ್ತಾಪಿಸಿದ್ದಾನೆ. ರಾಮಾಯಣದ ಕಿಷ್ಕಿಂಧೆಕಾಂಡ, ಭುವನಕೋಶ, ಮಹಾಭಾರತದ ತೀರ್ಥಯಾತ್ರೆ, ದಿಗ್ವಿಜಯ ಪರ್ವಗಳಲ್ಲಿ ವರಹಾಮಿಹಿರನ ಬೃಹತ್ ಸಂಹಿತದಲ್ಲಿ ಭಾರತದ ನದಿಗಳ ವರ್ಣನೆಗಳು ಕಾಣಸಿಗುತ್ತವೆ. ಋಗ್ವೇದ, ಅಥರ್ವಣ ವೇದಗಳಲ್ಲಿ ನದಿಗಳ ಬಳಕೆಯ ಬಗೆಗೆ ಉಲ್ಲೇಖಗಳಿವೆ. ಇಂಥ ಭಾರತದ ನದಿಗಳಲ್ಲಿ ಭದ್ರಾ ನದಿಯು ತನ್ನದೇ ಆದಂತಹ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿದೆ. ಈ ನದಿಯ ದಡಗಳಲ್ಲಿ ಆದಿಮಾನವ ಜೀವಿಸಿದ್ದು ತನ್ನ ಮೊದಲ ದಿನಗಳ ಬದುಕನ್ನು ಪ್ರಾರಂಭಿಸಿಕೊಂಡು ಅಲ್ಲಿ ತಮ್ಮ ನೆಲೆಗಳನ್ನು ನಿರ್ಮಿಸಿಕೊಂಡು ತನ್ನ ಜೀವನ ಸಾಗಿಸಿದ್ದಾನೆ ಎಂಬ ಅಂಶವನ್ನು ಇತಿಹಾಸಕಾರರಾದ ಡಾ. ರಾಜರಾಮ್ ಹೆಗಡೆಯವರು ಭದ್ರಾನದಿ ಪರಿಸರದಲ್ಲಿ ಆದಿ ಮಾನವನು ವಾಸಿಸುತ್ತಿದ್ದ ನಾಲ್ಕು ನೆಲೆಗಳನ್ನು ಪತ್ತೆ ಹಚ್ಚುವ ಮೂಲಕ ವಿಷಯವನ್ನು ಬೆಳಕಿಗೆ ತಂದಿದ್ದಾರೆ. ಭೂಗರ್ಭಶಾಸ್ತ್ರೀಯವಾಗಿ "ಈ ಭೂಮಿ ಆರ್ಕೆಯನ್ ಪ್ರಕಾರದ ಧಾರವಾಡ ಶಿಲಾರಚನೆಗಳನ್ನು ಹೊಂದಿದ್ದು ಶಿಲಾಯುಧಗಳನ್ನು ತಯಾರಿಸಲು ಶಿಲಾಯುಗದ ಮಾನವ ಬಳಸುತ್ತಿದ್ದ ಕ್ವಾಡ್‌ಜೈಟ್ (ಬೆಣಚುಕಲ್ಲು) ಹಾಗೂ ಡೋಲರೈಟ್ ಮುಂತಾದ ಶಿಲೆಗಳು ಸ್ಥಾನಿಕವಾಗಿ ಸಿಗುತ್ತವೆ."[೬] ಈ ನದಿ ಎರಡೂ ತೀರಗಳಲ್ಲಿ ಶಿಲಾಯುಗದ ಮಾನವನ ೪ ಸ್ಥಳಗಳು ಬೆಳಕಿಗೆ ಬಂದಿದ್ದು ಅವುಗಳೆಂದರೆ–

ಮೊದಲನೆ ಸ್ಥಳ : ಭದ್ರಾ ಅಣೆಕಟ್ಟಿನಿಂದ ವಾಯವ್ಯಕ್ಕೆ ಮೂರು ಕಿ.ಮೀ. ದೂರದಲ್ಲಿ ಒಂದು ಎತ್ತರ ಪ್ರದೇಶದ ಎರಡೂ ಮಗ್ಗಲುಗಳಲ್ಲಿ ಈ ಸ್ಥಳವಿದೆ. ಈ ಎತ್ತರದ ಪ್ರದೇಶ ಈಗಿನ ಭದ್ರಾ ಜಲಾಶಯದ ಹಿನ್ನೀರಿಗೆ ಅಡ್ಡಲಾಗಿ ಇದೆ. ಈ ಸ್ಥಳ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನಲ್ಲಿದೆ. ಈ ಪ್ರದೇಶದ ಪಶ್ಚಿಮ ಮಗ್ಗುಲಿನಲ್ಲಿ ಬಹುಭಾಗ ಜಲಾಶಯದ ನೀರಿನಲ್ಲಿ ವರ್ಷದ ಬಹುಕಾಲ ಮುಳುಗಿರುತ್ತದೆ. ಇಲ್ಲಿ ಆದಿ ಶಿಲಾಯುಗದ ಕೈಕೊಡಲಿಯನ್ನು ಅಗೆದು ತೆಗೆಯಲಾಗಿದೆ.

ಪಶ್ಚಿಮದ ಇಳಿಜಾರಿನಲ್ಲಿ ಜಲಾಶಯದ ನೀರು ಇಳಿದಾಗ ಅಂತ್ಯ ಹಳೇ ಶಿಲಾಯುಗದ ಆಯುಧ ಪ್ರಕಾರಗಳು ಸಿಗುವ ಜಾಗ ಕಂಡುಬರುತ್ತದೆ. ಈ ಜಾಗದಲ್ಲಿ ಮಧ್ಯ ಹಳೇ ಶಿಲಾಯುಗದ ಆಯುಧ ಪ್ರಕಾರಗಳು ಸಿಗುವ ಜಾಗ ಕಂಡುಬರುತ್ತದೆ. ಈ ಜಾಗದಲ್ಲಿ ಮಧ್ಯ ಹಳೇ ಶಿಲಾಯುಗದ ಆಯುಧಗಳೂ ಸಿಗುತ್ತವೆ. ಈ ಆಯುಧಗಳೆಲ್ಲಾ ಒಟ್ಟಾಗಿ ಕಲಸಿ ಹೋಗಿರುವುದರಿಂದ ಅನುಕ್ರಮಣಿಕೆ ಶಕ್ಯವಿಲ್ಲ. ಆದರೆ ಈ ಜಾಗವನ್ನು ಉತ್ಖನನ ಮಾಡಿದರೆ ಮಹತ್ವಪೂರ್ಣ ವಿವರಗಳು ತಿಳಿದುಬರಬಹುದು ಎಂಬುದನ್ನು ಡಾ. ರಾಜಾರಾಮ್ ಹೆಗಡೆಯವರು ಹೇಳಿದ್ದಾರೆ.

ಸ್ಥಳ ಎರಡು: ಇದು ಭದ್ರಾ ನದಿಯ ಉತ್ತರ ದಡದಲ್ಲಿರುವ ಕುವೆಂಪು ವಿಶ್ವವಿದ್ಯಾಲಯದ ಆವರಣದ ಒಳಗಡೆ ಇದೆ. ಇಲ್ಲಿ ಕೂಡ ನದಿಗರಸಿನ ಉಂಡೆಕಲ್ಲುಗಳನ್ನು ಶಿಲಾಯುಗದ ಮನುಷ್ಯ ತಂದು ಹಾಕಿದ್ದು ಕಂಡುಬರುತ್ತದೆ. ಗುಡ್ಡದ ಇಳಿಜಾರಿನಲ್ಲಿ ಬೆಣಚು ಕಲ್ಲುಗಳ ಸೂಕ್ಷ್ಮ ಶಿಲಾಯುಧಗಳ ಆಯುಧಗಳು ನೆಲದಿಂದ ಒಂದು ಅಡಿಯಷ್ಟು ಕೆಳಭಾಗದಲ್ಲಿ ಕೆಲವಡೆ ದೊರೆಯುತ್ತವೆ. ಸ್ಥಳ ಮೂರು: ಈ ಸ್ಥಳ ಬಿ.ಆರ್. ಪ್ರಾಜೆಕ್ಟಿನ ಪ್ರಾಚೀನ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಹಿಂಭಾಗದಲ್ಲಿ ಗುಡ್ಡದ ತಪ್ಪಲಿನಲ್ಲಿ ಇದೆ.

ಸ್ಥಳ ನಾಲ್ಕು: ಭದ್ರಾ ನದಿಯ ಎರಡೂ ದಡಗಳ ಮೇಲೆ ಭದ್ರಾ ನದಿಗೆ ನಿರ್ಮಿಸಿರುವ ಆಧುನಿಕ ಸೇತುವೆಯಿಂದ ಕೆಳಗೆ ಕೆಲವೇ ಪರ್ಲಂಗುಗಳ ಅಂತರದಲ್ಲಿ ಈ ಸ್ಥಳವಿದೆ. ಇದು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನಲ್ಲಿದೆ. ಇಲ್ಲಿ ಹಾಲು ಬೆಣಚುಕಲ್ಲಿನ ಸೂಕ್ಷ್ಮ ಶಿಲಾಯುಗಕ್ಕೆ ಸೇರಬಹುದಾದ ಆಯುಧಗಳು ದೊರೆತಿವೆ. ಹಾಗೂ ಎರಡು ಮಧ್ಯ ಹಳೆ ಶಿಲಾಯುಗದ ಆಯುಧಗಳು ಸಿಕ್ಕಿವೆ. ಒಟ್ಟಿನಲ್ಲಿ ಈ ನೆಲೆಗಳು ಶಿಲಾಯುಗದ ಮಾನವನಿಗೆ ಸಂಬಂಧಿಸಿದ್ದು ಈ ನದಿಯನ್ನು ಮಾನವ ಆಶ್ರಯಿಸಿದ್ದ ಎಂದು ತಿಳಿದುಬರುತ್ತದೆ. ಇಲ್ಲಿ ಆದಿಮಾನವ ಬಳಸಿದ ಕೆಲವು ಆಯುಧಗಳು ದೊರೆತಿದ್ದು, ಅವುಗಳೆಂದರೆ– ಕೈಕೊಡಲಿ, ಚೂಪುಮನೆಯ ಕೈಕೊಡಲಿ, ಅಗಲಮನೆಯ ಕೈಗೊಡಲಿಗಳು, ದೀರ್ಘ ವರ್ತುಲಾಕೃತಿಯ

ಕೈಗೊಡಲಿಗಳು, ಪ್ರಮಾಣಬದ್ಧವಾದ ಸೀಳು ನೋಟದಲ್ಲಿ ಇರುವಂತೆಯೇ ಕಾಣುವ ಕೈಗೊಡಲಿಗಳು, ಸೀಳು ಕೊಡಲಿ, ಹೆರೆಗತ್ತಿಗಳು, ಮೊನೆಗಳು, ಬೈರಿಗೆಗಳು, ಹೆರೆಯುವ ಆಯುಧಗಳು, ಬ್ಲೇಡುಗಳು, ಸೂಕ್ಷ್ಮ ಬೈರಿಗೆಗಳು, ಸೂಕ್ಷ್ಮ ಉಳಿಗಳು ಮುಂತಾದ ಆಯುಧಗಳು ಸಿಕ್ಕಿದ್ದು[೨] ಇವುಗಳನ್ನು ಆದಿಮಾನವ ಪ್ರಾರಂಭ ಯುಗದಲ್ಲಿ ಬಳಸಿದ್ದು, ಭದ್ರಾ ನದಿ ದಡಗಳು ಮಾನವನಿಗೆ ಉತ್ತಮವಾದ ಸ್ಥಾನವಾಗಿತ್ತು ಎಂಬುದನ್ನು ತೋರಿಸಿಕೊಡುತ್ತದೆ. ಇದೇ ರೀತಿ ಭದ್ರಾ ನದಿಯು ಹಲವಾರು ಚಾರಿತ್ರಿಕ ಹಾಗೂ ಪುಣ್ಯ ಕ್ಷೇತ್ರಗಳನ್ನೊಳಗೊಂಡಿದೆ.

ಗಂಗಾಮೂಲ:

ಪಶ್ಚಿಮಘಟ್ಟ ಶ್ರೇಣಿಯ ವರಹಾ ಪರ್ವತದಲ್ಲಿರುವ ಗಂಗಾ ಮೂಲದಲ್ಲಿ ತುಂಗಾ, ಭದ್ರಾ ಹಾಗೂ ನೇತ್ರಾವತಿ ನದಿಗಳ ಉಗಮವಾಗುತ್ತದೆ. ಭಗವತೀಕಾನನದ ಮಧ್ಯದಲ್ಲಿ ಭಗವತೀ ದೇವಾಲಯವಿದ್ದು, ಇಲ್ಲಿರುವ ಗುಹೆಯಲ್ಲಿ ವರಾಹ ಮೂರ್ತಿಯ ವಿಗ್ರಹವಿದೆ. ಇದನ್ನೇ ಗಂಗಾಮೂಲ ಎಂದು ಕರೆಯುವರು.

ಕಳಸ:

'ಕಳಸ' ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿದೆ. ಉತ್ತರ ಅಕ್ಷಾಂಶ ೧೩°,೧೪^{1} ಮತ್ತು ಪೂರ್ವ ರೇಖಾಂಶ ೭೫°, ೨೬^{1} ನಲ್ಲಿ ಸಹ್ಯಾದ್ರಿಯ ಉತ್ತುಂಗ ಶ್ರೇಣಿಯ ನಡುವಣ ಕಣಿವೆಯಲ್ಲಿದೆ. ಮೂಡಿಗೆರೆ ಹಾಗೂ ಕಳಸದ ಮಧ್ಯ ೩೯ ಕಿ.ಮೀ. ಅಂತರದಲ್ಲಿದೆ. ಕಳಸದಲ್ಲಿ ಭದ್ರಾ ನದಿ ಪ್ರಮುಖವಾಗಿ ಹರಿಯುವುದರಿಂದ ಕಳಸವನ್ನು ಪರ್ಯಾಯ ದ್ವೀಪವನ್ನಾಗಿಸಿದೆ. ಬೆಟ್ಟ ಗುಡ್ಡಗಳಿಂದ ಕೂಡಿದ ಇಳಿಜಾರಿಯಲ್ಲಿ ಪುರಾತನ ಅಗ್ರಹಾರವಾಗಿದ್ದ ಕಳಸ ಅಗಸ್ತ್ಯ ಋಷಿಗಳ ಜನ್ಮಸ್ಥಳವೆಂದು ಹೇಳುತ್ತಾರೆ. ಕಾರ್ಕಳದ ಭೈರರಸರ ಕಾಲದಲ್ಲಿ ನಿರ್ಮಿತವಾಗಿರಬಹುದಾದ ಕಳಸೇಶ್ವರ ದೇವಾಲಯವಿದೆ. ದೇವಾಲಯದ ಬಳಿ ಅಂಬುತೀರ್ಥ ಸ್ನಾನ ಘಟ್ಟವಿದ್ದು ಇದರಲ್ಲಿ ಮಾಧವ ಬಂಡೆ ಎಂಬ ಚಚ್ಚೌಕಾರದ ಬಂಡೆಯಿದೆ. ಇದರ ಮೇಲೆ ದೇವನಾಗರಿ ಲಿಪಿಯಲ್ಲಿ "ಮಧ್ವೇನ ಏಕ ಹಸ್ತೇನ ಅನೀಯ ಸ್ಥಾಪಿತ ಶಿಲಾ"[೮] ಎಂದು ಬರೆದಿದೆ. ಇದನ್ನು ಶ್ರೀ ಮಧ್ವಾಚಾರ್ಯರು ಒಂದು ಕೈಯಲ್ಲಿ ಎತ್ತಿ ಅಲ್ಲಿ ತಂದಿಟ್ಟರು ಎಂದು ತಿಳಿಸುತ್ತದೆ. ಆನೆಯ ರೂಪದ ಗಣೇಶನ ವಿಗ್ರಹ ಮತ್ತು ಕ್ಷೇತ್ರಪಾಲ ದೇವತೆಯ ವಿಗ್ರಹಗಳು ಇಲ್ಲಿವೆ. ಬಾಗಿಲಿನ ದ್ವಾರಪಾಲಕನು ಕೈಯಲ್ಲಿ ಗುಲಗಂಜಿ ಹಿಡಿದಿದ್ದು ಇದು ಈ ಕ್ಷೇತ್ರವು ಕಾಶಿಗಿಂತ ಒಂದು ಗುಂಜಿ ಹೆಚ್ಚು ಎಂಬುದರ ಸೂಚಕ ಎನ್ನಲಾಗುತ್ತದೆ. ಕಾರ್ಕಳದ ಭೈರರಸರ ಆಳ್ವಿಕೆಯಲ್ಲಿ ಇದು ಪ್ರಮುಖ ಸ್ಥಳಗಳಲ್ಲೊಂದಾಗಿತ್ತು. ಆದರೆ ಎತ್ತರ ದೇಶದಿಂದ ಬಂದ ಶ್ರುತ ಬಿಂದುವೆಂಬ ರಾಜನಿಂದ ಈ ದೇವಾಲಯ ನಿರ್ಮಿತವಾಯಿತು ಎಂಬ ಐತಿಹ್ಯವಿರುವುದರಿಂದ ಮೊದಲಿಗೆ ಇದು ಜೈನಮಂದಿರವಾಗಿರುವ ಸಾಧ್ಯತೆಯಿದೆ. ಕಳಸವು

ಮೊದಲಿಗೆ ಹುಂಚದವರ, ಅನಂತರ ಭೈರರಸರ, ಆನಂತರ ಐಗೂರು ನಾಯಕರ ಆಳ್ವಿಕೆಗೆ ಒಳಪಟ್ಟಿತು. ಕ್ರಿ.ಶ. ೧೫೧೨ರಲ್ಲಿ ಕಳಸೇಶ್ವರ ದೇವಾಲಯವನ್ನು ವಿಜಯನಗರ ಶೈಲಿಯಲ್ಲಿ ಜೀರ್ಣೋದ್ಧಾರ ಮಾಡಲಾಗಿದೆ. ಇಲ್ಲಿ ಅನೇಕ ತೀರ್ಥಗಳಿವೆ: ಕೋಟಿತೀರ್ಥ, ನಾಗತೀರ್ಥ, ರುದ್ರತೀರ್ಥ, ಅಂಬಾತೀರ್ಥ ವಿಶಿಷ್ಟತೀರ್ಥ ಭೈರರಸನ ಕಾಲದಲ್ಲಿ ಕಳಸ ಅತ್ಯಂತ ಪ್ರಮುಖವಾಗಿತ್ತು. ಕಳಸದ ಬಳಿಯ ಅಂಬುತೀರ್ಥದ ಬಳಿ ಶಿಲೆಗಳನ್ನು ನದಿಯ ನೀರು ಕೊರೆದು ಸುಂದರ ಶಿಲಾಸವೆತದ ಶಿಲೆಗಳು ಕಲಾಕೃತಿಗಳಂತೆ ಆಕರ್ಷಿಸುತ್ತವೆ. ಈಗಿನ ಕಳಸೇಶ್ವರ ದೇವಾಲಯದ ವಾಸ್ತು ಶೈಲಿಯ ಹಿನ್ನಲೆಯಲ್ಲಿ ನಾಯಕರ ಕಾಲದ್ದೆಂದು ತಿಳಿಯಲಾಗಿದೆ. ಪಕ್ಕದಲ್ಲಿರುವ ದೇವಿ ಮಂದಿರವೂ ನಾಯಕರ ಕಾಲಕ್ಕೆ ಸೇರಿದೆ. ಇಲ್ಲಿ ಗಜಪತಿಯ, ತುಘಲಕ್‌ನ, ಹಾಗೆಯೇ ವಿಜಯನಗರದ ಕೆಲವು ನಾಣ್ಯಗಳೂ ದೊರೆತಿವೆ.

ಖಾಂಡ್ಯ:

ಭದ್ರಾ ನದಿಯ ಬಲದಂಡೆಯ ಮೇಲಿರುವುದೇ ಖಾಂಡ್ಯ, ಚಿಕ್ಕಮಗಳೂರು–ಬಾಳೆಹೊನ್ನೂರು ಮಾರ್ಗದಲ್ಲಿ 'ಕಡಬಗೆ'ಯಿಂದ ೪ ಕಿ.ಮೀ. ನಡೆದರೆ ಖಾಂಡ್ಯಕ್ಕೆ ಹೋಗಬಹುದು. ೧೬ನೇ ಶತಮಾನದ ಮಾರ್ಕಂಡೇಯ ದೇವಾಲಯವನ್ನು ಹೊಯ್ಸಳ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಿಸಲಾಗಿದೆ. ಅಗಸ್ತ್ಯ ಋಷಿಗಳಿಂದ ಪ್ರತಿಸ್ಥಾಪಿಸಲ್ಪಟ್ಟ ಲಿಂಗವನ್ನು ಮೃಕುಂದ ಋಷಿಯ ಮಗನಾದ ಮಾರ್ಕಂಡೇಯನು ಪೂಜಿಸಿದ್ದರಿಂದ 'ಖಾಂಡ್ಯ' ಎಂದು ಹೆಸರಾಗಿದೆ. ಪುರಾತನ ಜನಾರ್ದನ ದೇವಾಲಯವಿದೆ. ನದಿ ತೀರದ ಮೂಲಕ ಸಾಗಿದರೆ ನದಿಯ ಕಲ್ಲುಗಳ ಮೇಲೆ ಯೋಗನರಸಿಂಹ, ಆಂಜನೇಯ ವಿಗ್ರಹಗಳ ದರ್ಶನವಾಗುತ್ತದೆ. ಪುಣ್ಯಲೋಕ ಪ್ರಾಪ್ತಿಗಾಗಿ ಸತ್ತವರ ಅಸ್ತಿಗಳನ್ನು ತಂದು ಇಲ್ಲಿ ಭದ್ರಾ ನದಿಯಲ್ಲಿ ಬಿಡುವುದು ಸಂಪ್ರದಾಯವಾಗಿ ಬೆಳೆದಿವೆ.

ಕುದುರೆ ಅಬ್ಬಿ:

ಕುದುರೆ ಅಬ್ಬಿಯ ಹತ್ತಿರ ಭದ್ರಾನದಿ ಬಂಡೆಗಳ ಸಮೂಹದಲ್ಲಿ ಒಂದು ಸಣ್ಣ ಜಲಪಾತವನ್ನು ನಿರ್ಮಿಸಿದೆ. "ಹಚ್ಚ ಹಸುರಿನ ವನಸಿರಿ, ದೊಡ್ಡ ದೊಡ್ಡ ಬಂಡೆಗಳ ಮಧ್ಯ ಜಗಿಯುವ ಒದ್ರೆ 'ಮೇಕೆದಾಟ'ಯನ್ನು ನೆನಪಿಸುವಂತೆ ಚಿಕ್ಕಸ್ಥಳದಲ್ಲಿ ಜಗಿದಿದ್ದಾಳೆ."[೯] ಈ ಕುದುರೆ ಅಬ್ಬಿಯ ಬಳಿ ಶಿಲ್ಪಿ ಕಡೆದಿಟ್ಟಂತೆ ಬಂಡೆಗಳು ಚಿತ್ತಾರವಾಗಿ ಕಾಣಿಸುತ್ತವೆ. ಭದ್ರೆ ಇಲ್ಲೊಂದು ಜಲಪಾತ ನಿರ್ಮಿಸಿದ್ದಾಳೆ. ಇಲ್ಲಿ ಭದ್ರೆ ಜಗಿಯುವಾಗ ನೀರು ಹಾಲ್ನೊರೆಯಂತೆ ಕಂಡು 'ದೂದ್ ಸಾಗರ' ನೆನಪಾಗುತ್ತದೆ.

ಹೆಬ್ಬೆ:

ಹೆಬ್ಬೆಗೆ ಹೋಗಲು ನರಸಿಂಹ ರಾಜಪುರದಿಂದ ಅಂಬಿಗನ ಸಹಾಯದಿಂದ ದೋಣಿಗಳಲ್ಲಿ ಕುಳಿತು ಹೋಗಬಹುದು. ಪುರಾಣಗಳಲ್ಲಿ ಈ ಹೆಬ್ಬೆಗೆ 'ಹೇರೆಂಬ ಕ್ಷೇತ್ರ'ವೆಂದು ಉಲ್ಲೇಖಿಸಲಾಗಿದೆ.

ಹೆಬ್ಬೆಗೆ ಹತ್ತಿರದಲ್ಲಿಯೇ ಹೆಬ್ಬೆ ಗುಡ್ಡ, ಹೆಬ್ಬೆ ಜಲಪಾತವನ್ನು ನೋಡಬಹುದು. "ಈ ಕುದುರೆ ಅಬ್ಬಿಯ ಜಲಪಾತವನ್ನು ನದಿ ರಭಸದಿಂದ ಹರಿದು ನಿರ್ಮಿಸಿರುವ ಅಸಂಖ್ಯಾತ ಅಮೂರ್ತ ಶಿಲಾ ಕುಳಿಗಳನ್ನು ಬೇಸಿಗೆಯಲ್ಲಿ ಮಾತ್ರ ನೋಡಲು ಸಾಧ್ಯ."[೧೦] ಮಳೆಗಾಲದಲ್ಲಿ ಇವೆಲ್ಲಾ ಪ್ರವಾಹದಿಂದ ಮುಚ್ಚಿಹೋಗಿರುತ್ತವೆ. ಹತ್ತಿರದಲ್ಲೇ ಹೆಬ್ಬೆ ಅಭಯರಾಣ್ಯವಿದೆ.

ಬಾಳೆಹೊನ್ನೂರು:

ಭದ್ರಾನದಿಯ ಪಶ್ಚಿಮ ದಂಡೆಯ ಮೇಲಿರುವ ಇನ್ನೊಂದು ಪುಣ್ಯ ಕ್ಷೇತ್ರವೇ ಐತಿಹಾಸಿಕ ಸ್ಥಳವೂ ಆಗಿರುವ ಬಾಳೆಹೊನ್ನೂರು. ಚಿಕ್ಕಮಗಳೂರಿನಿಂದ ಸುಮಾರು ೫೧ ಕಿ.ಮೀ. ದೂರದಲ್ಲಿದೆ. ಇದು ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನ ಒಂದು ಹೋಬಳಿ ಕೇಂದ್ರ. ಐತಿಹಾಸಿಕ ಸ್ಥಳವೂ ಆಗಿರುವ ಬಾಳೆಹೊನ್ನೂರು ಬೆಟ್ಟಗುಡ್ಡಗಳಿಂದ ಕೂಡಿದ ಸುಂದರ ಕ್ಷೇತ್ರ. ಮುಖ್ಯವಾಗಿ ಪಂಚಪೀಠಗಳಲ್ಲಿ ಒಂದಾದ ಶ್ರೀಮದ್ ರಂಭಾಪುರಿ ಪೀಠದ ಮಹಾಸಂಸ್ಥಾನವಾಗಿ ವೀರಶೈವರಿಗೆ ಪುಣ್ಯಕ್ಷೇತ್ರವಾಗಿದೆ. ಐತಿಹಾಸಿಕ ಸ್ಥಳವೆನ್ನಲು ನದಿಯ ಸಮೀಪದಲ್ಲಿರುವ ಹಿರಿದಾದ ಬಂಡೆಗಳ ಮೇಲೆ ಕೆತ್ತಿರುವ ಶಾಸನಗಳು ಈ ಪ್ರದೇಶದ ಬಗೆಗೆ ಮಾಹಿತಿಯನ್ನು ಒದಗಿಸುತ್ತವೆ. ಅದರ ಪ್ರಕಾರ ಸಂತರ ದೊರೆ ಎರಡನೆಯ ಮಯೂರವರ್ಮನ ಮಗ ಮಾರ ಈ ಪ್ರದೇಶವನ್ನಾಳುತ್ತಿದ್ದ ಈತ ವಾದೀಭ ಸಿಂಹ ಅಜಿತಸೇನ ಎಂಬ ಜೈನ ಮುನಿಯ ಶಿಷ್ಯ ಎಂದು ಅಭಿಪ್ರಾಯಪಡಲಾಗಿದೆ. ಶಾಸನವಿರುವ ಬಂಡೆಯೊಂದನ್ನು ಬೊಮ್ಮನಕಲ್ಲು ಎಂದು ಕರೆಯಲಾಗುತ್ತಿದ್ದು ಅದರ ಮೇಲೆ ಜಿನ ಮೂರ್ತಿಯ ಚಿತ್ರವಿದೆ. ಈ ಊರಿನ ಎತ್ತರಕ್ಕೆ ಒಂದೂವರೆ ಕಿ.ಮೀ. ದೂರದ ಬಾಳೆಹಳ್ಳಿಯಲ್ಲಿ ವೀರಶೈವ ಪಂಚಾಚಾರ್ಯರಲ್ಲಿ ಪ್ರಮುಖರಾದ ರೇಣುಕಾಚಾರ್ಯರು ಶ್ರೀರಂಭಾಪುರಿ ಮಠವನ್ನು ಸ್ಥಾಪಿಸಿದರು. ಹಿಂದೆ ಇದು ಜೈನ ಕ್ಷೇತ್ರವೂ ಆಗಿತ್ತು. ಇಸ್ಲಾಂ ಧರ್ಮೀಯರಿಗೂ ಇದು ಪವಿತ್ರ ಸ್ಥಳ. "ಹಸರತ್ ಬಾನಾ ಶಾವಾಲಿಯವರ ಉರುಸ್ ನಡೆಯುತ್ತೆ."[೧೧] ಪಿರಮಿಡ್ ಶೈಲಿಯ ಗೋಪುರ ಹೊಂದಿರುವ ದ್ರಾವಿಡ ಶೈಲಿಯಲ್ಲಿ ನಿರ್ಮಿಸಿರುವ ವೀರಭದ್ರ ದೇವಾಲಯವಿದೆ. ಇಲ್ಲಿಯ ಗುಡ್ಡದ ಇಳಿಜಾರಿನಲ್ಲಿ ಬಿಳಿ ಮುತ್ತು ಚಲ್ಲಿದಂತೆ ಅರಳಿ ಬಿರಿಯುವ ಕಾಫಿಯ ಹೂಗಳ ನೋಟ ಕಣ್ಣಿಗೆ ಇಂಪನ್ನು ನೀಡುತ್ತದೆ.

ಹೆಬ್ಬೆಯಿಂದ ಮುಂದೆ ಸಿಗುವುದೇ ಭದ್ರಾ ಅಣೆಕಟ್ಟು. ಇಲ್ಲಿಂದ ಈಕೆಯ ಚೆಲ್ಲಾಟಕ್ಕೆ ಕಡಿವಾಣ ಹಾಕಿದಂತೆ ಅಣೆಕಟ್ಟು ನಿರ್ಮಿಸಲಾಗಿದೆ. ಇಲ್ಲಿಂದ ಮುಂದೆ ಭದ್ರೆ ಸೊರಗಿದಂತೆ ಕಾಣಿಸಿದರೂ ಮುಂದೆ ಅನೇಕ ಕವಲುಗಳನ್ನು ಕೂಡಿಸಿಕೊಂಡು (ಲಕ್ಕವಳ್ಳಿಯಿಂದ ೧೦ಕಿ.ಮೀ. ದೂರಕ್ಕೆ ಬಂದು ಸ್ವಲ್ಪ ದೂರ ನಡೆದರೆ) ಸೋಮಾಪುರಕ್ಕೆ ಹರಿದು ಬರುತ್ತಾಳೆ. ಒಂದು ಕಾಲದಲ್ಲಿ ಜನಭರಿತ ಅಗ್ರಹಾರವಾಗಿದ್ದ ಸೋಮಾಪುರ ಇಂದು ಹಾಳಾಗಿದೆ. "ಇಲ್ಲಿ ೧೨ನೇ

ಶತಮಾನದ ಪ್ರಸನ್ನ ಸೋಮೇಶ್ವರ ದೇವಾಲಯವಿದೆ. ವಿಶೇಷವೆಂದರೆ ಶಿವಲಿಂಗದಲ್ಲಿ ದತ್ತಾತ್ರೇಯನ ಮೂರ್ತಿ ಇದೆ. ಪ್ರತಾಪರುದ್ರ ಚಕ್ರವರ್ತಿಯ ಕಾಲದಲ್ಲಿ ಕಟ್ಟಲಾಗಿದೆ.[೧೨] ಹೊಯ್ಸಳ ಮತ್ತು ದಕ್ಷಿಣಾತ್ಯ ಶೈಲಿಯಲ್ಲಿ ರಚಿಸಲ್ಪಟ್ಟ ಮುಖಮಂಟಪವಿದ್ದರೆ, ಚಾಲುಕ್ಯ ಮತ್ತು ಇಂಡೋಇಸ್ಲಾಮಿಕ್ ಶೈಲಿಯ ಗೋಪುರಗಳಿವೆ. ೧೪ನೇ ಶತಮಾನದ ಯೋಗನರಸಿಂಹ ದೇವಾಲಯ ನದೀ ದಡದಲ್ಲಿದ್ದು ಜೀರ್ಣವಾಗಿರುವುದರಿಂದ ಮೂರ್ತಿಯನ್ನು ಶಿವಮೊಗ್ಗದ ಮ್ಯೂಸಿಯಂನಲ್ಲಿ ಇಡಲಾಗಿದೆ. ಇಲ್ಲಿಯ ದೇವಾಲಯದ ಎದುರಿನ ಭಾಗದ ನದಿಯಲ್ಲಿ ಶಿವತೀರ್ಥ, ಚಕ್ರತೀರ್ಥ ರುದ್ರಪಾದ ಎನ್ನುವ ಮೂರು ತೀರ್ಥಗಳಿವೆ. ಈಗಲೂ ಇಲ್ಲಿ ಜನ ಪುಣ್ಯಸ್ನಾನ ಮಾಡುತ್ತಾರೆ. ಸೋಮೇಶ್ವರ ಮೂರ್ತಿ ಸ್ವಯಂ ಉದ್ಭವವಾದ್ದದೆಂದು ಹೇಳುತ್ತಾರೆ. ಈ ಪ್ರದೇಶ ಜಮದಗ್ನಿ ಋಷಿ ತಪಸ್ಸು ಮಾಡಿದ್ದನೆಂದೂ ಮತ್ತು ಪರುಶುರಾಮನು ತಮ್ಮ ಕೊಡಲಿಯ ಕೊನೆಯ ರಕ್ತದ ಹನಿಯನ್ನು ತೊಳೆದನೆಂದೂ ಹೇಳಲಾಗಿದೆ. ಆದ್ದರಿಂದ ಇದನ್ನು ಪರುಶುರಾಮ ಕ್ಷೇತ್ರವೆಂದೂ ಕೂಡ ಕರೆಯಲಾಗಿದೆ.[೧೩] ಈ ಸೋಮಾಪುರದ ಗ್ರಾಮವು ಸ್ಥಳಾಂತರಗೊಂಡಿದೆ. ಕಾರಣ ಆಗಾಗ ಭದ್ರಾ ನದಿಯ ಪ್ರವಾಹ ಮಿತಿಮೀರಿದ್ದು ಹೊಳೆಸಾಲು ಹಾಗೂ ಹಳ್ಳದ ಸಾಲಿನಲ್ಲಿ ವಿಪರೀತವಾಗಿ ಬೆಳೆದಿರುವ ಬಿದಿರು ಪೆಳೆಯಿಂದಲೂ ಕಾಡು ಬೆಂಕಿಯ ಹಾವಳಿಯೇ ಕಾರಣ. ೮೦೮.೦೬.೧೯೪೮ರಲ್ಲಿ ಗ್ರಾಮವನ್ನು ಸಂಪೂರ್ಣ ಸ್ಥಳಾಂತರಿಸಲಾಯಿತು. ಮತ್ತು ದೇವಸ್ಥಾನದ ಸುತ್ತ ಇದ್ದಂತಹ ಪೌಳಿಗೋಡೆ ೧೯೨೮ನೇ ಇಸವಿಯಲ್ಲಿಯೇ ಬಿದ್ದು ನೆಲಸಮವಾಗಿದೆ. ೨೪.೦೭.೧೯೨೩, ೦೮.೦೮.೧೯೩೪ರಲ್ಲಿ ನದಿಯಲ್ಲಿ ವಿಪರೀತ ಪ್ರವಾಹ ಬಂದು ಗರ್ಭಗುಡಿಯಲ್ಲಿ ದೇವರ ಮೇಲೆ ಅರ್ಧ ಅಡಿ ನೀರು ನಿಂತಿತ್ತಂತೆ.[೧೪] ಗ್ರಾಮಸ್ಥಳಾಂತರಗೊಂಡು ನಿರ್ಜೀವ ಪ್ರದೇಶವಾದಾಗ ಇಡೀ ದೇವಸ್ಥಾನವೆಲ್ಲಾ ಕಾಡಿನಿಂದ ಮುಚ್ಚಿ ಹೋಗಿದ್ದಿತಂತೆ. ಆದರೆ ೧೯೫೨ನೇ ಇಸವಿಯಲ್ಲಿ ಕಾಡನ್ನೆಲ್ಲಾ ಕಡಿದು ದೇವಾಲಯವನ್ನು ತೆರುವುಗೊಳಿಸಲಾಗಿದೆ.

ಭದ್ರೆಯ ಒಡಲ ತಡಸೆಗ್ರಾಮ: ೧೯.೦೬.೨೦೦೩ರ ಪ್ರಜಾವಾಣಿಯ ವರದಿಯಂತೆ ಸುಮಾರು ೪೦-೪೧ ವರ್ಷಗಳ ಹಿಂದೆ ಭದ್ರಾನದಿಯ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ಗ್ರಾಮವೊಂದನ್ನು ೨೦೦೩ ಜೂನ್ ತಿಂಗಳಲ್ಲಿ ಮತ್ತೆ ನೋಡಲು ಸಾಧ್ಯವಾಗಿ ಪ್ರವಾಸಿಗರನ್ನು ತನ್ನತ್ತ ಆಕರ್ಷಿಸಿತ್ತು. ಹಿಂದೆ ಈ ಗ್ರಾಮ 'ಭತ್ತದ ಕಣಜ'ವೆನಿಸಿತ್ತು.'[೧೫] ಎನ್.ಆರ್.ಪುರ ತಾಲ್ಲೂಕು ಕೇಂದ್ರದಿಂದ ೮ಕಿ.ಮೀ. ದೂರದಲ್ಲಿ ಬೃಹತ್ ಗ್ರಾಮವಾಗಿತ್ತು. "ತಡಸೆ" ಲಕ್ಕವಳ್ಳಿಯ ಅಣೆಕಟ್ಟೆಗಾಗಿ ನೀರಿನಲ್ಲಿ ಮುಳುಗಡೆಯಾಗಿತ್ತು. ಈ ತಡಸೆ, ಇತ್ತೀಚೆಗೆ ಮಳೆ ಬಾರದೆ ಮುಳುಗಡೆಯಾದ ಗ್ರಾಮದ ಅವಶೇಷಗಳನ್ನು ಮತ್ತೆ ಕಾಣುವಂತಾಗಿತ್ತು. ೩೦೦ ವರ್ಷಗಳ ಹಿಂದೆ ಬ್ರಿಟಿಷರ ಕಾಲದಲ್ಲಿ ಇಲ್ಲಿ ಕಟ್ಟಲಾದ ಸೇತುವೆ ಇನ್ನೂ ಹಾಳಾಗದೆ ಅಚಲವಾಗಿ ಉಳಿದಿದೆ. 'ತಡಸೆ' ಸೇತುವೆ ಎಂದೇ ಪ್ರಖ್ಯಾತವಾಗಿತ್ತು. ಹಿಂದೆ ಇಲ್ಲಿ ರೈಲು ಸಂಚಾರದ

ಮಾರ್ಗವಿತ್ತು. ಸ್ವತಂತ್ರ ಪೂರ್ವದಲ್ಲಿಯೇ ರೈಲ್ವೆ ಜಂಕ್ಷನ್ ಆಗಬೇಕಿದ್ದ ಎನ್.ಆರ್. ಪುರ ತನ್ನ ಮೌಲ್ಯವನ್ನು ಕಳೆದುಕೊಂಡಿದ್ದರಿಂದ ಶಿವಮೊಗ್ಗ ಭದ್ರಾವತಿಗಳು ಅವಕಾಶ ಪಡೆದುಕೊಂಡವು. ಅದೆಲ್ಲಕ್ಕೂ ಈ ತಡಸೆಯ ಸೇತುವೆಯೇ ಕಾರಣವಾಗಿತ್ತು. ತಡಸೆಯ ಸಾವಿರಾರು ಎಕರೆಗಳಲ್ಲಿ ಬೆಳೆಯುತ್ತಿದ್ದ ಕೊಯಮತ್ತೂರಿನ ಸಣ್ಣಕ್ಕಿ ರಾಜ್ಯದಲ್ಲೇ ಹೆಸರುವಾಸಿಯಾಗಿತ್ತು. ಅಂದಿನ ರೈಸ್ ಮಿಲ್‌ನ ಅವಶೇಷವೂ ಗೋಚರಿಸಿತ್ತು. ಈ ಸೇತುವೆ ದಾಟಿ ಸ್ವಲ್ಪ ದೂರಸಾಗಿದರೆ ತಡಸೆಯ ಈಶ್ವರ ದೇವಾಲಯವೂ ಸ್ಥಳಾಂತರವಾಗಿರುವುದನ್ನು ಜನ ಕಂಡು ತಮ್ಮ ಭಾವನಾಲೋಕದಲ್ಲಿ ಮುಳುಗಿದ್ದಾರೆ. ಭದ್ರಾ ನದಿಯೊಂದಿಗೆ ಸಂಗಮಗೊಳ್ಳುವ ಅಬ್ಬೆಜಲಪಾತ ಕೆಮ್ಮಣ್ಣು ಗುಂಡಿಯಿಂದ ೫ ಮೈಲುದೂರದಲ್ಲಿ ಅಬ್ಬೆ ಜಲಪಾತವಿದೆ. ಗುಡ್ಡದ ಮೇಲಿಂದ ನೀರು ಸುಮಾರು ೨೫೦ ಅಡಿ ಆಳಕ್ಕೆ ಧುಮುಕುತ್ತದೆ. ಇದಕ್ಕೆ ದೊಡ್ಡ 'ಅಬ್ಬೆ' ಎನ್ನುತ್ತಾರೆ. ಮುಂದೆ ಇದೇ ನೀರು ಸ್ವಲ್ಪ ದೂರ ಹರಿದು ೨೦೦ ಅಡಿ ಆಳಕ್ಕೆ ಧುಮುಕಿ ವಿಶಾಲವಾಗಿ ಹರಡಿಕೊಂಡು ಧುಮುಕುತ್ತದೆ.[೧೬] ಇದಕ್ಕೆ ಸಣ್ಣ ಅಬ್ಬೆ ಎನ್ನುತ್ತಾರೆ. ಈ ನೀರು ಭದ್ರಾ ನದಿಗೆ ಸೇರುತ್ತದೆ.

ಪ್ರಸಿದ್ಧ ಭದ್ರಾವತಿ ಇರುವುದು ಮತ್ತು ಕಬ್ಬಿಣ ಕಾರ್ಖಾನೆ ಇರುವುದು ಭದ್ರೆಯ ದಡದ ಮೇಲೆಯೇ. ಇಲ್ಲಿರುವ ಕಬ್ಬಿಣ ಮತ್ತು ಕಾಗದದ ಕಾರ್ಖಾನೆಗಳಿಗೆ ಭದ್ರೆಯ ಆಸರೆ ಬೇಕೇ ಬೇಕು. ಆದರೆ ದುರಂತವೆಂದರೆ ಈ ಕಾರ್ಖಾನೆಗಳ ತ್ಯಾಜ್ಯವೆಲ್ಲ ನದಿಗೆ ಸೇರಿ ಭದ್ರಾವತಿಯ ಮಧ್ಯ ಹರಿಯುವ ನೀರು ಕಲುಷಿತವಾಗಿದೆ. ಊರಿನ ಮಧ್ಯ ಸೇತುವೆ ಕಟ್ಟಿದ್ದಾರೆ. ಭದ್ರೆ ಹೊಳೆಹೊನ್ನೂರಿಗೆ ಬರುವಷ್ಟರಲ್ಲಿ ಕಾರ್ಖಾನೆಯ ಕೊಳಕನ್ನೆಲ್ಲ ತೊಳೆದು ಶುದ್ಧಳಾಗಿ ಬರುತ್ತಾಳೆ. ಈ ನದಿಯಿಂದ ಹೊನ್ನೂರಿಗೆ ಹೊಳೆಹೊನ್ನೂರು ಎಂದೇ ಹೆಸರಾಗಿದೆ. ಇಲ್ಲಿ ಭದ್ರೆ ವೈಷ್ಣವ ಗುರುಗಳಪಾದ ತೊಳೆದು ಪುನೀತಳಾದವಳಂತೆ ಚೆಲ್ಲಾಟದ ಓಟವನ್ನು ಮುಗಿಸಿದ್ದಂತೆ ಗಂಭೀರಳಾಗಿ ಹರಿಯುತ್ತಾಳೆ. ಕೂಡಲಿಯಲ್ಲಿ ಪ್ರಬುದ್ಧಳಾಗಿ, ಸ್ನಿಗ್ದಳಾಗಿ ಸಂಗಮೇಶ್ವರನ ಎದುರಿಗೆ ತುಂಗೆಯಲ್ಲಿ ಸೋದರಭಾವದಿಂದ ಸಂಗಮವಾಗಿ ತುಂಗಭದ್ರೆಯಾಗುತ್ತಾಳೆ.

[illegible]

ಅಡಿಟಿಪ್ಪಣಿಗಳು

೧. ಡಾ. ವಿರೂಪಾಕ್ಷಿ ಪೂಜಾರಹಳ್ಳಿ – ಜಲಸಂಬಂಧಿ ಚಳವಳಿ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ. ೧ ಮತ್ತು ೨.

೨. ವಾಸುದೇವರಾವ್. ಎಂ. – ಕರ್ನಾಟಕ ನದಿಗಳು, ಸ್ವಪ್ನ ಬುಕ್ ಹೌಸ್, ಪುಟ ೧ ಮತ್ತು ೨

೩. ಟಿ. ಗಿರಿಜ – ಭಾರತದ ನದಿಗಳು – ನಿಹಾರಿಕ ಪ್ರಕಾಶನ, ಪುಟ ೪೭೮

೪. ತುಂಗ ಮತ್ತು ಭದ್ರಾ ನದಿಗಳ ಹುಟ್ಟು, ಪಾತ್ರ ಹಾಗೂ ಜಲಚರಗಳ ಕುರಿತು ಅಧ್ಯಯನ ವರದಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩.

೫. ತುಂಗ ಮತ್ತು ಭದ್ರಾ ನದಿಗಳ ಹುಟ್ಟು, ಪಾತ್ರ ಹಾಗೂ ಜಲಚರಗಳ ಕುರಿತು ಅಧ್ಯಯನ ವರದಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧

೬. ಇತಿಹಾಸ ದರ್ಶನ ಸಂಪುಟ ೧೦, ಪುಟ ೩

೭. ಅದೇ

೮. ಇತಿಹಾಸ ದರ್ಶನ ಸಂಪುಟ ೧೦–ಪುಟ ೩, ೪, ೫, ೬.

೯. ತುಂಗ ಮತ್ತುಭದ್ರಾ ನದಿಗಳ ಹುಟ್ಟು, ಪಾತ್ರ ಹಾಗೂ ಜಲಚರಗಳ ಕುರಿತು ಅಧ್ಯಯನ ವರದಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೭೯

೧೦. ಅದೇ, ಪುಟ ೧೮೦

೧೧. ಟಿ. ಗಿರಿಜ – ಭಾರತದ ನದಿಗಳು, ನಿಹಾರಿಕಾ ಪ್ರಕಾಶನ, ಪುಟ ೪೮೨

೧೨. ಅದೇ, ಪುಟ ೪೮೨

೧೩. ಅದೇ, ಪುಟ ೪೮೩.

೧೪. ಅದೇ, ಪುಟ ೪೮೩.

೧೫. ಅದೇ, ಪುಟ ೪೮೩.

೧೬. ಅದೇ, ಪುಟ ೪೮೪.

ಅಧ್ಯಾಯ : ಮೂರು

ಭದ್ರಾ ಮೇಲ್ದಂಡೆ ಯೋಜನೆ : ಚಾರಿತ್ರಿಕ ಅವಲೋಕನ

ಅಧ್ಯಾಯ : ಮೂರು

ಭದ್ರಾ ಮೇಲ್ದಂಡೆ ಯೋಜನೆ : ಚಾರಿತ್ರಿಕ ಅವಲೋಕನ

ಭದ್ರಾ ಜಲಾಶಯದ ಕಿರುನೋಟ

ಹರಿಯುವ ನೀರಿಗೆ ಅಣೆಕಟ್ಟು ಎನ್ನುವುದನ್ನು ಕಟ್ಟಿ ತಡೆದು ನಿಲ್ಲಿಸುವ ಪ್ರಯತ್ನ ಯಾವಾಗ ಪ್ರಾರಂಭವಾಯಿತು ಎಂಬುದನ್ನು ಹೇಳುವುದು ಕಷ್ಟಸಾಧ್ಯ. ಅಣೆಕಟ್ಟು ಎನ್ನುವುದು ನೀರಿಗೆ ಅಡ್ಡ ಹಾಕಲು ಕಟ್ಟುವ ತಡೆ. ಡ್ಯಾಂ ಎಂದರೆ ಜಲಾಶಯ, ನೀರಿನ ಸಂಗ್ರಹಣೆ, ಜಲಾಶಯದ ನಿರ್ಮಾಣಗಳು ಈಗಿನ ತಾಂತ್ರಿಕ ಸೌಲಭ್ಯಗಳು ರೂಪುಗೊಂಡ ಮೇಲೆ ನಿರ್ಮಾಣವಾದಂತವು. ಕೆರೆ, ಕಟ್ಟೆ, ಬಾವಿ, ಅಣೆಕಟ್ಟುಗಳು ಪ್ರಾಚೀನ ಕಾಲದಿಂದಲೂ ಇದ್ದವು. ಮನುಕುಲ ಪ್ರಾರಂಭವಾಗಿ ಮಂಗನಿಂದ ಮಾನವರಾಗಿ ಮಾನವ ವಿಕಾಸಗೊಳ್ಳತೊಡಗಿದಂತೆ ಆಮೇಲಷ್ಟೇ ನೀರಿನ ವಿಚಾರವಾಗಿಯೂ ಆತ ಯೋಚಿಸಿರಲಿಕ್ಕೆ ಸಾಧ್ಯ. ಇದು ವಿಜ್ಞಾನದ ಬೆಳವಣಿಗೆ ಸಾರ ಸಂಗ್ರಹ. ಇದಕ್ಕೆ ಎಷ್ಟೊ ಕೋಟಿ ವರುಷಗಳು ತೆಗೆದುಕೊಂಡಿವೆ. ಅಲೆಮಾರಿಯಾಗಿದ್ದ ಮಾನವ ನದಿ ದಡಗಳಲ್ಲಿ ವಾಸಿಸುವುದನ್ನು ಕಲಿತುಕೊಂಡ ನಂತರ ಅಲ್ಲಿ ನೈಸರ್ಗಿಕವಾಗಿ ಸಿಕ್ಕಂತ ಸೊಪ್ಪು ಧಾನ್ಯಗಳ ಅನುಭೋಗ ಪಡೆದು ಅವುಗಳನ್ನು ಬೆಳೆಯುವುದಕ್ಕೆ ಪ್ರಾರಂಭಿಸಿದ ಈ ಬೆಳೆಗಳು ಮಳೆ ಬರದಿದ್ದಾಗ ಒಣಗಲು ಪ್ರಾರಂಭಿಸಿದವು. ಆಗ ತಗ್ಗು ಪ್ರದೇಶದಲ್ಲಿ ಸಿಕ್ಕಂತ ನೀರನ್ನು ಅವುಗಳಿಗೆ ಹಾಕಿ ಬೆಳೆಗಳನ್ನು ರಕ್ಷಿಸಿದ ಮುಂದೆ ಕೆರೆ ಕಟ್ಟೆಗಳನ್ನು ಕಟ್ಟಿ ನೀರನ್ನು ನಿಲ್ಲಿಸುವ ಪ್ರಯತ್ನದ ಫಲವೇ ಕೆರೆಗಳ ನಿರ್ಮಾಣ. ಮುಂದೆ ಜನಸಂಖ್ಯೆ ಜಾಸ್ತಿಯಾದಂತೆ ಮತ್ತು ತಂತ್ರಜ್ಞಾನ ಬೆಳೆದಂತೆ ನದಿಗಳ ನೀರನ್ನು ಬಳಸಿಕೊಳ್ಳಲು ಪ್ರಯತ್ನ ಪಟ್ಟ. ಇದು ಕಷ್ಟದ ಕೆಲಸವಾಗಿತ್ತು. ಇಂತಹ ಒಂದು ಪ್ರಯತ್ನದಲ್ಲಿ ಭಾರತದಲ್ಲಿ ಒಂದು ನದಿಗೆ ಅಣೆಕಟ್ಟು ಕಟ್ಟಿ ಅದರಲ್ಲಿ ಯಶಸ್ವಿಯಾದವರು ಚೋಳರು. ಕ್ರಿ.ಶ. ೧೨ನೇಯ ಶತಮಾನದಲ್ಲಿ ರಾಜ್ಯವಾಳಿದ ಚೋಳ ಸಾಮ್ರಾಜ್ಯದ ಒಬ್ಬ ಸಮರ್ಥ ಅರಸನಾದ "ಕರಿಕಾಲ ಚೋಳ"[೧] ಹಾಗೆಯೇ ಒಂದು ನದಿ ಎನ್ನುವಾಗ ಈ ಹಿರಿಮೆ ಕಾವೇರಿಗೆ ಸಲ್ಲುತ್ತದೆ. ಈ ಯಶಸ್ಸು ಖಂಡಿತವಾಗಿಯೂ ತಮಿಳರಿಗೆ ಹೋಗುತ್ತದೆ. ಈ ಅರಸ ಕಟ್ಟಿದ ಭಾರತದ ಮೊದಲ ಅಣೆಕಟ್ಟು "ಕಲ್ಲಣ್ಯೆ ಅಥವಾ ಗ್ರಾಂಡ್ ಅಣೆಕಟ್ಟು". ಇದರ ನಿರ್ಮಾಣದ ವರ್ಷ ಕ್ರಿ.ಶ. ೧೦೬೮ ಎಂದು ಗುರುತಿಸಲಾಗಿದೆ. ಈ ರೀತಿಯಾಗಿ ಅಣೆಕಟ್ಟುಗಳು, ಜಲಾಶಯಗಳು ಇಂದು ಭಾರತದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಿರ್ಮಾಣವಾಗಿವೆ. ಇಂತಹ ಜಲಾಶಯದಲ್ಲಿ ಭದ್ರಾ ಜಲಾಶಯವೂ ಕೂಡ ಒಂದಾಗಿದೆ. ಇದನ್ನು ಭದ್ರಾನದಿಗೆ ಅಡ್ಡಲಾಗಿ ಕಟ್ಟಲಾಗಿದೆ.

ಕರ್ನಾಟಕದ ಪ್ರಮುಖ ವಿವಿಧೋದ್ದೇಶ ನೀರಾವರಿ ಯೋಜನೆಗಳಲ್ಲಿ ಒಂದಾದ ಭದ್ರಾ ಯೋಜನೆಯು ೧೯೪೬ರಲ್ಲಿ ಪ್ರಾರಂಭವಾಯಿತು. ಇದು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಗ್ರಾಮದ ಸಿಂಗನಮನೆಯಲ್ಲಿದೆ. ಎಂ.ಎಸ್.ಎಲ್.ಗಿಂತ ೬೯ ಮೀಟರ್ ಎತ್ತರದಲ್ಲಿದೆ. ಜಲಾಶಯವು ೧೩'-೪೨-೦° ಉತ್ತರ ಅಕ್ಷಾಂಶ ಮತ್ತು ೭೫°-೩೮'-೨೦° ಪೂರ್ವ ಅಕ್ಷಾಂಶದಲ್ಲಿದೆ. ಭದ್ರಾ ಪರಿಸರವು ಆಗ್ನೇಯ ಮಾರುತಗಳಿಂದ ಒಳ ಹರಿವನ್ನು ಪಡೆಯುತ್ತದೆ. ಇದರಲ್ಲಿ ಶೇಕಡಾ ೮೨ರಷ್ಟು ಒಳಹರಿವು ಆಗ್ನೇಯ ಮಾರುತದ ಕೊಡುಗೆಯಾಗಿದೆ. ಇಲ್ಲಿನ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ೮೦೦ ಮಿ.ಮೀಟರುಗಳಾಗಿವೆ.

ಬಳ್ಳಾರಿ, ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳ ಕೆಲಭಾಗಗಳಲ್ಲಿನ ನೀರಿನ ತುರ್ತು ಅವಶ್ಯಕತೆಯನ್ನು ಮನಗಂಡು ಭದ್ರಾ ನದಿಗೆ ಅಡ್ಡಲಾಗಿ ಜಲಾಶಯವೊಂದನ್ನು ನಿರ್ಮಿಸಲು ನಿರ್ಧರಿಸಲಾಯಿತು.[೨] ಮೂಲ ಯೋಜನೆಯು ೧೯೪೬ರಲ್ಲಿ ಆರಂಭವಾಯಿತು. ೫೬.೪ ಮೀ. ಕಾಂಪೋಸಿಟ್ ಅಣೆಕಟ್ಟನ್ನು ನಿರ್ಮಿಸಿ ೧೩,೦೦೦ ಕಿ.ವ್ಯಾ. ವಿದ್ಯುತ್ ಉತ್ಪಾದಿಸಲು ಮತ್ತು ೭೨,೮೭೫ ಹೆಕ್ಟೇರ್ (೧,೮೦,೦೦೦ ಎಕರೆ) ಭೂಪ್ರದೇಶಕ್ಕೆ ನೀರುಣಿಸಲು ಈ ಯೋಜನೆಯ ಅಂದಾಜು ವೆಚ್ಚ ೮೯೦ ಲಕ್ಷಗಳು. ಹಣಕಾಸಿನ ತೊಂದರೆಯಿಂದಾಗಿ ನಿರ್ಮಾಣ ಕಾರ್ಯ ಮಂದಗತಿಯಲ್ಲಿ ಸಾಗಿತು. ಮುಂದೆ ೧೯೫೨ರಲ್ಲಿ ಯೋಜನಾ ವೆಚ್ಚವನ್ನು ೧೭೭೫ ಲಕ್ಷಗಳಿಗೆ ಹೆಚ್ಚಿಸಲಾಯಿತು. ಆ ವೇಳೆಗೆ ಯೋಜನೆಗೆ ಸಂಬಂಧಿಸಿದ ತಾಂತ್ರಿಕ ಸಲಹಾ ಸಮಿತಿಯು ಯೋಜನೆಗೆ ಸಂಬಂಧಿಸಿದ ಹಲವು ಅಂಶಗಳನ್ನು ಪುನರ್ ಪರಿಸ್ಕರಿಸಿತು. ಅಣೆಕಟ್ಟೆಯ ಎತ್ತರ ೫೯.೧೫ ಮೀ (೧೯೪ ಅಡಿ) ಬಲದಂಡೆ ಕಾಲುವೆಯ ಸಿಲ್ ೯೦ ಅಡಿಗಳಿಂದ ೧೦೦ ಅಡಿಗಳಿಗೆ ಹೆಚ್ಚಿಸಲಾಯಿತು. ಇದರೊಂದಿಗೆ ನೀರಾವರಿಯು ೭೨,೮೭೫ ಹೆಕ್ಟೇರ್ (೧,೮೦,೦೦೦) ಎಕರೆಗಳಿಂದ ೯೯,೦೧೪ ಹೆಕ್ಟೇರ್‌ಗಳಿಗೇರಿತು. ವಿವರಗಳು ಈ ಕೆಳಗಿನಂತಿವೆ.

ಕ್ರ.ಸಂ.	ಕಾಲುವೆ	ಮೂಲ ಯೋಜನೆಯ ಪ್ರಕಾರ ನೀರುಣಿಸುವ ಪ್ರದೇಶ (ಎಕರೆಗಳಲ್ಲಿ)	ಪರಿಸ್ಕೃತ ಯೋಜನೆಯ ಪ್ರಕಾರ ನೀರುಣಿಸುವ ಪ್ರದೇಶ (ಎಕರೆಗಳಲ್ಲಿ)
೧.	ಭದ್ರಾ ಎಡದಂಡೆ ಕಾಲುವೆ	೨೧,೦೦೦	೧೭,೮೯೪
೨.	ಭದ್ರಾ ಬಲದಂಡೆ ಕಾಲುವೆ	೨೨,೦೦೦	೩೯,೫೫೧
೩.	ಅನ್ವೇರಿ ಉಪಕಾಲುವೆ	೧೫,೦೦೦	೧೫,೧೪೭
೪.	ಮಲೆಬೆನ್ನೂರು ಉಪಕಾಲುವೆ	೪೨,೦೦೦	೫೮,೫೭೭
೫.	ದಾವಣಗೆರೆ ಉಪಕಾಲುವೆ	೭೧,೦೦೦	೧,೦೧,೩೪೨

	ದೇವರ ಬೆಳಕೆರೆ ಪಿಕಪ್		
	ಕಾಲುವೆಗಳು		
	ಎಡದಂಡೆ ಕಾಲುವೆ		೪,೨೮೨
	ಬಲದಂಡೆ ಕಾಲುವೆ		೭,೮೭೦
೬	ನೀರಾವರಿಯ ಅಭಿವೃದ್ಧಿಗೆ	೯,೦೦೦	
	ಡ್ಯೂಡಿ ಉತ್ತಮ ಪಡಿಸುವಿಕೆ		
	ಒಟ್ಟು	**೧,೮೦,೦೦೦**	**೨,೪೪,೬೬೩ ಎಕರೆಗಳು.**

ಭದ್ರಾ ಅಣೆಕಟ್ಟಿನ ಉದ್ದ ೧೭೦೮ ಮೀಟರುಗಳಾಗಿದ್ದು ೫೯.೧೫ ಮೀಟರ್ ಎತ್ತರವಾಗಿದೆ. ಎಡಪಾರ್ಶ್ವದಲ್ಲಿ ಮೂರು ತಡೆಗಳು, ಬಲಪಾರ್ಶ್ವದಲ್ಲಿ ಒಂದು ತಡೆ ಮೃಣ್ಮಯ ಏರಿಯೊಂದಿಗೆ ಮುಖ್ಯ ಸೀಲುವೇಯು ನಾಲ್ಕು ವರ್ಟಿಕಲ್ ಲಿಫ್ಟ್ ಮಾದರಿಯ ಗೇಟ್‌ಗಳನ್ನು ಹೊಂದಿದ್ದು, ಇವು ೧೮.೨೯ ಮೀ + ೭.೬೨ ಮೀ (೬೦^1 + ೨೫$^{1)}$ ಗಳ ಅಳತೆಯವಾಗಿವೆ. ಇವುಗಳ ಪ್ರವಾಹ ಹರಿವಿನ ಸಾಮಾರ್ಥ್ಯ ೩೩೯೮.೪೦ ಕ್ಯೂಮೆಕ್ಸ್ (೧೦,೬೭೦ ಕ್ಯೂಸೆಕ್ಸ್) ಇಲ್ಲಿನ ಲೈವ್ ಸ್ಟೋರೇಜ್ ೧೭೮೫ ಘನ ಮಿಲಿಮೀಟರ್ (೬೩.೦೩ ಟಿ.ಎಂ.ಸಿ) ಹಾಗೂ ಒಟ್ಟು ಸ್ಟೋರೇಜ್ ಸಾಮರ್ಥ್ಯ ೨೦೨೫ ಘನ ಮಿಲಿಮೀಟರ್ (೭೧.೫೩ ಟಿ.ಎಂ.ಸಿ) ಅಣೆಕಟ್ಟಿನ ಪ್ರದೇಶದಲ್ಲಿನ ಒಟ್ಟು ಅಚ್ಚುಕಟ್ಟು ಪ್ರದೇಶ ೧೯೬೮.೫ ಚ.ಕಿ.ಮೀ. ಹಾಗೂ ಮುಳುಗಡೆಯ ಪ್ರದೇಶ ೧೧೭.೨ ಚ.ಕಿ.ಮೀ. (೪೫.೨೦. ಚ.ಮೈಲುಗಳು) ಅಣೆಕಟ್ಟಿನ ಮೇಲಿನ ಅಗಲ ೪.೫೭ ಮೀಟರುಗಳು (೧೫ ಅಡಿ).

ಭದ್ರಾ ಅಣೆಕಟ್ಟಿಗೆ ಬಲದಂಡೆ ಹಾಗೂ ಎಡದಂಡೆ ಕಾಲುವೆಗಳಿವೆ. ಎಡದಂಡೆಯ ಕಾಲುವೆಯ ತಳಕಟ್ಟಿನ ಆರ್.ಎಲ್. ೨೦೦೮.೦೦ ಅಡಿಗಳಾಗಿದ್ದು ೬^1 x ೧೨^೧ ಪ್ರಮಾಣದ ಒಂದು ದ್ವಾರವನ್ನು ಹೊಂದಿದೆ. ಬಲದಂಡೆ ಕಾಲುವೆಯ ತಳಕಟ್ಟಿನ ಆರ್.ಎಲ್. ೨೦೭೨.೦೦ ಅಡಿಗಳಾಗಿದ್ದು ತಲಾ ೮^1 + ೧೫^1 ಅಳತೆಯ ದ್ವಾರಗಳನ್ನೊಳಗೊಂಡಿದೆ.

ಆನ್ವೇರಿ ಉಪಕಾಲುವೆಯು ಬಲದಂಡೆ ಮುಖ್ಯ ಕಾಲುವೆಯ ೭೯.೮ ಕಿ.ಮೀ. ಹರಿಯುವಿಕೆಯ ಬಳಿಕ ಬೇರಾಗುತ್ತದೆ. ಇದಕ್ಕೆ ಅಂಚು ಕಟ್ಟಲಾಗಿಲ್ಲ. ಇದರಿಂದ ನೀರು ನಿಸರ್ಗದ ನಿರ್ಮಿತ ಹಳ್ಳಕ್ಕೆ ಹರಿದು ಹೋಗುತ್ತದೆ. ಈ ಹಳ್ಳಕ್ಕೆ ಒಂದು ಪಿಕಪ್ ನಿರ್ಮಿಸಲಾಗಿದ್ದು ಆ ಮೂಲಕ ಕಾಲುವೆಯನ್ನು ೨೦೯ ಕ್ಯೂಸೆಕ್ಸ್ ಸಾಮರ್ಥ್ಯದೊಂದಿಗೆ ೬೭ ಕಿ.ಮೀ. ದೂರಕ್ಕೆ ಕೊಂಡೊಯ್ಯಲಾಗಿದೆ. ಈ ಕಾಲುವೆಯ ಅಚ್ಚುಕಟ್ಟು ಪ್ರದೇಶವು ಭದ್ರಾವತಿ ಹಾಗೂ ಹೊನ್ನಾಳಿ ತಾಲ್ಲೂಕುಗಳನ್ನೊಳಗೊಂಡಿದೆ. ಇದಕ್ಕೆ ೪೦ ವಿತರಣೆ ಕಾಲುವೆಗಳಿದ್ದು, ಅವುಗಳ ಒಟ್ಟು ಉದ್ದ

೧೧೩.೬೦ ಕಿ.ಮೀ.ಗಳಾಗಿವೆ. ಮಲೆಬೆನ್ನೂರು ಉಪಕಾಲುವೆಯು ಬಲದಂಡೆ ಮುಖ್ಯ ಕಾಲುವೆಯ ೧೦೩ ಕಿ.ಮೀ. ಹರಿಯುವಿಕೆಯ ನಂತರ ಬೇರಾಗುತ್ತದೆ. ಇದರ ಉದ್ದ ೪೮ ಕಿ.ಮೀ.ಗಳು. ಇದಕ್ಕೆ ಅಂಚು ಕಟ್ಟಲಾಗಿಲ್ಲ. ಇದು ಮಲೆಬೆನ್ನೂರಿನ ಸಮೀಪ ಹೆಳವನಕಟ್ಟೆ ಹಳ್ಳವನ್ನು ದಾಟಿಸುತ್ತದೆ. ಇದಕ್ಕೆ ೭೧೦ ಕ್ಯೂಸೆಕ್ಸ್ ಡಿಸ್ಚಾರ್ಜಿಂಗ್ ಸಾಮರ್ಥ್ಯವಿದ್ದು ೨೩,೭೭೪ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸುತ್ತದೆ. ಚನ್ನಗಿರಿ, ಹೊನ್ನಾಳಿ, ಹರಿಹರ ತಾಲ್ಲೂಕುಗಳ ಭೂಪ್ರದೇಶಗಳು ಇದರ ಅಚ್ಚುಕಟ್ಟು ಪ್ರದೇಶವಾಗಿದೆ. ಇದಕ್ಕೆ ೪೨ ಡಿಸ್ಟ್ರಿ ಬ್ಯೂಟರಿಗಳಿದ್ದು ಅವುಗಳ ಒಟ್ಟು ಉದ್ದ ೧೯೧.೩೫ ಕಿ.ಮೀ.ಗಳಾಗಿವೆ.

ದಾವಣಗೆರೆ ಉಪಕಾಲುವೆಯು ಬಲದಂಡೆ ಮುಖ್ಯ ಕಾಲುವೆಯ ೧೦೩ ಕಿ.ಮೀ. ಹರಿಯುವಿಕೆಯ ಬಳಿಕ ಬೇರಾಗುತ್ತದೆ. ಇದರ ಉದ್ದ ೯೦ ಕಿ.ಮೀ.ಗಳಾಗಿದ್ದು ೧೧೭೮ ಕ್ಯೂಸೆಕ್ಸ್ ಸಾಮರ್ಥ್ಯ ಹೊಂದಿದೆ. ಚೆನ್ನಗಿರಿ, ಹರಪನಹಳ್ಳಿ, ದಾವಣಗೆರೆ ತಾಲ್ಲೂಕುಗಳ ೩೦.೨೮೬ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸುತ್ತದೆ. ಸೂಳೆಕೆರೆ ಹಳ್ಳವನ್ನು ದಾಟುವಾಗ ಮುಖ್ಯವಾದ ಕಾಲುವೆಯನ್ನು ಇದು ಒಳಗೊಂಡಿದೆ. ಇದಕ್ಕೆ ೨೭ ಡಿಸ್ಟ್ರಿಬ್ಯೂಟರಿಗಳಿದ್ದು ಅವುಗಳ ಒಟ್ಟು ಉದ್ದ ೧೯೪.೮೦ ಕಿ.ಮೀ.ಗಳಾಗಿವೆ. ಹರಿಹರ ಉಪಕಾಲುವೆಯು ದಾವಣಗೆರೆ ಉಪಕಾಲುವೆಯ ೬೪.೮೦ ಕಿ.ಮೀ. ಹರಿಯುವಿಕೆಯ ಬಳಿಕ ಬೇರಾಗುತ್ತದೆ. ಇದರ ಉದ್ದ ೨೦.೭೦ ಕಿ.ಮೀ.ಗಳಾಗಿದ್ದು ಅಂಚು ಕಟ್ಟಲಾಗಿಲ್ಲ. ಇದರ ಡಿಸ್ಚಾರ್ಜ ಸಾಮರ್ಥ್ಯವು ೩೬೩.೫೯ ಕ್ಯೂಸೆಕ್ಸ್‌ಗಳಾಗಿದ್ದು, ಹರಿಹರ ತಾಲ್ಲೂಕಿನ ೧೫,೩೩೭ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸುತ್ತದೆ. ಇದಕ್ಕೆ ೧೫ ಡಿಸ್ಟ್ರಿಬ್ಯೂಟರಿಗಳಿದ್ದು ಅವುಗಳ ಒಟ್ಟು ಉದ್ದ ೮೮.೪೦ ಕಿ.ಮೀ.ಗಳಾಗಿವೆ. ದಾವಣಗೆರೆ ಮತ್ತು ಮಲೆಬೆನ್ನೂರು ಕಾಲುವೆಗಳ ಜಿನುಗು ನೀರನ್ನು ಸದುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ದೇವರ ಬೆಳಕೆರೆ ಪಿಕಪ್ ಅನ್ನು ಶ್ಯಾಗಲೆ ಹಳ್ಳ ಮತ್ತು ಸೂಳೆಕೆರೆ ಹಳ್ಳಗಳ ಸಂಗಮದಲ್ಲಿ ನಿರ್ಮಿಸಲಾಗಿದೆ. ಇದು ಹರಿಹರ ತಾಲ್ಲೂಕಿನಲ್ಲಿದೆ. ಈ ಪಿಕಪ್‌ನಿಂದ ಎರಡು ಕಾಲುವೆಗಳು ಹರಿಯುತ್ತಿದ್ದು ೪೨೮೦ ಹೆಕ್ಟೇರ್ ಭೂಮಿಗೆ ನೀರುಣಿಸುತ್ತದೆ. ಬಲದಂಡೆ ಕಾಲುವೆಯಡಿಯಲ್ಲಿ ೨೩ ನೇರ ಪೈಪ್‌ಔಟ್‌ಲೆಟ್‌ಗಳೂ ಎಡದಂಡೆ ಕಾಲುವೆಯಡಿಯಲ್ಲಿ ೪೫ ನೇರ ಪೈಪ್ ಔಟ್‌ಲೆಟ್‌ಗಳೂ ಇವೆ.

ಭದ್ರಾ ವಿದ್ಯುದಾಗರ ಭದ್ರಾ ಅಣೆಕಟ್ಟು ನೀರಾವರಿಯ ಜೊತೆಗೆ ವಿದ್ಯುತ್ ಉತ್ಪಾದನೆಗೂ ನೆರವಾಗಿದೆ. ಮುಖ್ಯ ಅಣೆಕಟ್ಟಿನ ಅಡಿಭಾಗದಲ್ಲಿ ನಿರ್ಮಿಸಲಾಗಿರುವ ವಿದ್ಯುತ್ ಕೇಂದ್ರವು ೩೨.೨೦ ಮೆಗಾವ್ಯಾಟ್ ಸಾಮರ್ಥ್ಯ ಹೊಂದಿದ್ದು ಪ್ರತಿವರ್ಷ ೪೫ ದಶಲಕ್ಷ ಯುನಿಟ್ ವಿದ್ಯುಚ್ಛಕ್ತಿ ಒದಗಿಸುತ್ತದೆ. ಈ ಯೋಜನೆಗೆ ಸುಮಾರು ೩೧೫ ಲಕ್ಷ ರೂ. ವೆಚ್ಚವಾಗಿದೆ. ಭದ್ರಾ ಜಲವಿದ್ಯುತ್ ಘಟಕವು ೧೯೬೨ರಲ್ಲಿ ಪ್ರಾರಂಭವಾಯಿತು.

ಭದ್ರಾ ವಿದ್ಯುತ್‌ದಾಗರದ ಮೊದಲ ೩ ಮೆಗಾವ್ಯಾಟ್ ಘಟಕ ೨೮.೧೧.೧೯೬೧ ರಿಂದ ೧೨ ಮೆಗಾವ್ಯಾಟ್ ಘಟಕಗಳು ೯.೪.೧೯೬೩ ಮತ್ತು ೨೧.೬.೧೯೬೩ ರಿಂದ ೭.೨ ಮೆಗಾವ್ಯಾಟ್‌ಗಳ ನಾಲ್ಕನೆ ಘಟಕವು ೧೧.೦೨.೬೩ ರಿಂದ ಮೆಗಾವ್ಯಾಟ್‌ಗಳ ಐದನೇ ಘಟಕ ೨೯.೦೩.೧೯೬೮ ರಿಂದ ಕಾರ್ಯಾರಾಚರಿಸುತ್ತಿದೆ. ಭದ್ರಾ ವಿದ್ಯುದಾಗರವರನ್ನು ನಿರ್ಮಿಸಿದಾಗ ಅಂದಿನ ಅಂತರ ರಾಜ್ಯ ಒಪ್ಪಂದದಂತೆ ನೀರಿನ ಹರಿವಿನ ಕಾಲುವೆ, ಕಾಲ ಪ್ರಮಾಣಗಳನ್ನು ನಿಗದಿ ಪಡಿಸಿಕೊಳ್ಳಲಾಯಿತು. ಆ ಪ್ರಕಾರ ನೀರಾವರಿಗೆ ಮೈಸೂರು ರಾಜ್ಯವು ಲಕ್ಕವಳ್ಳಿ ಜಲಾಶಯದಲ್ಲಿ ಸಂಗ್ರಹವಾಗುವ ನೀರಿನಲ್ಲಿ ೫೭ ಟಿ.ಎಂ.ಸಿ. ನೀರನ್ನು ಮಾತ್ರ ಬಳಸಬೇಕು. ಉಳಿದ ನೀರನ್ನು ನದಿಗೆ ಬಿಡಬೇಕು. ನೀರಿನ ಸಂಗ್ರಹದ ಪ್ರಮಾಣ ಹೆಚ್ಚುವರಿಯಾಗಿ ಎಷ್ಟೇ ಇದ್ದರೂ ೫೭ ಟಿ.ಎಂ.ಸಿ. ಅಷ್ಟೇ ಬಳಕೆ ಮಾಡಿ ಉಳಿದ ನೀರನ್ನು ದಿನಂಪ್ರತಿ ಸರಾಸರಿ ೫೦೦ ಕ್ಯೂಸೆಕ್ಸ್‌ಗೆ ಕಡಿಮೆ ಇಲ್ಲದಂತೆ ನದಿಗೆ ಬಿಡಬೇಕು. ಈ ಷರತ್ತಿನ ಹಿನ್ನೆಲೆಯಲ್ಲಿ ಜಲಾಶಯದ ಒಟ್ಟು ನೀರಿನ ಸಂಗ್ರಹ ೭೧.೫ ಟಿ.ಎಂ.ಸಿ. ಎಂದು ಪರಿಗಣಿಸಿ ಕಾಲುವೆಗಳಲ್ಲಿನ ನೀರಿನ ಪ್ರಮಾಣವನ್ನು ನಿರ್ಧರಿಸಲಾಯಿತು.

ಬಲದಂಡೆ ಕಾಲುವೆಯಲ್ಲಿ (ಮುಖ್ಯ ಕಾಲುವೆ) ಜುಲೈ ತಿಂಗಳಿನಿಂದ ಡಿಸೆಂಬರ್‌ವರೆಗೆ ೨೫೩೦ ಕ್ಯೂಸೆಕ್ಸ್ ಮತ್ತು ಜೂನ್‌ವರೆಗೆ ೮೧೩ ಕ್ಯೂಸೆಕ್ಸ್ ನೀರು ಬಿಡಲು ತೀರ್ಮಾನಿಸಲಾಯಿತು. ಬಲದಂಡೆಯನಾಲೆಯ ಹರಿವಿಗೆ ೭೨೦೦ ಕಿ.ವ್ಯಾಟ್‌ಗಳ ಎರಡು ಜನರೇಟ್‌ಗಳನ್ನು ಅಳವಡಿಸಲು ಉದ್ದೇಶಿಸಲಾಯಿತು. ಎಡದಂಡೆಯಲ್ಲಿ ನದಿಪಾತ್ರದಲ್ಲಿ ೧೨,೦೦೦ ಕಿ.ಎಂ.ನ. ಎರಡು ಜನರೇಟರ್‌ಗಳನ್ನು ಸ್ಥಾಪಿಸಲು ಯೋಜಿಸಲಾಯಿತು.

ಎಡದಂಡೆ ಕಾಲುವೆಗೆ ಜುಲೈನಿಂದ ಡಿಸೆಂಬರ್‌ವರೆಗೆ ೧೯೦ ಕ್ಯೂಸೆಕ್ಸ್‌ನಂತೆ, ಜನವರಿಯಿಂದ ಜೂನ್‌ವರೆಗೆ ೫೭ ಕ್ಯೂಸೆಕ್ಸ್ ನೀರು ಬಿಡಲು ಯೋಜಿಸಲಾಯಿತು. ಭದ್ರಾ ಜಲಾಶಯದಿಂದ ಹೊರಬಿಡುವ ನೀರನ್ನು ಸಂಪೂರ್ಣವಾಗಿ ಬಳಸುವ ದೃಷ್ಟಿಯಿಂದ ಎರಡು ವಿದ್ಯುದಾಗರಗಳನ್ನು ನಿರ್ಮಿಸಲಾಯಿತು.

ಬಲದಂಡೆ ವಿದ್ಯುದಾಗರ : ಇದರಲ್ಲಿ ಕಪ್ಲನ್ ನೀರ್ಗಾಲಿಯನ್ನು ಅಳವಡಿಸಲಾಯಿತು. ಇದರ ಸಾಮರ್ಥ್ಯ ೧೦/೧೫ ಬಿ.ಹೆಚ್.ಪಿ., ೨೫೦ ಆರ್.ಪಿ.ಎಂ. ವರ್ಟಿಕಲ್ ಶಾಪ್ಟ್ ಇವನ್ನು ೭೨೦೦ ಕಿವ್ಯಾ ಸಾಮರ್ಥ್ಯದ ೩ ಪೇಸ್, ೫೦ ಸೈಕಲ್ ೦.೮೫ ಪಿ.ಎಫ್.ಎ.ಸಿ. ವಿದ್ಯುತ್ ಜನಕಗಳಿಗೆ ಅಳವಡಿಸಲಾಯಿತು.

ನದಿತಟದ ವಿದ್ಯುದಾಗರ : ಇದರಲ್ಲಿ ೧೭,೦೦೦ ಬಿ.ಎಚ್.ಪಿ. ಸಾಮರ್ಥ್ಯದ ೩೦೦ ಆರ್.ಪಿ.ಎಂ. ವರ್ಟಿಕಲ್ ಶಾಫ್ಟ್ ಎರಡು ಕಪ್ಲಾನ್ ನೀರ್ಗಾಲಿಗಳನ್ನು ೧೨,೦೦೦ ಕಿ.ವ್ಯಾ ಸಾಮರ್ಥ್ಯದ ವಿದ್ಯುತ್ ಜನಕಗಳಿಗೆ ಹೊಂದಿಸಲಾಯಿತು.

ಎಡದಂಡೆಯ ಕಾಲುವೆಗೆ ೫೦೦ ಆರ್.ಪಿ.ಎಂ.ನ ೨೮೦೦ ಬಿ.ಎಚ್.ಪಿ. ಸಾಮರ್ಥ್ಯದ ಪ್ರಾನಿಸ್ಸ್ ನೀರ್ಗಾಲಿಯನ್ನು ೨೦೦೦ ಕಿ.ವ್ಯಾ ಸಾಮರ್ಥ್ಯದ ೩ ಪೇಸ್, ೫೦ ಸೈಕಲ್ ೦.೮೫ ಪಿ.ಎಚ್.ಎ.ಸಿ. ವಿದ್ಯುತ್ ಜನಕಕ್ಕೆ ಜೋಡಿಸಲಾಯಿತು. ಈ ನಾಲ್ಕು ಜನರೇಟುಗಳ ವಿದ್ಯುತ್ ೧೧,೦೦೦ ವೋಲ್ಟ್‌ನಲ್ಲಿ ಉತ್ಪತ್ತಿಯಾಗುತ್ತಿದ್ದು ಇದನ್ನು ೬೬ ಕೆ.ವಿ.ಗೆ ಏರಿಸಿ ಎರಡು ೬೬ ಕೆ.ವಿ. ಮಾರ್ಗಗಳನ್ನು ಶಿವಮೊಗ್ಗೆಯ ಆರ್.ಎಂ.ಎಸ್.ಗೆ ಹಾಗೂ ಮೈಸೂರು ಮಾರ್ಗಕ್ಕೆ ಜೋಡಿಸಲು ಯೋಜಿಸಲಾಗಿತ್ತು. ಇದಕ್ಕಾಗಿ ೧೫,೦೦೦ ಕೆ.ವಿ.ಎ. ಸಾಮರ್ಥ್ಯದ ೧೦೦೦೦/೬೬೦೦೦ ವೋಲ್ಟೇಜಿನ ಒಂದು ಪರಿವರ್ತಕ, ೨೫೦೦ ಕೆ.ವಿ.ಯ ಸಾಮರ್ಥ್ಯದ ೧೧೦೦೦/೬೬.೦೦೦ ವೋಲ್ಟೇಜಿನ ಪರಿವರ್ತಕವನ್ನು ಅಳವಡಿಸಲಾಯಿತು. ಇಂದು ಇದು ವಿದ್ಯುತ್ ಉತ್ಪಾದನೆಯಲ್ಲಿ ನೆರವಾಗುತ್ತದೆ.

ಬಿ.ಆರ್.ಪಿ. (ಭದ್ರಾ ರಿಸರ್ವಾಯರ್ ಪ್ರಾಜೆಕ್ಟ್) ಮತ್ತು ಭದ್ರಾ ಮೀನುಮರಿ ಉತ್ಪಾದನಾ ಕೇಂದ್ರ.

ಭದ್ರಾ ರಿಸರ್ವಾಯ್ ಪ್ರಾಜೆಕ್ಟ್‌ನಲ್ಲಿ ಮೀನುಗಾರಿಕಾ ಇಲಾಖೆಯ ವತಿಯಿಂದ ಜಲಾಶಯದ ಮೀನುಗಾರಿಕೆಯ ಅಭಿವೃದ್ಧಿಯ ಸಲುವಾಗಿ ಕೆಲವು ಜಾತಿಯ ಸಾಕುವಂತಹ ಮೀನುಗಳನ್ನು ಪ್ರತಿವರ್ಷವೂ ಬಿಡಲಾಗುತ್ತದೆ. ಸ್ಥಳೀಯರು ಇವುಗಳನ್ನು 'ಸರ್ಕಾರಿ ಮೀನು' ಎಂದೂ ಕರೆಯುವುದಿದೆ. ಅವುಗಳ ಮಾರಾಟಕ್ಕೆ ಅನುಕೂಲವಾದ ತೂಕ ಬಂದ ಬಳಿಕ, ಬೆಳವಣಿಗೆಯಾದ ಬಳಿಕ ಸ್ಥಳೀಯ ಮೀನುಗಾರರು, ಮೀನುಗಾರಿಕಾ ಇಲಾಖೆಯ ವತಿಯಿಂದ ಮೀನು ಹಿಡಿಯಲು ಪರವಾನಿಗೆ ಪಡೆದು ಈ ಮೀನುಗಳನ್ನು ಹಿಡಿಯುತ್ತಾರೆ. ಇದು ಮೀನುಗಾರರ ಜೀವನೋಪಾಯಕ್ಕೂ ಸಹಕಾರಿಯಾಗಿದೆ.

ಸ್ಥಳೀಯವಾಗಿ ಭದ್ರಾ ಜಲಾಶಯದ ಬುಡದಲ್ಲಿ ಮೀನುಗಾರಿಕಾ ಇಲಾಖೆಯ ವತಿಯಿಂದ ಮೀನುಮರಿ ಉತ್ಪಾದನಾ ಕೇಂದ್ರ ಸ್ಥಾಪಿಸಲಾಗಿದ್ದು, ಇಲ್ಲಿ ದೊಡ್ಡಗೆಂಡೆ ಜಾತಿ ಮೀನು ಮತ್ತು ವಿದೇಶಿ ತಳಿಗಳ ಸಂತಾನೋತ್ಪತ್ತಿ ಮಾಡಿ ಬೆರಳುದ್ದದ ಮರಿಗಳನ್ನು ಕೆರೆ, ಕಟ್ಟೆ, ಬಾವಿ, ಹೊಂಡ ಜಲಾಶಯಗಳಲ್ಲಿ ಬಿತ್ತನೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಅಲ್ಲದೆ ರಾಜ್ಯದ ವಿವಿಧ ಪ್ರದೇಶಗಳಲ್ಲಿನ ಮೀನುಗಾರಿಕಾ ವೃತ್ತಿಯಲ್ಲಿ ಆಸಕ್ತಿಯುಳ್ಳ ಅಭ್ಯರ್ಥಿಗಳಿಗೆ ಇಲ್ಲಿರುವ ತರಬೇತಿ ಕೇಂದ್ರದಲ್ಲಿ ಮೀನುಗಾರಿಕೆ ಚಟುವಟಿಕೆಗಳನ್ನು ಕುರಿತು ಅಲ್ಪಾವಧಿ ಹಾಗೂ ದೀರ್ಘಾವಧಿ ತರಬೇತಿಯನ್ನು ನೀಡಲಾಗುತ್ತದೆ.

ಒಟ್ಟಿನಲ್ಲಿ ಭದ್ರಾ ಜಲಾಶಯ ಹಲವು ನೀರಾವರಿ ಉದ್ದೇಶಗಳಿಗೆ ಬಹು ಅನುಕೂಲವಾದಂತ ಬೃಹತ್ ಜಲಾಶಯಗಳಲ್ಲಿ ಒಂದಾಗಿದೆ.

ಭದ್ರಾ ಮೇಲ್ದಂಡೆ ಯೋಜನೆ:

ಭದ್ರಾ ಮೇಲ್ದಂಡೆ ಯೋಜನೆಯೆಂದರೆ ಭದ್ರಾ ಅಣೆಕಟ್ಟಿನ ಮೇಲ್ಭಾಗದಲ್ಲಿ ಅಣೆಕಟ್ಟನ್ನು ಕಟ್ಟಿ ಬರಪೀಡಿತ ಪ್ರದೇಶಗಳಾದ ಮಧ್ಯ ಕರ್ನಾಟಕದ ಚಿತ್ರದುರ್ಗ, ತುಮಕೂರು, ಮತ್ತು ಕೋಲಾರ ಜಿಲ್ಲೆಗಳಿಗೆ ನೀರಾವರಿ ಮತ್ತು ಕುಡಿಯುವ ನೀರನ್ನು ಒದಗಿಸುವುದಾಗಿದೆ. ಯೋಜನೆಯ ಬಗ್ಗೆ ಪರಿಚಯ ಮಾಡಿಕೊಟ್ಟವರು ೧೯೬೦-೭೦ರ ದಶಕದಲ್ಲಿ ನೀರಾವರಿ ಕಾರ್ಯದರ್ಶಿಗಳಾಗಿದ್ದ ಎಸ್.ಜಿ. ಬಾಳೆಕುಂದ್ರಿಯವರು. ಇವರು ಕರ್ನಾಟಕದಲ್ಲಿರುವಂತಹ ಜಲ ಸಂಪತ್ತಿನ ಬಗ್ಗೆ ಅಧ್ಯಯನ ಕೈಗೊಂಡು ರಾಜ್ಯದಲ್ಲಿ ಜಲಸಂಪತ್ತು ಎಷ್ಟು ಪ್ರಮಾಣದಲ್ಲಿದೆ ಮತ್ತು ಅದರ ಉಪಯೋಗದ ಬಗ್ಗೆ ಅಧ್ಯಯನ ನಡೆಸುವಾಗ ಯಾವುದೇ ನೀರಾವರಿ ಯೋಜನೆ ಇಲ್ಲದೆ ವಂಚಿತರಾಗಿದ್ದ ಮಧ್ಯಕರ್ನಾಟಕದ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ನೀಡುವ ನಿಟ್ಟಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿದರು. ಇದರ ಆಧಾರದ ಮೇಲೆ ೧೯೬೦-೭೦ರ ದಶಕದಲ್ಲಿ ಸರ್ಕಾರ ಬರಪೀಡಿತ ಪ್ರದೇಶಗಳನ್ನು ಗುರುತಿಸಿ ಯೋಜನೆ ಉಪಯೋಗದ ಬಗ್ಗೆ ಚರ್ಚೆ ನಡೆಸಿ ಈ ಯೋಜನೆಯ ಬಗ್ಗೆ ತೀರ್ಮಾನ ತೆಗೆದುಕೊಂಡಿತು. ಅಂದಿನ ತೀರ್ಮಾನ ಇಂದಿಗೂ ಕೂಡ ಸಂಪೂರ್ಣವಾಗಿ ಬಗೆ ಹರಿದಿಲ್ಲ. "೧೯೬೪ರಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರು ಭದ್ರಾ ಮೇಲ್ದಂಡೆ ಯೋಜನೆಗೆ ಅಸ್ತಿಭಾರ ಹಾಕಿದರು."[೩] ಕರ್ನಾಟಕದ ಮಧ್ಯಭಾಗದ ಜಿಲ್ಲೆಗಳಾದ ಚಿತ್ರದುರ್ಗ ಮತ್ತು ಇತರ ನೆರೆಯ ಜಿಲ್ಲೆಗಳು ಬರಗಾಲ ಪೀಡಿತವಾಗಿದ್ದು ಇಲ್ಲಿನ ವಾರ್ಷಿಕ ಮಳೆಯ ಪ್ರಮಾಣ ಕಡಿಮೆ ಮತ್ತು ನದಿಗಳ ಆಶ್ರಯ ಕೂಡ ಇಲ್ಲದೆ, ಇದ್ದರೂಕೂಡ ಕೆಲವೇ ಕೆಲವು ಪ್ರದೇಶಗಳಿಗೆ ಸೀಮಿತವಾಗಿದ್ದರ ಪರಿಣಾಮವಾಗಿ ಇದನ್ನು ಅರಿತ ಸರ್ಕಾರ ಈ ಯೋಜನೆಯ ಮೂಲಕ ನೀರನ್ನು ಒದಗಿಸಿ ನೀರಾವರಿ ಸೌಲಭ್ಯ ನೀಡುವ ನಿಟ್ಟಿನಲ್ಲಿ ಈ ಒಂದು ಯೋಜನೆಯನ್ನು ಕೈಗೆತ್ತಿಕೊಂಡಿತು. ಆದ್ದರಿಂದ ಈ ಭಾಗದ ರೈತರು ನೇರವಾಗಿ ಮತ್ತು ತಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ ಸರ್ಕಾರಕ್ಕೆ ಹಲವಾರು ಭಾರಿ ನಿವೇದಿಸುತ್ತಾ ತಮ್ಮ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಪಕ್ಕದ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಹರಿಯುತ್ತಿರುವ ತುಂಗ ಮತ್ತು ಭದ್ರಾ ನದಿಗಳಲ್ಲಿನ ಹೆಚ್ಚುವರಿ ನೀರನ್ನು ಹರಿಸುವಂತೆ ಮಾಡಲು ಒತ್ತಾಯ ಮಾಡಿದರು. "ರೈತರ ಬಹುದಿನದ ಬೇಡಿಕೆಗಳ ಪರಿಣಾಮವೇ ಭದ್ರಾ ಮೇಲ್ದಂಡೆ ಯೋಜನೆಯ ಪ್ರಾರಂಭಕ್ಕೆ ನಾಂದಿಯಾಗಿರುತ್ತದೆ."[೪]

ಚಿತ್ರದುರ್ಗ ಮತ್ತು ನೆರೆಯ ಜಿಲ್ಲೆಗಳ ಸುತ್ತ ಮುತ್ತ ಮಳೆಗಾಲ ಬಂತೆಂದರೆ ಎಲ್ಲಿ ನೋಡಿದರೂ ಬಳಲಿಕೆಯ ವಾತಾವರಣ ಕಂಡುಬರುತ್ತದೆ. ಹಸಿವೆಯನ್ನು ಹಿಮ್ಮಡಿಗೊಳಿಸುವ ಕಾರ್ಮೋಡದಿಂದ ಕೂಡಿದ ಗಾಳಿಯಲ್ಲಿ ಸುಳಿದಾಡುವ ಮಳೆಯ ಹನಿ ಉಟ್ಟ ಬಟ್ಟೆಯನ್ನು

ತೊಯುತ್ತದೆಯೇ ಹೊರೆತು ಉಳಿಸುವ ನೆಲವನ್ನಲ್ಲ. ಮಧ್ಯ ಕರ್ನಾಟಕ ಜಿಲ್ಲೆಗಳ ಯಾವ ಹಳ್ಳಿಗೋದರೂ ಮಳೆಗಾಗಿ ಹಂಬಲಿಸುವ ಬಗೆಬಗೆಯ ಮುಖಗಳು ಕಣ್ಣಮುಂದೆ ಬರುತ್ತವೆ. ಸರ್ಕಾರಿ ದಾಖಲೆಗಳ ಪ್ರಕಾರ ೧೯೦೦ರಿಂದ ಇಂದಿನವರೆಗೆ ೬೦ಕ್ಕೂ ಹೆಚ್ಚು ಬರಗಾಲಗಳನ್ನು ಎದುರಿಸಿದೆ. ಉಳಿದ ವರ್ಷಗಳಲ್ಲೇನು? ಇಲ್ಲಿ ಸಮೃದ್ಧ ಸುಗ್ಗಿ ನಡೆದಿಲ್ಲ. ಆಗಲೂ ಅರೆಬರೆಯ ಮಳೆಯಲ್ಲಿಯೇ ರೈತ ಸಂತೃಪ್ತನಾಗಿದ್ದಾನೆ. ಅಷ್ಟೆ ಏಕೆ ಕಳೆದ ಹತ್ತಾರು ವರ್ಷಗಳಲ್ಲಿ ಮೂರ್‍ನಾಲ್ಕು ವರ್ಷ ಮಾತ್ರ ಮಳೆಯಾಗಿದೆ. ಅದೂ ಕೂಡ ಅರೆಬರೆ. ಹೀಗೆ ಬರದಿಂದ ಬೆಂದು ಬೆಂಡಾಗಿರುವ ಜಿಲ್ಲೆಯ ಜನರು ಕಳೆದ ಎರಡೂವರೆ ದಶಕಗಳಿಂದ 'ಭದ್ರಾ ಮೇಲ್ದಂಡೆ' ಎಂಬ ನೀರಾವರಿ ಯೋಜನೆ ಬಗ್ಗೆ ಜಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ.

ಪಶ್ಚಿಮ ಘಟ್ಟದಲ್ಲಿ ಹುಟ್ಟುವ ತುಂಗ ಮತ್ತು ಭದ್ರಾ ನದಿಯ ನೀರನ್ನು ಚಿತ್ರದುರ್ಗ, ತುಮಕೂರು, ಕೋಲಾರ ಜಿಲ್ಲೆಗಳ ಬಯಲು ನಾಡಿಗೆ ಹರಿಸಿ ಸಮೃದ್ಧ ಕಾಳು ಕಡಿ ಬೆಳೆಯಬೇಕೆಂಬ ಜಿಲ್ಲೆಗಳ ಜನರ ಕನಸಿಗೆ ಕಸರತ್ತು ನೀಡಬೇಕಾಗಿದ್ದ ಸರ್ಕಾರ ಇಷ್ಟು ದಿವಸಗಳವರೆಗೆ ಕಣ್ಣುಮುಚ್ಚಿ ಕೂತಿತ್ತು. "ಎಪ್ಪತ್ತರ ದಶಕದಲ್ಲಿ ನೀರಾವರಿ ಇಲಾಖೆಯಲ್ಲಿ ಇಂಜಿನಿಯರ್ ಆಗಿದ್ದ ಜಿ.ಎಸ್. ಪರಮಶಿವಯ್ಯ ಅವರು ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ತುಮಕೂರು ಜಿಲ್ಲೆಯ ಶಿರಾ, ಪಾವಗಡ ತಾಲ್ಲೂಕುಗಳು ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲ್ಲೂಕುಗಳಿಗೆ ನೀರಾವರಿ ಯೋಜನೆ ಕಲ್ಪಿಸುವ ಭದ್ರಾ ಮೇಲ್ದಂಡೆ ಯೋಜನೆಯನ್ನು ರೂಪಿಸಿದರು."[೫] ಅಂದಿನಿಂದ ಇಂದಿನವರೆಗೂ ಮುಂದಿನ ಹಂತವನ್ನು ಮುಟ್ಟಲು ಸಾಕಷ್ಟು ಸಮಯ ತೆಗೆದುಕೊಂಡಿತು. ಪ್ರಾರಂಭದ ಭದ್ರಾ ಮೇಲ್ದಂಡೆ ಯೋಜನೆಯ ಪ್ರಕಾರ ಭದ್ರಾ ಜಲಾಶಯದ ಪ್ರವಾಹಕ್ಕೆ ಮತ್ತೊಂದು ಅಣೆಕಟ್ಟನ್ನು ಬಾಳೆಹೊನ್ನೂರಿನ ಸಮೀಪದ 'ಮಾಗುಂಡಿ' ಎಂಬಲ್ಲಿ ನಿರ್ಮಿಸಿ ಅಲ್ಲಿ ಲಭ್ಯವಾಗುವ ನೀರನ್ನು ಕಾಲುವೆಯ ಮೂಲಕ ಹಾಯಿಸಿ ಚಿತ್ರದುರ್ಗ, ತುಮಕೂರು ಹಾಗೂ ಬಳ್ಳಾರಿ ಜಿಲ್ಲೆಯ ಬರಪೀಡಿತ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದು, ಹಿಂದಿನ ಭದ್ರಾ ಮೇಲ್ದಂಡೆಯ ಉದ್ದೇಶವಾಗಿತ್ತು. ಈ ಯೋಜನೆ ರೂಪುಗೊಂಡಾಗ ಇದರ ಒಟ್ಟು ವೆಚ್ಚ ೧೨೬ ಕೋಟಿ ರೂಪಾಯಿಗಳು. ೧೯೮೦ರಲ್ಲಿ ಇದು ೨೬೦ ಕೋಟಿಗಳಿಗೇರಿತು. ೧೯೮೫ರಲ್ಲಿ ಈ ಯೋಜನೆಯನ್ನು ಪುನರ್ ಅಂದಾಜಿಸಿದಾಗ ವೆಚ್ಚ ೬೫೦ ಕೋಟಿ ರೂಪಾಯಿಗಳಿಗೇರಿತ್ತು.

ಯೋಜನೆಯ ರೂಪುರೇಷೆಗಳ ಪ್ರಕಾರ ಈ ಅಣೆಕಟ್ಟಿನ ಮಟ್ಟ ೨೫೧೮ ಅಡಿ ಇದರಿಂದ ಸಂಗ್ರಹವಾಗುವ ಹಿನ್ನೀರು. ಭದ್ರಾ ಕಣಿವೆಯ ಹಲವು ಭಾಗಗಳನ್ನು ನೀರಿನಲ್ಲಿ ಮುಳುಗಿಸುತ್ತದೆ. ಮಾಗುಂಡಿ ಬಳಿ ೨೭ ಮೀಟರ್ ಅಗಲದ ಕಾಲುವೆ ಆರಂಭವಾಗುತ್ತದೆ. ಆರಂಭದಲ್ಲಿ ಫಲವತ್ತಾದ ಕೃಷಿ ಭೂಮಿಯನ್ನು ಹಾದುಹೋಗುವ ಈ ಕಾಲುವೆ ೫೫ ಕಿ.ಮೀ. ಗಳಷ್ಟು

ಕ್ರಮಿಸಿದ ನಂತರ ರಾಜ್ಯ ರಕ್ಷಿತ ಅರಣ್ಯವನ್ನು ಪ್ರವೇಶಿಸುತ್ತದೆ. ಹಲಸೂರು, ಮಾಗುಂಡಿ, ಗಂಗೇಗೌರಿ, ತೇಗದ ಗುಡ್ಡ, ಮತ್ತೋಡಿ, ಹೆಬ್ಬೆಗಿರಿ, ಲಕ್ಕವಳ್ಳಿ ಹಾಗೂ ತ್ಯಾಗದ ಬಾಗಿ ಅರಣ್ಯ ಪ್ರದೇಶವನ್ನು ಹಾಯ್ದು ೧೮೯ ಕಿ.ಮೀ. ಕ್ರಮಿಸಿ ಅರಣ್ಯ ಪ್ರದೇಶದಿಂದ ಹೊರಬರುತ್ತದೆ. ಹೀಗೆ ಕಾಲುವೆ ಹಾದು ಹೋಗುವ ೧೩೬ಕಿ.ಮೀ.ಗಳಷ್ಟು ಪ್ರದೇಶ ಭದ್ರಾ ಅಭಯಾರಣ್ಯಕ್ಕೆ ಸೇರಿದ್ದು, ಈ ಯೋಜನೆಯಡಿ ಮುಳುಗಡೆಯಾಗುವ ಪ್ರದೇಶ, ಅಣೆಕಟ್ಟು ನಿರ್ಮಾಣವಾಗುವ ಸ್ಥಳ ಹಾಗೂ ಕಾಲುವೆ ಹಾದು ಹೋಗುವ ಮಾರ್ಗ ಎಲ್ಲವೂ ಸದಾ ಹಸಿರಿನಿಂದ ಕೂಡಿರುವ ಸ್ವಾಭಾವಿಕ ಸಸ್ಯವರ್ಗದ ಅರಣ್ಯ ಪ್ರದೇಶ. ಅರಣ್ಯ ಇಲಾಖೆಯ ಸಮೀಕ್ಷೆಗಳ ಪ್ರಕಾರ ಈ ಯೋಜನೆ ಕಾರ್ಯಗತವಾದಲ್ಲಿ ಪ್ರತಿವರ್ಷ ೨೫ ಕೋಟಿ ರೂಪಾಯಿಗಳ ಮೌಲ್ಯದ ೨೫೫, ೨೫೦ ಕ್ಯೂಬಿಕ್ ಮೀಟರ್‌ನಷ್ಟು ಮರಮುಟ್ಟು, ೧೨೬, ೨೪೦ ಕ್ಯೂಬಿಕ್ ಮೀಟರಿನಷ್ಟು ಬೊಂಬುನಾಶವಾಗುತ್ತದೆ. ಜೊತೆಗೆ ಸ್ಥಳೀಯರಿಗೆ ದೊರೆಯುವ ಮೇವು ಹಸಿರುಗೊಬ್ಬರ ಇಲ್ಲದಂತಾಗುತ್ತದೆ. ಮತ್ತು ಹಲವಾರು ಹಳ್ಳಿಗಳ ಮುಳುಗಡೆ ಸಾವಿರಾರು ಕಾರ್ಮಿಕರು ಬೀದಿ ಪಾಲಾಗುವುದು ಈ ರೀತಿಯ ಹಲವಾರು ಸಮಸ್ಯೆಗಳನ್ನು ಮಲೆನಾಡು ಜನರು ಸರ್ಕಾರದ ಮುಂದಿಟ್ಟರು.[೬] ಈ ಕಾರಣದಿಂದ ಈ ಯೋಜನೆಯ ಬಗ್ಗೆ ಹೆಚ್ಚು ಒತ್ತು ಕೊಡದೆ ಮಲೆನಾಡು ಜನತೆಯ ನೀತಿ ನಿಯಮಗಳನ್ನು ಪಾಲಿಸಿಕೊಂಡು ಬಂದಿತು ಎಂದು ಹೇಳಬಹುದು.

ಸರ್ಕಾರದ ಬರಪೀಡಿತ ಜನತೆಯನ್ನು ಕಡೆಗಣಿಸಿ ಬೇಜವಾಬ್ದಾರಿತನವನ್ನು ಅರಿತ ಜನತೆ ಸರ್ಕಾರಕ್ಕೆ ಒತ್ತಡ ತರಲು ಪ್ರಾರಂಭಿಸಿದರು. ಈ ರೀತಿಯ ಒತ್ತಡವನ್ನು ನಿಲ್ಲಿಸಲು, ಜನತೆಯ ಬಾಯಿಮುಚ್ಚಿಸಲು 'ತುಂಗಾ ತಿರುವು' ಎಂಬ ಹೊಸ ಯೋಜನೆಯನ್ನು ಜನತೆಯ ಮುಂದಿಟ್ಟಿತು.

ತುಂಗಾ ತಿರುವು ಯೋಜನೆ ರೂಪಿಸುವ ಮೂಲಕ ಭದ್ರಾ ಮೇಲ್ದಂಡೆ ಯೋಜನೆಯನ್ನು ಬಿಟ್ಟಿರುವುದಾಗಿ ಹೇಳಿದ ಸರ್ಕಾರ ಇದಕ್ಕೆ ಪರಿಸರವಾದಿಗಳ ವಿರೋಧವಿದೆ ಎಂದು ಸಬೂಬು ಹೇಳಿತು. ತುಂಗಾ ತಿರುವು ಯೋಜನೆ ಬಯಲು ಸೀಮೆ ಜನರ ಆಕ್ರೋಶವನ್ನು ಶಮನ ಮಾಡಲಿಕ್ಕೆ ರೂಪಿಸಿದ ಯೋಜನೆ ಹೊರತು ಬರದ ಬೇಗೆಯನ್ನು ನೀಗಿಸಲಿಲ್ಲ ಎಂದು ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಯ ಜನ ಅಭಿಪ್ರಾಯ ಪಟ್ಟರು.

ತುಂಗಾ ತಿರುವು ಯೋಜನೆಯಿಂದ ಸಹಾ ಸುಮಾರು ೨೦ ಟಿ.ಎಂ.ಸಿ. ನೀರನ್ನು ಸಂಗ್ರಹಿಸುವ ಉದ್ದೇಶ ಹೊಂದಿರುವ ರಾಜ್ಯ ಸರ್ಕಾರ ಈ ನೀರನ್ನು ೨,೨೪,೭೫೦ ಎಕರೆ ಪ್ರದೇಶಕ್ಕೆ ನೀರುಣಿಸುವುದಾಗಿ ಹೇಳಿತು. ತುಂಗಾ ತಿರುವಿನಿಂದ ೨೦ ಟಿ.ಎಂ.ಸಿ. ನೀರು ಸಂಗ್ರಹಿಸುವ ಯೋಜನೆ ಇಂತಿದೆ.

೧. ಹೊಸಪೇಟೆ ಬಳಿಯ ವಿಜಯನಗರ ಕಾಲುವೆಯನ್ನು ಆಧುನೀಕರಣಗೊಳಿಸುವುದರಿಂದ ೫ ಟಿ.ಎಂ.ಸಿ. ನೀರು.

೨. ಗೊಂಡಿ ಮತ್ತು ಗಾಜನೂರಿನಲ್ಲಿರುವ ಭದ್ರಾ ಅಣೆಕಟ್ಟುಗಳನ್ನು ಆಧುನೀಕರಣ ಗೊಳಿಸುವುದರಿಂದ ೫ ಟಿ.ಎಂ.ಸಿ. ನೀರು.

೩. ನೀರು ಹಂಚಿಕೆ ನ್ಯಾಯ ಮಂಡಳಿಯ ತೀರ್ಪಿನಂತೆ ಗೋದಾವರಿಯಿಂದ ೮ ಟಿ.ಎಂ.ಸಿ. ನೀರನ್ನು ಯೋಜನೆಗೆ ಬಳಸುವುದು. ಮತ್ತು

೪. ಉಳಿದ ಎರಡು ಟಿ.ಎಂ.ಸಿ. ನೀರನ್ನು ಸಂಗ್ರಹಿಸಲು ಸಣ್ಣಪುಟ್ಟ ನೀರಾವರಿ ಯೋಜನೆಗಳನ್ನು ತುಂಗಾ ತಿರುವು ಯೋಜನೆಗೆ ಸೇರಿಸುವುದು.

ತುಂಗಾ ತಿರುವು ಯೋಜನೆಯಿಂದ ತರೀಕೆರೆ ತಾಲ್ಲೂಕಿನ ೩೦,೩೫೦ ಎಕರೆಗೆ, ಕಡೂರು ತಾಲ್ಲೂಕಿನ ೧೨,೪೦೦ ಎಕರೆ ಹೊಸದುರ್ಗ ತಾಲ್ಲೂಕಿನ ೧೯,೨೦೦ ಎಕರೆ, ಹೊಳಲ್ಕೆರೆ ತಾಲ್ಲೂಕಿನ ೩೮,೯೦೦ ಎಕರೆ, ಚಿತ್ರದುರ್ಗ ತಾಲ್ಲೂಕಿನ ೬೫,೦೦೦ ಎಕರೆ, ಚಳ್ಳಕೆರೆ ತಾಲ್ಲೂಕಿನ ೪,೬೦೦ ಎಕರೆ, ಹಿರಿಯೂರು ತಾಲ್ಲೂಕಿನ ೧೬,೯೦೦ ಎಕರೆ ಪ್ರದೇಶಕ್ಕೆ ನೀರು ಹರಿಸಲಾಗುವುದು ಎಂದು ರಾಜ್ಯಸರ್ಕಾರ ಹೇಳಿತು.[೬]

ಈ ಯೋಜನೆಯ ವೆಚ್ಚ ರೂ. ೨೨೦೪ ಕೋಟಿ ಎಂದು ಅಂದಾಜು ಮಾಡಲಾಗಿದ್ದು ಪ್ರತೀ ಎಕರೆಗೆ ರೂ. ೯೮೦೬೫ ರೂಪಾಯಿ ಖರ್ಚು ಬೀಳಬಹುದಾಗಿದೆ ಎಂದು ಅಂದಾಜಿಸಲಾಯಿತು. ದಿನಾಂಕ ೨೭.೦೫.೧೯೮೮ರಂದು ತಾಂತ್ರಿಕ ಸಲಹಾ ಸಮಿತಿ ತುಂಗಾ ಮತ್ತು ಭದ್ರಾ ಏತ ನೀರಾವರಿ ಯೋಜನೆಗಳ ಪ್ರದೇಶಗಳಿಗೆ ಭೇಟಿ ನೀಡಿ ಕೆಲವು ಸಲಹೆಗಳನ್ನು ನೀಡಿದ್ದು ಆ ಸಲಹೆಗಳನ್ವಯ ಸರ್ವೇಕಾರ್ಯ ನಡೆಯುತ್ತಿತ್ತು. ಮತ್ತು ವಿವರವಾಗಿ ಅಂದಾಜುಗಳನ್ನು ತಯಾರು ಮಾಡಲಾಗುವುದೆಂದು ನಿರ್ಧರಿಸಲಾಯಿತು.

ಈ ಯೋಜನೆಯ ಬಗ್ಗೆ ಹಲವಾರು ತಜ್ಞರು, ಸಮಿತಿಗಳು ಕೆಲವು ಸಲಹೆಗಳನ್ನು ನೀಡಿದ್ದರು. ಅವರ ಸಲಹೆಗಳೆಂದರೆ– ಸರ್ಕಾರದ ಇಲಾಖೆಗಳೇ ಎರಡು ಭಾರಿ ಯೋಜನೆಗಳನ್ನು ತಯಾರಿಸಿ ಪ್ರಸ್ತುತ ೨೦ ಟಿ.ಎಂ.ಸಿ.ಯಷ್ಟು ನೀರು ಲಭ್ಯವಿದೆಯೆಂದು ಒಪ್ಪಿಕೊಂಡಿವೆ. ಸ್ಕೀಂ 'ಬಿ' ನಲ್ಲಿ ನಮ್ಮ ಪಾಲಿಗೆ ಬರುವ ನೀರನ್ನು ಸಹ ಬಳಸಿಕೊಳ್ಳಲು ಸೂಚಿಸಿದೆ. ಆದರೆ ಯಾವುದೇ ಸರ್ಕಾರವು ಯೋಜನೆಯನ್ನು ಮಂಜೂರು ಮಾಡುವ ರಾಜಕೀಯ ಇಚ್ಛಾಶಕ್ತಿಯಾಗಲಿ ಅಥವಾ ಧೀಮಂತಿಕೆಯಾಗಲೀ ತೋರಿಸಿರುವುದಿಲ್ಲ. ಈ ಯೋಜನೆಗೆ ಬೇಕಾಗುವ ನೀರನ್ನು ಈ ಕೆಳಕಂಡ ಎರಡು ರೀತಿಯಲ್ಲಿ ಒದಗಿಸಲು ಸಾಧ್ಯವಿದೆ.

ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳಿಂದ ನಾವು ಉಪಯೋಗಿಸಿ ಕೊಳ್ಳಬಹುದಾದ ಪಾಲಿನಲ್ಲಿ ೭೦ ಟಿ.ಎಂ.ಸಿ. ನೀರನ್ನು ಕಡಿಮೆ ಮಾಡಿಕೊಂಡು ಅಷ್ಟೇ ಪ್ರಮಾಣದ ನೀರನ್ನು ಹೆಚ್ಚುವರಿಯಾಗಿ ತುಂಗಭದ್ರ ಉಪಪಾತ್ರೆಯಲ್ಲಿ ಬಳಸಿಕೊಂಡು ಸ್ಕೀಂ

‘ಎ’ನಲ್ಲಿಯೇ ಯೋಜನೆಯನ್ನು ಮಂಜೂರು ಮಾಡುವುದು ಅಥವಾ ಸರ್ಕಾರಿ ಸಂಸ್ಥೆಗಳು ಶಿಫಾರಸ್ಸು ಮಾಡಿದಂತೆ ಸ್ಕೀಂ ‘ಎ’ ನಲ್ಲಿ ೨೦ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು ಯೋಜನೆಯನ್ನು ಪ್ರಾರಂಭಮಾಡುವುದು ಮತ್ತು ಅದರೊಂದಿಗೆ ಸ್ಕೀಂ ‘ಬಿ’ನಲ್ಲಿ ನಮಗೆ ಲಭ್ಯವಾಗುವ ಹೆಚ್ಚುವರಿ ೧೮೦ ಟಿ.ಎಂ.ಸಿ. ನೀರಿನಲ್ಲಿ ೭೦ ಟಿ.ಎಂ.ಸಿ. ನೀರನ್ನು ತುಂಗಾಭದ್ರಾ ಉಪ ಪಾತ್ರೆಯಿಂದ ಪಡೆಯುವುದು.

ಯಾವ ದೃಷ್ಟಿಕೋನದಿಂದ ಪರಿಶೀಲಿಸಿದರೂ ಭದ್ರಾ ಮೇಲ್ದಂಡೆ ಯೋಜನೆಗೆ ನೀರು ಲಭ್ಯವಿದೆ ಎಂದು ದೃಢಪಟ್ಟಿದೆ. ಸರ್ಕಾರಿ ಸಂಸ್ಥೆಗಳೂ ಕೂಡ ನಮ್ಮ ಈ ಅಭಿಪ್ರಾಯಕ್ಕೆ ಒತ್ತು ಕೊಡುವಂತೆ ಕಂಡು ಯೋಜನೆಗಳನ್ನು ರೂಪಿಸಿದೆ. ಆದುದರಿಂದ ರಾಜ್ಯಸರ್ಕಾರವು ಈಗಲಾದರೂ ಮಧ್ಯ ಪ್ರಾಂತ್ಯ ರೈತರ ಕನಸಾಗಿರುವ ಈ ಯೋಜನೆಯನ್ನು ನನಸಾಗಿಸಲು ಕಾರ್ಯೋನ್ಮುಖ ವಾಗುವುದೊಂದೆ ಮಾರ್ಗ ಎಂಬ ಸಲಹೆ ನೀಡಿದರು.[೮]

ಈ ಮಧ್ಯ ನೀರಾವರಿ ನಿವೃತ್ತ ಇಂಜಿನಿಯರಾದ ಜಿ.ಎಸ್. ಪರಮಶಿವಯ್ಯನವರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಿ ಇವರನ್ನು ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಮಾಹಿತಿಯನ್ನು ಪಡೆಯಲು ಸರ್ಕಾರ ಕೇಳಿಕೊಂಡಿತು. ಆಗ ಪರಮಶಿವಯ್ಯನವರು ಭದ್ರಾ ಮೇಲ್ದಂಡೆ ಯೋಜನೆಗೆ ಪರ್ಯಾಯ ರೂಪವನ್ನು ಕಂಡುಕೊಂಡರು.

ಜಿ.ಎಸ್. ಪರಮಶಿವಯ್ಯನವರ ಪರ್ಯಾಯ ಯೋಜನೆ

೧.೦೦. ಭದ್ರಾ ಮೇಲ್ದಂಡೆ ಯೋಜನೆ ೧೯೭೧-೭೪

ಪರಮಶಿವಯ್ಯನವರು ವರದಿ ನೀಡುತ್ತಾ, ನಾನು ಸರ್ಕಾರಿ ಸೇವೆಯಲ್ಲಿದ್ದಾಗ (೧೯೭೧-೭೪ರಲ್ಲಿ) ಭದ್ರಾ ಮೇಲ್ದಂಡೆ ಯೋಜನೆಯ ಸರ್ವೇಕಾರ್ಯ ಪೂರೈಸಿ ಕಾರ್ಯಸಾಧುವಾಗಿ ಒಂದು ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದೇನೆ. ಈ ಯೋಜನೆಯಿಂದ ಮುಳುಗಡೆಯಾಗಲಿದ್ದ ಪ್ರದೇಶ ಆಗ ಅಭಿವೃದ್ಧಿ ಆಗಿರಲಿಲ್ಲ. ಈ ಯೋಜನೆಗೆ ಲಿಫ್ಟ್ ಆಗಲೀ, ಕಾಲುವೆಗೆ ಸುರಂಗ ಮಾರ್ಗವಾಗಲಿ ಬೇಕಾಗಿರಲಿಲ್ಲ. ಆದರೆ ಅಲ್ಲಿಂದ ಇಲ್ಲಿಯವರೆಗೆ ಬಂದ ಸರ್ಕಾರಗಳು ಈ ಯೋಜನೆಗೆ ಮಂಜೂರಾತಿ ನೀಡಲಿಲ್ಲ. ದಿವಂಗತ ಶ್ರೀ ನಿಜಲಿಂಗಪ್ಪನವರು ಈ ಯೋಜನೆಯನ್ನು ಮಂಜೂರು ಮಾಡಿಸುವ ಪ್ರಯತ್ನಗಳೂ ಸಫಲವಾಗಲಿಲ್ಲ.

೨.೦೦. ಪಶ್ಚಿಮಕ್ಕೆ ಹರಿಯುತ್ತಿರುವ ಹಲವು ಹಳ್ಳಗಳ ನೀರನ್ನು ಪೂರ್ವಕ್ಕೆ ತಿರುಗಿಸುವ ಯೋಜನೆ-೨೦೦೦.

೨.೦೧ ಜಿ.ಎಸ್. ಬಸವರಾಜ್, ಲೋಕಸಭಾ ಸದಸ್ಯರು, ತುಮಕೂರು ಇವರ ಅಪೇಕ್ಷೆಯಂತೆ ಪಶ್ಚಿಮಕ್ಕೆ ಹರಿಯುತ್ತಾ ವ್ಯರ್ಥವಾಗಿ ಸಮುದ್ರ ಸೇರುತ್ತಿರುವ ೧೬೬ ಟಿ.ಎಂ.ಸಿ. ನೀರನ್ನು

ಗುರುತ್ವಾಕರ್ಷಣಾ ಶಕ್ತಿಯಿಂದಲೇ ಪೂರ್ವಕ್ಕೆ ತಿರುಗಿಸುವ ಯೋಜನೆಯನ್ನು ಪರಮಶಿವಯ್ಯನವರು ಸಿದ್ಧಪಡಿಸಿದಾಗ ಶ್ರೀಯುತರು ಬಹಳ ಆಸಕ್ತಿವಹಿಸಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ.ಎಸ್.ಎಂ.ಕೃಷ್ಣ ಮತ್ತು ಮಾನ್ಯ ಜಲಸಂಪನ್ಮೂಲ ಸಚಿವರಾದ ಶ್ರೀ. ಹೆಚ್.ಕೆ.ಪಾಟೀಲ್ ಅವರಲ್ಲಿ ಚರ್ಚಿಸಿ ಈ ಯೋಜನೆಯ ಬಗ್ಗೆ ಕೂಲಂಕುಶವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸಲು ರಾಜ್ಯ ಸರ್ಕಾರ ಜಿ.ಎಸ್.ಪರಮಶಿವಯ್ಯನವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ತಾಂತ್ರಿಕ ಸಮಿತಿಯನ್ನು ರಚಿಸಿತು. ಈ ಸಮಿತಿ ವಿವರವಾದ ಅಧ್ಯಯನ ಮಾಡಿ ಸಂಬಂಧಪಟ್ಟ ಅನೇಕ ಸ್ಥಳಗಳಿಗೂ ಭೇಟಿ ಕೊಟ್ಟು ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ವರದಿ ಸಲ್ಲಿಸಿತು.

೨.೦೨. ಈ ಮೇಲ್ಕಂಡ ಎಲ್ಲಾ ಹಳ್ಳಗಳು ಕರ್ನಾಟಕದಲ್ಲಿಯೇ ಪ್ರಾರಂಭವಾಗಿ ಈ ರಾಜ್ಯದಲ್ಲಿಯೇ ಹರಿದು, ಈ ರಾಜ್ಯದಲ್ಲಿಯೇ ಸಮುದ್ರ ಸೇರುತ್ತವೆ. ಆದ್ದರಿಂದ ಈ ನೀರನ್ನು ಅಭಾವ ಪೀಡಿತ ಪ್ರದೇಶಗಳಲ್ಲಿ ಅಂತರ್ಜಲ ಅಭಿವೃದ್ಧಿಗೆ ಹಾಗೂ ಶುದ್ಧ ಕುಡಿಯುವ ನೀರಿಗಾಗಿ ಉಪಯೋಗಿಸುವುದರಿಂದ ಇತರೆ ರಾಜ್ಯಗಳ ತಕರಾರು ಇರುವುದಿಲ್ಲ.

೨.೦೩. ಈ ಯೋಜನೆಯಲ್ಲಿಯೇ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಬೇಸಿಗೆ ಕಾಲದಲ್ಲಿ ಬೇಕಾಗುವ ನೀರನ್ನು ಒದಗಿಸಲು ಸಣ್ಣ ಪ್ರಮಾಣದ ಜಲಾಶಯಗಳನ್ನು ನಿರ್ಮಿಸಲಾಗಿದೆ.

೨.೦೪. ಪಶ್ಚಿಮ ಘಟ್ಟಗಳಿಂದ ಸಮುದ್ರ ಸೇರುತ್ತಿರುವ ಸುಮಾರು ೨,೨೫೦ ಟಿ.ಎಂ.ಸಿ. ನೀರಿನಲ್ಲಿ ಈ ಯೋಜನೆಗೆ ಉಪಯೋಗಿಸುವ ನೀರು ಕೇವಲ ೧೬೯ ಟಿ.ಎಂ.ಸಿ. ಮಾತ್ರ.

೨.೦೫. ಈ ಜಲಾನಯನ ಪ್ರದೇಶದಲ್ಲಿ ಸರ್ಕಾರದ ಮಳೆ ಮಾಪನಗಳಿಲ್ಲದಿರುವುದರಿಂದ ಆ ಪ್ರದೇಶಗಳಲ್ಲಿನ ಖಾಸಗೀ ಕಾಫಿ ತೋಟಗಳಲ್ಲಿನ ಮಳೆ ಮಾಪನದ ಅಂಕಿ ಅಂಶಗಳನ್ನೇ ಆಧರಿಸಿ ೧೬೯ ಟಿ.ಎಂ.ಸಿ. ನೀರು ಒದಗಿಸಬಹುದೆಂದು ಅಂದಾಜಿಸಲಾಗಿದೆ. ಆದ್ದರಿಂದ ಒದಗುವ ನೀರಿನ ಪ್ರಮಾಣ ಬದಲಾಗಬಹುದು.

೩.೦೦ ಭದ್ರಾ ಮೇಲ್ದಂಡೆ ಯೋಜನೆ ೨೦೦೨.

೩.೦೧. ಈಗಿರುವಾಗ ಈಗಿನ ರಾಜ್ಯ ಸರ್ಕಾರದ ರಾಜ್ಯ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಭದ್ರ ಮೇಲ್ದಂಡೆ ಯೋಜನೆಯನ್ನು ರೂಪಿಸಿ ತನ್ಮೂಲಕ ೪೨ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು ೨೨೧ ಕಿ.ಮೀ. ಉದ್ದದ ಚಿತ್ರದುರ್ಗ ಬ್ರಾಂಚ್ ಕಾಲುವೆ ಮತ್ತು ೪೪೧ ಕಿ.ಮೀ. ಉದ್ದದ ತುಮಕೂರು ಬ್ರಾಂಚ್ ಕಾಲುವೆಯಿಂದ ನೀರನ್ನು ಒದಗಿಸಲು ಯೋಚಿಸಿತು.

೩.೦೨. ಈ ಯೋಜನೆಯಡಿಯಲ್ಲಿ ಮಾಗುಂಡಿ ಹತ್ತಿರ ೧೫,೪೬೩ ಟಿ.ಎಂ.ಸಿ. ನೀರು ಶೇಖರಿಸಲು ಭದ್ರಾ ನದಿಗೆ ಅಡ್ಡಲಾಗಿ ಒಂದು ಜಲಾಶಯ ನಿರ್ಮಿಸಿ, ನದಿ ಪಾತ್ರದ ತೂಬಿನಿಂದ ಜಲಾಶಯದ ನೀರನ್ನು ನದಿಯಲ್ಲಿಯೇ ೪೦ ಕಿ.ಮೀ. ದೂರ ಹರಿಸಿ ಮುಂದೆ

ತೇವರ ಗುಡ್ಡದ ಹತ್ತಿರ ಮತ್ತೊಂದು ಅಣೆಕಟ್ಟು ನಿರ್ಮಿಸಿ ಇದರಲ್ಲಿ ೪, ೯೭ ಟಿ.ಎಂ.ಸಿ. ನೀರನ್ನು ಶೇಖರಿಸಲು ಯಾಚಿಸಲಾಗಿದೆ. ಇದರಿಂದ ೮೪೨೨ ಎಕರೆ ಅರಣ್ಯ ಮತ್ತು ಖಾಸಗಿ ತೋಟಗಳು ಮುಳುಗಡೆಯಾಗುತ್ತವೆ.

೩.೦೩. ಈ ಯೋಜನೆಗೆ ತುಂಗನದಿ ಪಾತ್ರದಿಂದ ೧೯ ಟಿ.ಎಂ.ಸಿ. ನೀರನ್ನು ೭೮.೨೦ ಮೀಟರ್ ಲಿಫ್ಟ್ ಮಾಡಿ ಭದ್ರ ನದಿಗೆ ಹಾಯಿಸಬೇಕಾಗಿದೆ. ಇದಲ್ಲದೆ ತೇವರ ಗುಡ್ಡದ ಹತ್ತಿರದಿಂದ ೪೨ ಟಿ.ಎಂ.ಸಿ. ನೀರನ್ನು ೮೬.೫೬ ಮೀಟರ್ ಎತ್ತರಕ್ಕೆ ಲಿಫ್ಟ್ ಮಾಡಬೇಕಾಗಿದೆ. ಈ ಎರಡೂ ಕಡೆ ಲಿಫ್ಟ್ ಮಾಡಲು ಬೇಕಾಗುವ ವಿದ್ಯುತ್ ೨೮೦ ಮೆಗಾವ್ಯಾಟ್ಸ್ ಎಂದು ನಮೂದಿಸಲಾಗಿದೆ. ಈ ಕಾಲುವೆಯು ೪.೮೫ ಕಿ.ಮೀ. ಸುರಂಗ ಮಾರ್ಗದಲ್ಲಿ ಕ್ರಮಿಸಬೇಕಾಗಿದೆ. ಈ ಯೋಜನೆಯ ಅಂದಾಜು ವೆಚ್ಚ ೩,೭೧೮ ಕೋಟಿ ರೂಪಾಯಿಗಳೆಂದು ನಮೂದಿಸಲಾಗಿದೆ.

೩.೦೪. ಈ ಯೋಜನೆಯಲ್ಲಿ ಅರಣ್ಯ ಮುಳುಗಡೆ ಮತ್ತು ಲಿಫ್ಟ್ ಮಾಡಲು ಬೇಕಾಗುವ ವಿದ್ಯುತ್ ಅತಿ ಹೆಚ್ಚು ಇದ್ದು ವಾರ್ಷಿಕ ವೆಚ್ಚ ಅತಿ ಹೆಚ್ಚು ಬರುವುದಿರಂದ ರೈತರು ಇಷ್ಟು ಹೊರೆ ಹೊರಲು ಸಾಧ್ಯವಾಗಲಾರದು. ಆದ್ದರಿಂದ ಈ ಯೋಜನೆಗೆ ಪರ್ಯಾಯ ಯೋಜನೆಯನ್ನು ರೂಪಿಸಬೇಕಾದ್ದು ಅನಿವಾರ್ಯವಾಯಿತು.

೪.೦೦ ಮೇಲ್ಕಂಡ ಎರಡು ಮತ್ತು ಮೂರನೇ ಪ್ಯಾರದಲ್ಲಿ ಹೇಳಿರುವ ಜಂಟಿ ಯೋಜನೆ.

೪.೦೧. ಎ) ಆದ್ದರಿಂದ ಜಿ.ಎಸ್.ಪರಮಶಿವಯ್ಯನವರು ಹಲವಾರು ವಿವಿಧ ಪರ್ಯಾಯ ಯೋಜನೆಗಳನ್ನು ರೂಪಿಸಿ ಅವುಗಳಲ್ಲಿ ಈ ಕೆಳಗೆ ವಿವರಿಸಿರುವ ಯೋಜನೆಯು ಬಹಳ ಕಡಿಮೆ ಖರ್ಚಿನಿಂದ ಕೂಡಿದ್ದು ಯಾವ ತರಹ ಜಮೀನು ಮುಳುಗಡೆ ಆಗದೆ, ಲಿಫ್ಟ್ ಇಲ್ಲದೆ ಗುರುತ್ವಾಕರ್ಷಣಾ ಶಕ್ತಿಯಿಂದಲೇ. ಯಾವ ಸುರಂಗ ಮಾರ್ಗವಿಲ್ಲದೆ ಹಾಗೂ ಮೇಲ್ಕಂಡ ಯೋಜನೆಯಲ್ಲಿ ಹೇಳಿರುವ ಎರಡು ಬ್ರಾಂಚ್‌ಗಳ ೬೫೨ ಕಿ.ಮೀ. ಉದ್ದದ ಕಾಲುವೆಗಳೂ ಇಲ್ಲದೆ ಅಂದಾಜು ವೆಚ್ಚ ೩,೭೧೮ ಕೋಟಿ ರೂ.ಗಳಿಗೆ ಬದಲಾಗಿ ಕೇವಲ ೪೦೦ ಕೋಟಿ ರೂ.ಗಳಲ್ಲಿ ೪೨ ಟಿ.ಎಂ.ಸಿ.ಗೆ ಬಗದಲಾಗಿ ೭೬.೩೯ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು, ಮೇಲಿನ ಯೋಜನೆಯಲ್ಲಿ ಯಾಚಿಸಿರುವ ಎಲ್ಲಾ ಪ್ರದೇಶಗಳಿಗೂ ಹಾಗೂ ಈ ಪ್ರದೇಶಗಳಿಗಿಂತ ಎತ್ತರವಾದ ಪ್ರದೇಶಗಳಿಗೂ ನೀರನ್ನು ಹಾಯಿಸಬಹುದಾದ ಒಂದು ಯೋಜನೆಯನ್ನು ರೂಪಿಸಿದ್ದಾರೆ.

ಬಿ) ಈ ಜಂಟಿ ಯೋಜನೆ ಕಾರ್ಯಗತವಾದರೆ ನಿಜಲಿಂಗಪ್ಪನವರ ಆತ್ಮಕ್ಕೆ ಸಮಾಧಾನವಾಗುವುದರಲ್ಲಿ ಸಂಶಯವಿಲ್ಲ ಎಂದು ಇವರು ತಿಳಿಸಿದ್ದಾರೆ.

೪.೦೨. ೭೬.೩೯. ಟಿ.ಎಂ.ಸಿ. ನೀರನ್ನು ಈ ಯೋಜನೆಗೆ ಪಡೆಯುವುದರಿಂದ ತುಂಗ, ಭದ್ರ ಮತ್ತು ತುಂಗಭದ್ರ ನದಿ ಪಾತ್ರದಲ್ಲಿ ಹಾಲಿ ಇರುವ ಮತ್ತು ಕಾಮಗಾರಿ ನಡೆಯುತ್ತಿರುವ ಯಾವ ಯೋಜನೆಗಳಿಗೂ ತೊಂದರೆ ಆಗುವುದಿಲ್ಲ.

೪.೦೩. ಎ) ಈ ೭೬.೩೯ ಟಿ.ಎಂ.ಸಿ. ನೀರಿನಲ್ಲಿ ೪೩.೩೯ ಟಿ.ಎಂ.ಸಿ. ನೀರನ್ನು ಪಶ್ಚಿಮಕ್ಕೆ ಹರಿಯುತ್ತಿರುವ ಹಲವಾರು ಹಳ್ಳಗಳ ೧೧೭ ಟಿ.ಎಂ.ಸಿ. ನೀರನ್ನು ಕೇವಲ ಗುರುತ್ವಾಕರ್ಷಣ ಶಕ್ತಿಯಿಂದಲೇ ಪೂರ್ವಕ್ಕೆ ಹರಿಸುವ ಯೋಜನೆಯ ಕಾಲುವೆಗೆ ಹರಿಸಲಾಗುವುದು ಮತ್ತು ಬಾಕಿ ೩೩ ಟಿ.ಎಂ.ಸಿ. ನೀರನ್ನು ಪಶ್ಚಿಮಕ್ಕೆ ಹರಿಯುತ್ತಿರುವ ಹಲವಾರು ಹಳ್ಳಗಳ ೫೨ ಟಿ.ಎಂ.ಸಿ. ನೀರನ್ನು ಕೇವಲ ಗುರುತ್ವಾಕರ್ಷಣ ಶಕ್ತಿಯಿಂದಲೇ ಉತ್ತರಕ್ಕೂ ಹಾಗೂ ಪೂರ್ವಕ್ಕೂ ಹರಿಸುವ ಯೋಜನೆಯ ಕಾಲುವೆಗೆ ಹರಿಸಲಾಗುವುದು.

ಬಿ) ಈ ರೀತಿ ಭದ್ರ ಮತ್ತು ತುಂಗ ನದಿಗಳ ಎತ್ತರದ ಜಲಾನಯನ ಪ್ರದೇಶಗಳಿಂದ ೪೩.೩೯ + ೩೩ = ೭೬.೩೯ ಟಿ.ಎಂ.ಸಿ. ನೀರನ್ನು ೨ನೇ ಪ್ಯಾರದಲ್ಲಿ ಹೇಳಿರುವ ಕಾಲುವೆಗೆ ಹರಿಸದಿದ್ದರೆ ಬಹಳ ಅಭಾವಪೀಡಿತ ಕೋಲಾರ ಮತ್ತು ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಈ ಪ್ರದೇಶದ ಕಾಲುವೆಯು ಬಹುದೂರದ ಕೊನೆ ಹಂತದಲ್ಲಿರುವುದರಿಂದ ಈ ಜಿಲ್ಲೆಗಳಿಗೆ ನೀರು ಒದಗಿಸುವುದಾಗುವುದಿಲ್ಲ.

೪.೦೪. ಪಶ್ಚಿಮಕ್ಕೆ ಹರಿಯುತ್ತಿರುವ ಹಲವಾರು ಹಳ್ಳಗಳ ನೀರನ್ನು ಪೂರ್ವಕ್ಕೆ ಹಾಗೂ ಉತ್ತರಕ್ಕೆ ಗುರುತ್ವಾಕರ್ಷಣಾ ಶಕ್ತಿಯಿಂದ ಹರಿಸುವ ಯೋಜನೆಯ ಸರ್ವೇಕಾರ್ಯ ನಡೆಯಲಿರುವುದರಿಂದ ಈ ಕಾಲುವೆಗಳಲ್ಲಿಯೇ ೭೬.೩೯ ಟಿ.ಎಂ.ಸಿ. ನೀರನ್ನು ಹರಿಸುವುದರಿಂದ ಹೊಸದಾಗಿ ೬೫೩. ಕಿ.ಮೀ. ಉದ್ದದ ಕಾಲುವೆಗಳು ಮತ್ತು ಜಲಾಶಯಗಳೂ ಬೇಕಾಗಿರುವುದಿಲ್ಲ. ಇದಕ್ಕೆ ಬದಲಾಗಿ ಕೇವಲ ೩೩೪ ಕಿ.ಮೀ. ಉದ್ದದ ಗಾರ್ಲೆಂಡ್ ಕಾಲುವೆ ನಿರ್ಮಿಸಬೇಕಾಗುತ್ತದೆ.

೪.೦೫. ಹೀಗೆ ಸುಮಾರು (೧೧೭+೪೩.೩೯+೫೨+೩೩) ೨೪೫ ಟಿ.ಎಂ.ಸಿ. ನೀರನ್ನು ಮಧ್ಯ ಕರ್ನಾಟಕದ ಹತ್ತು ಜಿಲ್ಲೆಗಳಿಗೆ ಅಂದರೆ ಚಿಕ್ಕಮಗಳೂರು, ಹಾಸನ, ಮಂಡ್ಯ, ತುಮಕುರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿತ್ರದುರ್ಗ, ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಹರಿಸುವ ಬೃಹತ್ ಯೋಜನೆಯನ್ನು ರೂಪಿಸಲಾಯಿತು.

೪.೦೬. ರಾಜ್ಯ ಸರ್ಕಾರ ಈ ಯೋಜನೆಯನ್ನು ಅಧ್ಯಯನ ಮಾಡಲು ರಾಜ್ಯ ಸರ್ಕಾರದ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಹೆಚ್ಚು ಪರಿಣಿತರ ಸಮಿತಿಯನ್ನು ರಚಿಸಿ ಈ ಬಗ್ಗೆ ವರದಿ ಸಲ್ಲಿಸಲು ಕೋರಲಾಯಿತು. ಈ ಪರಿಣಿತರ ಸಮಿತಿ ಈ ಯೋಜನೆಯ ಸಾಧ್ಯಸಾಧ್ಯತೆಯನ್ನು ತಿಳಿಯುವ ಸಲುವಾಗಿ ಭಾರತ ಸರ್ಕಾರ ಸ್ವಾಮ್ಯದ ಇಸ್ರೋ ಆಡಳಿತಕ್ಕೆ ಒಳಪಟ್ಟ ಹೈದ್ರಾಬಾದ್‌ನಲ್ಲಿರುವ ನ್ಯಾಷನಲ್ ರಿಮೋಟ್ ಸೆನಸಿಂಗ್ ಏಜೆನ್ಸಿಗೆ, ಸರ್ವೆಕಾರ್ಯ ಕೈಗೊಂಡು, ಅಂದಾಜು ವೆಚ್ಚ ಮತ್ತು ವರದಿಯನ್ನು ತಯಾರಿಸಿ ಕೊಡಲು ಅವರಿಗೆ ಈ ಕಾರ್ಯವನ್ನು ವಹಿಸಲು ಶಿಫಾರಸ್ಸು ಮಾಡಿತು.

೪.೦೭. ಈ ಶಿಫಾರಸ್ಸಿನಂತೆ ಈ ಕಾರ್ಯವನ್ನು ಇಸ್ರೋ ಸಂಸ್ಥೆಯ ಅಧೀನದ ಮೇಲ್ಕಂಡ ಸಂಸ್ಥೆಗೆ ವಹಿಸಲು ಏರ್ಪಾಟು ಮಾಡಿತು.

೪.೦೮. ವರದಿ ಬಂದ ನಂತರ ಅದರ ಸಾಧಕ ಬಾಧಕಗಳನ್ನು ಪರಿಶೀಲಿಸಿ ಕಾರ್ಯ ಸಾದುವಾದ ಯೋಜನೆ ಎಂದು ದೃಢಪಟ್ಟರೆ ಸರ್ಕಾರ ಈ ಯೋಜನೆಗೆ ಮಂಜೂರಾತಿ ನೀಡಬೇಕಾಗುತ್ತದೆ.

೪.೦೯. ಅಭಾವಪೀಡಿತ ಮತ್ತು ಹತ್ತು ಜಿಲ್ಲೆಗಳ ೧೨,೭೫೫ ಹಳ್ಳಗಳ ೧೦,೫೪೦ ಕೆರೆಗಳಿಗೆ ನೀರು ಹರಿಸಿ ಈ ಎಲ್ಲಾ ಕೆರೆಗಳಲ್ಲಿ ಬೇಸಿಗೆಯಲ್ಲಿಯೂ ಕನಿಷ್ಟ ೪ ಅಡಿ ನೀರು ನಿಲ್ಲುವಂತೆ ತೂಬಿನ ಮಟ್ಟವನ್ನು ಹೆಚ್ಚಿಸಲಾಗುವುದು.

೪.೧೦. ಪ್ರತಿ ಹಳ್ಳಿಗೂ ಒಂದು ಕೆರೆ ಇರಬೇಕೆಂದು ಕೆರೆಗಳಿಲ್ಲದ ಸುಮಾರು ೧೨೦೯ ಹಳ್ಳಿಗಳಿಗೆ ೧೨೦೯ ಹೊಸ ಕೆರೆಗಳನ್ನು ನಿರ್ಮಾಣ ಮಾಡಿ ಈ ಕಾಲುವೆಗಳಿಂದ ನೀರನ್ನು ಕೆರೆಗೆ ಹರಿಸಲಾಗುವುದು. ತನ್ಮೂಲಕ ಅಂತರ್ಜಲ ಅಭಿವೃದ್ಧಿ ಪಡಿಸಿ ಈ ಭಾಗದ ೧೫೯.೦೫ ಲಕ್ಷ ಪ್ರಜೆಗಳಿಗೂ ಹಾಗೂ ೧೪೦,೫೬ ಲಕ್ಷ ಜಾನುವಾರುಗಳಿಗೂ ಶುದ್ಧ ಕುಡಿಯುವ ನೀರನ್ನು ಶಾಶ್ವತವಾಗಿ ಒದಗಿಸಬಹುದಾಗಿದೆ.

೪.೧೧. ಬೆಂಗಳೂರು ಮಹಾನಗರಕ್ಕೆ ಸಹ ಅತಿ ಕಡಿಮೆ ಖರ್ಚಿನಲ್ಲಿ ೧೨ ಟಿ.ಎಂ.ಸಿ. ಕುಡಿಯುವ ನೀರನ್ನು ಒದಗಿಸಬಹುದಾಗಿದೆ. ಇದರಿಂದ ಬೆಂಗಳೂರು ಮಹಾನಗರದ ಜಲಮಂಡಳಿಗೆ ಒಂದು ವರ್ಷಕ್ಕೆ ಸುಮಾರು ೧೩೨.೦೦ ಕೋಟಿ ರೂಪಾಯಿ ವಿದ್ಯುತ್ ಬಿಲ್ಲಿನಲ್ಲಿ ಉಳಿತಾಯವಾಗುವುದಲ್ಲದೆ ಕೊಳವೆ ಮಾರ್ಗ ಕಾವೇರಿಯ ತೊರೆಕಾಡನಹಳ್ಳಿ ಬಳಿಯಿಂದ ನಗರಕ್ಕೆ ೯೬ ಕಿ.ಮೀ. ದೂರ ಆದರೆ ಪರಮಶಿವಯ್ಯನವರ ಯೋಜನೆಯಿಂದ ಕೇವಲ ೨೨.ಕಿ.ಮೀ. ದೂರು ಆಗುವುದರಿಂದ ಕೊಳವೆ ಮಾರ್ಗಕ್ಕೆ ಹಲವು ಕೋಟಿ ಹಣ ಉಳಿತಾಯವಾಗುತ್ತದೆ.

೪.೧೨. ಈ ಯೋಜನೆ ಕಾರ್ಯಗತವಾದರೆ, ಈಗ ಹಾಲಿಯಿರುವ ಅಂತರ್ಜಲ ಮಟ್ಟ ಮೇಲೇರುವುದರಿಂದ ಫ್ಲೋರೈಡ್ ಮತ್ತು ನೈಟ್ರೇಟ್ ಇಲ್ಲದ ಶುದ್ಧ ಕುಡಿಯುವ ನೀರು ಶಾಶ್ವತವಾಗಿ ಲಭ್ಯವಾಗುತ್ತದೆ.

೪.೧೩. ಇದಲ್ಲದೆ ಹಲವಾರು ಇತರೆ ಅಭಿವೃದ್ಧಿ ಕಾರ್ಯಗಳು ತಂತಾನೆ ರೂಪಗೊಳ್ಳುತ್ತದೆ. ಆ ಪೈಕಿ ಕೆಲವು ಯಾವುವೆಂದರೆ ಫ್ಲೋರಿಕಲ್ಚರ್, ಮೀನುಗಾರಿಕೆ, ತೋಟಗಾರಿಕೆ, ರೇಷ್ಮೆ ವ್ಯವಸಾಯ, ವಿದ್ಯುಚ್ಛಕ್ತಿ ತಯಾರಿಕೆ, ಕೈಗಾರಿಕೆ, ಟೂರಿಸಂ, ನ್ಯಾವಿಗೇಷನ್ ಇತರೆ.

೪.೧೪. ನದಿಗಳಲ್ಲಿ ನೆರೆ ಬಂದಾಗ ಆಗುವ ಅನಾವುತಗಳನ್ನು ತಪ್ಪಿಸುತ್ತದೆ.

೪.೧೫. ಪರಿಸರ ಸಮತೋಲನ ಕಾಯ್ದುಕೊಂಡಿರುವುದಲ್ಲದೆ ಕಾಲುವೆಗಳ ಉದ್ದಕ್ಕೂ ಎಡ ಮತ್ತು ಬಲ ಭಾಗಗಳಲ್ಲಿ ೧೬ ಲಕ್ಷ ಹಣ್ಣಿನ ಮತ್ತಿತರ ಉತ್ತಮ ಮರಗಳನ್ನು ಸಹ ಬಳಸಲು ಯೋಜನೆಯಲ್ಲಿ ಅಳವಡಿಸಲಾಗಿದೆ.

೪.೧೬. ಈ ಯೋಜನೆಯೊಂದೇ ಈ ಭಾಗದ ೧೦ ಜಿಲ್ಲೆಗಳಿಗೆ ಆಶಾಕಿರಣ. ಇದು ತಪ್ಪಿದರೆ ಈ ೧೦ ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯವಿಲ್ಲದ ಕಡೆಗಳಲ್ಲಿ ಇನ್ನೂ ಮುಂದಿನ ೧೦–೧೫ ವರ್ಷಗಳಲ್ಲಿ ಜನ–ಜಾನುವಾರುಗಳಿಗೆ ಕುಡಿಯಲೂ ಸಹ ನೀರಿಲ್ಲದೆ ಪಟ್ಟಣಗಳಿಗೆ ವಲಸೆ ಹೋಗಬೇಕಾಗುತ್ತದೆ.

೪.೧೭. ಭದ್ರಾ ನದಿಯಿಂದ ೪೫, ೩೯, ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲು ನಿರ್ಮಿಸಲಿರುವ ಮೂರು ಗಾರ್ಲೆಂಡ್ ಕಾಲುವೆಗಳ ಉದ್ದ ೩೩೪ ಕಿ.ಮೀ. ಆಗುತ್ತದೆ.

೪.೧೮. ಈ ಹತ್ತು ಜಿಲ್ಲೆಗಳಲ್ಲಿ ಮಳೆ ಕಡಿಮೆಯಾಗಿ ಬರಪರಿಸ್ಥಿತಿ ಬಂದಾಗ, ಈ ಜಂಟಿ ಯೋಜನೆಯ ಕಾಲುವೆಗಳಿಂದ ಯಾವ ಹೊಸ ಕಾಲುವೆ ನಿರ್ಮಿಸದೆ ಕೃಷ್ಣರಾಜಸಾಗರ, ಹೇಮಾವತಿ, ತುಂಗ, ಭದ್ರ, ತುಂಗಭದ್ರ, ವಾಣಿವಿಲಾಸ ಸಾಗರ, ಮಾರ್ಕೋನಹಳ್ಳಿ, ತಿಪ್ಪಿಗೊಂಡನಹಳ್ಳಿ ಮುಂತಾದ ಎಲ್ಲಾ ಜಲಾಶಯಗಳಿಗೂ ಪಶ್ಚಿಮ ಘಟ್ಟದ ನೀರನ್ನು ಹರಿಸಬಹುದಾಗಿದೆ. (ಪಶ್ಚಿಮ ಘಟ್ಟಗಳ ಪಶ್ಚಿಮ ದಿಕ್ಕಿನಲ್ಲಿ ಮಳೆ ಮಾಮೂಲಾಗಿ ಬೀಳುವುದರಿಂದ).

೫.೦೦ ಭದ್ರಾ ಮೇಲ್ದಂಡೆ ಯೋಜನೆಗೆ ಪರ್ಯಾಯ ಯೋಜನೆಗಳ ಹೋಲಿಕೆಗಳು.

ಕ್ರ.ಸಂ.	**ವಿವರಗಳು**	**ರಾಜ್ಯದ ಜಲಸನ್ಮೂಲ ಅಭಿವೃದ್ಧಿಗೆ ಸಂಸ್ಥೆ ರೂಪಿಸಿರುವ ಯೋಜನೆ**	**ಜಿ.ಎಸ್. ಪರಮಶಿವಯ್ಯನವರು ರೂಪಿಸುವ ಪರ್ಯಾಯ ಯೋಜನೆ**
೧.	ಭದ್ರಾ ನದಿಗೆ ಅಡ್ಡಲಾಗಿ ಜಲಾಶಯ ನಿರ್ಮಾಣ	ಮಾಗುಂಡಿ ಹತ್ತಿರ	ಇಲ್ಲ
೨.	ಭದ್ರಾ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಾಣ.	ತೇವರಗುಡ್ಡದ ಹತ್ತಿರ	ಇಲ್ಲ
೩.	ತುಂಗನದಿಗೆ ಅಣೆಕಟ್ಟು	ಇದೆ	ಇಲ್ಲ
೪.	ಮುಳುಗಡೆ ಪ್ರದೇಶ	೮,೪೮೨ ಎಕರೆ	ಇಲ್ಲ
೫.	೧೯ ಟಿ.ಎಂ.ಸಿ. ನೀರು ಲಿಫ್ಟ್	೮೬.೫೬ ಮೀಟರ್	ಇಲ್ಲ

೬.	೪೨ ಟಿ.ಎಂ.ಸಿ. ನೀರು	೭೮,೨೦ ಮೀಟರ್	ಇಲ್ಲ
೭.	ಬೇಕಾಗುವ ವಿದ್ಯುತ್	೨೦೦ ಮ.ವ್ಯಾ.	ಇಲ್ಲ
೮.	ಕಾಲುವೆ ಸುರಂಗ ಮಾರ್ಗ	೪.೮೫ ಕಿ.ಮೀ.	ಇಲ್ಲ.
೯.	ಉಪಯೋಗಿಸುವ ನೀರಿನ ಪ್ರಮಾಣ	೪೨ ಟಿ.ಎಂ.ಸಿ.	ಇಲ್ಲ
೧೦.	ಕಾಲುವೆಗಳ ಉದ್ದ	೭೬೬.೮೫. ಕಿ.ಮೀ.	ಇಲ್ಲ.
೧೧.	ಗಾರ್ಲೇಂಡ್ ಕಾಲುವೆ ಉದ್ದ	ಇಲ್ಲ	೩೩೪ ಕಿ.ಮೀ.
೧೨.	ಡಿಸ್ಟ್ರಿಬ್ಯೂಟರಿ ಕಾಲುವೆ	ಅಳತೆ ಮಾಡಿಲ್ಲ	ಬೇಕಾಗಿಲ್ಲ.
೧೩.	ಕಾಲುವೆಗಳಿಗೆ ಬೇಕಾದ ಭೂಮಿಯ ವಿಸ್ತೀರ್ಣ	ಅಳತೆ ಮಾಡಿಲ್ಲ	ಬೇಕಾಗಿಲ್ಲ.
೧೪.	ಉಪಯೋಗವಾಗಲಿರುವ ಜಿಲ್ಲೆಗಳು ಭಾಗಶಃ	ಚಿತ್ರದುರ್ಗ, ತುಮಕೂರು ಚಿಕ್ಕಮಗಳೂರು, (೩ ಜಿಲ್ಲೆ ಸೇರಿ, ೮ ತಾಲ್ಲೂಕುಗಳು	ಮೇಲೆ ಹೇಳಿರುವ ೧೦ ಜಿಲ್ಲೆಗಳ ೫೯ ತಾಲ್ಲೂಕುಗಳು
೧೫.	ಅಂದಾಜು ವೆಚ್ಚ	೩೭೧೮ ಕೋಟಿ.ರೂ.	೪೦೦ ಕೋಟಿ.ರೂ.

ಈ ರೀತಿಯಾಗಿ ಜಿ.ಎಸ್. ಪರಮಶಿವಯ್ಯನವರು ಭದ್ರಾ ಮೇಲ್ದಂಡೆ ಯೋಜನೆಯ ಸಾದಕ ಬಾದಕಗಳ ಬಗ್ಗೆ ಅಧ್ಯಯನ ಕೈಗೊಂಡು ಅದಕ್ಕೆ ಪರ್ಯಾಯ ಯೋಜನೆಯನ್ನು ರೂಪಿಸಿ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದರು. ಆದರೂ ಕೂಡ ಈ ಯೋಜನೆ ಕಾರ್ಯ ಅಸಾಧ್ಯ ಎಂದು ಸರ್ಕಾರ ಮತ್ತೊಮ್ಮೆ ನೀರಾವರಿ ತಜ್ಞರಾದ ಕೆ.ಸಿ.ರೆಡ್ಡಿಯವರ ನೇತೃತ್ವದಲ್ಲಿ ಮತ್ತೊಂದು ಸಮಿತಿಯನ್ನು ರಚಿಸಿತು. ಈ ಸಮಿತಿ ಸರ್ಕಾರ ಭದ್ರಾ ಮೇಲ್ದಂಡೆ ಯೋಜನೆಗಾಗಿ ರಚಿಸಿದ ತಜ್ಞರ ಸಮಿತಿಯಲ್ಲಿ ಒಂಬತ್ತನೆಯದಾಗಿದ್ದು ಇಂದು ಈ ಕೆ.ಸಿ. ರೆಡ್ಡಿ ವರದಿಯ ಆಧಾರದ ಮೇಲೆಯೇ ಈ ಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸಿದೆ. ಕೆ.ಸಿ.ರೆಡ್ಡಿ ವರದಿಯ ವಿವರಣೆಯನ್ನು ಮುಂದಿನ ಭದ್ರಾ ಮೇಲ್ದಂಡೆ ಯೋಜನೆ ಸಮಿಕಾಲೀನ ಸ್ಥಿತಿಗತಿ ಎಂಬ ಅಧ್ಯಯನದಲ್ಲಿ ವಿವರಿಸಲಾಗಿದೆ.

ಈ ರೀತಿಯಾಗಿ ಭದ್ರಾ ಮೇಲ್ದಂಡೆ ಯೋಜನೆ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದ ಕಾಲದಿಂದ ಎಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾದ ಸಂದರ್ಭದವರೆಗೂ ಈ ಯೋಜನೆಯ ಕಾರ್ಯಗತದ ಬಗ್ಗೆ ಸರ್ಕಾರ ತಜ್ಞರ ಸಮಿತಿ ರಚಿಸುವುದರ ಕಾರ್ಯದಲ್ಲಿಯೇ ತೊಡಗಿತ್ತು. ಮತ್ತು ಈ ಯೋಜನೆ ಬರಪೀಡಿತ ಪ್ರದೇಶಗಳ ಜನತೆಗೆ ಕೇವಲ ಆಶ್ವಾಸನೆಯ

ಮಾತುಗಳನ್ನೇ ಕೇಳುವ ಸಂದರ್ಭ ಒದಗಿತ್ತು. ಜನಪ್ರತಿನಿಧಿಗಳು ಚುನಾವಣೆ ಬಂತೆಂದರೆ ಈ ಯೋಜನೆಯನ್ನು ಆಧಾರವಾಗಿಟ್ಟುಕೊಂಡು ಅವರು ಹೇಳುತ್ತಿದ್ದ ಮಾತೆಂದರೆ ನಾನೇನಾದರೂ ಸಂಸದನಾದರೆ ಈ ಭಾಗಕ್ಕೆ ನೀರನ್ನು ತಂದೇ ತರುತ್ತೇನೆ. ನಮ್ಮ ಸರ್ಕಾರ ಈ ಸಾರಿ ಅಧಿಕಾರಕ್ಕೆ ಬಂದರೆ ಬರಪೀಡಿತ ಪ್ರದೇಶಗಳು ಸಂಪೂರ್ಣವಾಗಿ ನೀರಾವರಿ ಪ್ರದೇಶಗಳಾಗಿ ಮಾರ್ಪಡುತ್ತೇವೆ. ಈ ಒಂದು ಯೋಜನೆಯ ಬಗ್ಗೆ ನಮಗೆ ಸಂಪೂರ್ಣ ಕಾಳಜಿ ಇದೆ. ಇಂತಹ ಮಾತುಗಳನ್ನಾಡಿ ಜನತೆಯಲ್ಲಿ ಮತಗಳನ್ನು ದಕ್ಕಿಸಿಗೊಂಡು ವಿಜಯಿಗಳಾದ ನಂತರ ಈ ವಿಷಯದ ಮಾತೇ ಎತ್ತದೇ ತಮ್ಮ ಪಾಡಿಗೆ ತಾವು ಹಣ ಮಾಡುವುದರಲ್ಲಿ ತೊಡಗುತ್ತಿದ್ದರು. ಯಾವುದೋ ಒಂದು ಪಕ್ಷದ ಒತ್ತಡ ಬಂದು ಈ ವಿಷಯವನ್ನೇ ಬಿಟ್ಟು ಬಿಡುವುದು ಈ ರೀತಿಯ ಹಲವಾರು ಆಶ್ವಾಸನೆಗಳನ್ನು ಬರ ಪೀಡಿತ ಜನ ಕೇಳುತ್ತಾ ಇಂದು ಈ ಯೋಜನೆ ಜಾರಿಯಾಗುವುದು, ನಾಳೆ ಜಾರಿಯಾಗಬಹುದು ಅಥವಾ ಈ ವ್ಯಕ್ತಿಯನ್ನು ಗೆಲ್ಲಿಸಿದರೆ ಕಾರ್ಯ ಸಾಧುವಾಗುತ್ತದೆ ಎಂದು ಕಾದು ಕುಳಿತರು. ಆದರೆ ಭದ್ರೆ ಮಾತ್ರ ಮೊದಲಿನ ಸ್ಥಿತಿಯೇ ಇಲ್ಲಿ ಸರ್ಕಾರ ಕೇವಲ ಬಂಡವಾಳುದಾರರ ಮಾತನ್ನ ಕೇಳಿತೇ ವಿನಃ ಬರಗಾಲದಲ್ಲಿ ಬೆಂದು ಬೆಂಡಾಗಿರುವ ಮಾತನ್ನು ಆಲಿಸಲಿಲ್ಲ. ಇಂತಹ ಸರ್ಕಾರದ ನೀತಿಯ ಬಗ್ಗೆ ಬರಪೀಡಿತ ಜನತೆಯಲ್ಲಿ ಒಗ್ಗಟ್ಟಿನ ಮನೋಭಾವನೆ ಬೆಳೆದು ತಮ್ಮ ಹಕ್ಕನ್ನು ಪಡೆಯುವ ನಿಟ್ಟಿನಲ್ಲಿ ಸರ್ಕಾರಕ್ಕೆ ಹೆಚ್ಚಿನ ರೀತಿಯಲ್ಲಿ ಆಗ್ರಹಿಸಲು ಮುಂದಾದರು. ಚಳವಳಿಗಳನ್ನು ನಡೆಸಿದರು. ಹೋರಾಟಗಳನ್ನು ಮಾಡಿದರು. ಪಟ್ಟಣಗಳ ಬಂದ್ ಆಚರಿಸಿದರು. ರಸ್ತೆ ತಡೆ ಚಳವಳಿ ಮಾಡಿದರು. ಇಂತಹ ಒಂದು ಒಗ್ಗಟ್ಟಿನ ಪ್ರತಿ ರೂಪವೇ ಇಂದು ಈ ಯೋಜನೆಗೆ ಚಾಲನೆ ದೊರೆತಿದೆ.

೧. ಭದ್ರಾ ಮೇಲ್ದಂಡೆ ಯೋಜನೆಗಾಗಿ ಆಗ್ರಹ.

ಇಲ್ಲಿ 'ಆಗ್ರಹ' ಎಂದರೆ 'ಬೇಡಿಕೆ' ಎಂಬುದಾಗಿ ಗ್ರಹಿಸುವುದಾಗಿದೆ. ಅಂದರೆ ಮಧ್ಯ ಕರ್ನಾಟಕದ ಬರಪೀಡಿತ ಜಿಲ್ಲೆಗಳಾದ ಚಿತ್ರದುರ್ಗ, ತುಮಕೂರು, ಕೋಲಾರ, ಬಳ್ಳಾರಿ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಕಡಿಮೆ ಈ ಜಿಲ್ಲೆಗಳಿಗೆ ಯಾವುದೇ ನದಿಯ ಆಶ್ರಯವಿರುವುದಿಲ್ಲ, ಇದ್ದರೂ ಕೆಲವೇ ಪ್ರದೇಶಕ್ಕೆ ಸೀಮಿತವಾಗಿದೆ. ಇಂತಹ ಜಿಲ್ಲೆಗಳ ಬೇಡಿಕೆಯಂದರೆ ಭದ್ರಾ ಮೇಲ್ದಂಡೆ ಯೋಜನೆಯಡಿ ನಮಗೆ ನೀರು ಹರಿಸಿ ಬರಗಾಲವನ್ನು ನಿವಾರಿಸಿ, ಭದ್ರಾ ಮೇಲ್ದಂಡೆ ಯೋಜನೆಗೆ ತಕ್ಕಂತೆ ಈ ಬರಪೀಡಿತ ಪ್ರದೇಶಗಳ ಜನರು ಸರ್ಕಾರಕ್ಕೆ ಸುಮಾರು ೧೯೬೮ ರಿಂದ ಇಲ್ಲಿಯವರೆಗೆ (೨೦೦೮) ತಮ್ಮ ಬೇಡಿಕೆ ಈಡೇರಿಕೆಗೆ ಹಲವಾರು ಬಾರಿ ಹಲವಾರು ರೀತಿಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತಾ ಬಂದಿದ್ದಾರೆ. ಇವರ ಬೇಡಿಕೆಗಳೆಂದರೆ,

ಮಧ್ಯ ಕರ್ನಾಟಕದ ಬಯಲು ಸೀಮೆ ಪ್ರದೇಶಗಳು ಸ್ವಾತಂತ್ರ್ಯ ನಂತರದ ಕಾಲಾವಧಿಯಲ್ಲಿ ಯಾವುದೇ ರೀತಿಯಲ್ಲೂ ನೀರಾವರಿ ಸೌಕರ್ಯವೂ ಸೇರಿದಂತೆ ಸರ್ಕಾರಿ ಸೌಲಭ್ಯಗಳನ್ನು ಪಡೆಯುವಲ್ಲಿ ತೀವ್ರ ನಿರ್ಲಕ್ಷಿಸಲಾಗಿವೆ. ನಿರಂತರವಾಗಿ ಬರಗಾಲ ಅನುಭವಿಸುವ ಕರ್ನಾಟಕದ ಪ್ರದೇಶಗಳಲ್ಲಿ ಮಧ್ಯ ಕರ್ನಾಟಕದ ಈ ಬಯಲು ಸೀಮೆಯ ಪ್ರಾಂತ್ಯಗಳು ಮುಂಚೂಣಿಯಲ್ಲಿದ್ದು, ಸರ್ಕಾರಿ ಅಂಕಿ ಅಂಶಗಳ ಪ್ರಕಾರ ಕಳೆದ ನೂರು ವರ್ಷಗಳಲ್ಲಿ ಶೇಕಡಾ ೭೫ ಕ್ಕೂ ಹೆಚ್ಚು ಅವಧಿಯಷ್ಟು ಬರಗಾಲವನ್ನು ಅನುಭವಿಸಿದೆ.

ಈ ಪ್ರಾಂತ್ಯಗಳಲ್ಲಿ ಹೇಳಿಕೊಳ್ಳುವಂತಹ ಔದ್ಯೋಗಿಕ ಪ್ರಗತಿ ಇಲ್ಲವಾದುದರಿಂದಲೂ ವಾಣಿಜ್ಯ ವಹಿವಾಟುಗಳ ಭರಾಟೆ ಇಲ್ಲವಾದುದರಿಂದಲೂ, ಇತರೆಡೆಗೆ ಅಭಿವೃದ್ಧಿಯಾಗಿರುವ ಕೈಗಾರಿಕೋತ್ಪನ್ನಗಳು ಸ್ಥಳೀಯ ಮಾರುಕಟ್ಟೆಯನ್ನು ಆವರಿಸಿರುವುದರಿಂದ ಗೃಹೋದಯಿಗಳ ಪರಿಸ್ಥಿತಿ ಶೋಚನೀಯವಾಗಿರುವುದರಿಂದಲೂ, ಅಂತರ್ಜಲದ ಪ್ರಮಾಣ ಹಾಗೂ ಸರಾಸರಿ ಜಿಲ್ಲೆಯ ಜನತೆ ತಮ್ಮ ಉಳಿವಿಗಾಗಿ ತುಂಗಾಭದ್ರಾ ಉಪ ಪಾತ್ರದಿಂದ ಒದಗಿರುವ ನೀರಾವರಿ ಯೋಜನೆಯನ್ನು ಅವಲಂಬಿಸಿ ಕಾದುಕೊಂಡಿವೆ.

ಹಲವು ದಶಕಗಳಿಂದ ರಾಜಕೀಯ ಹಾಗೂ ತಾಂತ್ರಿಕ ಕಾರಣಗಳಿಂದಾಗಿ ನೆನೆಗುದಿಗೆ ಬಿದ್ದಿದ್ದ ಭದ್ರಾ ಮೇಲ್ದಂಡೆ ನೀರಾವರಿ ಯೋಜನೆ ಅನುಷ್ಠಾನಕ್ಕಾಗಿ ನೀರಾವರಿ ಹೋರಾಟ ಸಮಿತಿಯು ಕೈಗೊಂಡ ಹಾರಾಟ ಮತ್ತು ಜನಪ್ರತಿನಿಧಿಗಳ ಒತ್ತಡಗಳಿಗೆ ಸ್ಪಂಧಿಸಿದ ಈ ಹಿಂದಿನ ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರ ೨೦೦೩ ಆಗಷ್ಟ್ ತಿಂಗಳಿನಲ್ಲಿ ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಯ ಅನುಷ್ಠಾನಕ್ಕಾಗಿ ೨೮೧೩ ಕೋಟಿ ರೂಪಾಯಿಗಳ ಆಡಳಿತಸತ್ಮಾಕ ಮಂಜೂರಾತಿ ನೀಡುವ ಮುಖಾಂತರ ಜಿಲ್ಲೆಯ ಜನರ ನಿರೀಕ್ಷೆ ಈಡೇರಿಸುವ ಬಗ್ಗೆ ಒಂದು ಹೊಸ ಭರವಸೆಯನ್ನು ಹುಟ್ಟುಹಾಕಿದರು.

ಈಗಾಗಲೇ ಬಚಾವತ್ 'ಎ' ಸ್ಕೀಂನ ಅವಧಿ ಪೂರ್ಣಗೊಂಡಿದ್ದರೂ ಆ ಸ್ಕೀಂನ ಅಡಿಯಲ್ಲಿ ನಮಗೆ ಲಭ್ಯವಾಗಿ ಉಳಿದಿರುವ ೨೦ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು ಯೋಜನೆಯನ್ನು ಆರಂಭಮಾಡುವುದು. ಅದರೊಂದಿಗೆ ಸ್ಕೀಮ್ 'ಬಿ'ನಲ್ಲಿ ನಮಗೆ ಲಭ್ಯವಾಗುವ ಹೆಚ್ಚುವರಿ ೧೮೦ ಟಿ.ಎಂ.ಸಿ. ನೀರಿನಲ್ಲಿ ೭೦ ಟಿ.ಎಂ.ಸಿ. ನೀರನ್ನು ತುಂಗಭದ್ರಾ ಉಪಪಾತ್ರದಿಂದ ಬಳಸಿಕೊಂಡು ಯೋಜನೆಯನ್ನು ಪೂರ್ಣಗೊಳಿಸುವುದು.

ಇದರಂತೆ ಒಟ್ಟು ೭೦ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು ೧೨,೧೫,೦೦೦ ಎಕರೆ ಜಮೀನಿಗೆ ನೀರಾವರಿ ಒದಗಿಸಬಹುದಾಗಿದೆ. ಈ ಯೋಜನೆಯಿಂದ ನೀರಾವರಿ ಸೌಕರ್ಯ ಪಡೆಯುವ ಪ್ರದೇಶಗಳೆಂದರೆ ಚಿತ್ರದುರ್ಗ ಜಿಲ್ಲೆಯ ೬ ತಾಲ್ಲೂಕುಗಳು, ದಾವಣಗೆರೆ

ಜಿಲ್ಲೆಯ ಜಗಳೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ, ಶಿರಾ ಪಾವಗಡ ತಾಲ್ಲೂಕುಗಳು ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರಿಕೆರೆ ತಾಲ್ಲೂಕುಗಳು.

ಈ ನಿಟ್ಟಿನಲ್ಲಿ ಸಮಿತಿಯು ಹಲವಾರು ಸಲ ಸರ್ಕಾರದ ಗಣ್ಯರನ್ನು ಭೇಟಿ ಮಾಡಿ ಮನವಿಗಳನ್ನು ಸಲ್ಲಿಸಿದೆ. ಈಗ ಆಡಳಿತಾತ್ಮಕ ಮಂಜೂರಾತಿ ದೊರಕಿಸಿಕೊಂಡಿರುವ ಈ ಯೋಜನೆಗೆ ಮಲೆನಾಡು ಜಿಲ್ಲೆಗಳ ಕೆಲವು ಹಿತಾಸಕ್ತಿ ಗುಂಪುಗಳ ವಿರೋಧ ವ್ಯಕ್ತಪಡಿಸುತ್ತಿವೆ. ಈ ಸಂದರ್ಭದಲ್ಲಿ ನೀರಾವರಿ ಹೋರಾಟ ಸಮಿತಿಯು ಮಲೆನಾಡಿನ ಉಳಿವಿನ ಬಗ್ಗೆ ನಮ್ಮ ಕಾಳಜಿ ಇರುವುದನ್ನು ಪ್ರಕಟಿಸುತ್ತಿದೆ. ಅದಕ್ಕಾಗಿ ಈ ಕೆಳಗಿನ ಕೆಲವು ಹೊಂದಾಣಿಕೆಗಳೊಂದಿಗೆ ಯೋಜನೆಯನ್ನು ಜಾರಿಗೊಳಿಸಲು ಮುಂದಾಗಬಹುದು. ಆ ಮುಖಾಂತರ ಬರಗಾಲದ ಸೀಮೆಗಳಿಗೆ ನ್ಯಾಯ ದೊರೆಯುವುದರೊಂದಿಗೆ ಮಲೆನಾಡು ಪ್ರಾಂತ್ಯಗಳ ಪರಿಸರ ರಕ್ಷಣೆಯ ಕಾರ್ಯವು ಈಡೇರಿದಂತಾಗುವುದು ಎಂಬುವುದು ಬಯಲು ನಾಡಿಗರ ಬೇಡಿಕೆ.

ಬಯಲು ಸೀಮೆಯ ಪ್ರಾಂತ್ಯಗಳಿಗೆ ನೀರಾವರಿ ಕಲ್ಪಿಸಲು ಉದ್ದೇಶಿಸಿರುವ ಈ ಯೋಜನೆ ಯಾವುದೋ ಒಂದು ಅಥವಾ ಎರಡು ದೊಡ್ಡ ಅಣೆಕಟ್ಟುಗಳನ್ನು ಕಟ್ಟುವ ಮುಖಾಂತರ ಹೆಚ್ಚಿನ ಅರಣ್ಯ ನಾಶಕ್ಕೆ ಕಾರಣವಾಗುತ್ತದೆ ಎಂಬುದು ಮಲೆನಾಡು ಪ್ರಾಂತ್ಯದ ಪರಿಸರ ವಾದಿಗಳ ಪ್ರಮುಖ ಆಕ್ಷೇಪವಾಗಿದೆ.

ದೊಡ್ಡ ಅಣೆಕಟ್ಟುಗಳನ್ನು ಕಟ್ಟಿ, ನೀರು ನಿಲ್ಲಿಸುವ ಪ್ರಯತ್ನಗಳ ಬದಲಾಗಿ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಹೆಚ್ಚುವರಿ ನೀರು ಲಭ್ಯವಿರುವ ಕಡೆ ಸಣ್ಣ ಪ್ರಮಾಣದ ಪಿಕಪ್ ಅಣೆಕಟ್ಟುಗಳನ್ನು ನಿರ್ಮಿಸುವ ಮುಖಾಂತರ ಆ ನೀರನ್ನು ತಂದು ಬಯಲು ಸೀಮೆಯ ಪ್ರದೇಶಗಳಲ್ಲಿ ಈಗ ಲಭ್ಯವಿರುವ ಜಲ ಸಂಗ್ರಹದ ಅವಕಾಶಗಳನ್ನು ಬಳಸಿಕೊಂಡು ನೀರನ್ನು ಬಳಕೆಗೆ ತಂದುಕೊಳ್ಳಬಹುದಾಗಿದೆ. ಉದಾಹರಣೆಗೆ ವಾಣಿವಿಲಾಸ ಸಾಗರ, ಭರಮಸಾಗರ ಕೆರೆ ಮುಂತಾದ ತಕ್ಕಷ್ಟು ಜಲಸಂಗ್ರಹ ಸಾಮರ್ಥ್ಯವಿರುವ ಸಂರಚನೆಗಳನ್ನು ಈ ಕಾರ್ಯಕ್ಕೆ ಬಳಸಿಕೊಳ್ಳಬಹುದಾಗಿದೆ. ಇದಲ್ಲದೆ, ಸೂಕ್ತವೆನಿಸುವ ಕಡೆ ಮತ್ತೆ ಕೆಲವು ಜಲಸಂಗ್ರಹಗಾರಗಳನ್ನು ಬಯಲು ಸೀಮೆಯಲ್ಲಿ ನಿರ್ಮಿಸಿ, ಅವುಗಳಿಗೆ ತುಂಗಭದ್ರಾ ಪಾತ್ರದಲ್ಲಿ ಸಂಗ್ರಹಿಸುವ ನೀರನ್ನು ಪೂರೈಸಬಹುದಾಗಿದೆ. ಇದರಿಂದ ಮಲೆನಾಡಿನಲ್ಲಿ ಹೆಚ್ಚುವರಿ ಕಾಡನ್ನು ಮುಳುಗಿಸುವ ಆಕ್ಷೇಪ ನಿವಾರಣೆಯಾಗುತ್ತದೆ.

ಜಿಲ್ಲೆಯಲ್ಲಿ ನೀರಾವರಿ ಕೆರೆಗಳ ವ್ಯವಸ್ಥಿತ ಜಾಲವು ಅಸ್ತಿತ್ವದಲ್ಲಿದ್ದು, ಆ ಜಾಲವನ್ನು ಪುನರ್‌ಬಳಕೆಗೆ ಯೋಗ್ಯವಾಗುವಂತೆ ಸುಧಾರಣೆಗೊಳಪಡಿಸಿದರೆ ಭದ್ರಾ ಮೇಲ್ದಂಡೆ ನೀರಾವರಿ

ಯೋಜನೆ ಎಂಬ ಹೆಸರಿನಲ್ಲಿ ಅನುಷ್ಠಾನಗೊಳ್ಳಲಿರುವ ನೀರಾವರಿ ಯೋಜನೆಯು ಒಂದು ಪ್ರಮಾಣದಲ್ಲಿ ಜಿಲ್ಲೆಯ ಜಮೀನುಗಳಿಗೆ ನೀರೊದಗಿಸುವುದಲ್ಲದೆ, ಅಂತರ್ಜಲ ಮರುಪುರಾಣಕ್ಕೂ ನೆರವಾಗುವ ಮುಖಾಂತರ ಕೃಷಿಯನ್ನು ಸದೃಢಗೊಳಿಸುತ್ತದೆ.

ಹೋರಾಟ ಸಮಿತಿಯ ಮುಖ್ಯ ಕಾಳಜಿಯೆಂದರೆ, ಈವರೆಗೆ ನಮಗೆ ಲಭ್ಯವಾಗದೇ ಉಳಿದ ತುಂಗಭದ್ರಾ ಉಪಪಾತ್ರದ ನೀರಾವರಿ ಪಾಲನ್ನು ಪಡೆಯುವುದಾಗಿಯೇ ಹೊರತು ಪರಿಸರ ಅಸಮತೋಲನ ಉಂಟುಮಾಡುವ ಏಕೈಕ ಬೃಹತ್ ನೀರಾವರಿ ಯೋಜನೆಯನ್ನು ಪಡೆಯುವುದಾಗಿಲ್ಲ. ಲಭ್ಯವಿರುವ ಆಧುನಿಕ ತಂತ್ರಜ್ಞಾನ ಮತ್ತು ನೀರು ಬಳಕೆಯ ತಿಳುವಳಿಕೆಗಳನ್ನು ಸೂಕ್ತವಾದ ರೀತಿಯಲ್ಲಿ ಅಳವಡಿಸಿಕೊಳ್ಳುವ ಮುಖಾಂತರ ಹೆಚ್ಚಿನ ಪ್ರಮಾಣದ ನಷ್ಟವನ್ನು ಮಲೆನಾಡಿನ ಪ್ರಾಂತ್ಯದಲ್ಲಿ ಉಂಟುಮಾಡದೆ ಬಯಲು ಸೀಮೆಗೆ ನೀರುಣಿಸುವ ಒಂದು ಸಮಗ್ರ ನೀರು ಸೌಲಭ್ಯದ ವ್ಯವಸ್ಥೆಯನ್ನು ಜಾರಿಗೊಳಿಸಲೆಂಬುದು ಸಮಿತಿಯ ಒತ್ತಾಸೆಯಾಗಿದೆ.

ವಾಸ್ತವವಾಗಿ ಯೋಜನೆ ಹೆಸರು ಭದ್ರಾ ಮೇಲ್ದಂಡೆ ಎಂದಿರುವುದಾದರೂ ಈಗ ನಮಗೆ ಹೆಚ್ಚುವರಿ ನೀರು ಲಭ್ಯವಿರುವುದು ಮತ್ತು ಕೃಷ್ಣಕೊಳ್ಳದ 'ಬಿ' ಸ್ಕೀಮ್‌ನಡಿಯಲ್ಲಿ ನಮಗೆ ನೀರು ಲಭ್ಯತೆಯ ಅವಕಾಶವಿರುವುದು ತುಂಗಾ ನದಿಯಿಂದ ಎಂಬುದು ವಾಸ್ತವ. ತುಂಗಾನದಿ ನೀರನ್ನು ಬಯಲು ಸೀಮೆ ಪ್ರಾಂತ್ಯಗಳಿಗೆ ತರುವುದಕ್ಕೆ ಕೆಲವು ಕಡೆ ಲಿಫ್ಟ್ ಮಾಡುವ ಸೌಕರ್ಯವನ್ನು ಬಳಸಿಕೊಳ್ಳಬೇಕಾಗುತ್ತದೆ. ಸೂಕ್ತ ಎಲಿವೇಷನ್ ಇರುವ ಜಾಗಗಳನ್ನು ಗುರುತಿಸಿ, ಅಂತಹ ಕಡೆ ನೀರನ್ನು ಲಿಫ್ಟ್ ಮಾಡುವ ಮೂಲಕ ಮಳೆಗಾಲದಲ್ಲಿ ಹೆಚ್ಚುವರಿಯಾಗಿ ವ್ಯರ್ಥವಾಗಿ ಸಮುದ್ರ ಸೇರುವ ನೀರನ್ನು ಈ ಯೋಜನೆಗಾಗಿ ಬಳಸಿಕೊಳ್ಳುವ ಸಾಧ್ಯತೆಯನ್ನು ಈ ನೀರಾವರಿ ಯೋಜನೆ ಒಳಗೊಳ್ಳಬೇಕಾಗಿದೆ.

ಇದಲ್ಲದೆ ಪಶ್ಚಿಮಾಭಿಮುಖಿಯಾಗಿ ಹರಿಯುವ ವ್ಯರ್ಥವಾಗಿ ಸಮುದ್ರ ಸೇರುವ ಕೆಲವು ನದಿಗಳ ನೀರನ್ನು ಲಿಫ್ಟ್ ಮಾಡಿ, ಭದ್ರಾ ಮೇಲ್ದಂಡೆ ಯೋಜನೆ ಎಂದು ಕರೆಯಲ್ಪಡುವ ಈ ಯೋಜನೆಗಾಗಿ ಬಳಸಿಕೊಳ್ಳಬಹುದಾಗಿದೆ.

ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯು ತಾಂತ್ರಿಕವಾಗಿ ಯಾವುದೋ ಒಂದು ನಿರ್ದಿಷ್ಟ ನೀರಾವರಿ ಯೋಜನೆಗಾಗಿ ಮಾತ್ರ ತನ್ನ ಆಗ್ರಹ ಪಡಿಸುತ್ತಿಲ್ಲ. ಬದಲಾಗಿ ತುಂಗಭದ್ರಾ ಉಪಪಾತ್ರದಲ್ಲಿ ನೀರು ಲಭ್ಯವಿರುವ ಹಲವು ನದಿ ಮತ್ತು ಉಪನದಿಗಳ ನೀರನ್ನು ಬೇರೆ ಬೇರೆ ಸೂಕ್ತ ತಾಂತ್ರಿಕತೆಯ ಮುಖಾಂತರ ಒಟ್ಟುಗೂಡಿಸಿ, ಅವುಗಳನ್ನು ಮಳೆಗಾಲದ ಸಂದರ್ಭದಲ್ಲಿ ಸಂಗ್ರಹಿಸಿ ಬಯಲು ಸೀಮೆಯ ಜಲಸಂಗ್ರಹಾಗಾರಗಳಿಗೆ ಪೂರ್ಣ ಮಾಡಿ ಶೇಖರಿಸುವ ಮೂಲಕ ಬಯಲು ಸೀಮೆಯ ಪ್ರಾಂತ್ಯಗಳಿಗೆ ವ್ಯವಸಾಯಕ್ಕೆ ಬಳಸಿಕೊಳ್ಳಲು ಅನುವು ಮಾಡಿಕೊಡಬಹುದಾಗಿದೆ.

ಸಂಪ್ರದಾಯಿಕ ನೀರಾವರಿ ಅಣೆಕಟ್ಟುಗಳ ಪದ್ಧತಿಗಳನ್ನು ಮಾತ್ರವೇ ಗಮನದಲ್ಲಿಟ್ಟುಕೊಂಡು ಅಪಾರ ಪ್ರಮಾಣದ ಅರಣ್ಯ ಹಾಗೂ ಗ್ರಾಮಗಳ ಮುಳುಗಡೆ ಎಂಬ ಭೀತಿಯನ್ನು ಜನರಲ್ಲಿ ಭಿತ್ತಿ ವಿರೋಧವನ್ನು ಹೆಚ್ಚಿಸುತ್ತಿರುವವರ ಆಧಾರ ರಹಿತ ವಾದಗಳಿಗೆ ಸೂಕ್ತ ವಿವರಣೆ ನೀಡುವ ದಿಸೆಯಲ್ಲಿ ಸರ್ಕಾರವು ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಗೆ ಅನುಷ್ಠಾನದ ಕ್ರಿಯಾ ಯೋಜನೆಯನ್ನು ಜನತೆಗೆ ಒದಗಿಸಬೇಕು ಎಂಬುದು ಆಗ್ರಹಗಾರರ ವಿನಂತಿಯಾಗಿದೆ.

ಅಭಯಾರಣ್ಯ ಮುಳುಗಡೆ, ಗ್ರಾಮಗಳ ಮುಳುಗಡೆ ಮುಂತಾದ ತಾಂತ್ರಿಕಾಂಶಗಳು ಜನರಿಗೆ ಸೂಕ್ತವಾಗಿ ಅಂದಾಜಿಗೆ ಸಿಕ್ಕಿಲ್ಲವಾದುದರಿಂದಲೇ ಮಲೆನಾಡು ಪ್ರಾಂತ್ಯಗಳಲ್ಲಿ ಈ ನೀರಾವರಿ ಯೋಜನೆಯ ಬಗ್ಗೆ ಅಪಸ್ವರ ಉಂಟಾಗಲು ಕಾರಣವಾಗಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಯೋಜನೆಯ ಕ್ರಿಯಾ ಯೋಜನೆಯನ್ನು ಸಾಧ್ಯವಾದಷ್ಟು ಬೇಗನೆ ರೂಪಿಸಿ ಅದು ಒಳಗೊಳ್ಳಲಿರುವ ವಿವಿಧ ಹಂತಗಳ ಹಾಗೂ ವಿವಿಧ ರೂಪಗಳ ನೀರು ಸಂಗ್ರಹ ಪೂರೈಕೆಯ ಸಾಧ್ಯಗಳನ್ನು ಜನರಿಗೆ ವಿವರಿಸುವ ಮುಖಾಂತರ ಈ ಬಗ್ಗೆ ಅನಾವಶ್ಯಕ ವಿರೋಧ ಉಂಟಾಗುವುದನ್ನು ನಿವಾರಿಸಬಹುದಾಗಿದೆ.

ಚಿತ್ರದುರ್ಗ ಜಿಲ್ಲೆಗೆ ನೀರಾವರಿ ಯೋಜನೆ ಬೇಕೆಂದು ಆಗ್ರಹಿಸುತ್ತಿರುವ ಈ ಸನ್ನಿವೇಷದಲ್ಲಿ ನಾವು ಸಾಂಪ್ರದಾಯಿಕ ನೀರಾವರಿ ಬೆಳೆಗಳ ಕಲ್ಪನೆಯನ್ನು ಹೊಂದಿಲ್ಲ ಎಂಬ ಬಗ್ಗೆ ಕೂಡ ಸ್ಪಷ್ಟೀಕರಣ ನೀಡುತ್ತಿದ್ದೇವೆ. ವರ್ಷವಿಡೀ ನೀರು ಪೂರೈಕೆಯನ್ನು ಕೇಳುವ ಬೆಳೆಗಳನ್ನಾಗಲೀ ಅತಿ ಹೆಚ್ಚು ನೀರು ಬಳಕೆಯ ಬೆಳೆಗಳನ್ನಾಗಲೀ ಬೆಳೆಯುವ ಸಾಂಪ್ರದಾಯಿಕ ನೀರಾವರಿ ಕಲ್ಪನೆಯನ್ನು ಹೊರತುಪಡಿಸಿ, ಅರೆ ಜಿಲ್ಲೆಯ ಕೃಷಿ ಪದ್ಧತಿಯನ್ನು ಅಭಿವೃದ್ಧಿ ಪಡಿಸಬೇಕಾದ ಅಗತ್ಯವನ್ನು ನಾವು ಮನಗಂಡಿದ್ದೇವೆ. ಆದ್ದರಿಂದ ಸಾರಾಂಶದಲ್ಲಿ ನಾವು ಸೂಚಿಸುತ್ತಿರುವ ಬೇಡಿಕೆಗಳು ಯಾವುವೆಂದರೆ

೧. ಹಲವು ರೂಪಗಳಲ್ಲಿ ತುಂಗಭದ್ರಾ ಪಾತ್ರದ ಹಲವು ಜಲಮೂಲಗಳಿಂದ ನೀರು ಸಂಗ್ರಹಿಸಿ ಒಟ್ಟು ೯೦ ಟಿ.ಎಂ.ಸಿ. ನೀರನ್ನು ಒದಗಿಸುವುದು.

೨. ನೀರು ಶೇಖರಿಸಲು ಅಗತ್ಯವಾದ ಸಂರಚನೆಗಳನ್ನು ಪ್ರಧಾನವಾಗಿ ಬಯಲು ಸೀಮೆಯಲ್ಲಿಯೇ ರೂಪಿಸುವುದು. ಹಾಗೂ ಸಾಧ್ಯವಿರುವ ಕಡೆಗಳಲ್ಲೆಲ್ಲ ಈ ಸೂಕ್ಷ್ಮವಾಗಿ ಉಪಯೋಗಿಸಿಕೊಳ್ಳದೆ ವ್ಯರ್ಥವಾಗಿರುವ ನೀರು ಶೇಖರಣಾ ವ್ಯವಸ್ಥೆಗಳನ್ನೇ ಬಳಸಿಕೊಳ್ಳುವುದು. ಇದರೊಳಕ್ಕೆ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೆರೆ ಕುಂಟೆಗಳ ಜಾಲವನ್ನು ಒಳಗೊಳ್ಳುವುದು.

೩. ಆಧುನಿಕ ತಂತ್ರಜ್ಞಾನ ಮತ್ತು ನೀರು ಬಳಕೆಯ ಜ್ಞಾನವನ್ನು ಆಧರಿಸಿ ಅರಣ್ಯ ಮುಳುಗಡೆಯ ಪ್ರಮಾಣವನ್ನು ಕನಿಷ್ಠಗೊಳಿಸುವುದು.

೪. ಅಂತರ್ಜಲ ಮರುಪುರಾಣ ಹಾಗೂ ಮಳೆ ನೀರು ಕೊಯ್ಲು ಪದ್ಧತಿಗಳಿಗೆ ಆದ್ಯತೆ ಎಂದು ಪರಿಗಣಿಸಿ ಹೆಚ್ಚುವರಿ ಅನುದಾನವನ್ನು ಈ ಪ್ರದೇಶಕ್ಕೆ ಬಿಡುಗಡೆಗೊಳಿಸಿ, ಅದರಿಂದ ಪುನರ್ಬಳಕೆಗೆ ಒದಗುವ ನೀರು ಕೂಡ ಬೆಳೆಗಳಿಗೆ ನೀರುಣಿಸುವ ಒಂದು ಸಾಧ್ಯತೆಯನ್ನು ರೂಪಗೊಳಿಸುವುದು.

೫. ನೀರಾವರಿಯಿಂದ ಒದಗುವ ನೀರನ್ನು ಹೆಚ್ಚು ನೀರು ಆಧಾರದ ಮೇಲೆ ಬೆಳೆಗಳನ್ನು ತಲೆ ಭಾಗದವರು ಬಳಸಿ ತಳಭಾಗದವರಿಗೆ ನೀರೊದಗದಿರುವ ಅಪವ್ಯವಸ್ಥೆಯ ತೊಂದರೆಯನ್ನು ಬಗೆಹರಿಸಲು ಸೂಕ್ತ ಬೆಳೆ ಪದ್ಧತಿ ಹಾಗೂ ಸಮರ್ಪಕ ನೀರು ನಿರ್ವಹಣೆಯ ನಿಯಮಾವಳಿಯನ್ನು ರೂಪಿಸಿ, ಜಾರಿಗೊಳಿಸಿ ಆ ಮುಖಾಂತರ ಪ್ರಸ್ತುತ ನೀರಾವರಿ ಯೋಜನೆಗೆ ಒಳಪಟ್ಟಿರುವ ಪ್ರದೇಶಗಳ ರೈತರಿಗೂ ಹೊಸದಾಗಿ ನೀರಾವರಿ ಯೋಜನೆಗಳಿಗೆ ಒಳಪಡಲಿರುವ ಪ್ರದೇಶಗಳ ರೈತರಿಗೂ ತಿಕ್ಕಾಟಗಳುಂಟಾಗುವುದನ್ನು ನಿವಾರಿಸುವುದು.

ಮೇಲ್ಕಂಡ ಅಂಶಗಳು ನೀರಾವರಿ ಹೋರಾಟ ಸಮಿತಿಯ ಅನಿಸಿಕೆಗಳಾಗಿದ್ದು, ತಜ್ಞರ ಸೂಚನೆಯ ಮೇರೆಗೆ ಸೂಕ್ತ ಮಾರ್ಪಾಡುಗಳನ್ನು ಅಳವಡಿಸಿಕೊಂಡು ನಾವು ಅಗತ್ಯ ಹೊಂದಾಣಿಕೆ ಮತ್ತು ಮಾರ್ಪಾಡುಗಳಿಗೆ ಸಿದ್ದರಿದ್ದೇವೆ.

ಅತ್ಯಂತ ಪ್ರಯಾಸದಿಂದ ಹಲವು ದಶಕಗಳ ವಿಳಂಬದೊಂದಿಗೆ ಮಂಜೂರಾತಿ ಪಡೆದಿರುವ ಈ ನೀರಾವರಿ ಯೋಜನೆ ಶೀಘ್ರವೇ ಕಾರ್ಯಾನುಷ್ಠಾನಗೊಳಿಸಲು ಅಗತ್ಯವಾದ ಎಲ್ಲಾ ಬೆಂಬಲವನ್ನೂ ತಾವು ನೀಡುತ್ತೀರೆಂದು ನಿರೀಕ್ಷಿಸುತ್ತಿದ್ದೇವೆ. ಸತತ ಬರಗಾಲಕ್ಕೆ ಗುರಿಯಾಗಿ ಬಸವಳಿದಿರುವ ಮಧ್ಯ ಕರ್ನಾಟಕದ ಬಡರೈತರ ಬವಣೆ ಪರಿಹರಿಸುವ ಈ ಮಹತ್ವ ಕಾರ್ಯಕ್ಕೆ ತಮ್ಮಿಂದ ದೊರೆಯುವ ಸಕರಾತ್ಮಕ ಬೆಂಬಲಕ್ಕೆ ನೀರಾವರಿ ಹೋರಾಟ ಸಮಿತಿಯು ಚಿರಋಣಿಯಾಗಿರುತ್ತದೆಂದು ಈ ಮೂಲಕ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತಿದ್ದೇವೆ.[೧೦]

ಇಂಥ ಹಲವಾರು ಬೇಡಿಕೆಗಳನ್ನು ಇಟ್ಟುಕೊಂಡು ರಾಜ್ಯಸರ್ಕಾರಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ತಮ್ಮ ಬೇಡಿಕೆ ಈಡೇರಿಕೆಗಾಗಿ ಹಲವಾರು ಬಾರಿ ಅಂದರೆ ೧೯೬೮ರಿಂದ ೨೦೦೮ನೇ ಇಸವಿಯವರೆಗೆ ನೀರಾವರಿ ಯೋಜನೆಗಳನ್ನು ಜಾರಿ ಮಾಡುವಂತೆ ಆಗ್ರಹಿಸಿರುವುದು ನಾನು ಕ್ಷೇತ್ರ ಕಾರ್ಯಕ್ಕೆ ಹೋದಂತ ಸಂದರ್ಭದಲ್ಲಿ ಹಲವಾರು ಹೋರಾಟಗಾರರನ್ನು ಮತ್ತು ರಾಜಕೀಯ ದುರೀಣರನ್ನು ಸಂದರ್ಶನ ಮಾಡಿದಾಗ ಅವರಿಂದ ಮಾಹಿತಿಯನ್ನು ಪಡೆದು ಈ ಮುಂದಿನಂತೆ ಆಗ್ರಹದ ಕೆಲವೊಂದು ನಿದರ್ಶನಗಳನ್ನು ಇಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಚಿತ್ರದುರ್ಗದ ಜಿಲ್ಲಾ ನೀರಾವರಿ ಹೋರಾಟ ಸಮಿತಿಯ ಪದಾಧಿಕಾರಿಗಳು. ಅಂದರೆ ಈ ಒಂದು ಸಮಿತಿ ದುರ್ಗದ ಜನತೆಗೆ ನೀರಾವರಿ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸ್ಥಾಪಿತವಾದಂತ

ಸಮಿತಿಯಾಗಿದೆ. ಇದು ೧೯೯೬ರಲ್ಲಿ ಪ್ರಾರಂಭವಾಯಿತು. ಈ ಸಮಿತಿಯ ಮೊದಲ ಅಧ್ಯಕ್ಷರು, ರಾಜ್ಯಸಭಾ ಸದಸ್ಯರಾದ ಹೆಚ್. ಹನುಮಂತಪ್ಪ, ಸಂಚಾಲಕರಾದ ಡಾ. ಬಂಜಗೆರೆ ಜಯಪ್ರಕಾಶ್, ಪತ್ರಕರ್ತರಾದ ಚಿಕ್ಕಪ್ಪನಹಳ್ಳಿ ಷಣ್ಮುಖ, ಉಪಾಧ್ಯಕ್ಷ ಕೆ. ನಾರಪ್ಪ, ಹೋರಾಟ ಸಮಿತಿ ಸಂಚಾಲಕ ನರೇನಹಳ್ಳಿ ಅರುಣ್‌ಕುಮಾರ್, ಜಿ.ಎಸ್. ಉಜ್ಜಿನಪ್ಪ, ಮುರುಘರಾಜೇಂದ್ರ ಒಡೆಯರ್, ಖಜಾಂಚಿ ಕೆ.ಆರ್. ದಯಾನಂದ್ ಚಳ್ಳಕೆರೆ ಬಸವರಾಜ, ಮುಂತಾದ ಮುಖಂಡರ ನೇತೃತ್ವದಲ್ಲಿ ಸ್ಥಾಪಿತವಾದ ಚಿತ್ರದುರ್ಗ ನೀರಾವರಿ ಹೋರಾಟ ಸಮಿತಿ. ಈ ಯೋಜನೆಯ ಜಾರಿಗೆ ಸಾಕಷ್ಟು ಪ್ರಮಾಣದಲ್ಲಿ ಒತ್ತಾಯಿಸಿರುವುದನ್ನು ಕಾಣಬಹುದಾಗಿದೆ. ಇಂತಹದೇ ಮತ್ತೊಂದು ಸಮಿತಿಯಾದ ತುಮಕೂರು ಅಪ್ಪಾಸ್ ಸಮಿತಿ ಕೂಡ ಅಷ್ಟೇ ಪ್ರಬಲವಾಗಿ ಯೋಜನೆ ಜಾರಿಗೆ ಆಗ್ರಹಪಡಿಸಿದೆ.

೧೯೯೮ರ ದಶಕದಲ್ಲಿ ಕರ್ನಾಟಕದ ನೀರಾವರಿ ಸಚಿವರಾಗಿದ್ದ ಕೆ.ಎಸ್. ನಾಗೇಗೌಡರು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿಗೆ ಆಗಮಿಸಿದಂತೆ ಸಂದರ್ಭದಲ್ಲಿ ಚಿತ್ರದುರ್ಗ ನೀರಾವರಿ ಹೋರಾಟದ ಸಮಿತಿಯ ಪದಾಧಿಕಾರಿಗಳು ಸಚಿವರಿಗೆ ಭದ್ರಾ ಮೇಲ್ದಂಡೆ ಜಾರಿಯ ಬಗ್ಗೆ ಮನವಿ ಪತ್ರ ಸಲ್ಲಿಸಿ ನೀರಾವರಿಗೆ ಆಗ್ರಹಿಸಿದರುವುದನ್ನು ಹೋರಾಟ ಸಮಿತಿಯ ಪದಾಧಿಕಾರಿಗಳಲ್ಲಿ ಚಿಕ್ಕಪ್ಪನಹಳ್ಳಿ ಷಣ್ಮುಖರವರನ್ನು ನಾನು ಸಂದರ್ಶನ ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳಿದರು. ಸಮಿತಿ ಸಚಿವರಿಗೆ ಸಲ್ಲಿಸಿದ ಮನವಿಯೇನೆಂದು ನೋಡಿದಾಗ, “ಮಧ್ಯ ಕರ್ನಾಟಕ ಜಿಲ್ಲೆಗಳಾದ ಚಿತ್ರದುರ್ಗ, ಬಳ್ಳಾರಿ, ತುಮಕೂರು, ಚಿಕ್ಕಮಗಳೂರು ಮತ್ತು ದಾವಣಗೆರೆ ಜಿಲ್ಲೆಗಳು ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿದ್ದು ರೈತಾಪಿ ಜನರ ಬದುಕು ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಈ ಪ್ರದೇಶದ ನೆಲಗಳಿಗೆ ನೀರುಣಿಸಲು ಬಚಾವತ್ ‘ಬಿ’ ಸ್ಕೀಂನಲ್ಲಿ ಸಂಪೂರ್ಣ ಅವಕಾಶವಿದ್ದು ಕನಿಷ್ಟ ೧೦೦ ಟಿ.ಎಂ.ಸಿ. ನೀರು ಒದಗಿಸುವ ಯೋಜನೆಯನ್ನು ಕೈಗೊಳ್ಳಬೇಕೆಂದು ಆಗ್ರಹಪಡಿಸಿದರು.

ಮುಂದುವರೆಯುತ್ತಾ ಕ್ರಿ.ಶ. ೨೦೦೦ ಮೇ ೩೧ರ ನಂತರ ಜಾರಿಯಾಗಬೇಕಾಗಿರುವ ಬಚಾವತ್ ‘ಬಿ’ ಸ್ಕೀಂನಲ್ಲಿ ರಾಜ್ಯದ ಪಾಲಿಗೆ ೧೮೩ ಟಿ.ಎಂ.ಸಿ. ನೀರು ಲಭ್ಯವಾಗುತ್ತದೆ. ಈವರೆಗೆ ಬಚಾವತ್ ‘ಎ’ ಸ್ಕೀಂನಲ್ಲಿ ಲಭ್ಯವಾದ ಕೃಷ್ಣ ಕಣಿವೆಯ ನೀರಾವರಿ ಯೋಜನೆಯ ನೀರಿನಲ್ಲಿ ೬೧೩ ಟಿ.ಎಂ.ಸಿ. ನೀರು ಬಳಸಿ ೪೪.೨೫ ದಶಲಕ್ಷ ಎಕರೆ ಜಮೀನಿಗೆ ಉತ್ತರ ಕರ್ನಾಟಕ ಜಿಲ್ಲೆಗಳಿಗೆ ನೀರು ಒದಗಿಸಲಾಗಿದೆ. ಬಚಾವತ್ ‘ಬಿ’ ಸ್ಕೀಂನಲ್ಲಿ ಮಧ್ಯ ಕರ್ನಾಟಕಕ್ಕೆ ೧೦೦ ಟಿ.ಎಂ.ಸಿ. ನೀರು ಒದಗಿಸಲು ಅವಕಾಶವಿದ್ದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಯೋಜನೆ ತಯಾರಿಸಿ ಕಳುಹಿಸಬೇಕೆಂದು ಕೇಂದ್ರವು ಬಚಾವತ್ ‘ಬಿ’ ಸ್ಕೀಂನ್ನು ಕೂಡಲೇ ಪ್ರಕಟಿಸಲು ಸಮಿತಿ ಆಗ್ರಹಪಡಿಸಿತು. ಅಲ್ಲದೆ ಬಚಾವತ್ ‘ಬಿ’ ಸ್ಕೀಂ ಆರಂಭವಾಗಲು ಒಂದೂವರೆ ವರ್ಷ ಮಾತ್ರ ಬಾಕಿ ಉಳಿದಿದ್ದು ಈ ಅವಧಿಯಲ್ಲಿ ರಾಜ್ಯ ಸರ್ಕಾರ ‘ನ್ಯಾಯ

ಮಂಡಳಿ' ಮುಂದೆ ಮಂಡಿಸಲು ಸಮರ್ಥವಾದ ತಯಾರಿ, ನೀರಾವರಿ ಯೋಜನೆಗಳ ಸ್ಥಳ ಸಮೀಕ್ಷೆ ಯೋಜನಾ ಪಟ್ಟಿ ತಯಾರಿಕೆ”[೧೧] ಮುಂತಾದ ಕೆಲಸಗಳನ್ನು ಕೂಡಲೇ ಕೈಗೆತ್ತಿಕೊಂಡು ಸಂಪೂರ್ಣಗೊಳಿಸಬೇಕೆಂದು ಮನವಿ ಪತ್ರದಲ್ಲಿ ಆಗ್ರಹಿಸಿರುವುದನ್ನು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಉಪಾಧ್ಯಕ್ಷ ಕೆ. ನಾರಪ್ಪ, ಕಾರ್ಯದರ್ಶಿ ಮಂಡಳಿ ಸಂಚಾಲಕ ಚಿಕ್ಕಪ್ಪನಹಳ್ಳಿ ಷಣ್ಮುಖ, ಹೋರಾಟ ಸಮಿತಿ ಸಂಚಾಲಕ ನರೇನಹಳ್ಳಿ ಅರುಣ್ ಕುಮಾರ್, ಜಿ.ಎಸ್. ಉಜ್ಜಿನಪ್ಪ, ಕೆ. ಆರ್. ದಯಾನಂದ್ ಮುಂತಾದವರು ಉಪಸ್ಥಿತರಿದ್ದರು ಎಂಬುದನ್ನು ಅವತ್ತಿನ ಹಿಂದಿನ ದಿನ ಪತ್ರಿಕೆಗಳ ವಾರ್ತೆಯಲ್ಲಿ ಈ ವಿಷಯ ಪ್ರಕಟವಾಗಿರುವುದು ತಿಳಿದುಬರುತ್ತದೆ.

ರಾಷ್ಟ್ರನಾಯಕ ಹಾಗೂ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಎಸ್. ನಿಜಲಿಂಗಪ್ಪನವರು ಈ ಯೋಜನೆಗಾಗಿ ಸಾಕಷ್ಟು ಸಂದರ್ಭದಲ್ಲಿ ಆಗ್ರಹಿಸಿರುವುದನ್ನು ಕೂಡ ನೋಡಬಹುದಾಗಿದೆ. ಈ ಯೋಜನೆ ನಿಜಲಿಂಗಪ್ಪನವರ ಜೀವಿತದ ಕನಸಾಗಿತ್ತು ಎಂಬುದಾಗಿ ಹಲವಾರು ಹೋರಾಟಗಾರರು ವ್ಯಕ್ತಪಡಿಸಿದ್ದಾರೆ. ಆದರೆ ಅದು ಎಷ್ಟು ಸತ್ಯ ಎಂಬುದು ಅವರಿಗೆ ಗೊತ್ತು. ನಿಜಲಿಂಗಪ್ಪನವರು ೨೫ ಜನವರಿ ೧೯೯೯ ರಂದು ಪತ್ರಕರ್ತರೊಂದಿಗೆ ಮಾತನಾಡುತ್ತಾ, ತಮ್ಮ ಕಾಲ ಮುಗಿಯುವ ಮುನ್ನ ಚಿತ್ರದುರ್ಗ ಜಿಲ್ಲೆಗೆ ಒಂದು ಶಾಶ್ವತ ನೀರಾವರಿ ಯೋಜನೆ ಆಗಬೇಕಾಗಿದೆ. ಒಂದು ವರ್ಷದ ಹಿಂದೆ ಬಾರಿ ನೀರಾವರಿ ಸಚಿವರಾದ ಕೆ.ಎನ್.ನಾಗೇಗೌಡರು ತಮ್ಮ ನಿವಾಸಕ್ಕೆ ಬಂದು ತುಂಗಾ ತಿರುವು ಯೋಜನೆಯಿಂದ ಚಿತ್ರದುರ್ಗ ಜಿಲ್ಲೆಗೆ ಬಹಳಷ್ಟು ಅನುಕೂಲವಾಗುತ್ತದೆ ಎಂದು ಹೇಳಿ ಹೋಗಿದ್ದರು. ಅದು ಈವರೆಗೂ ಕಾರ್ಯಗತವಾಗಿಲ್ಲ.[೧೨] ಎಂದು ಅವರು ಹೇಳುತ್ತಾ ಇನ್ನು ೧೫ ದಿನಗಳಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸದಿದ್ದರೆ ಜಿಲ್ಲೆ ಜನರೊಂದಿಗೆ ಕಲೆತು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂಬುದಾಗಿ ಆಕ್ರೋಶ ವ್ಯಕ್ತಪಡಿಸಿದ್ದರು. ಅಂದರೆ ಇವರು ಜಿಲ್ಲೆಯ ಅಭಿವೃದ್ಧಿಗೋಸ್ಕರ ಹೆಚ್ಚು ಆಸಕ್ತಿ ಹೊಂದಿದವರಾಗಿದ್ದರು ಎಂಬುದು ಈ ಹೇಳಿಕೆಯಿಂದ ಅರ್ಥವಾಗುತ್ತದೆ. ಆದರೆ ವಾಸ್ತವವಾಗಿ ನೋಡಿದರೆ ಅವರು ಅಧಿಕಾರದ ಚುಕ್ಕಾಣಿ ಹಿಡಿದಿದ್ದಂತ ಸಂದರ್ಭದಲ್ಲಿ ಈ ಯೋಜನೆ ಜಾರಿ ಮಾಡುವ ಎಲ್ಲಾ ಸಾಧ್ಯತೆಗಳಿದ್ದರೂ ಅದು ಆಗಲಿಲ್ಲ. ಇದಕ್ಕೆ ಹಲವಾರು ಒತ್ತಡಗಳು ಅವರಿಗೆ ಅಡ್ಡಿಯಾದವು. ಅದೇನೆ ಇರಲಿ ತನ್ನ ಜೀವಿತದ ಕೊನೆಯ ಕ್ಷಣದಲ್ಲಿ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸಿದ್ದು ಸಂತೋಷಕರ. ಆದರೆ ಅವರ ಕನಸು ಕನಸಾಗಿಯೇ ಉಳಿಯಿತು ಎಂದು ಹೇಳಬಹುದಾಗಿದೆ.

ಇದೇ ವಿಚಾರವಾಗಿ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿ ಲೋಕಶಕ್ತಿ ಅಧ್ಯಕ್ಷ ತಿಪ್ಪೇಸ್ವಾಮಿ ಹಾಗೂ ತಾಲ್ಲೂಕು ನೀರಾವರಿ ಹೋರಾಟ ಸಮಿತಿ ವತಿಯಿಂದ ಭದ್ರಾ ಮೇಲ್ದಂಡೆ

ಯೋಜನೆಗೆ ಆಗ್ರಹಿಸಿರುವುದನ್ನು ಕಾಣಬಹುದಾಗಿದೆ. ಇವರ ಆಗ್ರಹಕ್ಕೆ ಪ್ರಮುಖ ಕಾರಣವೆಂದರೆ ಹಿಂದಿನ ಭದ್ರಾ ಮೇಲ್ದಂಡೆ ಯೋಜನೆಗೆ ಜಗಳೂರು ಪ್ರದೇಶದ ೨೨ ಸಾವಿರ ಎಕರೆ ಭೂಮಿ ಒಳಗೊಂಡಿತ್ತು. ಆದರೆ ಸರ್ಕಾರ ತುಂಗಾ ತಿರುವು ಎಂಬ ಹೊಸ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದಾಗ ಜಗಳೂರು ಈ ಯೋಜನೆಯಿಂದ ವಂಚಿತವಾಗಿದ್ದರ ಪರಿಣಾಮವಾಗಿ ತಾಲ್ಲೂಕಿನ ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಮತ್ತು ನೀರಾವರಿ ಹೋರಾಟ ಸಮಿತಿಯ ನೇತೃತ್ವದಲ್ಲಿ ೧೪ ಜುಲೈ ೧೯೯೮ರಂದು ಪ್ರತಿಭಟನೆಯ ಮೂಲಕ ತಾಲ್ಲೂಕು ಕಛೇರಿಗೆ ಹೋಗಿ ಮನವಿ ಸಲ್ಲಿಸಿ ಆಗ್ರಹಿಸಿದರು.

ಭದ್ರಾ ಮೇಲ್ದಂಡೆ ಯೋಜನೆಗೆ ಒಳಪಡುವ ಕೋಲಾರ ಜಿಲ್ಲೆಯಲ್ಲಿ ೨೪ ಮೇ ೧೯೯೯ ರಂದು ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರು ತುಂಗಾ ತಿರುವು ಯೋಜನೆಗೆ ಆಗ್ರಹಿಸಿದರುವುದನ್ನು ಸ್ಮರಿಸಬಹುದು. ಇವರು ಈ ಸಂದರ್ಭದಲ್ಲಿ ಇಟ್ಟಂತ ಬೇಡಿಕೆ ಏನೆಂದರೆ ಬರಪೀಡಿತ ಬಯಲು ಸೀಮೆ ಪ್ರದೇಶಗಳಿಗೆ ಸುಮಾರು ೧೦ ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಕರ್ಯ ಒದಗಿಸುವ ತುಂಗಾತಿರುವು ಯೋಜನೆಯನ್ನು ಸರ್ಕಾರ ಕೂಡಲೇ ಜಾರಿಗೊಳಿಸಬೇಕೆಂದು ಕೋಲಾರದ ಬಾಗೇಪಲ್ಲಿ ಶಾಸಕರು ಆಗ್ರಹಪಡಿಸಿದರು.

ಪರ್ಯಾಯ ಭದ್ರಾ ಮೇಲ್ದಂಡೆ ಯೋಜನೆ ಕೈಗೆತ್ತಿಕೊಳ್ಳಲು ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಮುಖಂಡ ಹಾಗೂ ಮಾಜಿ ಸಂಸದ ಪಿ. ಕೋದಂಡರಾಮಯ್ಯನವರು ೨೬ ಜೂನ್ ೧೯೯೯ ರಂದು ಆಗ್ರಹ ಪಡಿಸಿರುವುದನ್ನು ಸ್ಮರಿಸಬಹುದಾಗಿದೆ. ಸರ್ಕಾರ ೧೯೯೮ರಲ್ಲಿ ಭದ್ರಾ ಮೇಲ್ದಂಡೆ ಬದಲಾಗಿ ತುಂಗಾತಿರುವು ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸುವುದಾಗಿ ಹೇಳಿತು. ಈ ವಿಚಾರಕ್ಕೆ ಸಂಬಂಧಿಸಿದಂತೆ ಸಮಿತಿಯ ಮುಖಂಡರು ಇದನ್ನು ವಿರೋಧಿಸಿ ತುಂಗಾ ತಿರುವು ಯೋಜನೆ ಕೇವಲ ಜನರ ಬಾಯಿಗೆ ತುಪ್ಪ ಸವರುವ ಯೋಜನೆಯಾಗಿದೆ. ಆದ್ದರಿಂದ ಇದು ಕಾರ್ಯಸಾದುವಲ್ಲ. ಹಾಗಾಗಿ ಭದ್ರಾ ಮೇಲ್ದಂಡೆಯ ಪರ್ಯಾಯ ಯೋಜನೆಯನ್ನು ಜಾರಿಗೊಳಿಸಿ ಎಂದು ಸರ್ಕಾರಕ್ಕೆ ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷರಾಗಿದ್ದ ಹೆಚ್.ಹನುಮಂತಪ್ಪ ಮಾತನಾಡಿ ಪರ್ಯಾಯ ಯೋಜನೆಯನ್ನು ಜಾರಿಗೊಳಿಸಿ ೧೪ ಲಕ್ಷ ಎಕರೆ ಜಮೀನಿಗೆ ೧೦೦ ಟಿ.ಎಂ.ಸಿ ನೀರನ್ನು ಒದಗಿಸಬಹುದಾಗಿದೆ ಎಂದು ತಿಳಿಸಿದರು. ಬಚಾವತ್ 'ಬಿ' ಸ್ಕೀಂನಲ್ಲಿ ರಾಜ್ಯಕ್ಕೆ ಲಭ್ಯವಿರುವ ೧೮೩ ಟಿ.ಎಂ.ಸಿ.[೧೨] ನೀರಿನಲ್ಲಿ ೧೦೦ ಟಿ.ಎಂ.ಸಿ. ನೀರನ್ನು ಈ ಭದ್ರಾ ಮೇಲ್ದಂಡೆ ಪರ್ಯಾಯ ಯೋಜನೆಗೆ ಒದಗಿಸಬೇಕು. ಇದರಲ್ಲಿ ಭದ್ರಾ ನದಿಯಿಂದ ೩೦ ಟಿ.ಎಂ.ಸಿ. ನೀರನ್ನು ಬಳಿಸಿಕೊಳ್ಳಬೇಕು ಎಂದು ಕೋದಂಡರಾಮಯ್ಯನವರು ಒತ್ತಾಯಿಸಿದರು.

ತುಮಕೂರು ಜಿಲ್ಲೆಯ ಮಧುಗಿರಿ ಉಪವಿಭಾಗದಲ್ಲಿ ೨೯ ಆಗಷ್ಟ್ ೧೯೯೯ ರಂದು ಮಧುಗಿರಿ ನಾಗರಿಕ ಹಿತರಕ್ಷಣಾ ವೇದಿಕೆ ಪಕ್ಷಾತೀತರಾಗಿ ಕರೆದಿದ್ದ ಸಭೆಯಲ್ಲಿ ಉಪವಿಭಾಗದ

ಮಧುಗಿರಿ, ಪಾವಗಡ, ಕೊರಾಟಗೆರೆ, ಶಿರಾ ತಾಲ್ಲೂಕುಗಳ ಕೆಲವು ಶಾಸಕರು, ಮಾಜಿ ಶಾಸಕರು, ಪುರಸಭಾಧ್ಯಕ್ಷರು, ಸಂಘ ಸಂಸ್ಥೆಗಳ ಪದಾಧಿಕಾರಿಗಳ ಸಭೆಯಲ್ಲಿ ಉಪವಿಭಾಗಕ್ಕೆ ಸರ್ಕಾರದ ಧೋರಣೆಯನ್ನು ಖಂಡಿಸಿ, ಶಾಶ್ವತ ನೀರಾವರಿ ಸೌಲಭ್ಯದಿಂದ ವಂಚಿತರಾಗಿರುವ ಮಧುಗಿರಿ ಉಪವಿಭಾಗಕ್ಕೆ ಸರ್ಕಾರ ಈ ಕೂಡಲೇ ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನಗೊಳಿಸುವ ಸರ್ಕಾರಕ್ಕೆ ಆಗ್ರಹ ನೀಡಿದರು.

ಚಿತ್ರದುರ್ಗ ನೀರಾವರಿ ಹೋರಾಟ ಸಮಿತಿಯ ಅಧ್ಯಕ್ಷರಾಗಿ ಕೋದಂಡರಾಮಯ್ಯನವರು ಆಯ್ಕೆಯಾದ ನಂತರ ಸಮಿತಿಯ ಸದಸ್ಯರೊಂದಿಗೆ ೩ ಆಗಸ್ಟ್ ೨೦೦೦ರಂದು ಅಂದಿನ ಬಾರಿ ನೀರಾವರಿ ಸಚಿವರಾದ ಹೆಚ್.ಕೆ.ಪಾಟೀಲರ ಜೊತೆ ವಾಣಿವಿಲಾಸ ಸಾಗರಕ್ಕೆ ತುಂಗ, ಭದ್ರಾ ನೀರು ಹರಿಸುವ ಸಾಧ್ಯತೆ ಕುರಿತು ನಡೆದ ಸಮಗ್ರ ಅಧ್ಯಯನ ಎಂಬ ಸಮಾವೇಶದ ಬಗ್ಗೆ ನಾನು ಕೋದಂಡ ರಾಮಯ್ಯನವರನ್ನು ಸಂದರ್ಶಿಸಿ ವಿಚಾರಿಸಿದಾಗ ಅವರಿಂದ ನೀಡಿದ ಮಾಹಿತಿಯೇನೆಂದರೆ ನಮ್ಮ ಸಮಿತಿಯ ಪದಾಧಿಕಾರಿಗಳ ಜೊತೆ ಈ ವಿಚಾರವಾಗಿ ನೀರಾವರಿ ಸಚಿವರಿಗೆ ಕೆಲವೊಂದು ಬೇಡಿಕೆಯನ್ನು ಈಡೇರಿಸುವಂತೆ ಆಗ್ರಹಿಸಿದವು. ಅಂತಹ ಬೇಡಿಕೆ ಏನೆಂದರೆ, ಸರ್ಕಾರ ಅನುಮೋದಿಸುವ ೨೦ ಟಿ.ಎಂ.ಸಿ. ನೀರು ತರುವ ಪ್ರಸ್ತಾಪವನ್ನು ನಿಯೋಗ ಸ್ವಾಗತಿಸಿದೆ. ಆದರೆ ಜಿಲ್ಲೆಯ ನೀರಾವರಿ ಯೋಜನೆ ಬೇಡಿಕೆ ಇದರಿಂದ ಈಡೇರುವುದಿಲ್ಲ. ಇದು ಈಗಾಗಲೇ ನೀರಾವರಿ ಸೌಲಭ್ಯ ಹೊಂದಿರುವ ಹಿರಿಯೂರು ತಾಲ್ಲೂಕಿನ ಕೆಲವು ರೈತರಿಗೆ ಮಾತ್ರ ಅನುಕೂಲವಾಗುವುದು. ಸರ್ಕಾರದ ಪ್ರಸ್ತಾವನೆ ಕಳೆದ ಕೆಲವು ದಶಕಗಳಿಂದ ಕುಡಿಯುವ ನೀರಿಗೂ ಪರದಾಡುತ್ತಿರುವ ಮೊಳಕಾಲ್ಮೂರು, ಚಳ್ಳಕೆರೆ, ಚಿತ್ರದುರ್ಗ, ಹೊಳಲ್ಕೆರೆ, ಜಗಳೂರು ಹಾಗೂ ಹಿರಿಯೂರು ತಾಲ್ಲೂಕಿನ ಐಮಂಗಳ ಹೋಬಳಿಗೆ ನೆಮ್ಮದಿ ತರುವುದಿಲ್ಲ. ಇಡೀ ಜಿಲ್ಲೆಗೆ ನೀರಾವರಿ ಸೌಲಭ್ಯ ಕೊಡುವ ಆಸಕ್ತಿ ಸರ್ಕಾರಕ್ಕೆ ಇದ್ದರೆ ಬಚಾವತ್ 'ಬಿ' ಸ್ಕೀಂನಲ್ಲಿ ಕನಿಷ್ಟ ೭೦ ಟಿ.ಎಂ.ಸಿ. ನೀರನ್ನು ತರಬೇಕು ಎಂಬುದಾಗಿ ಸಚಿವರ ಮುಂದೆ ಬೇಡಿಕೆಯನ್ನು ಇಟ್ಟು ಒತ್ತಾಯಿಸಿದೆವು ಎಂದು ಹೇಳಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ನೀರಾವರಿ ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಮುಂದಿನ ಮೂರು ತಿಂಗಳ ಒಳಗೆ ಜಿಲ್ಲೆಯ ಜನಪ್ರತಿನಿಧಿಗಳು, ಹಾಗೂ ಹೋರಾಟ ಸಮಿತಿಯೊಂದಿಗೆ ಚರ್ಚಿಸುವುದಾಗಿ ಅವರು ಹೇಳಿದ್ದರು. ಆದರೆ ಅದು ಇಂದಿಗೂ ಕೂಡ ವಿವಾದಾಸ್ಪದವಾಗಿಯೇ ಮುಂದುವರೆಯುತ್ತಿದೆ ಎಂಬ ವಿಚಾರವನ್ನು ಕೋದಂಡರಾಮಯ್ಯನವರು ವ್ಯಕ್ತಪಡಿಸಿದರು.

ಮೇಲಿನ ಈ ಎಲ್ಲಾ ಆಗ್ರಹಗಳ ಬಗ್ಗೆ ನನಗೆ ಅನಿಸಿದ ವಿಚಾರವೇನೆಂದರೆ ಈ ತರಹದ ಆಗ್ರಹಗಳು ೧೯೯೮ರಿಂದಲೂ ಇಂದಿನವರೆಗೂ ನಡೆಯುತ್ತಿವೆ. ಆದರೆ ಇದಕ್ಕೆ ಸಂಪೂರ್ಣವಾದ ಗಟ್ಟಿತನ ಬರುತ್ತಿಲ್ಲ. ಒಬ್ಬರು ಆಗ್ರಹಿಸಿದರೆ ಮತ್ತೊಬ್ಬರು ಈ ವಿಚಾರವಾಗಿ ವಿರೋಧ

ವ್ಯಕ್ತಪಡಿಸುವುದು. ಇದು ಸಹಜವಾಗಿಯೇ ಬರುತ್ತಿದೆ. ಆದರೆ ಸರ್ಕಾರ ಈ ನಿಟ್ಟಿನಲ್ಲಿ ಏಕೆ ಬರಗಾಲದಲ್ಲಿ ಬೆಂದು ಬೆಂಗಾಡಾಗಿರುವ ಚಿತ್ರದುರ್ಗ ಹಾಗೂ ಇತರೆ ನೆರೆಯ ಜಿಲ್ಲೆಗಳಿಗೆ ನೀರನ್ನು ಒದಗಿಸಲು ಆಗುತ್ತಿಲ್ಲ. ಬಡಜನರ ಕೂಗಿಗೆ ಸರ್ಕಾರ ಏಕೆ ಕಿವಿ ಕೊಡುತ್ತಿಲ್ಲ. ಇದಕ್ಕೆ ಏನು ಕಾರಣ ಮುಂತಾದ ವಿಚಾರಗಳನ್ನು ಮುಂದಿನ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ಒಟ್ಟಿನಲ್ಲಿ ಇಂತಹ ಆಗ್ರಹಗಳು ಈ ಯೋಜನೆಗೆ ಒಳಪಡುವ ಪ್ರದೇಶಗಳ ಜನರು, ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳು ತಮಗೆ ಆಗುತ್ತಿರುವ ಅನ್ಯಾಯದ ಬಗ್ಗೆ ತಮಗೆ ಒದಗಿರುವ ಬಡತನದ ಬಗ್ಗೆ, ನಿರುದ್ಯೋಗದ ಬಗ್ಗೆ ಕುಡಿಯುವ ನೀರಿಗಾಗಿ ಹಂಬಲದ ಬಗ್ಗೆ, ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ ಇದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಸರಿಯಾದ ಕ್ರಮ ತೆಗೆದುಕೊಂಡು ಬಳಲಿರುವ ಜನತೆಗೆ ಯೋಜನೆ ಜಾರಿಗೊಳಿಸಿ ಅವರ ಬಹುದಿನದ ಕನಸನ್ನು ನನಸು ಮಾಡಬೇಕಾಗಿದೆ. ಅದು ಎಷ್ಟರ ಮಟ್ಟಿಗೆ ಸರ್ಕಾರಕ್ಕೆ ಇದು ಸಾಧ್ಯ ಎಂಬುದನ್ನು ಕಾದು ನೋಡಬೇಕಾಗಿದೆ.

೩.೨. ರಾಜ್ಯ ಸರ್ಕಾರ ಭದ್ರಾ ಮೇಲ್ದಂಡೆ ಯೋಜನಗಾಗಿ ರೂಪಿಸಿದ ಯೋಜನೆಗಳು ಹಾಗೂ ತೆಗೆದುಕೊಂಡ ನಿರ್ಣಯಗಳು.

೧. ಭದ್ರಾ ಮೇಲ್ದಂಡೆ ಯೋಜನೆ:

ಕರ್ನಾಟಕ ಸರ್ಕಾರ ಬರಪೀಡಿತ ಪ್ರದೇಶಗಳಾದ ಚಿತ್ರದುರ್ಗ, ತುಮಕೂರು, ಬಳ್ಳಾರಿ, ಕೋಲಾರ ಜಿಲ್ಲೆಗಳಿಗೆ ನೀರಾವರಿ ಕಲ್ಪಿಸುವ ನಿಟ್ಟಿನಲ್ಲಿ ೧೯೬೮ರಲ್ಲಿ ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ ಈ ಯೋಜನೆಯ ಅನುಷ್ಠಾನದ ಬಗ್ಗೆ ಪ್ರಸ್ತಾಪ ರೂಪಿಸಿತು. ಈ ಯೋಜನೆಯ ಪ್ರಕಾರ, ಭದ್ರಾ ಜಲಾಶಯದ ಮೇಲ್ಭಾಗದಲ್ಲಿ ಮಾಗುಂಡಿ ಬಳಿಯಲ್ಲಿ ಅಣೆಕಟ್ಟನ್ನು ಕಟ್ಟಿ ಅದರ ಮೂಲಕ ಬಯಲು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ನೀಡುವ ಉದ್ದೇಶವನ್ನು ಒಳಗೊಂಡು ಯೋಜನೆ ತಯಾರು ಮಾಡಿತು. ಆದರೆ ಈ ಯೋಜನೆ ಹಾನಿಗೆ ಎಡೆ ಮಾಡಿಕೊಡುತ್ತದೆ ಎಂಬ ವಿಚಾರವನ್ನು ಪಡೆದ ಈ ಯೋಜನೆಯನ್ನು ಬಿಟ್ಟಿತು.

೨. ಸೋಮವಾಹಿನಿ ತಿರುವು ಯೋಜನೆ:

ಭದ್ರಾ ಮೇಲ್ದಂಡೆ ಯೋಜನೆಯ ಬದಲಿಗೆ ಭದ್ರಾ ನದಿಗೆ ಉಪನದಿಗಳ ಮೂಲಕ ಬಯಲು ಪ್ರದೇಶಕ್ಕೆ ನೀರನ್ನು ಒದಗಿಸುವ ಒಂದು ಯೋಜನೆಯನ್ನು ತಯಾರಿಸಿತು. ಈ ವಿಚಾರವಾಗಿ ಎಲ್ಲಾ ರಾಜಕೀಯ ಪಕ್ಷಗಳ ಎಲ್ಲಾ ಮುಖ್ಯಮಂತ್ರಿಗಳು ಸಹ ಭರವಸೆಗಳನ್ನು ಕೊಟ್ಟಿರುವುದು ನಿಜ. ಈ ವಿಷಯದಲ್ಲಿ ಶ್ರೀಮಾನ್ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ೧೯೯೬ರ ಲೋಕಸಭಾ ಚುನಾವಣೆ ಪ್ರಚಾರಕ್ಕೆ ಚಿತ್ರದುರ್ಗಕ್ಕೆ ಬಂದಂತ ಸಂದರ್ಭದಲ್ಲಿ ಈ

ಯೋಜನೆಯನ್ನು ಮಂಜೂರು ಮಾಡಿಸಿಕೊಡುವುದಾಗಿ ಭರವಸೆ ನೀಡಿರುತ್ತಾರೆ. ಆ ಭರವಸೆಯ ನಂತರ ಮಾರ್ಚ್ ೧೯, ೧೯೯೬ರಲ್ಲಿ ಸೋಮವಾಹಿನಿ, ತಡವೆ, ಮತ್ತು ಹೆಚ್ಚಿನ ಹಳ್ಳಗಳ ನೀರಿನ ಸಂಗ್ರಹದಿಂದ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯು ಒಂದು ಯೋಜನೆಯನ್ನು ತಯಾರಿಸಿ ಭದ್ರಾ ಅಣೆಕಟ್ಟಿನಿಂದ ೧೧ ಟಿ.ಎಂ.ಸಿ. ನೀರನ್ನು ೧೦೧೦ ಕೋಟಿ ವೆಚ್ಚದೊಂದಿಗೆ ವಾಣಿವಿಲಾಸ ಸಾಗರಕ್ಕೆ ನೀರನ್ನು ಒದಗಿಸಬಹುದಾಗಿದೆ ಎಂದು ವರದಿ ನೀಡಿರುತ್ತಾರೆ. ಇದರಿಂದ ಒಂದು ಎಕರೆಗೆ ರೂ. ೭೬,೦೦೦ ವೆಚ್ಚದಲ್ಲಿ ೧,೩೩,೦೦೦ ಎಕರೆಗೆ ನೀರುಣಿಸಲು ಉದ್ದೇಶವಿದೆ.

ಈ ಯೋಜನೆಯಿಂದ ಒಂದು ತಾಲ್ಲೂಕಿನ ಕೆಲವೇ ಭಾಗಗಳಿಗೆ ಮಾತ್ರ ನೀರಾವರಿ ಒದಗಿಸಲು ಸಾಧ್ಯ. ಒಂದು ಎಕರೆಗೆ ತಗಲುವ ವೆಚ್ಚ ದುಬಾರಿಯೂ ಸಹ. ಆದ್ದರಿಂದ ಈ ಯೋಜನೆಯೂ ಸಹ ವಿವಾದಾಸ್ಪದವಾಯಿತು.

೩. ತುಂಗಾ ತಿರುವು ಯೋಜನೆ:

ದಿನಾಂಕ: ೨೦.೦೬.೧೯೯೬ರಂದು ಜಲಸಂಪನ್ಮೂಲಗಳ ಅಭಿವೃದ್ಧಿ ಸಂಸ್ಥೆಯ ಮಹಾ ಇಂಜಿನಿಯರ್‌ರವರು ಒಂದು ಪಟ್ಟಿಯನ್ನು ಸಲ್ಲಿಸಿ ಈ ಕೆಳಕಂಡ ರೀತಿಯಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ನೀರನ್ನು ಒದಗಿಸಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

ಅ. ೧೨ರಿಂದ ೧೫ ಟಿ.ಎಂ.ಸಿ. ನೀರನ್ನು ತುಂಗಾ ನದಿಯಿಂದ ಭದ್ರಾನದಿಗೆ ತಿರುಗಿಸುವುದು.

ಆ. ಭದ್ರಾ ಅಣೆಕಟ್ಟಿನ ಕಾಲುವೆಗಳ ದುರಸ್ತಿಯಿಂದ ಮತ್ತು ನಿಗದಿತ ಬೆಳೆಗಳನ್ನು ಬೆಳೆಸುವುದರಿಂದ ೫ ಟಿ.ಎಂ.ಸಿ. ನೀರು ಬಚಾವ್ ಮಾಡುವುದು.

ಹೀಗೆ ಒಟ್ಟು ೨೦ರಿಂದ ೨೨ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡು ಚಿತ್ರದುರ್ಗ ಜಿಲ್ಲೆಯಲ್ಲಿ ೩.೮೪ ಲಕ್ಷ ಎಕರೆಗೆ ನೀರಾವರಿಯನ್ನು ಕಲ್ಪಿಸಲು ಯೋಜನೆಯನ್ನು ತಯಾರು ಮಾಡಿದ್ದಾರೆ. ಎರಡನೆಯ ಹಂತದಲ್ಲಿನ ಸ್ಕೀಂ 'ಬಿ'ನಲ್ಲಿ ಚಿತ್ರದುರ್ಗಕ್ಕೆ ಬರುವ ನೀರನ್ನು ಉಪಯೋಗಿಸಿಕೊಂಡು ತುಮಕೂರು ಜಿಲ್ಲೆಗೆ ನೀರಾವರಿ ಸೌಕರ್ಯ ಕಲ್ಪಿಸಲು ಶಿಫಾರಸ್ಸು ಮಾಡಿರುತ್ತಾರೆ. ಈ ಯೋಜನೆಯ ಅಂದಾಜು ವೆಚ್ಚ ಒಂದು ಎಕರೆಗೆ ರೂ. ೪೨.೦೦೦ ದಂತೆ ಒಟ್ಟು ರೂ.೧೬೪೧ ಕೋಟಿಯಾಗಿದೆ.

ಈ ಯೋಜನೆಯು ಅಷ್ಟು ದುಬಾರಿಯಾಗದಿದ್ದರೂ ಬರೀ ೨೦ ಟಿ.ಎಂ.ಸಿ. ನೀರನ್ನು ಮಾತ್ರ ಉಪಯೋಗಿಸಿ ೩.೮೪ ಲಕ್ಷ ಎಕರೆಗೆ ನೀರುಣಿಸುವ ಉದ್ದೇಶವಿದೆ. ಚಿತ್ರದುರ್ಗದ ಜನತೆ ಕನಿಷ್ಟ ೭೦ ಟಿ.ಎಂ.ಸಿ. ನೀರು ಮತ್ತು ನಾವು ನೀರಾವರಿ ಕಲ್ಪಿಸಲು ಉದ್ದೇಶಿಸಿದ್ದು ೯.೫. ಲಕ್ಷ ಎಕರೆಗೆ ಆದುದರಿಂದ ಈ ಯೋಜನೆಯನ್ನು ಒಪ್ಪಲಿಲ್ಲ.

೪. ತುಂಗಾ ಮತ್ತು ಭದ್ರಾ ಏತ ನೀರಾವರಿ ಯೋಜನೆ.

ದಿನಾಂಕ: ೨೯.೦೬.೧೯೯೮ರಂದು ಸರ್ಕಾರದ ಮಟ್ಟದಲ್ಲಿ ತುಂಗಾ ಮತ್ತು ಭದ್ರಾ ಏತ ನೀರಾವರಿ ಯೋಜನೆಗಳ ವರದಿಯನ್ನು ತಯಾರಿಸಲಾಯಿತು. ಆ ವರದಿಯಲ್ಲಿ ತುಂಗಾ ನದಿಯಿಂದ ೧೦ ಟಿ.ಎಂ.ಸಿ. ನೀರನ್ನು ಭದ್ರೆಗೆ ತಿರುಗಿಸಿ ಅದರೊಂದಿಗೆ ಇನ್ನು ೨೦ ಟಿ.ಎಂ.ಸಿ. ನೀರನ್ನು ಭದ್ರಾದಿಂದ ಏತ ನೀರಾವರಿ ಮುಖೇನ ಚಿತ್ರದುರ್ಗ ಜಿಲ್ಲೆಗೆ ನೀರಾವರಿ ಒದಗಿಸಬಹುದೆಂದು ಸೂಚಿಸಲಾಯಿತು.[೪] ಭದ್ರಾದಿಂದ ೨೦ ಟಿ.ಎಂ.ಸಿ. ನೀರನ್ನು ಈ ಕೆಳಕಂಡ ರೀತಿಯಲ್ಲಿ ಅಳವಡಿಸಿಕೊಳ್ಳಲು ಉದ್ದೇಶಿಸಿತ್ತು.

ವಿಜಯನಗರ ಕಾಲುವೆಯಿಂದ ೫ ಟಿ.ಎಂ.ಸಿ.ಗೊಂಡಿ ಮತ್ತು ಗಾಜನೂರು ಅಣೆಕಟ್ಟು ಆಧುನಿಕರಣದಿಂದ ೫ ಟಿ.ಎಂ.ಸಿ. ಕೃಷ್ಣ ಜಲವಿವಾದ ಆಯೋಗ 'ಎ' ಸ್ಕೀಂನಿಂದ ೮ ಟಿ.ಎಂ.ಸಿ., ತುಂಗಾಭದ್ರಾ ಕಾಲುವೆಯ ಸಂಕೀರ್ಣದಲ್ಲಿ ಇರುವ ಕೆಲವು ಸಣ್ಣ ನೀರಾವರಿ ಯೋಜನೆಗಳನ್ನು ಒಂದುಗೂಡಿಸುವುದರಿಂದ ೨ ಟಿ.ಎಂ.ಸಿ. ಒಟ್ಟು ೨೦ ಟಿ.ಎಂ.ಸಿ. ಈ ಯೋಜನೆಯಡಿ ೨,೨೪,೭೫೦ ಎಕರೆ ಜಮೀನಿಗೆ ನೀರುಣಿಸಲು ಉದ್ದೇಶಿಸಿತು. ಈ ಯೋಜನೆಯ ವೆಚ್ಚ ರೂ. ೨,೨೦೪ ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದ್ದು ಪ್ರತಿ ಎಕರೆಗೆ ೯೮,೦೬೫ ರೂಪಾಯಿ ಖರ್ಚು ಬೀಳಬಹುದಾಗಿದೆ.

ಈ ರೀತಿಯಾಗಿ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸುತ್ತ ಸುಲಭ ಹಾಗೂ ಹಾನಿಯಾಗುವಂತಹ ಕಾಡು, ಭೂಮಿ, ಊರುಗಳ, ಜಲಚರ ಜೀವಿಗಳು ಮುಂತಾದ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಹಲವಾರು ತಜ್ಞರ ಸಮಿತಿಗಳನ್ನು ರಚಿಸಿ ಅವುಗಳಿಂದ ಮಾಹಿತಿ ಪಡೆದು, ಯೋಜನೆಗಳನ್ನು ಬದಲಾವಣೆ ಮಾಡುತ್ತಾ ಬಂದಿರುತ್ತದೆ. ಇವು ಸರ್ಕಾರ ಮೇಲ್ದಂಡೆ ಯೋಜನೆಗೆ ಪರ್ಯಾಯ ರೀತಿಯಲ್ಲಿ ರೂಪಿಸಿದಂತ ಯೋಜನೆಗಳಾಗಿವೆ.

ಇಂತಹ ಯೋಜನೆಗಳ ಬಗ್ಗೆ ಸರ್ಕಾರ ಹಾಗೂ ಜನಪ್ರತಿನಿಧಿಗಳು, ಸಚಿವರುಗಳು, ಸಚಿವ ಸಂಪುಟ ಕೆಲವೊಂದು ನಿರ್ಣಯಗಳನ್ನು ತೆಗೆದುಕೊಂಡಿರುವುದನ್ನು ನಾವು ನೋಡಬಹುದಾಗಿದೆ. ಅಂತಹ ಕೆಲವು ನಿರ್ಣಯಗಳು ಈ ಮುಂದಿನಂತೆ ಚರ್ಚಿಸಲಾಗಿದೆ.

ನಿರ್ಣಯಗಳು:

ಚಿತ್ರದುರ್ಗ ಮುಕ್ತ ವಿಚಾರ ವೇದಿಕೆಯ ಆಶ್ರಯದಲ್ಲಿ ಜಿಲ್ಲೆಯ ನೀರಾವರಿ ಯೋಜನೆಗಳ ಸಾಧಕ ಬಾಧಕಗಳ ಬಗ್ಗೆ ಅಧ್ಯಯನ ಮಾಡಲು ರಚಿತವಾಗಿದ್ದ ಸಮಿತಿಯು ಮುಖ್ಯಮಂತ್ರಿಗಳಾದ ಜೆ.ಹೆಚ್.ಪಟೇಲರನ್ನು ೩೦ ಮೇ ೧೯೯೮ರಂದು ಭೇಟಿಯಾಗಿ ಚರ್ಚಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಸರ್ಕಾರದ ಈ ಯೋಜನೆಗೆ ತಕ್ಕಂತೆ ನಿರ್ಣಯಗಳನ್ನು

ಸಮಿತಿಗೆ ವಿವರಿಸುತ್ತಾ, ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನಕ್ಕೆ ಸರಕಾರದ ವಿರೋಧವಿಲ್ಲ. ಹಣಕಾಸು ತೊಂದರೆಯೂ ಇಲ್ಲ. ಈ ಸಂಬಂಧ ಎಸ್.ನಿಜಲಿಂಗಪ್ಪನವರು ಅನೇಕ ಬಾರಿ ನಮ್ಮೊಂದಿಗೆ ಮಾತನಾಡಿದ್ದಾರೆ. ಆದ್ದರಿಂದ ಬರಡು ಪ್ರದೇಶಗಳಾದ ಚಿತ್ರದುರ್ಗ, ಚಿಕ್ಕಮಗಳೂರು ಹಾಗೂ ತುಮಕೂರು ಜಿಲ್ಲೆಗಳ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು, 'ಭದ್ರಾ ಮೇಲ್ದಂಡೆ ಯೋಜನೆ' ಅನುಷ್ಠಾನಕ್ಕೆ ರಾಜ್ಯಸರ್ಕಾರ ಬದ್ಧವಾಗಿದೆ. ತಜ್ಞರೊಂದಿಗೆ ಸಮಾಲೋಚನೆ ನಡೆಸಿದ ನಂತರ ಯೋಜನೆ ಕಾರ್ಯಗತವಾಗುವುದೆಂದು ಮುಖ್ಯಮಂತ್ರಿಗಳು ನಮ್ಮ ಸಮಿತಿಗೆ ಹೇಳಿದ್ದರು ಎಂದು ಪರಿಸರವಾದಿ ಡಾ.ಬಂಜಗೆರೆ ಜಯಪ್ರಕಾಶ್‌ರವನ್ನು ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿದಾಗ ಈ ವಿಚಾರದ ಬಗ್ಗೆ ಮಾಹಿತಿ ನೀಡಿದರು.

೨೩ ಮೇ, ೧೯೯೯ರಂದು ಭದ್ರಾ ಮೇಲ್ದಂಡೆಗೆ ಒಳಪಡುವ ಕಡೂರಿನಲ್ಲಿ ಬಾರಿ ಕೈಗಾರಿಕಾ ಮಂತ್ರಿಯಾಗಿದ್ದ ಬಿ.ಎಲ್.ಶಂಕರ್ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಮುಂದಿನ ತಿಂಗಳಾಂತ್ಯದಲ್ಲಿ ತುಂಗಾ ತಿರುವು ನಾಲಾ ಯೋಜನೆ ನೆರವೇರಿಸುವುದು ಖಂಡಿತ. ಜಿಲ್ಲೆಯ ಬರಗಾಲ ಪ್ರದೇಶಗಳಾದ ಕಡೂರು, ಬೀರೂರು, ತರೀಕೆರೆ ತಾಲ್ಲೂಕುಗಳ ಹಲವು ಗ್ರಾಮಗಳು ನೀರಾವರಿ ಮತ್ತು ಕುಡಿಯುವ ನೀರಿನ ಸೌಲಭ್ಯಕ್ಕೆ ಹೆಚ್ಚು ಉಪಯುಕ್ತವಾಗಿರುವ ಈ ಯೋಜನೆಗೆ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಸರ್ವೇ ಕಾರ್ಯ ನಡೆದಿತ್ತು. ನಂತರ ಪಟೇಲರು ಮುಖ್ಯಮಂತ್ರಿಗಳಾದ ಮೇಲೆ ಅದಕ್ಕೆ ಚಾಲನೆ ಸಿಕ್ಕಿದೆ.[೧೫] ಬರುವ ತಿಂಗಳ ಅಂತ್ಯದಲ್ಲಿ ಈ ಯೋಜನೆಗೆ ಶಿಲಾನ್ಯಾಸ ನೆರವೇರಿಸುವುದು ಖಂಡಿತ ಎಂಬ ಮಾತನ್ನು ಬಿ.ಎಲ್.ಶಂಕರ್ ಹೇಳಿದ್ದರು. (ಪತ್ರಿಕಾ ಹೇಳಿಕೆ ೨೪, ಮೇ.೧೯೯೯).

ಭದ್ರಾ ಮೇಲ್ದಂಡೆ ವಿಚಾರವಾಗಿ ೨೫ ಮೇ, ೧೯೯೯ರ ಜೆ.ಎಚ್.ಪಟೇಲರ ಸಚಿವ ಸಂಪುಟದಲ್ಲಿ ಭಾರಿ ನೀರಾವರಿ ಸಚಿವರಾದ ಕೆ.ಎನ್. ನಾಗೇಗೌಡರು ಯೋಜನೆ ಕುರಿತು ನಿರ್ಣಯದ ವಿಚಾರದ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡುತ್ತ ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳ ೨.೨೪ ಲಕ್ಷ ಎಕರೆ ರೈತರ ಭೂಮಿಗೆ ನೀರು ಪೂರೈಸುವ ತುಂಗಾ ತಿರುವು ಯೋಜನೆಗೆ ಇದೇ ಮೇ ೨೭, ೧೯೯೯ರಂದು ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಮಾತನಾಡುತ್ತ ರಾಷ್ಟ್ರನಾಯಕ ಹಾಗೂ ಮಾಜಿಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರನ್ನು ಈ ಸಂದರ್ಭದಲ್ಲಿ ಭಾಗವಹಿಸುವಂತೆ ಕೋರಲಾಗಿದ್ದು ಅವರು ಒಪ್ಪಿದ್ದಾರೆ ಎಂದು ತಿಳಿಸುತ್ತಾ ಈ ಯೋಜನೆ ನಿಜಲಿಂಗಪ್ಪನವರ ಕನಸಿನ ಕೂಸಾಗಿದ್ದು ಅವರ ಮಹತ್ವಕಾಂಕ್ಷೆಯನ್ನು ಈಡೇರಿಸುವ ಉದ್ದೇಶದಿಂದ ಸರ್ಕಾರ ಈ ಯೋಜನೆಯನ್ನು ಮೂರು ವರ್ಷಗಳ ಕಾಲಾವಧಿಯಲ್ಲಿ ಪೂರೈಸಲಾಗುವುದು ಎಂಬ ಮಾತನ್ನು ಹೇಳಿದರು. ಹಾಗೆಯೇ ಒಟ್ಟು ೨,೨೦೪ ಕೋಟಿ.ರೂಪಾಯಿಗಳ ಯೋಜನೆಗೆ ತುಂಗಾ ಮತ್ತು ಭದ್ರಾ ಜಲಾಶಯಗಳಿಂದ

ತಲಾ ೧೦ ಟಿ.ಎಂ.ಸಿ. ನೀರನ್ನು ಪಡೆದು ಕಾಲುವೆಗಳ ಮೂಲಕ ಹಾಯಿಸುವುದಾಗಿ ಚಿತ್ರದುರ್ಗ ಜಿಲ್ಲೆಯ ೧,೮೨ ಲಕ್ಷ ಎಕರೆ ರೈತರ ಭೂಮಿ, ಚಿಕ್ಕಮಗಳೂರು ಜಿಲ್ಲೆಯ ೪೨,೭೫೦ ಎಕರೆ ಭೂಮಿಗೆ ಈ ಯೋಜನೆಯಡಿ ನೀರಾವರಿ ಸೌಲಭ್ಯ ದೊರೆಯಲಿದೆ ಎಂಬ ನಿರ್ಣಯವನ್ನು ಸಚಿವ ಸಂಪುಟದಲ್ಲಿ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು. (ಹೆಚ್ಚಿನ ಮಾಹಿತಿಗಾಗಿ ೨೬.೦೫.೧೯೯೯ರ ಸಂಯುಕ್ತ ಕರ್ನಾಟಕ ಪತ್ರಿಕೆ ನೋಡಬಹುದು).

ಅದೇ ನಾಗೇಗೌಡರು ೧ ಸೆಪ್ಟೆಂಬರ್ ೧೯೯೯ರಂದು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ಬಲ್ಲಾಳ ಸಮುದ್ರ ಗ್ರಾಮದಲ್ಲಿ ಏರ್ಪಡಿಸಿದ್ದ ರೈತರ ಸಮ್ಮೇಳನದಲ್ಲಿ ಮಾತನಾಡುತ್ತ ರಾಜ್ಯದಲ್ಲಿ ೧೨,೬೦೦ ಕೋಟಿ.ರೂಪಾಯಿಗಳು ನೀರಾವರಿ ಯೋಜನೆಗೆ ಬೇಕಾಗಿದೆ. ಚಿತ್ರದುರ್ಗಕ್ಕೆ ಕೃಷ್ಣ ಕೊಳ್ಳದಿಂದ ೮ ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲಾಗುವುದು.[೧೬] ಹಾಗೂ ತುಂಗಾ ತಿರುವು ಯೋಜನೆಯನ್ನು ಅತೀ ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡುವಂತೆ ವಿಭಾಗ ಮಟ್ಟದ ಕಛೇರಿಯನ್ನು ಈಗಾಗಲೇ ಶಿವಮೊಗ್ಗ ಪ್ರಾರಂಭಿಸಲಾಗಿದೆ. ಈ ಕಾರ್ಯಕ್ಕಾಗಿ ಸರ್ವೆ ಕಾರ್ಯ ನಡೆದಿದ್ದು ಅತೀ ಶೀಘ್ರದಲ್ಲೇ ಚಿತ್ರದುರ್ಗ ಜಿಲ್ಲೆ ಹಾಗೂ ಚಿಕ್ಕಮಗಳೂರು ಜಿಲ್ಲೆ ನೀರಾವರಿ ಯೋಜನೆಯ ಪ್ರಯೋಜನ ಪಡೆಯಲಿವೆ. ಯಾವುದೇ ಕಾರಣಕ್ಕೂ ಕೈ ಬಿಡುವಂತಹ ನಿದರ್ಶನಗಳಿಲ್ಲ ಎಂದು ಸಚಿವರು ತಿಳಿಸಿದ್ದರು. ರಾಜ್ಯ ಸರ್ಕಾರದ ನಿರ್ಧಾರ ಎಸ್ಸೆನ್ ನೆನಪಿಗಾಗಿ ಚಿತ್ರದುರ್ಗ ಜಿಲ್ಲೆಗೆ ನೀರುಣಿಸುವ ಯೋಜನೆ ಈ ಮಾತನ್ನು ೯ ಆಗಸ್ಟ್, ೨೦೦೦ ರಂದು ಎಸ್.ಎಮ್.ಕೃಷ್ಣರವರು ಕೆ.ಪಿ.ಸಿ.ಸಿ. ಭವನದಲ್ಲಿ ಏರ್ಪಡಿಸಿದ್ದ "ಕ್ವಿಟ್ ಇಂಡಿಯಾ ಚಳವಳಿ" ದಿನಾಚರಣೆ ಹಾಗೂ ನಿಜಲಿಂಗಪ್ಪನವರ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಾ[೧೭] ಚಿತ್ರದುರ್ಗ ಜಿಲ್ಲೆಯ ಸಮಸ್ತ ಕೃಷಿ ಜಮೀನಿಗೆ ನೀರುಣಿಸುವ ಯೋಜನೆಯನ್ನು ಎಸ್. ನಿಜಲಿಂಗಪ್ಪ ಅವರ ಹೆಸರಿನಲ್ಲಿ ರೂಪಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಹುಟ್ಟೂರಿನ ಭೂಮಿಗೆ ನೀರು ಕಾಣಿಸಲು ಆಗಲಿಲ್ಲ ಎಂಬ ಕೊರಗು ಕೊನೆಗಳಿಗೆಯವರೆಗೆ ನಿಜಲಿಂಗಪ್ಪನವರನ್ನು ಕಾಡುತ್ತಿತ್ತು. ಅದೇ ಕೊರಗಿನಲ್ಲಿ ಕೊನೆಯುಸಿರೆಳೆದರು. ಈ ಕನಸು ನನಸಾಗಿಸಲು ದೃಢ ಸಂಕಲ್ಪ ಮಾಡಿರುವ ಸರ್ಕಾರ ಚಿತ್ರದುರ್ಗ ಜಿಲ್ಲೆಗೆ ನೀರುಣಿಸುವ ಯೋಜನೆ ಕೈಗೆತ್ತಿಕೊಳ್ಳಲು ತೀರ್ಮಾನಿಸಿದೆ. ಅಂತ್ಯಕ್ರಿಯೆ ವಿಧಿ-ವಿಧಾನಗಳು ಪೂರ್ಣಗೊಂಡ ನಂತರ ಈ ಮಹತ್ತರ ಯೋಜನೆಗೆ ಚಾಲನೆ ನೀಡಲಾಗುವುದು ಎಂಬ ಮಾತನ್ನು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ತಿಳಿಸಿದರು.

೨೧ ಜುಲೈ ೨೦೦೪ರಂದು ವಿಧಾನ ಪರಿಷತ್ ಪ್ರಶ್ನೋತ್ತರ ಅವಧಿಯಲ್ಲಿ ಪಕ್ಷೇತರ ಅಭ್ಯರ್ಥಿ ಪಿ. ರಾಮಯ್ಯ ಅವರ ಪ್ರಶ್ನೆಗೆ ಉತ್ತರಿಸುತ್ತಾ ಕೃಷ್ಣ 'ಎ' ಸ್ಕೀಂನ ಯೋಜನೆಗಳನ್ನು ೨೦೦೫ ಡಿಸೆಂಬರ್ ಒಳಗೆ ಪೂರ್ಣಗೊಳಿಸುವುದರ ಜೊತೆಗೆ ಭದ್ರಾ ಮೇಲ್ದಂಡೆ ಯೋಜನೆ

[illegible]

ಶೀಘ್ರವೇ ಕೈಗೆತ್ತಿಕೊಳ್ಳಲಾಗುವುದು ಎಂದು ಭಾರಿ ನೀರಾವರಿ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ಭದ್ರಾ ಮೇಲ್ದಂಡೆ ಯೋಜನೆ ಹಂತ ಒಂದಕ್ಕೆ (ಉಂಬ್ರಾನಿ ಏತ ನೀರಾವರಿ ಯೋಜನೆ ಒಳಗೊಂಡು) ಆಡಳಿತಾತ್ಮಕ ಅನುಮೋದನೆ ನೀಡಿ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತಿರಸಲಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಬಚಾವತ್ 'ಬಿ' ಸ್ಕೀಂನಲ್ಲಿ ನೀರಿನ ಹಂಚಿಕೆಯಾಗಿಲ್ಲ. ಸ್ಕೀಂ 'ಎ' ಅಡಿ ಲಭ್ಯವಾಗುವ ೨೩ ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುವ ಪ್ರಸ್ತಾಪವಿದೆ ಎಂದು ಹೇಳಿದ್ದರು. ಈ ಸಂಬಂಧ ಬಿ.ಸಿ.ಅಂಗಡಿ ನೇತೃತ್ವ ಮಾಸ್ಟರ್ ಪ್ಲ್ಯಾನ್ ಸಮಿತಿಯ ಬಚಾವತ್ ತೀರ್ಪಿನಲ್ಲಿ ರಾಜ್ಯಕ್ಕೆ ಕೃಷ್ಣ ಕಣಿವೆ ಯೋಜನೆಗಳಿಗೆ ನಿಗಧಿ ಪಡಿಸಿರುವ ೭೩೪ ಟಿ.ಎಂ.ಸಿ. ನೀರಿನ ಸದ್ಬಳಿಕೆ ಮಾಡಲು ಪರಿಷ್ಕೃತ ಸ್ಕೀಂ 'ಎ' ಅಡಿಯಲ್ಲಿ ಯೋಜನೆಗಳಿಗೆ ನೀರಿನ ಹಂಚಿಕೆ ಮಾಡಲಾಗಿದೆ. ಅಂಗಡಿಯವರು ನಿಧನರಾಗಿದ್ದಾರೆ. ಆದ್ದರಿಂದ ಮಾಸ್ಟರ್ ಪ್ಲ್ಯಾನ್ ಸಮಿತಿಯ ವರದಿಯು ಈಗ ಅಂತಿಮಗೊಂಡು ಸರ್ಕಾರಕ್ಕೆ ಬರಬೇಕಾಗಿದೆ ಎಂದು ತಿಳಿಸಿದರು. ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯ ತಾಂತ್ರಿಕ ಸಲಹಾ ಸಮಿತಿಯ ಮುಂದೆ ಈ ಹಿಂದೆ ಕೆಲವೊಂದು ಪರ್ಯಾಯ ಯೋಜನೆಗಳು ಪರಿಶೀಲನೆಗೆ ಬಂದಿದ್ದು ನಂತರ ಬಚಾವತ್ ತೀರ್ಪಿನನ್ವಯ ಕೃಷ್ಣ ಕಣಿವೆಯ ನಿರಿನ ಸದ್ಬಳಕೆ ಮಾಡಿಕೊಳ್ಳಲು ಪ್ರಾಥಮಿಕ ತನಿಖಾ ಯೋಜನೆಯಂತೆ ಸರ್ಕಾರದ ಆದೇಶವನ್ನು ಭದ್ರಾ ಮೇಲ್ದಂಡೆ ಯೋಜನೆ ಹಂತ ಒಂದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಕರ್ನಾಟಕ ನೀರಾವರಿ ನಿಗಮಕ್ಕೆ ಕಳುಹಿಸಲಾಗಿದೆ. ಇದಕ್ಕಾಗಿ ಎರಡು ಜಲಾಶಯಗಳನ್ನು ನಿರ್ಮಿಸಲು ಉದ್ದೇಶಿದ್ದು ಇದರಿಂದ ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹಿರಿಯೂರು, ಚಿತ್ರದುರ್ಗ, ಚಳ್ಳಕೆರೆ, ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಮತ್ತು ಶಿರಾ, ದಾವಣಗೆರೆಯ ಚೆನ್ನಗಿರಿ ನೀರಾವರಿ ಸೌಲಭ್ಯ ಪಡೆಯಲಿವೆ ಎಂಬುದಾಗಿ ಸುದೀರ್ಘವಾದ ಪ್ರಶ್ನೆಯೊಂದಕ್ಕೆ ಉತ್ತರವನ್ನು ಖರ್ಗೆಯವರು ನೀಡಿದರು. (ಹೆಚ್ಚಿನ ಮಾಹಿತಿಗೆ ೨೧ ಜುಲೈ, ೨೦೦೪ರ ಕನ್ನಡಪ್ರಭ ವಾರ್ತೆ ನೋಡಬಹುದು).

"ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರ ಈ ಯೋಜನೆಗೆ ಸಂಬಂಧಿಸಿದಂತೆ ಕೆ.ಸಿ.ರೆಡ್ಡಿಯವರ ನೇತೃತ್ವದ ಸಮಿತಿಯನ್ನು ರಚಿಸಿತ್ತು. ಈ ಸಮಿತಿ ಯೋಜನೆಯ ಸಾಧಕ ಬಾಧಕಗಳ ಬಗ್ಗೆ ಸಂಪೂರ್ಣ ಅಧ್ಯಯನ ನಡೆಸಿ ಜುಲೈ ೧೫, ೨೦೦೬ರಂದು ಸರ್ಕಾರಕ್ಕೆ ವರದಿ ಸಲ್ಲಿಸಿ ಬಯಲು ಸೀಮೆಗೆ ಭದ್ರೆ ಹರಿಸಲು ಗ್ರೀನ್ ಸಿಗ್ನಲ್ ನೀಡಿತು."[೧೮] ಈ ಒಂದು ಆಯೋಗವನ್ನು ಚಿತ್ರದುರ್ಗದ ನೀರಾವರಿ ಹೋರಾಟ ಸಮಿತಿ ಸ್ವಾಗತಿಸಿ ಹರ್ಷ ವ್ಯಕ್ತಪಡಿಸಿತು. ಬಯಲು ಸೀಮೆಯ ಜನರ ಹಸಿದ ಒಡಲು ತುಂಬ ಬೇಕಾದರೆ ಯೋಜನೆ ಜಾರಿಯಾಗುವುದು ಸೂಕ್ತ ಬಚಾವತ್ ತೀರ್ಪಿನನ್ವಯ 'ಎ' ಸ್ಕೀಂನಲ್ಲಿ ನೀಡಲಾಗಿರುವ ೨೩ ಟಿ.ಎಂ.ಸಿ. ನೀರನ್ನು

ಬಳಸಿಕೊಳ್ಳದಿದ್ದರೆ, "ಬಿ ಸ್ಕೀಂನಲ್ಲಿ ನೀರು ಸಿಗದೆ ಬಯಲು ಸೀಮೆ ಶಾಶ್ವತವಾಗಿ ನೀರಾವರಿಯಿಂದ ವಂಚಿತವಾಗಬೇಕಾಗುತ್ತದೆಂದು ಆಯೋಗ ವರದಿಯಲ್ಲಿ ತಿಳಿಸಿದೆಯೆಂದು ಮೂಲಗಳು ತಿಳಿಸಿದವು.[೧೯] ಈ ಒಂದು ಕೆ.ಸಿ.ರೆಡ್ಡಿ ವರದಿ ಸೂಕ್ತವಾದಂತ ಒಂದು ವರದಿಯಾಗಿದ್ದು ಸರ್ಕಾರ ಈ ಯೋಜನೆಗೆ ಅನುಮೋದನೆ ನೀಡುವ ನಿಟ್ಟಿನಲ್ಲಿ ಒಪ್ಪಿಕೊಂಡಿತು.

ಜುಲೈ ೩೦, ೨೦೦೬ ರಂದು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ. ಕುಮಾರಸ್ವಾಮಿಯವರು ಮೈಸೂರಿಗೆ ಹೋಗುವ ಮಾರ್ಗ ಮಧ್ಯದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಕೆ.ಸಿ.ರೆಡ್ಡಿಯವರ ವರದಿಯನ್ನು ಆದರಿಸಿ ಚಿತ್ರದುರ್ಗ, ತುಮಕೂರು, ಹಾಗೂ ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರಿನ ಸಮಸ್ಯೆ ನೀಗಲು ಕಳೆದ ೩೫ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಭದ್ರಾ ಜಲಾಶಯ ಯೋಜನೆಯ ಅನುಷ್ಠಾನ ಕುರಿತು ಚರ್ಚಿಸಿ ಜನಪ್ರತಿನಿಧಿಗಳ ಮತ್ತು ರೈತರ ಸಭೆಯನ್ನು ಕರೆಯುವುದಾಗಿ, ಹಾಗೂ ನಿಜಲಿಂಗಪ್ಪ ಅವರ ಜೀವಿತಾವಧಿ ಕನಸನ್ನು ನನಸು ಮಾಡುವುದೇ ನನ್ನ ಸಂಕಲ್ಪವಾಗಿದೆ. ಮುಂದಿನ ಎರಡೂವರೆ ವರ್ಷಗಳಲ್ಲಿ ಯೋಜನೆಯನ್ನು ಜಾರಿಗೊಳಿಸಿ ಕುಡಿಯುವ ನೀರಿಗಾಗಿ ನಡೆಸಿದ ಹೋರಾಟಕ್ಕೆ ತೆರೆ ಎಳೆಯುವ ಈ ಯೋಜನೆಯ ಅನುಷ್ಠಾನಕ್ಕೆ ಸಾಕಷ್ಟು ಅಡಚಣೆಗಳಿವೆ ಮತ್ತು ವಿರೋಧಗಳಿವೆ ಎಂಬುದು ನನ್ನ ಗಮನದಲ್ಲಿದೆ.[೨೦] ಆದಾಗ್ಯೂ ಯೋಗ್ಯವಲ್ಲದ ಪ್ಲೋರೈಡ್‌ಯುಕ್ತ ನೀರನ್ನು ಜನ ಕುಡಿಯುವುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಅದರಿಂದ ಉಂಟಾಗುವ ಅಂಗವಿಕಲತೆಯ ಪರಿಣಾಮಗಳನ್ನು ಎದುರಿಸುವುದು ಕಷ್ಟ ಆದ್ದರಿಂದ ಯೋಜನೆಯ ಅಪಸ್ವರಕ್ಕೆ ಯಾವುದೇ ಅರ್ಥವಿಲ್ಲ ಎಂದು ಹೇಳಿದರು. ಸಮಸ್ಯೆಯನ್ನು ಸೌಹಾರ್ಧಯುತವಾಗಿ ಜನಪ್ರತಿನಿಧಿಗಳು, ರೈತ ಮುಖಂಡರೂ ಚಳವಳಿಕಾರರನ್ನು ಸೇರಿಸಿ ಸೌಹಾರ್ದಯುತ ಮಾತುಕತೆ ಮೂಲಕ ಭದ್ರಾಯೋಜನೆಯ ಬಗ್ಗೆ ಕೆ.ಸಿ.ರೆಡ್ಡಿಯವರು ನೀಡಿರುವ ವರದಿಯಲ್ಲಿನ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಚರ್ಚೆ ನಡೆಸಿದ ನಂತರ ಒಂದು ತೀರ್ಮಾನಕ್ಕೆ ಬರಲು ನಿರ್ಧರಿಸುವುದಾಗಿ ತಿಳಿಸಿದರು. ಬಯಲು ಸೀಮೆಯ ಜನರ ನೋವಿನ ಬಗ್ಗೆ ಮತ್ತು ಅವರ ಹಸಿವಿನ ಬಗ್ಗೆ ಕಾಳಜಿ ವಹಿಸಿದವರ ಹಾಗೆ ಮಾತನಾಡಿದರು. ಇದು ಯಾವ ಉದ್ದೇಶವನ್ನು ಇಟ್ಟುಕೊಂಡು ಈ ಮಾತನ್ನು ಹೇಳಿದರೋ ಇದು ಅವರಿಗೆ ಗೊತ್ತು. ಏಕೆಂದರೆ ಅವರ ಮಾತಿನಲ್ಲಿ ಎಲ್ಲೊ ಒಂದು ಕಡೆ ವಿರೋಧದ ಒತ್ತಡ ಇರುವುದು ಕಂಡುಬಂದಿತು. ಆದರೂ ಈ ವಿಚಾರದಲ್ಲಿ ಆಸಕ್ತಿ ಇರುವುದು ಅವರಲ್ಲಿ ಕಂಡುಬಂದಿತು.

ಬಹುನಿರೀಕ್ಷಿತ ಭದ್ರಾ ಮೇಲ್ದಂಡೆ ನಿರ್ಮಾಣಕ್ಕೆ ಸರ್ವಸಿದ್ಧತೆಯ ಬಗ್ಗೆ ೭ ನವ್ವೆಂಬರ್, ೨೦೦೬ ರಂದು ಜಲಸಂಪನ್ಮೂಲ ಸಚಿವರಾದ ಕೆ.ಎಸ್.ಈಶ್ವರಪ್ಪ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಯೋಜನೆ ಜಾರಿಗೆ ನವ್ವೆಂಬರ್ ೧೦ ರಂದು ನಡೆಯಲಿರುವ ಸಚಿವ

ಸಂಪುಟ ಸಭೆ ಒಪ್ಪಿಗೆ ನೀಡಲಿದೆ. ಒಪ್ಪಿಗೆ ದೊರೆತ ಬೆನ್ನಲ್ಲೇ ೪೧೫೦ ಕೋಟಿ ವೆಚ್ಚದ ಈ ಯೋಜನೆ ಕಾಮಗಾರಿಗಳ ಸರ್ವೆಕಾರ್ಯ ಆರಂಭವಾಗಲಿದೆ. ಮೇಲ್ದಂಡೆ ಯೋಜನೆಯಡಿಯಲ್ಲಿ ಭದ್ರಾ ಕಾಲುವೆ ಮೇಲ್ದರ್ಜೆ ತುಂಗಾದಿಂದ ಭದ್ರಾ ನದಿಗೆ ಕಾಲುವೆ ನಿರ್ಮಾಣ, ಭದ್ರಾದಿಂದ ಚಿತ್ರದುರ್ಗದ ಸುಮಾರು ೨ ಲಕ್ಷ ಹೆಕ್ಟೇರ್ ಭೂಮಿಗೆ ನೀರು ಒದಗಿಸಲು ಕಾಲುವೆ ನಿರ್ಮಾಣ, ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು, ಕೋಲಾರ ಜಿಲ್ಲೆಗಳ ೧೫೬ ಕೆರೆಗಳಿಗೆ ನೀರು ಹಾಯಿಸಲು ೭೦೦ ಕೋಟಿ ರೂಪಾಯಿ ವೆಚ್ಚದ ಕಾಮಗಾರಿ ಕೈಗೊಳ್ಳಲು ಯೋಜಿಸಲಾಗಿದೆ. ಸಚಿವ ಸಂಪುಟದ ಒಪ್ಪಿಗೆ ದೊರೆತ ಕೂಡಲೇ ಈ ಎಲ್ಲಾ ಕಾಮಗಾರಿಗಳಿಗೂ ಸಮೀಕ್ಷೆ ಕಾರ್ಯ ಆರಂಭಿಸಲಾಗುವುದು ಎಂದು ಹೇಳಿದರು. ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು, ಕೋಲಾರ ಜಿಲ್ಲೆಗಳಿಗೆ ನೀರು ಒದಗಿಸುವ ಈ ಯೋಜನೆಯ ಒಂದು ಭಾಗವಾದ ದಾವಣಗೆರೆ ವಿಭಾಗದ ಭದ್ರಾ ಕಾಲುವೆ ಮೇಲ್ದರ್ಜೆಗೇರಿಸುವ ಕಾಮಗಾರಿ ನವ್ಹೆಂಬರ್ ೧೫ರಿಂದ ಆರಂಭಗೊಳ್ಳಲಿದೆ. ಡಿಸೆಂಬರ್ ೩೦ರೊಳಗೆ ೮೨ ಕೋಟಿ ರೂ. ವೆಚ್ಚದ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದರು. ಕಾಲುವೆ ಮೇಲ್ದರ್ಜೆಗೇರಿಸಲು ಒಟ್ಟು ೪೭೧ ಕೋಟಿ ರೂಪಾಯಿ ಅಂದಾಜು ವೆಚ್ಚವಾಗಲಿದೆ. ಇದಕ್ಕಾಗಿ ಕಳೆದ ಮುಂಗಡ ಪತ್ರದಲ್ಲಿ ೪೫ ಕೋಟಿ ರೂಪಾಯಿ ಮೀಸಲಿಡಲಾಗಿದೆ. ಅದನ್ನು ೮೨ ಕೋಟಿ ರೂಪಾಯಿಗೆ ಹೆಚ್ಚಿಸಲಾಗಿದ್ದು ಈ ಹಣದಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು. ಈ ಯೋಜನೆ ಕೈಗೊಳ್ಳಲು ಹಣದ ಕೊರತೆ ಇಲ್ಲ ಎಂದು ಸಚಿವರು ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

೩೫ ವರ್ಷಗಳ ಭದ್ರಾ ಮೇಲ್ದಂಡೆ ಯೋಜನೆಗೆ ಸರ್ಕಾರದಿಂದ ಸಮ್ಮಿತಿ, ಕೆ.ಸಿ.ರೆಡ್ಡಿ ಸಮಿತಿ ವರದಿಗೆ ಒಪ್ಪಿಗೆ. ಕೆಲವೇ ನಿಮಿಷಗಳಲ್ಲಿ ಸುಮಾರು ೫೨ ನಿರ್ಣಯಗಳಿಗೆ ಸಚಿವ ಸಂಪುಟದ ಒಪ್ಪಿಗೆ. ನವ್ಹೆಂಬರ್ ೧೦, ೨೦೦೬ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಬರಪೀಡಿತ ಬಯಲು ಸೀಮೆ ಜನರ ದಾಹ ತಣಿಸುವ ಹಾಗೂ ಬಹು ಕಾಲದ ಬೇಡಿಕೆ ಈಡೇರಿಸುವ ದಿಸೆಯಲ್ಲಿ ಭದ್ರಾ ಮೇಲ್ದಂಡೆ ಒಂದನೇ ಹಂತದ (ಎ ಸ್ಕೀಂ)ಯೋಜನೆಗೆ ಸಂಪುಟ ಒಪ್ಪಿಗೆ ನೀಡಿತು. ಮೊದಲ ಹಂತದಲ್ಲಿ ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಬರಪೀಡಿತ ಪ್ರದೇಶಗಳಲ್ಲಿ ಈ ಯೋಜನೆ ಕೈಗೆತ್ತಿಕೊಳ್ಳಲು ಕೆ.ಸಿ.ರೆಡ್ಡಿ ಶಿಫಾರಸ್ಸುಗಳನ್ನು ಸಂಪುಟ ಒಪ್ಪಿಕೊಂಡು ಯೋಜನೆ ಕಾರ್ಯಗತಗೊಂಡಾಗ ಸುಮಾರು ೨.೫೦ ಲಕ್ಷ ಎಕರೆ ಪ್ರದೇಶಕ್ಕೆ ನೀರುಣಿಸಬಹುದು. ಇದರಿಂದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ ಎಂಬುದನ್ನು ಸಚಿವ ಸಂಪುಟ ನಿರ್ಣಯ ತೆಗೆದುಕೊಂಡಿತು.[೨೩] ಒಟ್ಟಿನಲ್ಲಿ ಸುಮಾರು ಮೂರು ದಶಕಗಳಿಂದ ಓಂದುಳಿದ ಬಡತನದಿಂದ ಬರಗಾಲದಿಂದ ಬೆಂದು ಹೋಗಿದ್ದಂತ ಚಿತ್ರದುರ್ಗ ಹಾಗೂ ಇತರೆ ನೆರೆಯ ಜಿಲ್ಲೆಗಳಿಗೆ ನೀರುಣಿಸುವ ಉದ್ದೇಶ ಹೊಂದಿದ್ದ ರಾಜ್ಯ ಸರ್ಕಾರ ಕೆ.ಸಿ.ರೆಡ್ಡಿ ವರದಿಗೆ

ಸಮ್ಮತಿ ನೀಡಿ ಜಾರಿಯಾಗಲು ಒಪ್ಪಿಗೆ ನೀಡಿ, ಸರ್ವೇ ಕಾರ್ಯಕ್ಕೆ ಚಾಲನೆ ನೀಡುವ ನಿಟ್ಟಿನಲ್ಲಿ ಮಳೆಯಾಧಾರಿತ ಪ್ರದೇಶಗಳ ಜನತೆಯಲ್ಲಿ ಸಂತೋಷದ ಸುದ್ದಿಯನ್ನು ಸಚಿವ ಸಂಪುಟ ನೀಡಿತು ಎಂಬುದನ್ನು ಸ್ಮರಿಸಬಹುದಾಗಿದೆ. ನವ್ವೆಂಬರ್ ೧೧, ೨೦೦೬ ರಂದು ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ಚಿತ್ರದುರ್ಗ ನಗರದ ಹೊರವಲಯದ ಕಾತ್ರಾಳು ಬಳಿ ಆದಿಚುಂಚನಗಿರಿ ಮಹಾಸಂಸ್ಥಾನದಿಂದ ಆರಂಭಿಸಿದ್ದ ಗೋಶಾಲೆ ಹಾಗೂ ಶ್ರೀ ಶಿವಲಿಂಗಾನಂದ ಸ್ವಾಮೀಜಿ ೫೦ನೇ ಜನ್ಮದಿನೋತ್ಸವ ಉದ್ಘಾಟಿಸಿ ಮಾತನಾಡುತ್ತಾ ಭದ್ರಾ ಮೇಲ್ದಂಡೆ ಯೋಜನೆ ಜಾರಿ ಕುರಿತು ಸಚಿವ ಸಂಪುಟದಲ್ಲಿ ತೆಗೆದುಕೊಂಡ ನಿರ್ಣಯಗಳು ಬಗ್ಗೆ ಮಾತನಾಡುತ್ತಾ ಹೇಳಿದರು. ಭದ್ರಾ ಮೇಲ್ದಂಡೆ ಯೋಜನೆಯನ್ನು ಇನ್ನು ಮೂರ್‍ನಾಲ್ಕು ವರ್ಷಗಳಲ್ಲಿ ಪೂರ್ಣಗೊಳಿಸಲು ಸರಕಾರ ಬದ್ಧವಾಗಿದೆ. ೪೫೦೦ ಕೋಟಿ. ರೂಪಾಯಿ ಅಂದಾಜು ವೆಚ್ಚದ ಭದ್ರಾ ಮೇಲ್ದಂಡೆ ಯೋಜನೆಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಇದಕ್ಕೆ ಪ್ರತಿ ವರ್ಷ ಒಂದರಿಂದ ಒಂದೂವರೆ ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡಿ ಮೂರ್‍ನಾಲ್ಕು ವರ್ಷಗಳಲ್ಲಿ ಯೋಜನೆ ಪೂರ್ಣಗೊಳಿಸುವ ಸರ್ಕಾರದ ನಿರ್ಧಾರದಿಂದ ಚಿತ್ರದುರ್ಗ ಭಾಗದ ಜನರ ಮೂರು ದಶಕಗಳ ಕನಸು ನನಸಾಗಿದೆ. ಶರವೇಗದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕೆಂದು ಸರಕಾರದ ಸಂಕಲ್ಪ. ಇದರಿಂದ ಶೀಘ್ರದಲ್ಲೇ ಜಿಲ್ಲೆ ಶಾಪಮುಕ್ತವಾಗಲಿದೆ ಎಂಬ ಮಾತನ್ನು ಸಭೆಯಲ್ಲಿ ವ್ಯಕ್ತಪಡಿಸಿದರು. ಭದ್ರಾ ಮೇಲ್ದಂಡೆ ಯೋಜನೆಗೆ ಅನುಮೋದನೆ ನೀಡಿದ ನಂತರವೇ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಬೇಕೆಂಬುದು ತಮ್ಮ ಉದ್ದೇಶವಾಗಿತ್ತು ಎಂದು ಮುಖ್ಯಮಂತ್ರಿಗಳು ಹೇಳಿದರು ಎಂದು ಪತ್ರಕರ್ತರಾದ ಚಿಕ್ಕಪ್ಪನಹಳ್ಳಿ ಷಣ್ಮುಖರನ್ನು ಸಂದರ್ಶಿಸಿದಾಗ ಈ ವಿಚಾರದ ಬಗ್ಗೆ ಸುದೀರ್ಘ ಮಾಹಿತಿ ನೀಡಿದರು.

ಚಿತ್ರದುರ್ಗಕ್ಕೆ ೧೦ ಜನವರಿ ೨೦೦೭ ರಂದು ನಗರದ ಭದ್ರಾ ಮೇಲ್ದಂಡೆ ಕಛೇರಿಯನ್ನು ಉದ್ಘಾಟಿಸಲು ಆಗಮಿಸಿದ ನೀರಾವರಿ ಸಚಿವ ಈಶ್ವರಪ್ಪನವರು ಜನತೆಯನ್ನು ಉದ್ದೇಶಿಸಿ ಮಾತನಾಡುತ್ತಾ ಬಯಲುಸೀಮೆಯ ಜನರ ಮೂವತ್ತು ವರ್ಷಗಳ ತಪಸ್ಸು ಈಡೇರಿದೆ. ಭದ್ರೆ ಬಂದೆಬರುವಳು. ಜನತೆ ಯಾವ ಆತಂಕ ಪಡಬೇಕಾಗಿಲ್ಲ. ನೀರಿಗೂ ಹೋರಾಟ ಮಾಡುವ ಸಂದರ್ಭ ಸೃಷ್ಟಿಯಾಗಿದ್ದು ಒಂದು ದುರಂತ. ಒಂದು ನ್ಯಾಯಯುತ ಯೋಜನೆಗೆ ಬಯಲು ಸೀಮೆ ಜನತೆ ಸತತ ಮೂವತ್ತು ವರ್ಷಗಳ ಕಾಲ ಕಾಯುವಂತಾಗಿದ್ದು ಕೂಡ ಬೇಸರ ಸಂಗತಿಯಾಗಿದೆ. ಜನರ ನೀರಿನ ಆಸೆಗೆ ಹಿಂದೆ ಆಡಳಿತ ನಡೆಸಿದ ಎಲ್ಲಾ ಪಕ್ಷಗಳು ಇದರ ಬಗ್ಗೆ ಶ್ರಮಿಸಿವೆ. ಇನ್ನು ಮುಂದೆ ನಾವು ಒತ್ತಾಸೆಯಿಂದ ಕೆಲಸ ಮಾಡುವೆ. ಜಿಲ್ಲೆಯ ಜನತೆ ಸೇರಿದಂತೆ ಶಾಸಕರು, ಜನಪ್ರತಿನಿಧಿಗಳು, ಜಿಲ್ಲಾ ನೀರಾವರಿ ಹೋರಾಟ ಸಮಿತಿ ನೇತೃತ್ವದಲ್ಲಿ ಜಾತ್ಯಾತೀತವಾಗಿ, ಪಕ್ಷಾತೀತವಾಗಿ ಹೋರಾಟ ಮಾಡುವ ಈ ಜನರ ತಪಸ್ಸಿಗೆ ಈಗ ಪ್ರತಿಫಲ

ದೊರೆತಿದೆ ಎಂಬ ಮಾತನ್ನು ಹೇಳಿದರು. ತಪ್ಪು ಗ್ರಹಿಕೆಗೆ ಒಳಗಾದ ದಾವಣಗೆರೆ, ಶಿವಮೊಗ್ಗ ಜಿಲ್ಲೆಯ ಜನತೆ ಪ್ರಾರಂಭದಲ್ಲಿ ವಿರೋಧ ವ್ಯಕ್ತಪಡಿಸಿದ್ದರು. ಭದ್ರಾನಾಲೆ ಆಧುನೀಕರಣದ ಮೂಲಕ ಸೋರಿಕೆಯಾಗುತ್ತಿದ್ದ ೫ ಟಿ.ಎಂ.ಸಿ. ನೀರನ್ನು ಅಚ್ಚುಕಟ್ಟುದಾರರಿಗೂ ತಲುಪಿಸಲು ೪೭೧ ಕೋಟಿ ರೂಪಾಯಿಗಳಿಗೆ ನಾಲೆ ರಿಪೇರಿ ಕಾಮಗಾರಿ ಕೈಗೊಳ್ಳಲಾಗುವುದು ಎಂಬ ಭರವಸೆ ನೀಡಿದರು. ಈ ಎಲ್ಲಾ ಕಾರಣದಿಂದ ವಿರೋಧಿಸುತ್ತಿದ್ದ ಜನ ಭದ್ರಾ ಮೇಲ್ದಂಡೆಗೆ ಜೈಕಾರ ಹಾಕುತ್ತಿದ್ದಾರೆ. ಈಗ ಯೋಜನೆಗೆ ಯಾವ ವಿರೋಧವೂ ಬಾರದಂತೆ ಸರ್ಕಾರ ಎಚ್ಚರ ವಹಿಸಲಿದೆ ಎಂದರು. ಈ ಸಂದರ್ಭದಲ್ಲಿ ಅವರು ತಮ್ಮ ಸರ್ಕಾರದ ಬಗ್ಗೆ ಮಾತನಾಡುವುದನ್ನು ಬಿಡಲಿಲ್ಲ. ಸಮ್ಮಿಶ್ರ ಸರ್ಕಾರ ಈ ನಿಟ್ಟಿನಲ್ಲಿ ಶ್ರಮ ಪಡುತ್ತಿದೆ. ಸರ್ಕಾರ ೪೧೫೦ ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದು. ಈ ಹಣ ರೈತರು ಬಡಜನರು ರಕ್ತದ ಬೆವರು ಹರಿಸಿ ನೀಡುವ ತೆರಿಗೆ ಹಣವಾಗಿದೆ. ಆದ್ದರಿಂದ ನೀರಾವರಿ ಹೋರಾಟ ಸಮಿತಿ ಕಾಮಗಾರಿ ನಡೆಯುವ ಸಂದರ್ಭದಲ್ಲಿ ಹೋಗಿ ಅಲ್ಲಿನ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡುವಂತೆ ಸೂಚಿಸಬೇಕು, ಇಲ್ಲಿ ಕೇವಲ ಸರ್ಕಾರದ ಮೇಲೆ ಜವಾಬ್ದಾರಿ ಇರಬಾರದು ರೈತ ಸಂಘ. ನೀರಾವರಿ ಹೋರಾಟ ಸಮಿತಿ ಇದಕ್ಕೆ ನೆರವಾಗಬೇಕು. ಆಗ ಮಾತ್ರ ಹೋರಾಟಕ್ಕೆ ತಕ್ಕ ಪ್ರತಿಫಲ ಸಿಕ್ಕಂತಾಗುತ್ತದೆ ಎಂದು ಹೇಳಿದರು.

ಅದೇ ಬಾರಿ ನೀರಾವರಿ ಸಚಿವರಾದ ಈಶ್ವರಪ್ಪನವರು ಜುಲೈ ೩೦, ೨೦೦೭ರಂದು ತುಮಕೂರಿನ ಪ್ರವಾಸಿಮಂದಿರದಲ್ಲಿ ಸುದ್ದಿಗಾರರೊಂದಿಗೆ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಸರ್ಕಾರ ತೆಗೆದುಕೊಂಡಂತ ನಿರ್ಣಯಗಳ ಬಗ್ಗೆ ಮಾತನಾಡುತ್ತಾ, ಕೆ.ಸಿ.ರೆಡ್ಡಿ ಸಲ್ಲಿಸಿರುವ ವರದಿ ಉತ್ಕೃಷ್ಟವಾಗಿದ್ದು ವರದಿಯನ್ವಯ ೪೧೫೦ ಕೋಟಿ ರೂಪಾಯಿ ವೆಚ್ಚದ ವರದಿ ಸಲ್ಲಿಸಿದ್ದು ಶಿವಮೊಗ್ಗ ಜಿಲ್ಲೆ ಮಂಡಗದ್ದೆ ಸಮೀಪ ಮುತ್ತಿನ ಕೊಪ್ಪದಲ್ಲಿ ತುಂಗಾ ನದಿಯಿಂದ ೧೫ ಟಿ.ಎಂ.ಸಿ. ನೀರನ್ನು ಲಕ್ಕವಳ್ಳಿಯ ಭದ್ರಾ ಅಣೆಕಟ್ಟೆಗೆ ತರುವ ವ್ಯವಸ್ಥೆ ಮಾಡಲಾಗುವುದು. ೧೫ ಕಿ.ಮೀ. ಈ ಯೋಜನೆಗೆ ೧೨೫ ಕೋಟಿ ರೂಪಾಯಿ ವೆಚ್ಚವಾಗುವುದು. ಭದ್ರಾ ಚಾನೆಲ್ ಆಧುನೀಕರಣಕ್ಕೆ ೪೭೧ ಕೋಟಿ ಮತ್ತು ತುಂಗ ವಿಜಯನಗರ ಹಾಗೂ ಗೋಂಡಿ ಚಾನೆಲ್‌ಗಳ ಆಧುನೀಕರಣಕ್ಕೆ ೨೩೦ ಕೋಟಿ ರೂಪಾಯಿ, ಚಿತ್ರದುರ್ಗ ಚಾನೆಲ್‌ಗೆ ೪೮೨ ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದು. ವೇದಾವತಿ ನದಿಗೆ ಬ್ಯಾರೇಜ್ ಕಟ್ಟಲು ೧೦೦ ಕೋಟಿ ರೂಪಾಯಿ, ತುಮಕೂರು ಮತ್ತು ಕೋಲಾರ ನಗರಗಳ ಕುಡಿಯುವ ನೀರಿನ ಯೋಜನೆಗೆ ೬೦೦ ಕೋಟಿ ರೂಪಾಯಿ ವಿನಿಯೋಗಿಸಲಾಗುವುದು ಹಾಗೂ ಈ ಎಲ್ಲಾ ಭಾಗಗಳ ಕೆರೆಗಳ ಹೂಳು ತೆಗೆಯಲಿಕ್ಕೆ ೭೨೦ ಕೋಟಿ ರೂಪಾಯಿ ವ್ಯಯಿಸಲಾಗುವುದು ಎಂಬ ನಿರ್ಣಯಗಳ ಬಗ್ಗೆ ಮಾಹಿತಿಯನ್ನು ಜನತೆಯ ಮುಂದಿಟ್ಟರು.

೩.೩. 'ಎ' ಸ್ಕೀಂ ಮತ್ತು 'ಬಿ' ಸ್ಕೀಂ ನೀರಿನ ಹಂಚಿಕೆಯ ಸಮಸ್ಯೆ.

ಕೃಷ್ಣ ನದಿಯು ಮಧ್ಯ ಮತ್ತು ಉತ್ತರ ಕರ್ನಾಟಕಕ್ಕೆ ಒಂದು ಜೀವನಾಡಿ. ಈ ನದಿಗೆ ಅತಿದೊಡ್ಡ ಉಪನದಿ ಎಂದರೆ ತುಂಗಭದ್ರಾ. ಚಿಕ್ಕಮಗಳೂರು ಜಿಲ್ಲೆಯ ಗಂಗಾಮೂಲ ಎಂಬ ಸ್ಥಳದಲ್ಲಿ ತುಂಗಾ ಮತ್ತು ಭದ್ರಾ ನದಿಗಳು ಹುಟ್ಟಿ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಹರಿದು ಗಾಜನೂರು ಅಣೆಯ ಕೆಳಭಾಗದಲ್ಲಿ ಒಂದಾಗಿ ತುಂಗಭದ್ರಾ ಎಂಬ ಹೆಸರು ಪಡೆದಿರುತ್ತದೆ. ಈ ಸಂಗಮದಿಂದ ಮುಂದೆ ಬೃಹದಾಕಾರವಾಗಿ ಬೆಳೆದು ನಮ್ಮ ರಾಜ್ಯದಲ್ಲಿ ಹರಿದು ನೆರೆ ರಾಜ್ಯವಾದ ಆಂಧ್ರಪ್ರದೇಶದ ಕರ್ನೂಲ್ ಬಳಿ ಕೃಷ್ಣ ನದಿಗೆ ಸೇರಿಕೊಳ್ಳುತ್ತದೆ.

ಕೃಷ್ಣ ಪಾತ್ರದಲ್ಲಿನ ನೀರಿನ ಹಂಚಿಕೆಯಲ್ಲಿ ನಮ್ಮ ರಾಜ್ಯವಲ್ಲದೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಕ್ಕೂ ಪಾಲು ಇದೆ. ಏಕೆಂದರೆ ಈ ನದಿ ಮಹಾರಾಷ್ಟ್ರದ ಪಶ್ಚಿಮ ಘಟ್ಟದಲ್ಲಿ ಹುಟ್ಟಿ ನಮ್ಮ ರಾಜ್ಯದಿಂದ ಹರಿದು ಆಂಧ್ರಪದೇಶದ ಮುಖೇನ ಬಂಗಾಳಕೊಲ್ಲಿಗೆ ಸೇರುತ್ತದೆ.

ಕೃಷ್ಣ ನದಿಯ ಇನ್ನುಳಿದ ಉಪನದಿಗಳೆಂದರೆ ಕೊಯಿನಾ ಘಟಪ್ರಭಾ, ಮಲಪ್ರಭಾ ಮತ್ತು ಭೀಮಾ, ಈ ಉಪನದಿಗಳು ನಮ್ಮ ರಾಜ್ಯದ ಉತ್ತರ ಭಾಗದ ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಹರಿದು ಆಲಮಟ್ಟಿ ಅಣೆಯ ಸಮೀಪ ಕೃಷ್ಣ ನದಿಗೆ ಸೇರುತ್ತದೆ. ಭೀಮಾ ನದಿ ಮಹಾರಾಷ್ಟ್ರದಿಂದ ಹರಿದು ಬಂದು ಬಿಜಾಪುರದ ಉತ್ತರ ಭಾಗಗಳಲ್ಲಿ ಮತ್ತು ಗುಲ್ಬರ್ಗಾ ಮಧ್ಯ ಭಾಗದಲ್ಲಿ ಹರಿದು ಕೃಷ್ಣ ನದಿಗೆ ಸೇರುತ್ತದೆ.

ಕೃಷ್ಣ ಜಲವಿವಾದ ಆಯೋಗದ ರಚನೆ ಮತ್ತು ಶಿಫಾರಸ್ಸುಗಳು:

ಕೃಷ್ಣ ಪಾತ್ರದಲ್ಲಿ ಹರಿಯುವ ನೀರನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ ಅಂತರ್ ರಾಜ್ಯ ವಿವಾದಗಳನ್ನು ಬಗೆ ಹರಿಸಲು ಕೇಂದ್ರ ಸರ್ಕಾರವು ನ್ಯಾಯಮೂರ್ತಿ ಬಚಾವತ್‌ರವರ ಅಧ್ಯಕ್ಷತೆಯಲ್ಲಿ ಕೃಷ್ಣ ಜಲವಿವಾದ ಆಯೋಗವನ್ನು ಏಪ್ರಿಲ್ ೧೯, ೧೯೬೯ರಲ್ಲಿ ರಚಿಸಿತು.

ಈ ಆಯೋಗವು ಸಾಕಷ್ಟು ಅಧ್ಯಯನ ನಡೆಸಿ ತಮ್ಮ ಅಂತಿಮ ವರದಿಯನ್ನು ದಿನಾಂಕ: ೨೪.೦೫.೧೯೭೬ರಂದು ಕೇಂದ್ರ ಸರ್ಕಾರಕ್ಕೆ ಮಂಡಿಸಿದ್ದು ಕೇಂದ್ರ ಸರ್ಕಾರವು ೩೧.೦೫.೧೯೭೬ ರಂದು ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಿಸಿವೆ.

ಆಯೋಗವು ಕೃಷ್ಣ ಪಾತ್ರದಲ್ಲಿ ವಿಜಯವಾಡ ಅಣೆಕಟ್ಟು ಬಳಿ ಹರಿಯುವ ನೀರನ್ನು ಅಳತೆ ಮಾಡಿ ಶೇ. ೭೫ ಅವಲಂಬನೆಯಂತೆ ಒಟ್ಟು ೨೦೬೦ ಟಿ.ಎಂ.ಸಿ. ನೀರು ಲಭ್ಯವಿದೆಯೆಂದು ಅಭಿಪ್ರಾಯಕ್ಕೆ ಬಂತು. ಒಂದು ಟಿ.ಎಂ.ಸಿ. ಎಂದರೆ ೧೦೦೦ ದಶಲಕ್ಷ ಘನ ಅಡಿಯಷ್ಟು ನೀರು ಲಭ್ಯವಿರುವ ಈ ನೀರನ್ನು ಈ ಕೆಳಕಂಡಂತೆ ೩ ರಾಜ್ಯಗಳಿಗೆ ಹಂಚಲಾಗಿದೆ.

೧. ಮಹಾರಾಷ್ಟ್ರ ೫೬೬ ಟಿ.ಎಂ.ಸಿ.

೨. ಕರ್ನಾಟಕ ೭೩೪ ಟಿ.ಎಂ.ಸಿ.

೩. ಆಂಧ್ರಪ್ರದೇಶ ೮೦೦ ಟಿ.ಎಂ.ಸಿ.

ನಮ್ಮ ಪಾಲಿಗೆ ಬಂದ ೭೩೪ ಟಿ.ಎಂ.ಸಿ. ನೀರಲ್ಲಿ ಚೆನ್ನೈ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ನದಿ ಪಾತ್ರದ ಇತರೆ ಎರಡು ರಾಜ್ಯಗಳೊಡನೆ ತಲಾ ೫ ಟಿ.ಎಂ.ಸಿ. ನೀರನ್ನು ಕೊಡಲು ಒಪ್ಪಿಕೊಳ್ಳಲಾಯಿತು.

ತುಂಗಭದ್ರಾ ಪಾತ್ರದಲ್ಲಿ ನೀರಿನ ಲಭ್ಯತೆ:

ಬಚಾವತ್ ವರದಿಯ ಪ್ರಕಾರ ಭದ್ರಾ ಅಣೆಕಟ್ಟಿನ ಬಳಿ ೯೨ ಟಿ.ಎಂ.ಸಿ. ನೀರು ಲಭ್ಯವಿದ್ದು, ಅದರಲ್ಲಿ ೬೨ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ. ಗಾಜನೂರು ಅಣೆಕಟ್ಟು ಬಳಿ ತುಂಗಾ ನದಿಯಲ್ಲಿ ೧೫೪ ಟಿ.ಎಂ.ಸಿ. ನೀರು ಲಭ್ಯವಿದ್ದು ೧೨ ಟಿ.ಎಂ.ಸಿ. ನೀರನ್ನು ಮಾತ್ರ ಉಪಯೋಗಿಸಿಕೊಳ್ಳಬೇಕಾಗಿದೆ. ತುಂಗಭದ್ರಾ ಅಣೆಕಟ್ಟು ಬಳಿ ४೨೩ ಟಿ.ಎಂ.ಸಿ. ನೀರು ಲಭ್ಯವಿದ್ದು ೨೯೫ ಟಿ.ಎಂ.ಸಿ. ನೀರನ್ನು ಮಾತ್ರ ಉಪಯೋಗಿಸಿಕೊಳ್ಳಲು ಅವಕಾಶವಿದೆ. ಅಂದರೆ ಭದ್ರಾ ಅಣೆಕಟ್ಟು ಬಳಿ ೧೪೨ ಟಿ.ಎಂ.ಸಿ. ಮತ್ತು ತುಂಗಭದ್ರಾ ಅಣೆಕಟ್ಟು ಬಳಿ ೧೨೮ ಟಿ.ಎಂ.ಸಿ. ನೀರನ್ನು ನಾವು ಉಪಯೋಗಿಸದೆ ಆಂಧ್ರಪ್ರದೇಶಕ್ಕೆ ಆ ರಾಜ್ಯದ ಪಾಲಿಗಾಗಿ ಬಿಟ್ಟು ಕೊಡುತ್ತಿದ್ದೇವೆ. ಅಂದರೆ ತುಂಗಾ, ಭದ್ರಾ ಮತ್ತು ತುಂಗಾಭದ್ರಾದಿಂದ ೩೦೦ ಟಿ.ಎಂ.ಸಿ. ನೀರನ್ನು ಆಂಧ್ರಪ್ರದೇಶಕ್ಕೆ ಬಿಡುತ್ತಿದ್ದೇವೆ.

ಮಧ್ಯ ಕರ್ನಾಟಕದ ಬಯಲು ಸೀಮೆಗಳಿಗೆ ಪಾಲಿಗೆ ಬರಬೇಕಾದ ನೀರಿನ ಬಳಕೆ (ಚಿತ್ರದುರ್ಗ, ತುಮಕೂರು, ಕೋಲಾರ, ಬಳ್ಳಾರಿ, ಚಿಕ್ಕಮಗಳೂರು)

ಕರ್ನಾಟಕದ ಪಾಲಿಗೆ ಬರುವ ೭೩೪ ಟಿ.ಎಂ.ಸಿ. ನೀರಲ್ಲಿ ನಾವು ಈಗಾಗಲೇ ೩೮೨.೩೪ ಟಿ.ಎಂ.ಸಿ.ಯಷ್ಟು ನೀರನ್ನು ಪೂರ್ಣಗೊಂಡಿರುವ ೨೯ ನೀರಾವರಿ ಯೋಜನೆಗಳಲ್ಲಿ ಉಪಯೋಗಿಸಿಕೊಳ್ಳುತ್ತಿದ್ದೇವೆ. ಪ್ರಗತಿಯಲ್ಲಿರುವ ಹನ್ನೊಂದು ಯೋಜನೆಗಳನ್ನು ಪೂರೈಸಿ ೩೪೧.೧೪ ಟಿ.ಎಂ.ಸಿ.ಯಷ್ಟು ನೀರನ್ನು ಉಪಯೋಗಿಸಿಕೊಳ್ಳಲಿದ್ದೇವೆ. ಹೊಸದಾಗಿ ೧೩ ಯೋಜನೆಗಳನ್ನು ಕೈಗೆತ್ತಿಕೊಂಡು ೧೧೦.೫೨ ಟಿ.ಎಂ.ಸಿ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ.

ಭದ್ರಾ ಮೇಲ್ದಂಡೆ ಯೋಜನೆ : ('ಎ' ಸ್ಕೀಂ)

ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಚರ್ಚಿಸುತ್ತಾ ಆಯೋಗವು, ಆ ಯೋಜನೆಗೆ ತಾತ್ಕಾಲಿಕವಾಗಿ ೮ ಟಿ.ಎಂ.ಸಿ. ನೀರನ್ನು ಮೀಸಲಿಟ್ಟು ಆ ಪ್ರಮಾಣವೂ ಸಹ ಗೋದಾವರಿ

[illegible]

ನದಿಯಿಂದ ೨೩ ಟಿ.ಎಂ.ಸಿ. ನೀರನ್ನು ಕೃಷ್ಣ ನದಿಗೆ ತಿರುಗಿಸಿದ ನಂತರ ಉಪಯೋಗಿಸಬಹುದೆಂದು ಮತ್ತು ಈ ಯೋಜನೆಗೆ ಬೇಕಾದ ನೀರಿನ ಲಭ್ಯತೆ ವಿವರಗಳನ್ನು ಕರ್ನಾಟಕ ರಾಜ್ಯವು ಮಂಡಿಸಬೇಕೆಂದು ಸೂಚಿಸಿತು. ಆದರೆ ಕರ್ನಾಟಕ ಸರ್ಕಾರವು ಭದ್ರಾ ಮೇಲ್ದಂಡೆ ಯೋಜನೆಗೆ ಬೇಕಾಗುವ ನೀರನ್ನು ಎಲ್ಲಿಂದ ಪಡೆಯಬಹುದೆನ್ನುವ ಬಗ್ಗೆ ಮಾಹಿತಿ ನೀಡಲು ಸಾಕಷ್ಟು ಸಮಯ ತೆಗೆದುಕೊಂಡಿತು. ಸರ್ಕಾರದ ಈ ವಿಫಲತೆಯಿಂದ ಭದ್ರಾ ಮೇಲ್ದಂಡೆ ಯೋಜನೆ ಸುಮಾರು ೩೦ ವರ್ಷಗಳವರೆಗೆ ನೆನೆಗುದಿಗೆ ಬಿದ್ದಿತು. ರಾಜ್ಯ ಪುನರ್ ವಿಂಗಡಣೆಯಾದ ಮೇಲೆ ಬಂದಿರುವ ಎಲ್ಲಾ ಸರ್ಕಾರಗಳು ರಾಜ್ಯದ ಮಧ್ಯ ಭಾಗದ ಜನರಿಗೆ ಈ ಯೋಜನೆಯನ್ನು ಮಂಜೂರು ಮಾಡಿಸಿಕೊಡುವುದಾಗಿ ಪದೇ ಪದೇ ಆಶ್ವಾಸನೆ ಕೊಟ್ಟು, ಈಡೇರಿಸದೆ ಇತ್ತೀಚಿನ ೧೦ ವರ್ಷಗಳಲ್ಲಿ ಆಡಳಿತಕ್ಕೆ ಬಂದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರ, ಧರ್ಮಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರ ಹಾಗೂ ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ಈ ಯೋಜನೆಯ ಬಗ್ಗೆ ಸರ್ಕಾರ ಈ ಯೋಜನೆಯ ಬಗ್ಗೆ ಹಲವಾರು ತಜ್ಞರ ಸಮಿತಿಗಳನ್ನು ರಚಿಸಿ ಅದರ ಸಾಧಕ ಬಾಧಕಗಳನ್ನು ಅಧ್ಯಯನ ಮಾಡಿ ಇಂದು ಈ ಯೋಜನೆ ಜಾರಿಯಾಗಿದ್ದ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಹೇಳಬಹುದು.

ಭದ್ರಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಬರಪೀಡಿತ ಪ್ರದೇಶಗಳಿಗೆ ಈ ಯೋಜನೆಯಿಂದ ಎರಡು ಹಂತದಲ್ಲಿ ನೀರನ್ನು ಉಣಿಸುವ ಯೋಜನೆಯಾಗಿದ್ದು, ಮೊದಲ ಹಂತದ 'ಎ' ಸ್ಕೀಂ ಯೋಜನೆಗೆ ಚಾಲನೆ ದೊರೆತಿದ್ದು, ಚಿತ್ರದುರ್ಗ, ಚಿಕ್ಕಮಗಳೂರು, ಜಿಲ್ಲೆಗೆ ನೀರಾವರಿ ಸೌಲಭ್ಯ ಮತ್ತು ತುಮಕೂರು, ಕೋಲಾರ, ಜಿಲ್ಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವುದಾಗಿದೆ. 'ಎ' ಸ್ಕೀಂ ಹಂತದ ನೀರಿನ ಹಂಚಿಕೆಯ ವಿವರ ಈ ಕೆಳಗಿನಂತಿದೆ.

'ಎ' ಸ್ಕೀಂ ನೀರಿನ ಹಂಚಿಕೆ

'ಎ' ಸ್ಕೀಂ ಪ್ರಕಾರ ೧೯೬೯ರಲ್ಲಿ ಪ್ರಸ್ತಾಪಿಸಿದಂತೆ ಭದ್ರಾ ಮೇಲ್ದಂಡೆ ಯೋಜನೆಯನ್ನು ಕಾರ್ಯಗತಗೊಳಿಸಲು ಚಿಕ್ಕಮಗಳೂರು ಜಿಲ್ಲೆಯ ಮಾಗುಂಡಿ ಗ್ರಾಮದ ಹತ್ತಿರ ಭದ್ರಾ ನದಿಗೆ ಅಡ್ಡಲಾಗಿ ಒಂದು ಅಣೆಕಟ್ಟನ್ನು ನಿರ್ಮಿಸುವ ಯೋಜನೆಯಿತ್ತು. ಅದಕ್ಕಾಗಿ ೧೨,೬೪೫ ಎಕರೆ ಜಮೀನಿನ ಮುಳುಗಡೆ ಸಂಭವದೊಂದಿಗೆ ೩೬ ಟಿ.ಎಂ.ಸಿ. ನೀರಿನ ಬಳಕೆಯ ರೂಪರೇಷೆಗಳನ್ನು ತಯಾರಿಸಲಾಗಿತ್ತು. ಆದರೆ ಕೃಷ್ಣ ಜಲ ವಿವಾದದ ನ್ಯಾಯಾಧೀಕರಣ ವರದಿಯಲ್ಲಿ ಸದರೀ ಯೋಜನೆಯನ್ನು ಕಾರ್ಯಗತಗೊಳಿಸಲು ನೀರಿನ ಲಭ್ಯತೆ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ಮಾಡುವ ಅವಶ್ಯಕತೆ ಇರುವುದಾಗಿ ತಿಳಿಸುತ್ತಾ ಯೋಜನೆಯನ್ನು ಅದುವರೆಗೆ ಮುಂದೂಡುವಂತೆ ಸೂಚಿಸಲಾಗಿತ್ತು.

[illegible]

[illegible]

[illegible]

ಆ ನಂತರ ಭದ್ರಾ ಮೇಲ್ದಂಡೆ ಯೋಜನೆಗಾಗಿ ಹಲವಾರು ಪರ್ಯಾಯ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ೨೦೦೧ರಲ್ಲಿ ಯೋಜನೆಯ ಸ್ಕೀಂ 'ಎ' ಗಾಗಿ ಪರಿಷ್ಕೃತ "ಮಾಸ್ಟರ್ ಪ್ಲ್ಯಾನ್"ನಲ್ಲಿ ೨೧.೫ ಟಿ.ಎಂ.ಸಿ. ನೀರಿನ ಹಂಚಿಕೆ ದೊರೆತಿರುತ್ತದೆ. ಇದಲ್ಲದೆ, ೧೯ ಟಿ.ಎಂ.ಸಿ.ನಷ್ಟು ನೀರನ್ನು ಯೋಜನೆಯ ಸ್ಕೀಂ 'ಬಿ' ಅಡಿಯಲ್ಲಿ ಬಳಸಿಕೊಳ್ಳಲು ಮಾಸ್ಟರ್ ಪ್ಲ್ಯಾನ್ ಮೂಲಕ ಕೇಂದ್ರ ಜಲ ಆಯೋಗಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಲಾಗಿದೆ. ಅಂದರೆ ಭದ್ರಾ ಮೇಲ್ದಂಡೆ ಯೋಜನೆಯ ಸ್ಕೀಂ 'ಎ' ಮತ್ತು 'ಬಿ'ಗಳ ನಿರ್ಮಾಣದೊಂದಿಗೆ ಕೃಷ್ಣಾ ಜಲಾನಯನ ಪ್ರದೇಶದಿಂದ ತುಂಗ ಮತ್ತು ಭದ್ರಾ ನದಿಗಳ ಮೂಲಕ ಒಟ್ಟು ೪೦.೫೦ ಟಿ.ಎಂ.ಸಿ. ನೀರೆತ್ತಿ ಚಿತ್ರದುರ್ಗ, ಚಿಕ್ಕಮಗಳೂರು, ಮತ್ತು ತುಮಕೂರು ಜಿಲ್ಲೆಗಳ ಭಾಗಶಃ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಹಾಗೂ ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವ, ತನ್ಮೂಲಕ ಅಂತರ್ಜಲ ಮಟ್ಟವನ್ನು ಎತ್ತರಿಸಿ ಈ ಎರಡೂ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯಗಳಿಗೆ ಸೂಕ್ತ ಮೂಲಾಧಾರಗಳನ್ನು ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಗಾಗಿ ೨೦೦೩ರಲ್ಲಿ ತಯಾರಿಸಲಾಗಿರುವ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಆದರೆ ಯೋಜನೆಗಾಗಿ ಆಗಬಹುದಾದ ಅಸಾಮಾನ್ಯ ಮುಳುಗಡೆ ಕ್ಷೇತ್ರ, ಅರಣ್ಯನಾಶ ಮುಂತಾದ ಸಮಸ್ಯೆಗಳನ್ನು ಪರಿಗಣಿಸಿ ಯೋಜನಾಧ್ಯಯನವನ್ನು ಮುಂದುವರೆಸುವ ನಿಟ್ಟಿನಲ್ಲಿ ಘನಸರ್ಕಾರವು ರಚಿಸಿದ ಶ್ರೀ. ಕೆ.ಸಿ.ರೆಡ್ಡಿ ಸಮಿತಿಯು ಸುದೀರ್ಘವಾದ ಅಧ್ಯಯನ ವರದಿಯನ್ನು ತಯಾರಿಸುತ್ತಾ, ಯೋಜನೆಯ ಮೂಲ ವರದಿಗೆ ಹಲವಾರು ಬದಲಾವಣೆಗಳನ್ನು ಸೂಚಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

ಈ ವರದಿಯನ್ನು ಸರ್ಕಾರವು ಯೋಜನೆಯ ನಿರ್ಮಾಣಕ್ಕಾಗಿ ಪರಿಗಣಿಸಿ, ಕ್ರಿಯಾರೂಪಕ್ಕೆ ತರುವ ಸಲುವಾಗಿ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ವಹಿಸಿರುತ್ತದೆ. ಶ್ರೀ ಕೆ.ಸಿ.ರೆಡ್ಡಿ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ ೫೯೮೫.೦೦ ಕೋಟಿ.ರೂಪಾಯಿಗಳ (೨೦೦೭-೦೮) ಒಂದು ಅಂದಾಜು ಪಟ್ಟಿಯನ್ನು ತಯಾರಿಸಿ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆಗಾಗಿ ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ಪರಿಷ್ಕೃತ ಭದ್ರಾ ಮೇಲ್ದಂಡೆ ಯೋಜನೆ ಸ್ಕೀಂ 'ಎ'ನ ವರದಿಯ ಪ್ರಕಾರ ಅಂತಿಮವಾಗಿ ಮಾರ್ಪಡಿಸಲ್ಪಟ್ಟ ಮೂಲೋದ್ದೇಶದ ಸಂಕ್ಷಿಪ್ತ ಮಾಹಿತಿಗಳು ಕೆಳಕಂಡಂತಿವೆ.

೧. ತುಂಗಾ ನದಿಯಿಂದ ೧೫ ಟಿ.ಎಂ.ಸಿ. ನೀರನ್ನು ಜೂನ್‌ನಿಂದ ಅಕ್ಟೋಬರ್‌ವರೆಗೆ ಎತ್ತಿ ೧೫ ಕಿ.ಮೀ. ದೂರದ ಭದ್ರಾ ಜಲಾಶಯಕ್ಕೆ ತುಂಬಿಸುವುದು.

೨. ಅದೇ ಸಮಯದಲ್ಲಿ ಭದ್ರಾ ಜಲಾಶಯದಿಂದ ೨೧.೫ ಟಿ.ಎಂ.ಸಿ. ನೀರನ್ನು ೪೭.೪ ಕಿ.ಮೀಟರ್‌ವರೆಗೆ ಎತ್ತಿ ಅಜ್ಜಾಪುರ ಗ್ರಾಮದ ಬಳಿಯಲ್ಲಿ ೬.೯ ಕಿ.ಮೀ. ಉದ್ದದ ಸುರಂಗದ ಮೂಲಕ ಚಿತ್ರದುರ್ಗ ಜಿಲ್ಲೆಗಾಗಿ ನೀರನ್ನು ತರುವುದು.

೩. ಚಿತ್ರದುರ್ಗ ಜಿಲ್ಲೆಯ ೧,೦೭,೨೬೫ ಹೆಕ್ಟೇರ್ ಜಮೀನಿಗೆ ಅರೇ ಖುಷ್ಕಿ ಬೆಳೆಗಳ ನೀರಾವರಿಗಾಗಿ ೧೫.೯ ಟಿ.ಎಂ.ಸಿ. ನೀರನ್ನು ಬಳಸಲು ೧೫೧ ಕಿ.ಮೀ. ಉದ್ದದ ಕಾಲುವೆಯೊಂದಿಗೆ ಅಚ್ಚುಕಟ್ಟು ಪ್ರದೇಶವನ್ನು ನಿರ್ಮಿಸುವುದು. ಇದರಲ್ಲಿ ೨.೦೨. ಟಿ.ಎಂ.ಸಿ. ನೀರನ್ನು ಅಚ್ಚುಕಟ್ಟು ಪ್ರದೇಶದಲ್ಲಿರುವ ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸಿ ಕುಡಿಯುವ ನೀರಿನ ಸೌಲಭ್ಯಗಳಿಗೆ ಮೂಲಾಧಾರಗಳನ್ನು ಕಲ್ಪಿಸುವುದರೊಂದಿಗೆ ಆ ಸಣ್ಣ ನೀರಾವರಿ ಕೆರೆಗಳ ಅಚ್ಚುಕಟ್ಟನ್ನು ಸ್ಥಿರೀಕರಿಸುವುದು.

೪. ಇದೇ ಕಾಲುವೆಯ ಮೂಲಕ ೫.೫ ಟಿ.ಎಂ.ಸಿ. ನೀರನ್ನು ಬಳಸಿಕೊಂಡು ಒಂದು ಹೊಸ ಬ್ಯಾರೇಜ್‌ನಲ್ಲಿನ ಶೇಖರಣೆಯೊಂದಿಗೆ ತುಮಕೂರು ಮತ್ತು ಕೋಲಾರ ಜಿಲ್ಲೆಗಳ ೧೧೯ ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸಿ ತನ್ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸಿಕೊಂಡು ಕುಡಿಯುವ ನೀರಿನ ಸೌಲಭ್ಯಕ್ಕೆ ಮೂಲಾಧಾರವನ್ನು ಕಲ್ಪಿಸುವುದು.

ಭದ್ರಾ ಮೇಲ್ದಂಡೆ ಯೋಜನೆ ಅನುಷ್ಠಾನದಿಂದ ಲಾಭ ಪಡೆಯುವ ತಾಲ್ಲೂಕುಗಳು ಈ ಕೆಳಕಂಡಂತಿವೆ.

ಕ್ರಸಂ.	**ಉದ್ದೇಶ**	**ಜಿಲ್ಲೆ**	**ಲಾಭಪಡೆಯುವ ತಾಲ್ಲೂಕು**	**ಪರಿಣಾಮ/ಕ್ಷೇತ್ರ (ಹೆಕ್ಟೇರ್‌ಗಳಲ್ಲಿ)**
೦೧.	ನೀರಾವರಿ	ಚಿಕ್ಕಮಗಳೂರು	ಕಡೂರು	೪೧೧.೧೨
			ತರೀಕೆರೆ	೧೮೬೪.೫೦
			ಒಟ್ಟು	**೨೨೭೫.೬೨**
೦೨.		ಚಿತ್ರದುರ್ಗ	ಹೊಸದುರ್ಗ	೩೧೦೩೪.೮೯
			ಹಿರಿಯೂರು	೩೭೦೫೧.೮೬
			ಚಿತ್ರದುರ್ಗ	೨೩೬೩೫.೭೩
			ಚಳ್ಳಕೆರೆ	೧೩೨೬೬.೯೦
			ಒಟ್ಟು	೧೦೪೯೮೯.೩೮
			ಒಟ್ಟು	೧೦೭೨೬೫.೦೦

[illegible]

[illegible]

[illegible]

[illegible]	[illegible]

ಯೋಜನೆಗಾಗಿ ಬಳಸಲು ಬೇಕಾಗಿರುವ ನೀರಿನ ಪ್ರಮಾಣ.

೧. ನೀರಾವರಿಗಾಗಿ ಮತ್ತು ಅಚ್ಚುಕಟ್ಟು ಪ್ರದೇಶದಲ್ಲಿರುವ ೩೭ ಸಣ್ಣ ನೀರಾವರಿ ಕೆರೆಗೆಳನ್ನು ತುಂಬಿಸುವ ಸಲುವಾಗಿ – ೧೫.೯೦ ಟಿ.ಎಂ.ಸಿ.

೨. ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ೧೧೯ ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವ ಸಲುವಾಗಿ – ೫ ಟಿ.ಎಂ.ಸಿ.

ಒಟ್ಟು – ೨೧.೫೦ ಟಿ.ಎಂ.ಸಿ.

ಯೋಜನೆಗಾಗಿ ನೀರು ತುಂಬಿಸಲು ಉದ್ದೇಶಿಸಿರುವ ತಾಲ್ಲೂಕುವಾರು ಸಣ್ಣ ನೀರಾವರಿ ಕೆರೆಗಳ ಸಂಖ್ಯೆ

ಕ್ರಸಂ.	ಜಿಲ್ಲೆ/ತಾಲ್ಲೂಕು	ಸಣ್ಣ ನೀರಾವರಿ ಕೆರೆಗಳ ಸಂಖ್ಯೆ
೧.	**ಚಿಕ್ಕಮಗಳೂರು**	
	ತರೀಕೆರೆ	೦೧
	ಕಡೂರು	೦೩
	ಒಟ್ಟು ಚಿಕ್ಕಮಗಳೂರು ಜಿಲ್ಲೆ	**೦೪**
೨.	**ಚಿತ್ರದುರ್ಗ ಜಿಲ್ಲೆ**	
	ಹೊಸದುರ್ಗ	೦೩
	ಹಿರಿಯೂರು	೧೫
	ಚಿತ್ರದುರ್ಗ	೦೬
	ಚಳ್ಳಕೆರೆ	೦೯
	ಒಟ್ಟು ಚಿತ್ರದುರ್ಗ ಜಿಲ್ಲೆ	**೩೩**
೩.	**ತುಮಕೂರು**	
	ಶಿರಾ	೪೧
	ಮಧುಗಿರಿ	೪೩
	ಕೊರಟಗೆರೆ	೧೬
	ಒಟ್ಟು ತುಮಕೂರು ಜಿಲ್ಲೆ	**೧೦೦**
೪.	**ಕೋಲಾರ**	
	ಕೋಲಾರ ತಾಲ್ಲೂಕು	೧೯
	ಒಟ್ಟು (ತುಮಕೂರು ಮತ್ತು ಕೋಲಾರ)	**೧೧೯**

[illegible]

ಭದ್ರಾ ಮೇಲ್ದಂಡೆ ಯೋಜನೆಯ ನಿರ್ಮಾಣಕ್ಕಾಗಿ ಮುಖ್ಯ ಇಂಜಿನಿಯರ್‌ರವರ ಮತ್ತು ಹಲವಾರು ಅಧೀನ ಅಧಿಕಾರಿಗಳ ಕಛೇರಿಗಳನ್ನು ಜೂನ್ ೨೦೦೭ರಿಂದ ಯೋಜನೆಯ ವಿವಿಧ ಸ್ಥಳಗಳಲ್ಲಿ ತೆರೆಯಲಾಗಿದೆ. ಒಟ್ಟು ಸುಮಾರು ೮೭೧ ಸಂಖ್ಯೆಯ ಸಿಬ್ಬಂದಿಯ ಅವಶ್ಯಕತೆ ಇದ್ದು ಅದರಲ್ಲಿ ಶೇ.೧೨ರಷ್ಟು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಪೂರ್ಣ ಪ್ರಮಾಣದ ಸಿಬ್ಬಂದಿಯೊಂದಿಗೆ ೬ ವರ್ಷಗಳಲ್ಲಿ ಅಂದರೆ ೨೦೧೨-೧೩ರ ವೇಳೆಗೆ ಯೋಜನೆಯನ್ನು ಪೂರ್ಣಗೊಳಿಸುವ ಸಮಗ್ರ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ. ಈ ನಿಟ್ಟಿನಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಪ್ರಸ್ತುತ ಯೋಜನೆಯ ಪಂಪಿಂಗ್ ಸಿಸ್ಟಮ್ ಮತ್ತು ಸುರಂಗ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಪಡೆಯಲಾಗಿದ್ದು, ಮುಂದಿನ ಪ್ರಕ್ರಿಯೆ ಜಾರಿಯಲ್ಲಿದೆ. ಯೋಜನಾ ಸಿಬ್ಬಂದಿ ಮತ್ತು ಕಛೇರಿ ಕಟ್ಟಡಗಳ ನಿರ್ಮಾಣದ ಕಾಮಗಾರಿಗಳು ಕೈಗೆತ್ತಿಕೊಳ್ಳುವ ಟೆಂಡರ್ ಪ್ರಕ್ರಿಯೆಗಳು ಜಾರಿಯಲ್ಲಿವೆ. ಚಿತ್ರದುರ್ಗ ಮುಖ್ಯ ಕಾಲುವೆಯ ನಿರ್ಮಾಣ ಮತ್ತು ಹಲವಾರು ಸಣ್ಣ ನೀರಾವರಿ ಕೆರೆಗಳ ಪುನಶ್ಚೇತನಕ್ಕಾಗಿ ಮೂಲ ಸರ್ವೆ ಕಾರ್ಯಗಳು ಪ್ರಗತಿಯಲ್ಲಿವೆ.

ಭದ್ರಾ ಮೇಲ್ದಂಡೆ ಯೋಜನೆಯ ರೂಪುರೇಷೆಗಳು:

೧. ಅಂದಾಜು

೧. ಮೂಲ ಅಂದಾಜು – ರೂ. ೨೮೧೩.೦೦ ಕೋಟಿ.

೨. ಶ್ರೀ.ಕೆ.ಸಿ.ರೆಡ್ಡಿಯವರ ವರದಿಯಂತೆ ತಯಾರಿಸಿದ ಅಂದಾಜು – ರೂ. ೪೧೫೦.ಕೋಟಿ.

೩. ಪರಿಷ್ಕೃತ ಅಂದಾಜು – ರೂ. ೫೯೮೫.೦೦ ಕೋಟಿ.

೨. ಯೋಜನೆಯ ಉದ್ದೇಶ:

೧. ಎರಡು ಹಂತದಲ್ಲಿ ನೀರನ್ನು ಎತ್ತುವುದು.

೨. ಸುರಂಗ ನಿರ್ಮಿಸುವುದು.

೩. ಕಾಲುವೆ ನಿರ್ಮಿಸುವುದು.

೪. ಬ್ಯಾರೇಜ್ ನಿರ್ಮಿಸಿ ತುಮಕೂರು, ಕೋಲಾರ ಜಿಲ್ಲೆಗಳಿಗೆ ಕುಡಿಯುವ ಸಲುವಾಗಿ ನೀರನ್ನು ಪಂಪ್ ಮಾಡುವುದು.

೩. ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ ನೀರೆತ್ತುವ ಮೊದಲ ಹಂತ:

೧. ನೀರಿನ ಪ್ರಮಾಣ – ೧೫.೦೦ ಟಿ.ಎಂ.ಸಿ.

೨. ನೀರು ಎತ್ತುವ ಎತ್ತರ – ೯೦.೦೦ ಮೀಟರ್

೩. ಕಾಲುವೆಯ ಉದ್ದ – ೬.೧೦ ಕಿ.ಮೀ.

೪. ಏರುಕೊಳವೆಯ ಉದ್ದ – ೫.೧೨ ಕಿ.ಮೀ.

೫. ಪಂಪುಗಳ ಒಟ್ಟು ಸಾಮರ್ಥ್ಯ – ೭೩೭೦೫ ಹೆಚ್.ಪಿ.

೬. ಅಂದಾಜು ವೆಚ್ಚ – ರೂ. ೩೨೪.೦೦ ಕೋಟಿ.

೪. ಭದ್ರಾ ಜಲಾಶಯದ ಅಜ್ಜಂಪುರ ಸುರಂಗದವರೆಗೆ ನೀರೆತ್ತುವ ಎರಡನೇ ಹಂತ:

೧. ನೀರಿನ ಪ್ರಮಾಣ – ೨೧.೫೦ ಟಿ.ಎಂ.ಸಿ.

೨. ನೀರು ಎತ್ತುವ ಎತ್ತರ – ೬೮.೫೩ ಮೀಟರ್

೩. ಕಾಲುವೆಯ ಉದ್ದ – ೨೫.೨ ಕಿ.ಮೀ.

೪. ಏರುಕೊಳವೆಯ ಉದ್ದ – ೫.೭೬ ಕಿ.ಮೀ.

೫. ಪಂಪುಗಳ ಒಟ್ಟು ಸಾಮರ್ಥ್ಯ – ೯೫೮೯೩ ಹೆಚ್.ಪಿ.

೬. ಅಂದಾಜು ವೆಚ್ಚ – ರೂ. ೧೦೨೫.೦೦ ಕೋಟಿ.

೫. ಅಜ್ಜಂಪುರ ಬಳಿಯ ಸುರಂಗ

೧. ಅಪ್ರೋಚ್ ನಾಲೆಯ ಉದ್ದ – ೦.೩೩ ಕಿ.ಮೀ.

೨. ಸುರಂಗದ ಉದ್ದ – ೬.೯೦ ಕಿ.ಮೀ.

೩. ಎಗ್ಸಿಟ್ ನಾಲೆಯ ಉದ್ದ – ೭.೭೦ ಕಿ.ಮೀ.

೪. ಒಟ್ಟು ನೀರು ಹರಿವಿನ ಪ್ರಮಾಣ – ೭೯.೩೬ ಕ್ಯಾಮೆಕ್ಸ್

೫. ಅಂದಾಜು ವೆಚ್ಚ – (೨೮೦೦೦ ಕ್ಯೂಸೆಕ್ಸ್) ರೂ. ೨೨೩.೯೬ ಕೋಟಿ.

೬. ಚಿತ್ರದುರ್ಗ ಮುಖ್ಯ ನಾಲೆ ಮತ್ತು ಬ್ಯಾರೇಜ್ ನಿರ್ಮಾಣ:

೧. ನಾಲೆಯ ಅಂದಾಜು ಉದ್ದ – ೧೫೧.೦೦ ಕಿ.ಮೀ.

೨. ಗಿರಷ್ಠ ನೀರು ಹರಿವಿನ ಪ್ರಮಾಣ – ೭೬.೩೬ ಕ್ಯೂಮೆಕ್ಸ್ (೨೮೦೦ ಕ್ಯೂಸೆಕ್ಸ್)

೩. ಎಫ್.ಎಸ್.ಡಿ. – ೪.೦೦ ಮೀಟರ್.

೪. ಉಪನಾಲೆಗಳ ಸಂಖ್ಯೆ (ಅಂದಾಜು) – ೬೯

೫. ಉಪನಾಲೆಗಳಲ್ಲಿನ ಎಫ್.ಎಸ್.ಡಿ. – ೦.೩೦ ಮೀ – ೧.೨೦ ಮೀ.

೬. ಜೆ.ಸಿ.ಎ. (ಅರೆಖುಷ್ಕಿ ಬೆಳೆ ನೀರಾವರಿ) – ೧,೩೧,೮೧೮ ಹೆಕ್ಟೇರ್‌ಗಳು.

೭. ಐ.ಸಿ.ಎ. (ಅರೆ ಖುಷ್ಕಿ ಬೆಳೆ ನೀರಾವರಿ) – ೧,೦೭,೨೬೫ ಹೆಕ್ಟೇರ್‌ಗಳು.

೮. ಚಿತ್ರದುರ್ಗ ನಾಲೆಯ ಪ್ರಾರಂಭಿಕ ತಳಮಟ್ಟ (ಸಿ.ಬಿ.ಎಲ್.) – ೭೩೦.೦೦ ಮೀ.

ಈ ಮೇಲ್ಕಂಡ ವರದಿಯ ಆಧಾರದ ಮೇಲೆ ಭದ್ರಾ ಮೇಲ್ದಂಡೆ ಯೋಜನೆಯ ಮೊದಲ ಹಂತದ ('ಎ' ಸ್ಕೀಂ) ನೀರನ್ನು ಬರಪೀಡಿತ ಜಿಲ್ಲೆಗಳಿಗೆ ನೀರಾವರಿ ವ್ಯವಸ್ಥೆ, ತುಮಕೂರು ಹಾಗೂ ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರಿಗಾಗಿ ಕೆರೆಗಳನ್ನು ತುಂಬಿಸುವ ವ್ಯವಸ್ಥೆ ಕಲ್ಪಿಸಲಾಗಿದ್ದು ಸರ್ಕಾರದಿಂದ ಅನುಮೋದನೆ ದೊರೆತಿದೆ. ಕಾಮಗಾರಿಗಳಿಗೆ ಟೆಂಡರ್ ಕರೆದಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಯ ಸ್ಕೀಂ 'ಬಿ' ಯ ಹಂತದ ಬಗ್ಗೆ ಸರ್ಕಾರ ಇನ್ನು ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಏಕೆಂದರೆ ಕೃಷ್ಣ ಜಲವಿವಾದದ ತೀರ್ಪಿನ ಪ್ರಕಾರ ಸ್ಕೀಂ 'ಎ' ನೀರನ್ನು ಉಪಯೋಗಿಸಿಕೊಂಡ ನಂತರ 'ಬಿ' ಸ್ಕೀಂನ ಬಗ್ಗೆ ಸಮಿತಿ ರಚಿಸಿ ಅದರ ಅಧ್ಯಯನಗಳನ್ನು ನಡೆಸಿ ನಂತರ 'ಬಿ' ಸ್ಕೀಂಗೆ ಅನುಮೋದನೆ ದೊರೆಯಬಹುದು. ಅಂದರೆ ಕೃಷ್ಣ ಜಲವಿವಾದದ ತೀರ್ಪಿನಂತೆ 'ಬಿ' ಸ್ಕೀಂನಡಿಯಲ್ಲಿ ಬರಪೀಡಿತ ಪ್ರದೇಶಗಳಾದ ಮಧ್ಯ ಕರ್ನಾಟಕ ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಬಳ್ಳಾರಿ, ದಾವಣಗೆರೆ ಮತ್ತು ಕೋಲಾರ ಜಿಲ್ಲೆಗಳಿಗೆ ಕೃಷ್ಣ ಕೊಳ್ಳದಿಂದ ೧೮೩ ಟಿ.ಎಂ.ಸಿ. ನೀರನ್ನು ಕೊಡಬೇಕೆಂದು ತೀರ್ಮಾನಿಸಲಾಗಿದೆ. ಅದು ಯಾವ ಮೂಲದಿಂದ ಅಥವಾ ಯಾವ ನದಿಯಿಂದ ಈ ನೀರನ್ನು ಕೊಡಬಹುದು ಎಂಬುದನ್ನು ಗುರುತಿಸಿಲ್ಲ. ಒಟ್ಟಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ 'ಎ' ಸ್ಕೀಂ ಮುಗಿದ ನಂತರ 'ಬಿ' ಸ್ಕೀಂನ್ನು ಕೈಗೆತ್ತಿಕೊಳ್ಳಲಾಗುವುದು.

ಅಡಿಟಿಪ್ಪಣಿಗಳು

೧. ಶೇಷನಾರಾಯಣ – ಕಾವೇರಿ ಒಂದು ಚಿಮ್ಮು ಒಂದು ಹೊರಳು, ಪುಟ ೫೫.

೨. ತುಂಗ ಮತ್ತು ಭದ್ರಾ ನದಿಗಳ ಹುಟ್ಟು. ಪಾತ್ರ ಹಾಗೂ ಜಲಚರಗಳ ಕುರಿತ ಅಧ್ಯಯನ ವರದಿ ಪುಟ ೧.

೩. ಟಿ. ಗಿರಿಜ – ಭಾರತದ ನದಿಗಳು, ಪುಟ ೧.

೪. ಕರ್ನಾಟಕ ನೀರಾವರಿ ನಿಗಮ ನಿಯಮಿತ, ಭದ್ರಾ ಮೇಲ್ದಂಡೆ ಯೋಜನೆಯ ಸಂಕ್ಷಿಪ್ತ ಟಿಪ್ಪಣಿ ಪುಟ ೧

೫. ವಿಮೋಚನ ಸಂಗತಿ ವಾರ ಪತ್ರಿಕೆಯಲ್ಲಿ ೯,೮,೧೯೯೮ರಲ್ಲಿ ಪ್ರಕಟವಾದ ನೀರಾವರಿ ಹೋರಾಟಕ್ಕೆ ದುರ್ಗ ಜನತೆ ಸಜ್ಜಾಗಬೇಕು ಎಂಬ ಲೇಖನ.

೬. 'ಗಿರಿಮಲ್ಲಿಗೆ' ವಾರ ಪತ್ರಿಕೆಯಲ್ಲಿ ೧೫ ಮೇ, ೧೯೯೮ರಂದು ಪ್ರಕಟವಾದ ಭದ್ರಾ ಮೇಲ್ದಂಡೆ ಎಂಬ ಕನಸು. ಎಂಬ ಲೇಖನ.

೭. ಅದೇ 'ವಿಮೋಚನ ಸಂಗಾತಿ' ವಾರಪತ್ರಿಕೆಯಲ್ಲಿ ೯, ಆಗಸ್ಟ್ ೧೯೯೮ರಂದು ಪ್ರಕಟವಾದ ತುಂಗಾ ತಿರುವು ಎಂಬ ಮಾಯೆ ಲೇಖನ.

೮. ಪಿ.ಕೋದಂಡ ರಾಮಯ್ಯ, ಭದ್ರಾ ಮೇಲ್ದಂಡೆ ಒಂದು ವಿವರಣೆ, ವಿಶ್ಲೇಷಣೆ.

೯. ಜಿ.ಎಸ್.ಪರಮಶಿವಯ್ಯನವರ ಭದ್ರಾ ಮೇಲ್ದಂಡೆ ಯೋಜನೆಯ ಪರ್ಯಾಯ ಯೋಜನೆಯ ವಾಸ್ತವಾಂಶಗಳ ವರದಿ.

೧೦. ಭದ್ರಾ ಮೇಲ್ದಂಡೆ ಯೋಜನೆಗಾಗಿ ಕೆ.ಸಿ. ರೆಡ್ಡಿಯವರಲ್ಲಿ ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಬೇಡಿಕೆಯನ್ನು ಸಲ್ಲಿಸಿದ್ದು.

೧೧. ನಗರವಾಣಿ ಪತ್ರಿಕೆ ವಾರ್ತೆ ಸೆಪ್ಟೆಂಬರ್ ೧೪, ೧೯೯೮.

೧೨. ಪ್ರಜಾವಾಣಿ ಪತ್ರಿಕೆ ವಾರ್ತೆ ೨೬ ಜನವರಿ ೧೯೯೯.

೧೩. ಜನವಾಹಿನಿ ಪತ್ರಿಕೆ ವಾರ್ತೆ, ೧೫ ಜುಲೈ ೧೯೯೮.

೧೪. ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯ ವತಿಯಿಂದ ತುಂಗ ಮತ್ತು ಭದ್ರಾ ಪರಿಷ್ಕೃತ ನೀರಾವರಿ ಯೋಜನೆ ಬಗ್ಗೆ ವರದಿ.

೧೫. ಸಂಯುಕ್ತ ಕರ್ನಾಟಕ ಪತ್ರಿಕೆ ವಾರ್ತೆ ೨೪ ಮೇ, ೧೯೯೯.

೧೬. ಅದೇ ೧, ಸೆಪ್ಟೆಂಬರ್ ೧೯೯೯

೧೭. 'ವಿಜಯ ಕರ್ನಾಟಕ' ಪತ್ರಿಕೆ ವಾರ್ತೆ, ೯ ಅಗಸ್ಟ್, ೨೦೦೬

೧೮. 'ಕನ್ನಡ ಪ್ರಭ' ಪತ್ರಿಕೆ ವಾರ್ತೆ – ೧೫ ಜುಲೈ, ೨೦೦೬

೧೯. 'ಪ್ರಜಾವಾಣಿ' ಪತ್ರಿಕೆ ವಾರ್ತೆ –೧೫, ಜುಲೈ ೨೦೦೬

೨೦. 'ಕನ್ನಡ ಪ್ರಭ' ಪತ್ರಿಕೆ ವಾರ್ತೆ – ೩೧ ಜುಲೈ ೨೦೦೬

೨೧. 'ಸಂಯುಕ್ತ ಕರ್ನಾಟಕ' ಪತ್ರಿಕೆ ವಾರ್ತೆ – ೩೧ ಜುಲೈ ೨೦೦೬

೨೩. ಅದೇ – ನವೆಂಬರ್ ೧೧, ೨೦೦೬.

ಅಧ್ಯಾಯ : ನಾಲ್ಕು

ಭದ್ರಾ ಮೇಲ್ದಂಡೆ ಯೋಜನೆ : ರಾಜಕೀಯ ಪಕ್ಷ ಮತ್ತು ವಿವಿಧ ಸಂಘಟನೆಗಳ ಮೂಲಕ ನಡೆದ ಚಳವಳಿಗಳು

ಅಧ್ಯಾಯ : ನಾಲ್ಕು

ಭದ್ರಾ ಮೇಲ್ದಂಡೆ ಯೋಜನೆ : ರಾಜಕೀಯ ಪಕ್ಷ ಮತ್ತು ವಿವಿಧ ಸಂಘಟನೆಗಳ ಮೂಲಕ ನಡೆದ ಚಳವಳಿಗಳು

"ನದಿ ನೀರನ್ನು ಬಳಸಿಕೊಳ್ಳುವಲ್ಲಿ ಅನೇಕ ವಾದವಿವಾದಗಳು ಸಂಭವಿಸುತ್ತಿವೆ. ಅವು ಚರಿತ್ರೆಯ ದಾಖಲೆಗಳಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲವಾದರೂ ಪ್ರಾಚೀನ ಕಾಲದಿಂದಲೂ ಅಲ್ಲಲ್ಲಿ ಕೆಲವು ಉಲ್ಲೇಖಗಳು ಬ್ರಿಟಿಷರ ಆಳ್ವಿಕೆಯಿಂದ ಈಚೆಗೆ ಕಂಡುಬರುತ್ತವೆ."[೧] ಹೀಗೆ ಜಲ ಅಥವಾ ನೀರಿಗೆ ಸಂಬಂಧಿಸಿದ ಹೋರಾಟ ನಡೆಸಿದ, ನಡೆಸುತ್ತಿರುವ ಮತ್ತು ವಿವಾದಕ್ಕೆ ಒಳಗಾಗಿ ಅದು ಇಂದಿಗೂ ಜಾರಿಯ ಹಂತದಲ್ಲಿರುವ ಭದ್ರಾ ಮೇಲ್ದಂಡೆ ಯೋಜನೆಯೂ ಕೂಡ ಒಂದಾಗಿದೆ. ಈ ಯೋಜನೆ ಮಳೆಯನ್ನು ಆಶ್ರಯಿಸಿ ಬದುಕುತ್ತಿರುವ ಚಿತ್ರದುರ್ಗ ಮತ್ತು ನೆರೆಯ ಇತರೆ ಜಿಲ್ಲೆಗಳಿಗೆ ನೀರುಣಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ೧೯೬೮ರಲ್ಲಿ ಅನುಷ್ಠಾನಗೊಳಿಸಿತು. ಆದರೆ ಈ ಯೋಜನೆ ಕೇವಲ ಆಶ್ವಾಸನೆಯನ್ನು ಹೊತ್ತುಕೊಂಡು ಬರುತ್ತಿದೆಯೇ ಹೊರತು ಅದು ಇಂದಿಗೂ ಜಾರಿಯಾಗದೆ ಬಡತನದಿಂದ ಬೇಯುತ್ತಿರುವ ಜನತೆ ಬರಿ ಕನಸನ್ನೇ ಕಾಣುವಂತಾಗಿದೆ. ಕೃಷ್ಣಾ ಕೊಳ್ಳದ ವ್ಯಾಪ್ತಿಗೆ ಒಳಪಡುವ ಮಧ್ಯಕರ್ನಾಟಕದ ಚಿತ್ರದುರ್ಗ, ಬಳ್ಳಾರಿ, ತುಮಕೂರು, ಚಿಕ್ಕಮಗಳೂರು ಹಾಗೂ ಕೋಲಾರ ಜಿಲ್ಲೆಗಳಿಗೆ ತುಂಗಾಭದ್ರಾ ನದಿಗಳಿಂದ ಸುಮಾರು ೧೦೦ ಟಿ.ಎಂ.ಸಿ. ನೀರನ್ನು ಕೊಡಬೇಕೆಂದು ತೀರ್ಮಾನವಾಗಿದ್ದರೂ, ಚಿತ್ರದುರ್ಗಕ್ಕೆ ಯಾವುದೇ ನದಿಯ ನೀರು ಇಂದಿಗೂ ಬಂದಿಲ್ಲ. ಈವರೆಗೆ ರಾಜ್ಯಸರ್ಕಾರ ಕೇವಲ ಆಶ್ವಾಸನೆಯನ್ನು ನೀಡುತ್ತಿದೆಯೇ ಹೊರತು ಕಾರ್ಯರೂಪಕ್ಕೆ ತರುವಲ್ಲಿ ವಿಫಲವಾಗುತ್ತಿದೆ. ಅಂದರೆ ಈ ಜನತೆಗೆ ಭದ್ರಾ ಮೇಲ್ದಂಡೆ ಯೋಜನೆಯ ಮೂಲಕ ನೀರನ್ನು ನೀಡುವ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಿತು. ಆದರೆ ಈ ಯೋಜನೆ ಜಾರಿಯಾದಲ್ಲಿ ಮಲೆನಾಡು ಜನತೆಗೆ ಅನಾನುಕೂಲವಾಗುತ್ತದೆ ಎಂದು ಅಲ್ಲಿನ ಜನತೆ ಇದನ್ನು ವಿರೋಧಿಸಿದರು. ಆಗ ಈ ಯೋಜನೆಯನ್ನು ನೆನೆಗುದಿಗೆ ಬಿಡಲಾಯಿತು. ಈ ಸಂದರ್ಭದಲ್ಲಿ ಕೇವಲ ಕೆಲವೇ ಕೆಲವು ಜನರು ಮಾತ್ರ ಯೋಜನೆಯ ಜಾರಿಗೆ ಆಗ್ರಹಿಸುತ್ತಿದ್ದರು. ಸರ್ಕಾರ ಮಾತ್ರ ಒಂದಿಲ್ಲೊಂದು ನೆಪ ಹೇಳಿಕೊಂಡು ಅವರ ಬಾಯಿ ಮುಚ್ಚಿಸುತ್ತಿತ್ತು. ಇದನ್ನರಿತ ಚಿತ್ರದುರ್ಗ, ತುಮಕೂರು, ಕೋಲಾರದ ಪ್ರಮುಖರು ಜನತೆಯನ್ನು ಒಗ್ಗೂಡಿಸಿದರು. ಸಂಘ ಸಂಸ್ಥೆಗಳಲ್ಲದೆ ಸಮಿತಿಗಳನ್ನು ಕಟ್ಟಿದರು. ಇಂಥ ಒಂದು ಸಂಘಟನೆಯಲ್ಲಿ ಚಿತ್ರದುರ್ಗದ ನೀರಾವರಿ ಹೋರಾಟ ಸಮಿತಿ ಹಾಗೂ ತುಮಕೂರಿನ ಅಪ್ಪಾಸ್ ಸಮಿತಿ ಮುಖ್ಯವಾದವುಗಳು ಅದರಲ್ಲೂ ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಇದರಲ್ಲಿ ಸಕ್ರೀಯವಾಗಿ ಪಾಲ್ಗೊಂಡಿರುವುದು ಗಮನಾರ್ಹ ಸಂಗತಿ.

[illegible]

[illegible]

[illegible]

ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯು ಮುಕ್ತ ವಿಚಾರ ವೇದಿಕೆಯೊಂದಿಗೆ ಪ್ರಾರಂಭವಾಗಿ ಜಿಲ್ಲಾ ನೀರಾವರಿ ಹಾಗೂ ಸಂಪನ್ಮೂಲ ಹೋರಾಟ ಸಮಿತಿ, ತದನಂತರ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಎಂಬ ನಾಮಗಳನ್ನು ಪಡೆದುಕೊಂಡಿತು.

ಈ ಸಮಿತಿಯ ಪ್ರಥಮ ಅಧ್ಯಕ್ಷರಾಗಿ ರಾಜ್ಯಸಭಾ ಸದಸ್ಯರಾದ ಹೆಚ್.ಹನುಮಂತಪ್ಪ, ಗೌರವಾಧ್ಯಕ್ಷರಾಗಿ ಎಸ್. ನಿಜಲಿಂಗಪ್ಪ, ಹೋರಾಟ ಸಮಿತಿ ಸಂಚಾಲಕರಾಗಿ ಪರಿಸರವಾದಿ ಹಾಗೂ ಸಾಹಿತಿ, ಡಾ. ಬಂಜಿಗೆರೆ ಜಯಪ್ರಕಾಶ್ ಮುಂತಾದವರು ಆಯ್ಕೆಯಾಗಿ ಅಂದಿನಿಂದ ನೀರಾವರಿ ಜಾರಿಗಾಗಿ ಹೋರಾಟ ಮಾಡುತ್ತಾ ಬಂದಿದೆ. ಈ ಒಂದು ಸಮಿತಿಯು ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಹುಟ್ಟಿಕೊಂಡಂತಹ ಸಮಿತಿಯಾಗಿದೆ. ಈ ಸಮಿತಿಯ ಅಧ್ಯಕ್ಷ ಸ್ಥಾನದಿಂದ ಹೆಚ್. ಹನುಮಂತಪ್ಪನವರು ನಿವೃತ್ತರಾದ ನಂತರ ಪಿ. ಕೋದಂಡರಾಮಯ್ಯನವರು ಅಧ್ಯಕ್ಷರಾಗಿ ಆಯ್ಕೆಯಾದರು. ಇವರ ನೇತೃತ್ವದಲ್ಲಿಯು ಸಹ ಸರ್ಕಾರದ ವಿರುದ್ಧ ಭದ್ರಾ ನೀರಿಗಾಗಿ ಚಳವಳಿ, ಹೋರಾಟ ಮಾಡುತ್ತಾ ಬಂದಿದೆ. ಇವರು ಚಿತ್ರದುರ್ಗದಲ್ಲಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋತ ನಂತರ ಇದರಿಂದ ದೂರ ಸರಿದರು. ನಂತರ ದಲಿತ ಸಂಘರ್ಷ ಸಮಿತಿಯ ಮುಖಂಡ ಎಂ. ಜಯಣ್ಣ ಕಾರ್ಯಾಧ್ಯಕ್ಷರಾಗಿ ಸಮಿತಿಯನ್ನು ಮುಂದುವರಿಸಿ ದಿನಾಂಕ ೧೦.೦೮.೨೦೦೮ ರಂದು ಸರ್ವಾನುಮತದಿಂದ ಅಧ್ಯಕ್ಷರಾಗಿ ಆಯ್ಕೆಯಾದರು. ಮುರಾಘರಾಜೇಂದ್ರ ಒಡೆಯರು ಕಾರ್ಯಾಧ್ಯಕ್ಷರಾಗಿ ನೇಮಕವಾಗಿದ್ದು ಇವರ ನೇತೃತ್ವದಲ್ಲಿ ಭದ್ರೆ ಜಾರಿಗೆ ಹೋರಾಟದ ಮೂಲಕ ಜಾರಿಯ ಹಂತದಲ್ಲಿ ನಿಂತಿದೆ. ಈ ಬಗೆಯ ಹೋರಾಟಗಳ ಘಟನೆಗಳನ್ನು ಇಲ್ಲಿ ಕೆಲವೊಂದು ವಿಶ್ಲೇಷಿಸಲಾಗಿದೆ. ಈ ವಿಚಾರವಾಗಿ ನಾನು ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ಹೋರಾಟಗಾರರಾದ ಡಾ. ಬಂಜಗೆರೆ ಜಯಪ್ರಕಾಶ್, ಪತ್ರಕರ್ತರಾದ ಚಿಕ್ಕಪ್ಪನಹಳ್ಳಿ ಷಣ್ಮುಖ, ಕೆ.ಆರ್. ದಯಾನಂದ್, ಹಿರಿಯೂರು ರೈತ ಸಂಘದ ಅಧ್ಯಕ್ಷ ಕಸವನಹಳ್ಳಿ ರಮೇಶ್, ಮಾಜಿ ಸಂಸದರಾದ ಪಿ.ಕೋದಂಡರಾಮಯ್ಯ, ಹಾಗೂ ಇತರ ಹೋರಾಟಗಾರರನ್ನು ಸಂದರ್ಶಿಸಿದ ಸಂದರ್ಭದಲ್ಲಿ ಅವರಿಂದ ಮಾಹಿತಿ ಪಡೆದು ಹೋರಾಟ ನಡೆದ ಬಗೆ ಅದರ ಉದ್ದೇಶ, ಸರ್ಕಾರದಿಂದ ಬಂದ ಉತ್ತರಗಳು ಈ ರೀತಿಯ ಅಂಶಗಳ ಬಗ್ಗೆ ವಿವರಿಸಿದರು. ಇಂತಹ ವಿಷಯಗಳನ್ನು ಇಲ್ಲಿ ಚರ್ಚಿಸಿದ್ದೇನೆ.

ಹಗಲು ಹೊತ್ತಿನಲ್ಲಿ ಸಣ್ಣ ಜೊಂಪು ಹತ್ತಿ ಅರಿವಿಲ್ಲದೆ ತೂಕಡಿಸುವವರಿಗಾಗಲೀ ದಿನವಿಡೀ ದುಡಿದು ಮೈದಣಿವಾರಿಸಿಕೊಳ್ಳಲು ದಿಂಬಿಗೆ ತಲೆ ಕೊಟ್ಟವರಿಗಾಗಲೀ, ಕತ್ತಲಾಯಿತು, ಇನ್ನು ನಿದ್ರೆ ಮಾಡಲೇಬೇಕೆಂದು ಸಂಕಲ್ಪ ಕೊಟ್ಟು ಕಂಬಳಿ ಹೊದ್ದು ಮಲಗಿದವರ ಕಿವಿಗೆ ಈ ಶಬ್ದ ಬಿದ್ದಿತೆಂದರೆ ಸಾಕು ದಿಗ್ಗನೆದ್ದು ಕುಳಿತುಕೊಳ್ಳುವರು. ಕಣ್ಣುಜ್ಜಿ ಅಕ್ಕಪಕ್ಕ ವೀಕ್ಷಿಸುತ್ತಾರೆ ಕೂಗಿಗೆ ಅವರ ಬಲಗೈ ತಂತಾನೆ ಮೇಲಕ್ಕೇರುತ್ತದೆ. ಹೌದು ಸಧ್ಯದ ಪರಿಸ್ಥಿತಿಯಲ್ಲಿ ಚಿತ್ರದುರ್ಗ

ಜಿಲ್ಲೆಯಲ್ಲಿ ಭದ್ರಾ ಮೇಲ್ದಂಡೆಯದೇ ಮಾತುಕತೆ. ಅದಕ್ಕೆ ಕಾರಣಗಳು ಹಲವಾರು, ಅದೇ ರೀತಿ ನೀರಾವರಿ ಜಾರಿಯಾಗದೇ ಇರುವುದಕ್ಕೆ ನೆನಪುಗಳು ನೂರಾರು, ಭದ್ರಾ ಮೇಲ್ದಂಡೆ ಯೋಜನೆಯೆಂಬ ಈ ಹಸಿರು ಕನಸಿಗೆ ಸುಮಾರು ಮೂರು ದಶಕಗಳಷ್ಟು ಚರಿತ್ರೆಯಿದೆ. ಹಿರಿಯ ಮುತ್ಸದ್ದಿ ನಿಜಲಿಂಗಪ್ಪ ಮುಖ್ಯಮಂತ್ರಿಯಾಗಿದ್ದಾಗ ತುಸು ಆಲೋಚಿಸಿ ಮನಸ್ಸು ಮಾಡಿದ್ದರೆ ಮೂರಂಕಿ ಕೋಟಿಯಲ್ಲಿ ಯೋಜನೆ ಜಾರಿಗೊಳಿಸಬಹುದಿತ್ತೆಂಬ ಮಾತುಗಳನ್ನು ಒಪ್ಪಬಹುದಾದರೂ ಅದು ಎಷ್ಟರ ಮಟ್ಟಿಗೆ ನಿಜವೆಂಬುದಕ್ಕೆ ಪುರಾವೆಗಳಿಲ್ಲ. ಸ್ವತಃ ನಿಜಲಿಂಗಪ್ಪನವರೇ ನಾನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗೆ ಇಳಿದ ನಂತರ ಭದ್ರಾ ಮೇಲ್ದಂಡೆ ಯೋಜನೆ ವರದಿ ಸರ್ಕಾರದ ಮುಂದೆ ಬಂದಿತೆಂದು ಸ್ಪಷ್ಟನೆ ನೀಡಿದರು.[೨] ಅದೇನೇ ಇರಲಿ ಚಿತ್ರದುರ್ಗ ಜಿಲ್ಲೆಯ ಭವಿಷ್ಯ ಹಸನುಗೊಳ್ಳಲು ನೀರಾವರಿ ಯೋಜನೆಯೊಂದೇ ಸೂಕ್ತ ಉತ್ತರವಾಗಬಲ್ಲದು.

ಈ ಉದ್ದೇಶದಿಂದ ಹಲವಾರು ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಮಠಾಧೀಶರುಗಳು ಹೋರಾಟದ ಹಾದಿಯ ಮೂಲಕ ತಮ್ಮ ಹಕ್ಕನ್ನು ಪಡೆಯುವ ನಿಟ್ಟಿನಲ್ಲಿ ಹೋರಾಟಕ್ಕೆ ಇಳಿದು ಜನತೆಯನ್ನು ಸಂಘಟಿಸುವ ಮೂಲಕ ಸರ್ಕಾರಕ್ಕೆ ಎಚ್ಚರಿಕೆ ನೀಡಿರುವುದನ್ನು ನಾವು ಕಾಣಬಹುದಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ೦೫.೧೦.೧೯೯೮ರಂದು ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಸಂಬಂಧಿಸಿದಂತೆ ಜಿಲ್ಲಾ ನೀರಾವರಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಹೊಳಲ್ಕೆರೆ ತಾಲ್ಲೂಕಿನಲ್ಲಿ ತಾಲ್ಲೂಕು ಘಟಕ ನೀರಾವರಿ ಹೋರಾಟ ಸಮಿತಿ ಪ್ರಾರಂಭಿಸುವುದರ ಮೂಲಕ ಬಾರಿ ಬಹಿರಂಗ ಸಭೆಯನ್ನು ನೆರವೇರಿಸಲಾಗಿತ್ತು. ಈ ಸಭೆಯಲ್ಲಿ ಶ್ರೀ ಮುರುಘರಾಜೇಂದ್ರ ಶಿವಾಚಾರ್ಯ, ಶಿವಮೂರ್ತಿ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತಾ, ಚಿತ್ರದುರ್ಗ ಜಿಲ್ಲೆಯನ್ನು ಒಳಗೊಂಡಂತೆ ಮಧ್ಯಕರ್ನಾಟಕದ ಇತರೆ ಭಾಗಗಳು ಅತ್ಯಂತ ಬರಪೀಡಿತ ಪ್ರದೇಶಗಳಾಗಿವೆ. ಶೇ.೮೦ರಷ್ಟು ಜನತೆ ಕೃಷಿಯನ್ನೇ ಅವಲಂಬಿಸಿದ್ದು, ನೀರಾವರಿ ಯೋಜನೆಯೊಂದರ ಅನುಷ್ಠಾನ ತುರ್ತಾಗಿ ಆಗಬೇಕಿದೆ. ಈ ಭಾಗದ ಸಂಪೂರ್ಣ ಭೂಮಿಗೆ ನೀರುಣಿಸುವ ಯೋಜನೆಯೊಂದನ್ನು ರಾಜ್ಯ ಸರ್ಕಾರ ತುರ್ತಾಗಿ ಕೈಗೆತ್ತಿಕೊಳ್ಳಬೇಕೆಂದು ಅವರು ಆಗ್ರಹಿಸುತ್ತಾರೆ. ಇಂತಹ ಭೀಕರ ಸನ್ನಿವೇಶದಲ್ಲಿ ಸಂಘಟಿತ ಹೋರಾಟ ಮಾಡದ ಹೊರತು ಯಾವುದೇ ಬೇಡಿಕೆಗಳು ಈಡೇರಲು ಸಾಧ್ಯವಿಲ್ಲ. ನೀರಾವರಿ ವಿಚಾರಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಜನತೆಯಲ್ಲಿ ಅರಿವು ಮೂಡಿಸಿ ಅವರನ್ನು ಬಡಿದೆಬ್ಬಿಸುವ ಕಾರ್ಯವನ್ನು ತುರ್ತಾಗಿ ಮಾಡಬೇಕಾಗಿದೆ. ಜನತೆ ಬಂಡೆದ್ದು ಬೀದಿಗಿಳಿದರೆ ತಾವು ನಾಯಕತ್ವವಹಿಸಲು ಸಿದ್ದರಿರುವುದಾಗಿ ಶ್ರೀಗಳು ಹೇಳಿದರು. ಬಯಲು ಸೀಮೆಗೆ ಸೂಕ್ತ ನೀರಾವರಿ ಯೋಜನೆಯ ಬಗ್ಗೆ ಮಾಹಿತಿ ನೀಡಿದ ನೀರಾವರಿ ತಜ್ಞ ಜಿ.ಎಸ್. ಪರಮಶಿವಯ್ಯ ಅವರು ನೀರೆ ಇಲ್ಲದ ತುಂಗಾ ತಿರುವು

[illegible]

ಯೋಜನೆ ಪ್ರಕಟಿಸಿ ರೈತಾಪಿ ಜನರ ಮೂಗಿಗೆ ತುಪ್ಪ ಸವರುವ ಕೆಲಸವನ್ನು ನೀರಾವರಿ ಸಚಿವ ನಾಗೇಗೌಡರು ಮಾಡಿದ್ದಾರೆ. ತುಂಗಾ ತಿರುವು ಯೋಜನೆ ಕಾರ್ಯಗತಗೊಳ್ಳುವುದೇ ಅಸಾಧ್ಯ. ಕನಿಷ್ಟ ೧೧೦ ಟಿ.ಎಂ.ಸಿ. ನೀರಾವರಿ ಯೋಜನೆ ಅನುಷ್ಠಾನದ ಬದ್ಧತೆಯ ವಿಚಾರದಲ್ಲಿ ರಾಜ್ಯಸರ್ಕಾರದೊಂದಿಗೆ ಯಾವ ರಾಜಿಗೂ ಬಯಲು ಸೀಮೆಯ ಜನ ಸಿದ್ಧರಿಲ್ಲವೆಂದು ತಿಳಿಸಿದರು. ಭದ್ರಾ ನದಿಯಲ್ಲಿ ನೀರೆ ಇಲ್ಲ ಎಂದು ಹೇಳಿದ ನಾಗೇಗೌಡರು ಅಪ್ನಾಸ್ ಕಮಿಟಿ ಮನವರಿಕೆ ಮಾಡಿಕೊಟ್ಟಾಗ ಒಪ್ಪಿಕೊಂಡರು. ಈ ಸಂದರ್ಭದಲ್ಲಿ ಅಪ್ನಾಸ್ ಸಮಿತಿ ಕಾರ್ಯದರ್ಶಿ ರಮೇಶ್ ಮಾತನಾಡಿ ತುಂಗಾತಿರುವು ಅಥವಾ ಭದ್ರಾ ಮೇಲ್ದಂಡೆಯೋ ಒಟ್ಟಾರೆ ಬಯಲುಸೀಮೆಗೆ ನೀರು ಬೇಕು. ಬೇಕಿದ್ದರೆ ಪಾಟೀಲ್ ತಿರುವು, ನಾಗೇಗೌಡ ತಿರುವು ಎಂದಾದರೂ ಹೆಸರಿಡಲಿ. ಆದರೆ ೧೧೦ ಟಿ.ಎಂ.ಸಿ. ನೀರಂತೂ ನಮಗೆ ಬೇಕೆ ಬೇಕೆಂದು ಹೇಳಿದರು. ವಿಧಾನ ಪರಿಷತ್ ಸದಸ್ಯ ಚೆನ್ನಬಸಪ್ಪ ಮಾತನಾಡಿ ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯ ಪರಿಸ್ಥಿತಿ ದಿನದಿಂದ ದಿನಕ್ಕೆ ವಿಕೋಪಕ್ಕೆ ಹೋಗುತ್ತಿದೆ. ಇದು ಹೀಗೆಯೇ ಮುಂದುವರೆದರೆ ಕುಡಿಯಲು ಬೊಗಸೆ ನೀರಿಗೂ ಪರದಾಡುವ ಸ್ಥಿತಿ ಎದುರಾದೀತು ಎಂದು ಆತಂಕದ ಬಗ್ಗೆ ತನ್ನ ನೋವನ್ನು ತೋಡಿಕೊಂಡರು. ಸಮಾರಂಭದಲ್ಲಿ ಮಾಜಿ ಸಂಸದ ಮಲ್ಲಿಕಾರ್ಜುನಪ್ಪ, ಮಾಜಿ ಶಾಸಕ ಎ.ವಿ.ಉಮಾಪತಿ, ಮಾತನಾಡಿ ಸಂಘಟಿತ ಹೋರಾಟಕ್ಕೆ ಕಾರ್ಯೋನ್ಮುಖರಾಗಬೇಕು ಎಂದು ಜನತೆಗೆ ಕರೆಕೊಟ್ಟರು. ಈ ಸಭೆಯಲ್ಲಿ ಸಾವಿರಕ್ಕೂ ಹೆಚ್ಚು ಜನರು ಬಂದಿದ್ದರು. ಇಂತಹ ಸಭೆಗಳು ಹೋರಾಟದ ಹಾದಿಯನ್ನು ಸುಗಮಗೊಳಿಸಿದವು ಎಂದು ಜಿಲ್ಲಾ ಹೋರಾಟ ಸಮಿತಿಯ ಅಧ್ಯಕ್ಷರಾದ ಎಂ. ಜಯಣ್ಣನವರನ್ನು ಸಂದರ್ಶಿಸಿದಾಗ ಈ ವಿಚಾರವನ್ನು ವ್ಯಕ್ತಪಡಿಸಿದರು.

ಈ ಒಂದು ಯೋಜನೆ ಜಾರಿಗಾಗಿ ವಿದ್ಯಾರ್ಥಿಗಳಿಂದಲೂ ಕೂಡ ಚಳವಳಿ ನಡೆದಿರುವುದನ್ನು ನಾವು ಕಾಣಬಹುದಾಗಿದೆ. ತುಮಕೂರಿನಲ್ಲಿ ಅಪ್ನಾಸ್ ಸಮಿತಿ ನೇತೃತ್ವದಲ್ಲಿ ಯೋಜನೆ ಕಾರ್ಯರೂಪಕ್ಕೆ ತರುವಂತೆ "೧೦ ಅಕ್ಟೋಬರ್ ೧೯೯೮ರಂದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಮುಖ್ಯಮಂತ್ರಿಗಳಿಗೆ ಪತ್ರ ಬರೆಯುವುದರ ಮೂಲಕ ಚಳವಳಿಯನ್ನು ನಡೆಸಿದರು."[೩] ಈ ವಿದ್ಯಾರ್ಥಿಗಳು ಭದ್ರಾ ಮೇಲ್ದಂಡೆ ಯೋಜನೆ ಜಾರಿಯಾಗುವವರೆಗೂ ಮುಖ್ಯಮಂತ್ರಿಗಳಿಗೆ ಪತ್ರ ಬರೆಯುವುದಾಗಿ ಹೇಳುತ್ತ ಸರ್ಕಾರ ಕೂಡಲೇ ಯೋಜನೆಯನ್ನು ಜಾರಿಗೊಳಿಸಬೇಕು ಇಲ್ಲದಿದ್ದರೆ ಉಗ್ರ ಹೋರಾಟಕ್ಕೂ ಸಹ ನಾವು ತಯಾರಿದ್ದೇವೆ ಎಂಬ ಘೋಷಣೆ ಕೂಗುತ್ತ ಚಳವಳಿಗೆ ಚಾಲನೆ ನೀಡಿದರು ಎಂದು ಹೇಳಬಹುದಾಗಿದೆ.

ಜೂನ್ ೨೩, ೧೯೯೯ರಂದು ಚಿತ್ರದುರ್ಗ ಜಿಲ್ಲೆಗೆ ನೀರಾವರಿ ಯೋಜನೆ ಜಾರಿಗೆ ಆಗ್ರಹಿಸಿ ಮಾಡನಾಯಕನಹಳ್ಳಿ ಆಸುಪಾಸಿನ ಸುಲ್ತಾನಿಪುರ, ಚಿಕ್ಕಪ್ಪನಹಳ್ಳಿ, ಕೂನಬೇವು, ಹುಣಸೇಕಟ್ಟೆ ಗ್ರಾಮಗಳ ರೈತರು ಮಾಡನಹಳ್ಳಿ ಬಳಿ ಹೆದ್ದಾರಿ ತಡೆ ನಡೆಸಿ ಪ್ರತಿಭಟನೆ

ವ್ಯಕ್ತಪಡಿಸಿದರು. ಸುಮಾರು ೪೫ ನಿಮಿಷ ಹೆದ್ದಾರಿ ತಡೆಮಾಡಿ ನೀರಾವರಿ ಯೋಜನೆ ಜಾರಿಗೋಳಿಸುವಲ್ಲಿ ಸರಕಾರ ತೋರುತ್ತಿರುವ ನಿರ್ಲಕ್ಷ್ಯ ಧೋರಣೆ ಖಂಡಿಸಿ ಘೋಷಣೆಗಳನ್ನು ಕೂಗಿದ್ದಾರೆ. ಈ ಪ್ರತಿಭಟನೆಯಲ್ಲಿ ಸಮಿತಿಯ ಮುಖಂಡರಾದ ಎಂ. ಜಯಣ್ಣ, ಪತ್ರಕರ್ತರಾದ ಚಿಕ್ಕಪ್ಪನಹಳ್ಳಿ ಷಣ್ಮುಖ ಹಲವಾರು ಸಮಿತಿ ಸದಸ್ಯರು, ರೈತ ಮುಖಂಡರು, ಭಾಗವಹಿಸಿ ಪ್ರತಿಭಟನೆಗೆ ಉತ್ತಮ ಬೆಂಬಲ ನೀಡಿದರು ಎಂಬುದಾಗಿ ಸಮಿತಿ ಖಜಾಂಚಿ ಕೆ.ಆರ್. ದಯಾನಂದರ ಜತೆ ಸಮಾಲೋಚಿಸುವಾಗ ಈ ಮಾತನ್ನು ಹೇಳಿದರು. ಇದರಿಂದ ಅರ್ಥವಾಗುವುದು ಏನೆಂದರೆ ಜನತೆಯ ಈ ಕೂಗು ಸರ್ಕಾರಕ್ಕೆ ಏಕೆ ಅರ್ಥವಾಗುತ್ತಿಲ್ಲ ಎಂಬುದು ಇದರ ಹಿಂದಿನ ಧೋರಣೆಗಳು ಏನು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ನೀರಾವರಿ ತಜ್ಞ ಕೆ.ಸಿ.ರೆಡ್ಡಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಅದರ ಯಥಾವತ್ ಜಾರಿಗೆ ಒತ್ತಾಯಿಸಿ ಹಿರಿಯೂರಿನಲ್ಲಿ ೩೦ ಜುಲೈ ೨೦೦೬ ರಂದು ಪ್ರತಿಭಟನೆ ನಡೆಯಿತು. ಈ ವಿಚಾರದ ಬಗ್ಗೆ ಹಿರಿಯೂರು ರೈತ ಸಂಘದ ಅಧ್ಯಕ್ಷ ಕಸವನಹಳ್ಳಿ ರಮೇಶ್‌ರಾವ್‌ರನ್ನು ಭೇಟಿಯಾದಾಗ ಈ ಪ್ರತಿಭಟನೆಯ ಬಗ್ಗೆ ಮಾಹಿತಿಯನ್ನು ನೀಡುತ್ತಾ ಅಂದು ಈ ಪ್ರತಿಭಟನೆ ನಡೆಯಲು ಮುಖ್ಯ ಕಾರಣವೇನೆಂದರೆ ಸಚಿವರಾದ ರವೀಂದ್ರನಾಥರು ಯೋಜನೆಯನ್ನು ವಿರೋಧಿಸಿ ಮಾತನಾಡಿದ್ದು ಪ್ರತಿಭಟನೆಗೆ ಎಡೆ ಮಾಡಿಕೊಟ್ಟಿತು. ಅಂದು ನಗರದ ಗಾಂಧೀವೃತ್ತದಲ್ಲಿ ತಾಲ್ಲೂಕು ನೀರಾವರಿ ಹೋರಾಟ ಸಮಿತಿಯ ನೇತೃತ್ವದಲ್ಲಿ ರಸ್ತೆ ತಡೆ ಮಾಡಿ ಮಾನವ ಸರಪಳಿ ನಿರ್ಮಿಸಿ ಕೆ.ಸಿ.ರೆಡ್ಡಿ ವರದಿಯನ್ನು ಕೂಡಲೇ ಯಥಾವತ್ ಜಾರಿಗೊಳಿಸಬೇಕೆಂದು ಪ್ರತಿಭಟನಾಕಾರರು ಘೋಷಣೆ ಕೂಗುತ್ತಾ ಭದ್ರಾ ಮೇಲ್ದಂಡೆ ಯೋಜನೆ ವಿರೋಧಿ ರವೀಂದ್ರನಾಥರ ಪ್ರತಿಕೃತಿ ದಹನ ಮಾಡಿ ಕೂಡಲೇ ಸಚಿವ ರವೀಂದ್ರನಾಥರು ತಾವು ಆಡಿರುವ ಮಾತನ್ನು ಹಿಂತೆಗೆದುಕೊಳ್ಳಬೇಕು ಇಲ್ಲದಿದ್ದರೆ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿ ಎಂಬ ಘೋಷಣೆಗಳು ಪ್ರತಿಭಟನೆಯಲ್ಲಿ ಮೊಳಗಿದವು. ಈ ಸಂದರ್ಭದಲ್ಲಿ ತಾಲ್ಲೂಕು ನೀರಾವರಿ ಹೋರಾಟ ಸಮಿತಿ ಸಂಚಾಲಕರಾದ ಎಂ.ಡಿ. ರವಿಯವರು ಮಾತನಾಡುತ್ತಾ ಕಳೆದ ೫೦ ವರ್ಷಗಳಿಂದ ನಮ್ಮ ಹಕ್ಕಿನ ನೀರು ಉಪಯೋಗಿಸದೇ ತಪ್ಪು ಮಾಡಿದ್ದೇವೆ. ಬರಗಾಲ ಪೀಡಿತ ಜಿಲ್ಲೆಯವರು ಯಾವ ಹಕ್ಕಿನ ನೀರನ್ನು ಕೇಳುತ್ತಿಲ್ಲ. ನಾವು ಇನ್ನೊಬ್ಬರ ಅನ್ನಕ್ಕೆ ಕೈ ಹಾಕುವುದಿಲ್ಲ. ೫೦ ವರ್ಷಗಳಿಂದ ಕೇವಲ ಭರವಸೆಗಳ ಮೂಲಕ ನೀರು ಹಾಯಿಸುವುದಾಗಿ ಹೇಳುತ್ತಿದ್ದು ಸುಳ್ಳಾಗಿದೆ ಎಂದು ಹೇಳಿದರು. ಸಮಿತಿ ಮುಖಂಡ ಕೆ.ಜಿ.ಮೂಡ್ಲಪ್ಪ ಮಾತನಾಡಿ ನಾವು ಹಿಂದೆ ಪರಕೀಯರ ವಿರುದ್ಧ ಹೋರಾಟ ಮಾಡಿದ್ದೇವೆ. ಈಗ ನೀರಿಗಾಗಿ ಉಗ್ರ ಹೋರಾಟ ಮಾಡಿ ರಕ್ತ ಕೋಡಿ ಹರಿಸಿಯಾದರೂ ಬರಪೀಡಿತ ಜಿಲ್ಲೆಗಳಿಗೆ ನೀರು ತರುತ್ತೇವೆ ಎಂದು ಹೇಳಿದರು. ಅದೇ ರೀತಿ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಸಂಚಾಲಕ ಶೇಷಣ್ಣ ಕುಮಾರ್ ಮಾತನಾಡುತ್ತಾ,

[illegible]

ಸರ್ಕಾರದಿಂದ ತಾಂತ್ರಿಕ ಒಪ್ಪಿಗೆ ಸಿಕ್ಕ ನಂತರ ಕೆಲವು ಜಿಲ್ಲೆಗಳ ಪ್ರತಿರೋಧದಿಂದಾಗಿ ಸರ್ಕಾರ ಈ ಯೋಜನೆಯ ಜಾರಿಗಾಗಿ, ಕೆ.ಸಿ.ರೆಡ್ಡಿ ವರದಿಯು ತಾತ್ವಿಕ ಒಪ್ಪಿಗೆ ನೀಡಿರುವುದರಿಂದ ನಾವು ಎರಡು ಹಂತದಲ್ಲಿ ಜಯಕಂಡಿದ್ದೇವೆ. ಈಗೇನಿದ್ದರೂ ನೀರನ್ನು ಹರಿಸುವ ವಿಚಾರವಾಗಿ ಹೋರಾಟವನ್ನು ಮಾಡಬೇಕಾಗಿದೆ ಎಂದು ಹೇಳಿದರು. ಒಟ್ಟಿನಲ್ಲಿ ಈ ಒಂದು ಪ್ರತಿಭಟನೆಯಲ್ಲಿ ಯೋಜನೆ ಜಾರಿಗೆ ಉತ್ತಮ ಬೆಂಬಲ ದೊರೆಯಿತು ಹಾಗೂ ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿಯೂ ಕೂಡ ಯೋಜನೆಗೆ ಸಂಬಂಧಿಸಿದ ಹಾಗೆ ಹೋರಾಟ ನಡೆಯುತ್ತಿದೆ. ಆದ್ದರಿಂದ ಯಾವುದೇ ಕಾರಣಕ್ಕೂ ಹೋರಾಟದಿಂದ ಹಿಂದೆ ಸರಿಯಬಾರದು ಎಂಬ ವಿಚಾರ ಪ್ರತಿಭಟನಾಕಾರರಲ್ಲಿ ಹೊರಬಂದಿತು ಎಂದು ಕಸವನಹಳ್ಳಿ ರಮೇಶ್ ತಿಳಿಸಿದರು.

ಇಷ್ಟೆಲ್ಲಾ ಹೋರಾಟಗಳು, ಚಳವಳಿಗಳು, ರಸ್ತೆ ತಡೆಗಳು, ನಡೆದರೂ ಕೂಡ ಸರ್ಕಾರ ಇದರ ಬಗ್ಗೆ ಬರೀ ಚಿಂತನೆಗಳನ್ನು ಮಾಡುವುದರಲ್ಲೇ ತಜ್ಞರ ಸಮಿತಿ ರಚಿಸುವುದರಲ್ಲೇ ಕಾಲ ಕಳೆಯಿತು. ಕೇವಲ ಆಶ್ವಾಸನೆಯ ಲೋಕವನ್ನೇ ಕಟ್ಟುತ್ತಾ ಬಂದಿತು. ಇಲ್ಲಿ ಜನಪ್ರತಿನಿಧಿಗಳು ಈ ಯೋಜನೆಯನ್ನು ರಾಜಕೀಯದ ವಿಷಯವಾಗಿ ಬಳಸಿಕೊಂಡು ಚುನಾವಣೆ ಸಂದರ್ಭ ಬಂತೆಂದರೆ ಎಲ್ಲಾ ಪಕ್ಷದ ಮುಖಂಡರು ನಾವು ಈ ಸಾರಿ ಜಯಸಿದ್ದೇ ಆದರೆ ಅಥವಾ ನಮ್ಮ ಪಕ್ಷ ಅಧಿಕಾರಕ್ಕೆ ಬಂದಿದ್ದೇ ಆದರೆ ಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಹೋರಾಟ ಮಾಡುತ್ತೇವೆ. ಖಂಡಿತವಾಗಿಯೂ ಅದನ್ನು ಜಾರಿಗೊಳಿಸುತ್ತೇವೆ ಎಂದು ಇತರ ಪಕ್ಷಗಳನ್ನು ಟೀಕೆ ಮಾಡುತ್ತಾ, ಈ ಯೋಜನೆ ಜಾರಿಯಾಗದಿದ್ದರೆ ನಾನು ರಾಜಕೀಯದಿಂದಲೇ ನಿವೃತ್ತಿಯಾಗುತ್ತೇನೆ ಎಂಬ ಮಾತುಗಳನ್ನಾಡಿ ಮತಗಳನ್ನು ಪಡೆದು ಜಯಿಸಿದ ನಂತರ ಸಾಮಾನ್ಯ ಜನತೆಯ ನೋವು ಅವರಿಗೆ ಅರ್ಥವಾಗದೆ ಹಾಗೆ ಬಡಜನರ ಹೆಸರಲ್ಲಿ ಬರುತ್ತಿದ್ದ ಹಣದಲ್ಲಿ ಸುಪ್ಪತ್ತಿಗೆಯನ್ನೇರಿ ಮತ್ತೆ ಚುನಾವಣೆ ಬರುವವರೆಗೂ ದಿನಕಳೆಯುವುದು ಚುನಾವಣೆ ಸಂದರ್ಭದಲ್ಲಿ ಮತ್ತೇ ಅದೇ ರಾಗ ಅದೇ ತಾಳ. ಇಂತಹ ಒಂದು ನೀತಿಯಿಂದ ಹೊರಬರಲು ದುರ್ಗದ ಜನತೆ ಹೋರಾಟಕ್ಕೆ ಸಜ್ಜಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಲು ಸರದಿ ಧರಣಿ ಸತ್ಯಾಗ್ರಹಕ್ಕೆ ಕೂತರು. ಅಂದರೇ ಈ ಸರಧಿ ಧರಣಿಯಲ್ಲಿ ೬೦ಕ್ಕೂ ಹೆಚ್ಚು ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಮಠಾಧೀಶರು, ಮಹಿಳೆಯರು ಸೇರಿ ಒಂದೊಂದು ಸಂಘದಿಂದ ಒಂದು ದಿನದ ಧರಣಿ ನೇತೃತ್ವ ವಹಿಸಿಕೊಂಡು ಪ್ರತಿಭಟನೆ ಮಾಡುವುದು ಇದರ ಉದ್ದೇಶವಾಗಿತ್ತು. ಈ ಧರಣಿಗೆ ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಎಲ್ಲಾ ಸಂಘ ಸಂಸ್ಥೆಗಳ ನೇತೃತ್ವವನ್ನು ವಹಿಸಿಕೊಂಡಿತ್ತು. ಸರಧಿ ಧರಣಿ ಸತ್ಯಾಗ್ರಹ ಮಾಡಲು ನೀರಾವರಿ ಹೋರಾಟ ಸಮಿತಿ ಕೆಲವು ನಿಯಮಗಳನ್ನು ರೂಪಿಸಿ ಅದರ ಆಧಾರದ ಮೇಲೆ ಧರಣಿ ನಡೆಯುವಂತೆ ಸೂಚಿಸಿತ್ತು ಅಂಥ ನಿಯಮಗಳೆಂದರೆ;

೧. ಧರಣಿ ಕೂರುವ ಸಂಘಟನೆಯು ತನಗೆ ನಿಗದಿಯಾದ ದಿನದಂದು ಬೆಳಿಗ್ಗೆ ೧೦ ಗಂಟೆಯಿಂದ ಸಂಜೆ ೫ ಗಂಟೆಯವರೆಗೆ ಧರಣಿ ನಡೆಸಬೇಕಾಗುತ್ತದೆ.

೨. ಆಯಾ ದಿನಾಂಕದಂದು ಧರಣಿಯಲ್ಲಿ ಪ್ರತಿ ಸಂಘಟನೆಯು ತಮ್ಮ ಸದಸ್ಯರು ಹಾಗೂ ಬೆಂಬಲಿಗರ ಸಂಖ್ಯೆ ಕನಿಷ್ಠ ಐವತ್ತು ಜನರಾದರೂ ಇರುವಂತೆ ನೋಡಿಕೊಳ್ಳಬೇಕು ಹೆಚ್ಚಿನ ಸಂಖ್ಯೆಯಲ್ಲಿ ಜನ ಬಂದಷ್ಟು ಧರಣಿಯ ಘನತೆ ಹೆಚ್ಚಾಗುತ್ತದೆ.

೩. ಧರಣಿಯ ಸಮಯದಲ್ಲಿ ಆಯಾ ಸಂಘಟನೆಯ ಸದಸ್ಯರು ಧರಣಿ ಸ್ಥಳ ಖಾಲಿ ಇರದಂತೆ ನೋಡಿಕೊಳ್ಳಬೇಕು. ಧರಣಿ ಪ್ರಾರಂಭದಲ್ಲಿ ಬಂದು ಕುಳಿತವರು ನಂತರದಲ್ಲಿ ಬೇರೆ ಕಡೆ ಹೋಗದಂತೆ ನೋಡಿಕೊಳ್ಳಬೇಕು.

೪. ಇಡೀ ಧರಣಿಯ ನೇತೃತ್ವ ಆಯಾ ದಿನ ಧರಣಿ ನಡೆಸುವ ಸಂಘಟನೆಯದೇ ಆಗಿದ್ದು ಧರಣಿಯನ್ನು ಪೂರ್ಣ ಯಶಸ್ವಿಗೊಳಿಸಲು ಬೇಕಾದ ಎಲ್ಲಾ ಬಗೆಯ ಕಾರ್ಯಕ್ರಮವನ್ನು ಆಯಾ ಸಂಘಟನೆ ರೂಪಿಸಿಕೊಳ್ಳಬೇಕು.

೫. ಪ್ರತಿ ಸಂಘಟನೆ ತನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಅಧ್ಯಯನ ಶಿಬಿರ, ಚಿಂತನಾಗೋಷ್ಠಿ, ಕವಿಗೋಷ್ಠಿ, ಗಾಯನಗೋಷ್ಠಿ, ಹಾಸ್ಯಗೋಷ್ಠಿ, ಆರೋಗ್ಯ ತಪಾಸಣಾ ಕಾರ್ಯಕ್ರಮ ಮುಂತಾದ ಉಪಯುಕ್ತ ಕಾರ್ಯಕ್ರಮವನ್ನು ಈ ಧರಣಿಯ ಸ್ಥಳದಲ್ಲಿಯೇ ಆಯೋಜಿಸಿಕೊಳ್ಳಬಹುದು.

ಈ ರೀತಿಯ ನಿಯಮಗಳನ್ನು ಅನುಸರಿಸುವುದು ಸರಧಿ ಸಂಘಗಳ ಜವಾಬ್ದಾರಿಯಾಗಿತ್ತು ಈ ಸರಧಿ ಧರಣಿಯಲ್ಲಿ ಪಾಲ್ಗೊಂಡ ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಹಾಗೂ ಮಠಾಧೀಶರುಗಳ ಒಂದೊಂದು ದಿನ ತನ್ನ ಸರಧಿ ಧರಣಿಯ ದಿನಾಂಕವನ್ನು ನಿಗದಿಪಡಿಸಿಕೊಂಡು ಧರಣಿಗೆ ಕೂತರು. ಅಂತಹ ಸಂಘ ಹಾಗೂ ನೇತೃತ್ವವಹಿಸಿಕೊಂಡ ದಿನಾಂಕವನ್ನು ನೋಡಿದಾಗ

೧. ಧರಣಿಯ ಮೊದಲ ದಿನದ ಅಂದರೆ ೨೬.೧೦.೨೦೦೬ ಈ ದಿನದ ನೇತೃತ್ವ ವಹಿಸಿಕೊಂಡ ಸಂಘವೆಂದರೆ ಸಮತಾ ಸೈನಿಕ ಧಳ ಜಿಲ್ಲಾ ಸಮಿತಿ ಚಿತ್ರದುರ್ಗ.

೨. ಎರಡನೇ ದಿನ ದಲಿತ ಸಂಘರ್ಷ ಸಮಿತಿ (ಎನ್. ಮೂರ್ತಿಬಣ) ೨೭.೧೦.೨೦೦೬.

೩. ಷಾಯಿಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ) ಎಂ.ಕೆ. ಹಟ್ಟಿ. ೨೮.೧೦.೨೦೦೬

೪. ಬೆಳಕು ನಗರ ಮತ್ತು ಗ್ರಾಮೀಣಾಭಿವೃದ್ಧಿ ಸಂಘ ೨೯.೧೦.೨೦೦೬.

೫. ಟಿಪ್ಪು ಸುಲ್ತಾನ ಅಭಿಮಾನಗಳ ಸಂಘ ೩೦.೧೦.೨೦೦೬.

೬. ಬಡಗಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ (ರಿ) ೩೧.೧೦.೨೦೦೬

೭. ಭೂಮಿತಾಯ ಒಕ್ಕೂಟ ೦೧.೧೧.೨೦೦೬

೮. ಮಡಿವಾಳ ಮಾಚಿದೇವರ ಸಂಘಟನೆ ೦೨.೧೧.೨೦೦೬

೯. ವಾಯು ವಿಹಾರ ಒಕ್ಕೂಟ ಗೂನೂರು ರಸ್ತೆ ಚಿತ್ರದುರ್ಗ ೦೩.೧೧.೨೦೦೬

೧೦. ಸಿ.ಪಿ.ಐ. ಸಂಘಟನೆ ೦೪.೧೧.೨೦೦೬

೧೧. ಉಪನ್ಯಾಸಕರ ಸಂಘಟನೆ ೦೫.೧೧.೨೦೦೬

೧೨. ಫೋಟೋಗ್ರಾಫರ್ ಸಂಘಟನೆ ೦೬.೧೧.೨೦೦೬

೧೩. ಜಿಲ್ಲಾ ಲಾಯರ್ಸ್ ಸಂಘಟನೆ ಚಿತ್ರದುರ್ಗ ೦೭.೧೧.೨೦೦೬

೧೪. ಬಿ.ಜೆ.ಪಿ. ಪಕ್ಷದ ಸಂಘಟನೆ ೦೮.೧೧.೨೦೦೬

೧೫. ಕಾಂಗ್ರೆಸ್ ಪಕ್ಷದ ಸಂಘಟನೆ ೦೯.೧೧.೨೦೦೬

೧೬. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಜಿಲ್ಲಾ ಪಂಚಾಯಿತಿ ಸಂಘಟನೆ ೧೦.೧೧.೨೦೦೬

೧೭. ಸಾಹಿತಿಗಳ ಸಂಘಟನೆ ೧೧.೧೧.೨೦೦೬

೧೮. ಸರ್ಕಾರಿ ನೌಕರರ ಸಂಘಟನೆ. ಚಿತ್ರದುರ್ಗ ಜಿಲ್ಲೆ ೧೨.೧೧.೨೦೦೬

೧೯. ಹೋಟೆಲ್ ಮಾಲೀಕರ ಸಂಘಟನೆ ೧೩.೧೧.೨೦೦೬

೨೦. ಸವಿತ ಸಮಾಜ ಸಂಘಟನೆ ೧೪.೧೧.೨೦೦೬

೨೧. ನಗರಸಭಾ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತ್ತು ಸದಸ್ಯರ ಸಂಘಟನೆ ೧೫.೧೧.೨೦೦೬.

೨೨. ವಿದ್ಯಾರ್ಥಿ ಯುವಜನ ಸಂಘ ಚಿತ್ರದುರ್ಗ ೧೬.೧೧.೨೦೦೬

೨೩. ನಿವೃತ್ತ ನೌಕರರ ಸಂಘ (ರಿ) ಚಿತ್ರದುರ್ಗ ೧೭.೧೧.೨೦೦೬

೨೪. ಭಾರತೀಯ ವೈದ್ಯಕೀಯ ಸಂಘ (ರಿ) ಚಿತ್ರದುರ್ಗ ೧೮.೧೧.೨೦೦೬

೨೫. ಜೈನ ಮಿತ್ರ ಮಂಡಳಿ ಸಂಘಟನೆ ೧೯.೧೧.೨೦೦೬

೨೬. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಮತ್ತು ಸದಸ್ಯರು, ರೋಟರಿ ಕ್ಲಬ್, ಚಿತ್ರದುರ್ಗ ೨೦.೧೧.೨೦೦೬

೨೭. ಅಹಿಂದ ಸಂಘಟನೆ, ಚಿತ್ರದುರ್ಗ ೨೧.೧೧.೨೦೦೬

೨೮. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಚಿತ್ರದುರ್ಗ ೨೨.೧೧.೨೦೦೬

೨೯. ಕರ್ನಾಟಕ ರಾಜ್ಯ ರೈತ ಸಂಘ (ಪುಟ್ಟಣ್ಣಯ್ಯನವರ ಬಣ) ೨೩.೧೧.೨೦೦೬

೩೦. ಕೆ.ಕೆ.ಎನ್.ಎಸ್.ಎಸ್. ಚಿತ್ರದುರ್ಗ ಜಿಲ್ಲೆ ೨೪.೧೧.೨೦೦೬

೩೧. ಕರ್ನಾಟಕ ರಾಜ್ಯ ರೈತ ಸಂಘ (ನಂಜುಂಡಸ್ವಾಮಿ ಬಣ) ೨೫.೧೧.೨೦೦೬

೩೨. ಜಿಲ್ಲಾ ಯಾದವ ಸಂಘ ಚಿತ್ರದುರ್ಗ ೨೬.೧೧.೨೦೦೬

೩೩. ಜಿಲ್ಲಾ ಕುರುಬರ ಸಂಘ, ಚಿತ್ರದುರ್ಗ ೨೭.೧೧.೨೦೦೬

೩೪. ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಒಕ್ಕೂಟ, ಚಿತ್ರದುರ್ಗ ೨೮.೧೧.೨೦೦೬.

೩೫. ವೀರಶೈವ ಸಮಾಜ ಚಿತ್ರದುರ್ಗ ೨೯.೧೧.೨೦೦೬

೩೬. ಜಿಲ್ಲಾ ನಾಯಕರ ಕ್ಷೇಮಾಭಿವೃದ್ಧಿ ಸಂಘ, ಚಿತ್ರದುರ್ಗ ೩೦.೧೧.೨೦೦೬

೩೭. ಕೆ.ಕೆ.ಎನ್.ಎಸ್.ಎಸ್. (ಗಣೇಶ್) ೦೧.೧೨.೨೦೦೬

೩೮. ಶ್ರೀ ಶಕ್ತಿ ಸಂಘದ ಸಂಘಟನೆ ೦೨.೧೨.೨೦೦೬

೩೯. ಜೆ.ಡಿ.ಎಸ್. ಪಕ್ಷದ ಸಂಘಟನೆ ೦೩.೧೨.೨೦೦೬

೪೦. ನೀರಾವರಿ ಹೋರಾಟ ಸಮಿತಿ, ಚಿತ್ರದುರ್ಗ ೦೪.೧೨.೨೦೦೬

೪೧. ಪತ್ರಕರ್ತರ ಸಂಘಟನೆ ಚಿತ್ರದುರ್ಗ ೦೫.೧೨.೨೦೦೬

೪೨. ಆಟೋ ಚಾಲಕರ ಸಂಘ ಚಿತ್ರದುರ್ಗ ೦೬.೧೨.೨೦೦೬

೪೩. ಶ್ರೀಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿಯವರಿಂದ ೦೭.೧೨.೨೦೦೬

೪೪. ಶಾಸಕರಾದ ಜಿ.ಹೆಚ್.ತಿಪ್ಪಾರೆಡ್ಡಿಯವರ ನೇತೃತ್ವದಲ್ಲಿ ೦೮.೧೨.೨೦೦೬

೪೫. ಮೇದಾರಕೇತೇಶ್ವರ ಸ್ವಾಮೀಜಿಯವರಿಂದ ೦೯.೧೨.೨೦೦೬

೪೬. ಕಣಿವೆ ಮಾರಮ್ಮ ಕನ್ನಡ ಅಭಿಮಾನಿಗಳ ಸಂಘ ೧೦.೧೨.೨೦೦೬

೪೭. ಖಾಸಾ ಬೇಡರ ಪಡೆ ತಂಡದಿಂದ ೧೧.೧೨.೨೦೦೬

೪೮. ಸೇವಲಾಲ್ ಸ್ವಾಮೀಜಿಯವರಿಂದ ೧೨.೧೨.೨೦೦೬

೪೯. ಹೆಚ್. ಆಂಜನೇಯ, ಶಾಸಕರು, ಭರಮಸಾಗರ, ಇವರ ನೇತೃತ್ವದಲ್ಲಿ ೧೩.೧೨.೨೦೦೬

೫೦. ಸಿದ್ಧರಾಮೇಶ್ವರ ಸ್ವಾಮೀಜಿಯವರಿಂದ ೧೪.೧೨.೨೦೦೬

೫೧. ಎ.ವಿ.ಉಮಾಪತಿ, ಶಾಸಕರು ಹೊಳಲ್ಕೆರೆ, ಇವರ ನೇತೃತ್ವದಲ್ಲಿ ೧೫.೧೨.೨೦೦೬

೫೨. ಬಸವ ಶಾಂತವೀರ ಸ್ವಾಮೀಜಿಯವರಿಂದ ೧೬.೧೨.೨೦೦೬

೫೩. ಲಾರಿಮಾಲೀಕರ ಸಂಘಟನೆ ೧೭.೧೨.೨೦೦೬

೫೪. ಬಿ.ಜಿ.ಗೋವಿಂದಪ್ಪ ಶಾಸಕರು, ಹೊಸದುರ್ಗ ಇವರ ನೇತೃತ್ವದಲ್ಲಿ ೧೮.೧೨.೨೦೦೬

೫೫. ಪೌರಸೇವಾ ನೌಕರರ ಸಂಘ, ಚಿತ್ರದುರ್ಗ ೧೯.೧೨.೨೦೦೬

೫೬. ಡಿ.ಸುಧಾಕರ್, ಶಾಸಕರು ಚಳ್ಳಕೆರೆ ಇವರ ನೇತೃತ್ವದಲ್ಲಿ ೨೦.೧೨.೨೦೦೬

೫೭. ಯಾದವಾನಂದ ಸ್ವಾಮೀಜಿಯವರಿಂದ ೨೧.೧೨.೨೦೦೬

೫೮. ಕನ್ನಡ ಬಳಗ, ದೊಡ್ಡ ಪೇಟೆ, ಚಿತ್ರದುರ್ಗ ೨೨.೧೨.೨೦೦೬

೫೯. ಎನ್. ವೈ. ಗೋಪಾಲಕೃಷ್ಣ ಶಾಸಕರು, ಮೊಳಕಾಲ್ಮೂರು ಇವರ ನೇತೃತ್ವ ೨೩.೧೧.೨೦೦೬

೬೦. ರಾಜ್ಯ ಭೋವಿ ಕ್ರಿಯಾ ಸಮಿತಿ, ಚಿತ್ರದುರ್ಗ ೨೪.೧೧.೨೦೦೬.

ಈ ರೀತಿಯ ೬೦ ಸಂಘಟನೆಗಳು ಒಂದುಗೂಡಿ ದಿನಾಂಕವನ್ನು ನಿಗಧಿ ಪಡಿಸಿಕೊಂಡು ಸರಧಿ ಧರಣಿಯನ್ನು ಪ್ರಾರಂಭಿಸಿದರು. ಈ ಹೋರಾಟದ ನೇತೃತ್ವ ವಹಿಸಿಕೊಂಡಿದ್ದು ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ.

ಸಮಿತಿಯ ನೇತೃತ್ವದಲ್ಲಿ ಮೊದಲ ದಿನದ ಸರಧಿ ಧರಣಿಯ ಜವಾಬ್ದಾರಿಯನ್ನು **ಹೊಸದುರ್ಗದ ಸಮತಾ ಸೈನಿಕ ದಳದ ಸಂಘಟನೆ ವಹಿಸಿಕೊಂಡಿತು.** ಈ ಧರಣಿಗೆ ಹೊಸದುರ್ಗ ತಾಲ್ಲೂಕಿನಿಂದ ಸುಮಾರು ೨೦೦ ಕ್ಕೂ ಹೆಚ್ಚು ಜನರು ಬಂದು ನಗರದ ಗಾಂಧಿ ವೃತ್ತದಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಛೇರಿಯ ಬಳಿ ಬಂದು ಶಾಮಿಯಾನ ಬದಲಿಗೆ ಹಸಿರು ಚಪ್ಪರ ಹಾಕಿಕೊಂಡು ಧರಣಿಯಲ್ಲಿ ಕೂತರು. ಬೆಳಿಗ್ಗೆ ೧೧ ಗಂಟೆಗೆ ಪ್ರಾರಂಭವಾದ ಧರಣಿ ಸಂಜೆ ಐದು ಗಂಟೆಯವರಿಗೆ ನಡೆಯಿತು. ಈ ಧರಣಿಯಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುವುದು ಸಾಮಾನ್ಯವಾಗಿತ್ತು. ಈ ದಿನದಲ್ಲಿ ಪ್ರತಿಭಟನೆಕಾರರಲ್ಲಿ ಮೂಡಿಬಂದ ಆಕ್ರೋಶದ ಮಾತುಗಳೆಂದರೆ ಕುಮಾರಸ್ವಾಮಿಯವರು ಬೆಳಗಾವಿ ಅಧಿವೇಶನದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಜಾರಿಯ ಬಗ್ಗೆ ಮಾತನಾಡಿದ್ದರು. ಆದರೆ ಅವರ ಗಡುವು ಮೀರಿತ್ತು. ಇದರ ಹಿನ್ನೆಲೆಯಲ್ಲಿ ರಾಜ್ಯಸರ್ಕಾರದ ಮೇಲೆ ಒತ್ತಡ ಹೇರಬೇಕೆಂಬುದು ಪ್ರತಿಭಟನಾಕಾರರ ಆಕ್ರೋಶದ ಮಾತಾಗಿತ್ತು. ಧರಣಿಯನ್ನುದ್ದೇಶಿಸಿ ಮಾತನಾಡಿದ ಸಮತಾ ಸೈನಿಕ ದಳದ ಅಧ್ಯಕ್ಷ ಹನುಮಂತಪ್ಪ ದುರ್ಗರವರು, ಭದ್ರಾ ಮೇಲ್ದಂಡೆ ಜಾರಿಯಾಗುವ ತನಕ ಹೋರಾಟವನ್ನು ಮುನ್ನಡೆಸಲು ಜಿಲ್ಲೆಯ ಜನ ಸಮುದಾಯ ಸಿದ್ಧರಾಗಿದ್ದಾರೆ.[೪] ಮುಂದಿನ ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಳ್ಳುವುದಾಗಿ ಬೆಳಗಾವಿ ಅಧಿವೇಶನದಲ್ಲಿ ಹೋರಾಟ ಸಮಿತಿಗೆ ಭರವಸೆ ನೀಡಿದ್ದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರು ಇದುವರೆಗೂ ಅದರ ಪ್ರಸ್ತಾಪ ಮಾಡಿಲ್ಲ. ಸರಧಿ ಧರಣಿ ನಂತರ ಸರಧಿ ಉಪವಾಸ, ಸತ್ಯಾಗ್ರಹ ನಡೆಸಲು ಸಂಘಟನೆ ಸಿದ್ಧರಿರುವುದಾಗಿ ಘೋಷಿಸಿದರು.

ಸರಧಿ ಧರಣಿ ಪ್ರತಿಭಟನೆಯ ಎರಡನೇ ದಿನವನ್ನು **ದಲಿತ ಸಂಘರ್ಷ ಸಮಿತಿ** ಮುನ್ನಡಿಸಿದರು. ಈ ಪ್ರತಿಭಟನೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಸೇರಿದ್ದು ಚಿತ್ರದುರ್ಗ ನಗರದ ಗಾಂಧಿ ವೃತ್ತದಿಂದ ಸಾಗಿದ ಮೆರವಣಿಗೆ ನಗರದ ಬೀದಿ ಬೀದಿಗಳಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ, ಅತೀ ಶೀಘ್ರದಲ್ಲಿ ಯೋಜನೆ ಜಾರಿಮಾಡಬೇಕೆಂದು ಇದರ ಅರಿವು ದುರ್ಗದ ಎಲ್ಲಾ ಜನತೆಗೆ ಮನವರಿಕೆಯಾಗಬೇಕು ಪ್ರತಿಭಟನೆಗೆ ಬೆಂಬಲ ಸೂಚಿಸುವ ಹಾಗೆ ಜನತೆಯನ್ನು ಹುರಿದುಂಬಿಸುತ್ತಾ ಪ್ರತಿಭಟನಾಕಾರರು ಮೆರವಣಿಗೆಯಲ್ಲಿ ಸಾಗಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ ಕುಳಿತರು. ಈ ಸಂದರ್ಭದಲ್ಲಿ ಹಲವಾರು ಮುಖಂಡರು ಮಾತನಾಡಿ ಸರ್ಕಾರ ನಮ್ಮನ್ನು ಈ ರೀತಿ ಕಾಯಿಸುವುದರಲ್ಲಿ ಅರ್ಥವಿಲ್ಲ ನಮ್ಮ ಪಾಲಿಗೆ ಬರಬೇಕಾದ

ಹಕ್ಕನ್ನು ನಮಗೆ ನೀಡಬೇಕು ಇಲ್ಲದಿದ್ದರೆ ಹೋರಾಟದ ಸ್ವರೂಪ ಉಗ್ರರೂಪಕ್ಕೆ ಬರಬೇಕಾಗುತ್ತದೆ. ಎಂದು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಭದ್ರೆಯು ಚಿತ್ರದುರ್ಗ ಜಿಲ್ಲೆಗೆ ಹರಿಯಲೆಂದು ಧರಣಿಯ ಮೂರನೇ ದಿನದಲ್ಲಿ ನೂರಾರು ಮಹಿಳೆಯರು ದಿನವಿಡೀ ಖುರಾನ್ ಪಟಿಸಿದರು. ಈ ದಿನದ ಸರದಿಯನ್ನು ನಿರ್ಗತಿಕರ ಸ್ವಸಹಾಯ ಸಂಘ, ಶಾಹಿ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಮುನ್ನೆಡಿಸಿತು. ನಗರದ ಗಾಂಧಿ ವೃತ್ತದಿಂದ ಮೆರವಣಿಗೆ ಬಂದ ಮುಸ್ಲಿಂ ಮಹಿಳೆಯರು ರಾಜ್ಯ ಸರ್ಕಾರದ ನಿರ್ಲಕ್ಷ್ಯದ ವಿರುದ್ಧ ಘೋಷಣೆ ಕೂಗಿ ಧರಣಿ ಆರಂಭಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಹಿನಗರ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮುಖ್ಯಸ್ಥ ಷಫಿಮಹಮದ್ 'ನೀರಾವರಿ ಯೋಜನೆ ಜಾರಿಯಾಗುವುದರಿಂದ ಮುಸ್ಲೀಮರ ಬದುಕು ಹಸನಾಗುತ್ತದೆ. ವ್ಯಾಪಾರ ವಹಿವಾಟು ಉತ್ತಮಗೊಳಿಸುತ್ತದೆ. ಸರಕಾರ ಯೋಜನೆ ಜಾರಿಗೊಳಿಸುವುದರ ಮೂಲಕ ಬಡವರ ನೆರವಿಗೆ ಧಾವಿಸಬೇಕೆಂದು ಆಗ್ರಹಿಸಿದರು."[3] ಈ ಸಂದರ್ಭದಲ್ಲಿ ಸಮಿತಿ ಕಾರ್ಯಾಧ್ಯಕ್ಷ ಎಂ.ಜಯಣ್ಣ, ಪ್ರಧಾನ ಸಂಚಾಲಕರಾದ ಡಾ. ಬಂಜಿಗೆರೆ ಜಯಪ್ರಕಾಶ್, ಮುಖಂಡರಾದ ಮುರುಘರಾಜೇಂದ್ರ ಒಡೆಯರ್, ಡಿ.ಎನ್. ಮೈಲಾರಪ್ಪ, ಕೆ.ಆರ್. ದಯಾನಂದ, ಚಳ್ಳಕೆರೆ ಬಸವರಾಜ್ ಮುಂತಾದವರು ಹಾಜರಿದ್ದು ಪ್ರತಿಭಟನೆಗೆ ಮೆರಗು ಕೊಟ್ಟರು.

ಭದ್ರೆಗಾಗಿ **ಭೂಮಿತಾಯಿ ಮಹಿಳಾ ಒಕ್ಕೂಟ**ದ ನೇತೃತ್ವದಲ್ಲಿ ಧರಣಿ ಸಮಿತಿವತಿಯಿಂದ ಹಮ್ಮಿಕೊಂಡಿದ್ದ ಸರಧಿ ಧರಣಿಯನ್ನು **ವಿಮುಕ್ತಿ ಭೂಮಿ ತಾಯಿ ಒಕ್ಕೂಟ**ದ ನೂರಾರು ಮಹಿಳೆಯರು, ಕಾರ್ಯಕರ್ತೆಯರು, ಮುನ್ನಡೆಸಿದರು. ಕನ್ನಡ ರಾಜ್ಯೋತ್ಸವದ ದಿನವಾದ ನವ್ಹೆಂಬರ್ ಒಂದರಂದು ನಗರದ ಯೂನಿಯನ್ ಪಾರ್ಕ್‌ನಿಂದ ಮೆರವಣಿಗೆಯಲ್ಲಿ ಸಾಗಿಬಂದ ಮಹಿಳೆಯರು ಧರಣಿ ಸ್ಥಳದಲ್ಲಿ ರಾಜ್ಯದ ನಾಡ ಹಬ್ಬದ ಬಾವುಟ ಹಾರಿಸಿ ರಾಜ್ಯೋತ್ಸವ ಆಚರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ವಿಮುಕ್ತಿ ವಿದ್ಯಾ ಸಂಸ್ಥೆಯ ಆರ್. ವಿಶ್ವಸಾಗರ್ ಜಿಲ್ಲೆಯಲ್ಲಿ ಕೆರೆ, ಕಟ್ಟೆಗಳು ಬತ್ತಿಹೋಗಿದ್ದು ಅಂತರ್ಜಲ ಕುಸಿದಿದೆ. ದುಡ್ಡು ಕೊಟ್ಟು ನೀರು ಕುಡಿಯುವಂತಹ ಪರಿಸ್ಥಿತಿ ಜಿಲ್ಲೆಯಲ್ಲಿ ನಿರ್ಮಾಣವಾಗಿದ್ದರೂ ಸರ್ಕಾರ ಭದ್ರಾ ಮೇಲ್ದಂಡೆ ಯೋಜನೆಗೆ ಮುಂದಾಗದಿರುವುದು ಸರಿಯಲ್ಲ. ಪ್ರತಿಗ್ರಾಮಗಳಿಗೂ ಸಾರಾಯಿ ಅಂಗಡಿ ಮಂಜೂರು ಮಾಡಿ ಜೀವದ ಜೊತೆ ಚೆಲ್ಲಾಟವಾಡುವ ಸರ್ಕಾರ ನೀರು ಕೊಡಲು ಮೀನಾಮೇಷ ಎಣಿಸುತ್ತಿದೆ ಎಂದು ದೂರಿದರು.[೬] ಭೂಮಿತಾಯಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ಸುಶೀಲಮ್ಮ ಮಾತನಾಡಿ ಜಿಲ್ಲೆಯಲ್ಲಿ ನೀರಿಗಾಗಿ ಹಾಹಾಕಾರ ಎದ್ದಿದೆ. ಕುಡಿಯುವ ನೀರಿಗೆ ರಕ್ತ ಸಂಬಂಧಿಗಳ ನಡುವೆಯೇ ಜಗಳವಾಗುವ ಪರಿಸ್ಥಿತಿ ನಿರ್ಮಾಣವಾಗಿವೆ. ಸದಾ ಬರಗಾಲದ ಹೊಡೆತಕ್ಕೆ ಸಿಲುಕಿ ಬದುಕು ಕಳೆದುಕೊಂಡು ಜಿಲ್ಲೆಯ ಜನತೆ ನರಳುತ್ತಿದ್ದಾರೆ. ಸರ್ಕಾರ ಶೀಘ್ರ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಮುಂದಾಗಬೇಕೆಂದು ಸರ್ಕಾರಕ್ಕೆ ಮನವಿಯ ಮೂಲಕ ಎಚ್ಚರಿಕೆ ನೀಡಿದರು.

ಭದ್ರೆಗೆ ಆಗ್ರಹಿಸಿ ಸರದಿ ಧರಣಿ ಮುನ್ನಡೆಸಿದ **ಬಡಗಿ ಕ್ಷೇಮಾಭಿವೃದ್ಧಿ ಸಂಘ** ೬ನೇ ದಿನದ ಸರದಿಯ ನೇತೃತ್ವ ವಹಿಸಿಕೊಂಡಿತ್ತು. ಈ ದಿನ ಮರ ಕೆತ್ತನೆ ಕೆಲಸದವರು ತಮ್ಮ ದಿನ ನಿತ್ಯದ ಕಾಯಕವನ್ನು ಧರಣಿ ಸ್ಥಳದಲ್ಲೆ ಮಾಡುವುದರ ಮೂಲಕ ಧರಣಿ ಇಂಬುಗೊಳ್ಳುವಂತೆ ಪ್ರೋತ್ಸಾಹಿಸಿದರು. ಧರಣಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ ಮಾತನಾಡಿ ನವ್ಹೆಂಬರ್ ೨ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಯೋಜನೆ ಜಾರಿಗೆ ಒಪ್ಪಿಗೆ ಪಡೆದು ಸರ್ಕಾರ ಕೂಡಲೇ ಕಾಮಗಾರಿ ಆರಂಭಿಸಬೇಕು ಎಂದು ಸರ್ಕಾರಕ್ಕೆ ಆಗ್ರಹ ಪಡಿಸಿದರು.

ಬಡಗಿ ಸಂಘದ ವತಿಯಿಂದ ನಡೆದ ಧರಣಿಯ ನಂತರದ ದಿನವನ್ನು **ವಾಕಿಂಗ್ ಫ್ರೆಂಡ್ಸ್ ಗ್ರೂಪ್** ವತಿಯಿಂದ ಸರಧಿ ಧರಣಿಯನ್ನು ಮುಂದುವರೆಸಿದರು. ನಿತ್ಯ ಪ್ರಾತಃ ಕಾಲದಲ್ಲಿ ತಣ್ಣನೆಯ ಹವಕ್ಕಾಗಿ ನಡಿಗೆಯಲ್ಲಿ ತೊಡಗಿದ್ದ ಬದುಕಿನ ಮುಸ್ಸಂಜೆಯಲ್ಲಿರುವ ಹಿರಿಯ ಜೀವಗಳು ತಮ್ಮ ನಡಿಗೆಯ ದಿಕ್ಕು ಬದಲಿಸಿ ಭದ್ರೆಯಡೆಗೆ ತಮ್ಮ ನಡೆಯೆಂದು ಧರಣಿ ನಡೆಸಿದ್ದು ವಿಶೇಷವಾಗಿತ್ತು.[೭] ಇವರು ತಮ್ಮ ಊರುಗೋಲಿನೊಂದಿಗೆ ಆಗಮಿಸಿ ನೆಲದಲ್ಲಿ ಕೂರಲು ಪ್ರಯತ್ನ ಪಟ್ಟು ಆಗದೆ ಆಸನದ ವ್ಯವಸ್ಥೆ ಮಾಡಿಕೊಂಡು ದಿನವಿಡೀ ಧರಣಿ ಸ್ಥಳದಲ್ಲಿ ಕುಳಿತು ತಮ್ಮ ಬದುಕಿನ ಬಗ್ಗೆ ಮಾತನಾಡುತ್ತಾ ಯೋಜನೆಯನ್ನು ಅತೀ ಶೀಘ್ರ ಆರಂಭಿಸಬೇಕು, ಇಲ್ಲದಿದ್ದರೆ ಹೋರಾಟ ತೀವ್ರವಾಗುತ್ತದೆ ಎಂದು ಸರ್ಕಾರಕ್ಕೆ ಆಗ್ರಹಿಸುತ್ತಾ, ಮಾಸಿದ ಬದುಕಿನ ಸುಖ ದುಃಖದ ಕ್ಷಣಗಳನ್ನು ನೆನಪಿನ ಬುತ್ತಿಯಿಂದ ಹೆಕ್ಕಿ ತೆಗೆದು ಮೆಲುಕು ಹಾಕುತ್ತಾ ದಿನವಿಡಿ ಧರಣಿ ನಡೆಸಿದರು. ನಂತರದ ದಿನದ ಸರಧಿಯನ್ನು ವಾಯು ವಿಹಾರ ಒಕ್ಕೂಟ ಸಂಘಕ್ಕೆ ವಹಿಸಿಕೊಡಲಾಗಿತ್ತು. ಪ್ರತಿಭಟನಾಕಾರರು ನಗರದ ಮದಕರಿ ನಾಯಕ ವೃತ್ತದಿಂದ ಮೆರವಣಿಗೆ ಪ್ರಾರಂಭಿಸಿ ಜಿಲ್ಲಾಧಿಕಾರಿ ಕಛೇರಿ ಎದುರು ಧರಣಿ ಸ್ಥಳಕ್ಕೆ ಆಗಮಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ನೀಡಿದರು. ಈ ಸಂದರ್ಭದಲ್ಲಿ ಮರ್ಚೆಂಟ್ಸ್ ಅಧ್ಯಕ್ಷರಾಗಿದ್ದ ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ ರಾಜ್ಯದ ಬರಪೀಡಿತ ಪ್ರದೇಶಗಳ ಪಟ್ಟಿಯಲ್ಲಿ ಪ್ರಥಮ ಸ್ಥಾನದಲ್ಲಿರುವ ಚಿತ್ರದುರ್ಗ ಜಿಲ್ಲೆಗೆ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೊಳಿಸುತ್ತೇವೆ ಎಂದು ಎಲ್ಲಾ ಆಳುವ ಸರ್ಕಾರಗಳು ಇಲ್ಲಿಯವರೆಗೆ ನಮ್ಮನ್ನು ವಂಚಿಸಿಕೊಂಡು ಬಂದಿವೆ ಎಂದು ಆರೋಪಿಸಿದ ಅವರು ಸರ್ಕಾರ ಭದ್ರಾ ಜಾರಿಗೆ ಮುಂದಾಗದಿದ್ದರೆ ಪ್ರತಿಭಟನೆಗಳು ಹೆಚ್ಚಾಗಲಿವೆ ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಧರಣಿಯ ೧೦ನೇ ದಿನದ ಸರದಿಯ ಪಾಲು. ಕಮ್ಯೂನಿಷ್ಠ ಪಕ್ಷಕ್ಕೆ ಬಂದಿತು. ಈ ದಿನದ ವಿಶೇಷತೆಯೇನೆಂದರೆ ಕೇಂದ್ರ ಯೋಜನಾ ಖಾತೆ ಸಚಿವರಾದ ಎಂ.ವಿ.ರಾಜಶೇಖರ್ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದರು. ಮನವಿ ನೀಡಿ ಮಾತನಾಡಿದ ನೀರಾವರಿ ಹೋರಾಟ ಸಮಿತಿ ಕಾರ್ಯಾಧ್ಯಕ್ಷ ಎಂ. ಜಯಣ್ಣ ಭದ್ರಾ ಮೇಲ್ದಂಡೆ ಜಾರಿಗೆ

ನೀರಾವರಿ ತಜ್ಞ ಕೆ.ಸಿ.ರೆಡ್ಡಿ ವರದಿ ನೀಡಿದ್ದು ಶೀಘ್ರ ಕಾರ್ಯಾನುಷ್ಠಾನಕ್ಕೆ ರಾಜ್ಯಸರ್ಕಾರದ ಮೇಲೆ ಒತ್ತಡ ತರಬೇಕು. ಸಾಧ್ಯವಾದಲ್ಲಿ ಕೇಂದ್ರಸರ್ಕಾರ ನೆರವು ಕಲ್ಪಿಸಬೇಕೆಂದು ಆಗ್ರಹಿಸಿದರು. "ಸಚಿವರು ಮಾತನಾಡಿ ಚಿತ್ರದುರ್ಗ ಜಿಲ್ಲೆ ಅನುಭವಿಸುತ್ತಿರುವ ಬವಣೆ ತಮಗೆ ಅರಿವಿದ್ದು ಹಿರಿಯ ಮುತ್ಸದ್ಧಿ ನಿಜಲಿಂಗಪ್ಪ ಅವರ ಕಡೆ ದಿನದ ಆಸೆ ಕೂಡ ಈ ಯೋಜನೆ ಜಾರಿಗೊಳಿಸುವುದೇ ಆಗಿತ್ತು." ಸದಾ ಬರದಲ್ಲಿ ಕಾಲ ನೂಕುತ್ತಿರುವ ಜಿಲ್ಲೆಯ ಜನರಿಗೆ ಉದ್ಯೋಗ ನೀಡಲು ಕೇಂದ್ರಸರ್ಕಾರ ಹಲವಾರು ಯೋಜನೆ ಜಾರಿಗೊಳಿಸಿ ಅನುಷ್ಠಾನಗೊಳಿಸುತ್ತಿದೆ ನೀರಾವರಿ ಯೋಜನೆ ಮಾತ್ರ ಜಿಲ್ಲೆಯ ಜನರ ಭವಿಷ್ಯ ಬದಲಾಯಿಸಲು ಸಾಧ್ಯವಿಲ್ಲ. ಹಿಂದಿನ ಸರ್ಕಾರ ಕೆ.ಸಿ.ರೆಡ್ಡಿಯವರ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಿ ವರದಿ ಕೋರಿತ್ತು. ಕೆ.ಸಿ.ರೆಡ್ಡಿ ಅವರು ವರದಿ ಸಲ್ಲಿಸಿದ್ದು ತುರ್ತಾಗಿ ಕಾಮಗಾರಿ ಆರಂಭಿಸುವಂತೆ ರಾಜ್ಯಸರ್ಕಾರದ ಮೇಲೆ ಒತ್ತಡ ತರುವುದಾಗಿ ಎಂ.ವಿ. ರಾಜಶೇಖರನ್ ಹೇಳಿದರು.

ಜಿಲ್ಲಾ ನೀರಾವರಿ ಹೋರಾಟ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಸರಧಿ ಧರಣಿಯ ೧೧ನೇ ದಿನದ ನೇತೃತ್ವವನ್ನು **ಬಸವ ಮಾಚೀದೇವ ಸ್ವಾಮೀಜಿ ಹಾಗೂ ಮಡಿವಾಳ ಸಂಘ**ದವರು ಮುನ್ನಡೆಸಿದರು. ಮಡಿವಾಳ ಸಮಾಜದ ಜನತೆ ಧರಣಿ ಸ್ಥಳಕ್ಕೆ ಇಸ್ತ್ರಿ ಪೆಟ್ಟಿಗೆಗಳೊಂದಿಗೆ ಬಂದು ತಮ್ಮ ದಿನ ನಿತ್ಯದ ಬದುಕಿನ ಕಾಯಕವನ್ನು ಮಾಡುತ್ತಾ ಸರ್ಕಾರಕ್ಕೆ ಮನವರಿಕೆ ಮಾಡಿದರು. ಈ ಸಂದರ್ಭದಲ್ಲಿ ಧರಣಿ ನಿರತರನ್ನುದ್ದೇಶಿಸಿ ಮಾತನಾಡಿದ ಬಸವ ಮಾಚಿದೇವ ಸ್ವಾಮೀಜಿ ಆಳುವ ಸರ್ಕಾರಗಳು ನಿರಂತರವಾಗಿ ವಂಚಿಸುತ್ತಾ ಬಂದಿರುವುದರಿಂದ ಜಿಲ್ಲೆಯ ಜನ ಕುಡಿಯಲು ಹನಿ ನೀರಿಗೂ ಪರದಾಡುವಂತಾಗಿದೆ.[೧೦] ನೀರಾವರಿ ಇಲ್ಲದ ಜನರ ಬದುಕು ಕೂಡ ಅಸಹನೀಯವಾಗಿದೆ. ಇಂತಹ ಸ್ಥಿತಿಯಲ್ಲಿ ರಾಜ್ಯಸರ್ಕಾರ ಭದ್ರಾ ಮೇಲ್ದಂಡೆ ಯೋಜನೆ ಜಾರಿಗೊಳಿಸುವುದರ ಮೂಲಕ ಜಿಲ್ಲೆಯ ಜನಸಮುದಾಯದ ನೆರವಿಗೆ ಧಾವಿಸಬೇಕೆಂದು ಆಗ್ರಹಿಸಿದರು. ಮಡಿವಾಳ ಸಂಘದ ಹಲವಾರು ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಮಿತಿಯ ನೇತೃತ್ವದಲ್ಲಿ ನಡೆಯುತ್ತಿರುವ ಸರಧಿ ಧರಣಿಯು ೧೨ನೇ ದಿನಕ್ಕೆ ಕಾಲಿಟ್ಟಿದ್ದು **ಮಾದಾರ ಶರಣರ ನಾಯಕತ್ವಕ್ಕೆ** ಈ ದಿನದ ಸರದಿಯನ್ನು ಬಿಡಲಾಗಿತ್ತು. ಇವರಿಗೆ ಚಿತ್ರದುರ್ಗ ಜಿಲ್ಲೆಯ **ಚುಸಾಪ ಸದಸ್ಯರ ಮಾದಿಗ ಮೀಸಲಾತಿ ಹೋರಾಟ ಸಮಿತಿ** ಬೆಂಬಲ ನೀಡಿದರು. ಅಪಾರ ಭಕ್ತ ವೃಂದದೊಂದಿಗೆ ಆಗಮಿಸಿದ್ದ ಶರಣರು ಪ್ರತಿಭಟನೆಯಲ್ಲಿ ದಿನದ ಸಂಜೆಯವರೆಗೂ ಧರಣಿ ಸ್ಥಳ ಬಿಟ್ಟು ಕದಲದೇ ಕುಳಿತು ಯೋಜನೆ ಜಾರಿಗಾಗಿ ಆಗ್ರಹಪಡಿಸಿದರು. ಈ ದಿನದ ಧರಣಿಯಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಕಾರ್ಯದರ್ಶಿ ಪ್ರಕಾಶ್ ಮೂರ್ತಿ, ವಕೀಲರಾದ ಚಂದ್ರಪ್ಪ, ನೀರಾವರಿ ಹೋರಾಟ ಸಮಿತಿ ಸಂಚಾಲಕ ಚಳ್ಳಕೆರೆ ಬಸವರಾಜ್ ಹಾಗೂ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಎಂ.ಹೋಳಿ, ಮುರುಘ

[illegible]

ರಾಜೇಂದ್ರ ವಡೆಯರ್ ಮುಂತಾದವರನ್ನು ಒಳಗೊಂಡು ಧರಣಿ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಶರಣರು ಮಧ್ಯ ಕರ್ನಾಟಕದಲ್ಲಿ ವರ್ಗ ಸಂಘರ್ಷ ಬುಗಿಲೇಳುವ ಮುನ್ನ ಸರ್ಕಾರ ಈ ಯೋಜನೆ ಜಾರಿಗೊಳಿಸಬೇಕು. ಸಮೃದ್ಧವಾಗಿರುವ ಮಲೆನಾಡು ಪ್ರದೇಶದಲ್ಲಿಯೇ ನಕ್ಸಲ್ ಹೋರಾಟ ಹುಟ್ಟಿಕೊಂಡಿದೆ.[೧೧] ಬದುಕಿಗೆ ಯಾವುದೇ ಭದ್ರತೆ ಇಲ್ಲದೆ ಕುಡಿಯುವ ನೀರಿಗೂ ತಿನ್ನುವ ಅನ್ನಕ್ಕೂ ಹಾಹಾಕಾರ ಎದ್ದಿರುವ ಬಯಲು ಸೀಮೆ ಜಿಲ್ಲೆಗಳಲ್ಲಿ ಇಂತಹ ಹೋರಾಟಗಳು ಹುಟ್ಟಿದಿರುತ್ತವೆಯೇ ಎಂಬುದನ್ನು ಸರ್ಕಾರ ಆಲೋಚಿಸಬೇಕು. ಇಂತಹ ಸಂದರ್ಭಗಳು ಒದಗುವ ಮುನ್ನ ಸರ್ಕಾರ ಎಚ್ಚೆತ್ತುಕೊಂಡು ಈ ಭಾಗದ ಜನರ ಬಹುದಿನದ ಕನಸಾದ ನೀರಾವರಿ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಧರಣಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಹೆಚ್. ಆಂಜನೇಯ ನೀರಾವರಿ ಯೋಜನೆ ಜಾರಿಗೆ ಒಲುವು ತೋರಿಸುತ್ತಿದ್ದು ಇಂತಹ ಸಂದರ್ಭದಲ್ಲಿ ಜನಸಮೂಹ ಹೋರಾಟದಲ್ಲಿ ಮುಕ್ತವಾಗಿ ಪಾಲ್ಗೊಳ್ಳುವ ಮೂಲಕ ಸರ್ಕಾರದ ಮೇಲೆ ಹೆಚ್ಚಿನ ಒತ್ತಡ ಹಾಕಬೇಕು ಎಂದು ಜನತೆಗೆ ಕರೆ ನೀಡಿದರು.

ಚಿತ್ರದುರ್ಗ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ರೈತರ ಹಿತಕ್ಕಾಗಿ ಜಿಲ್ಲೆಯ ವಕೀಲರು ಬೀದಿಗಿಳಿದು ಹೋರಾಟ ಮಾಡಿದ್ದು ದಿನಾಂಕ ೭ ನವೆಂಬರ್ ೨೦೦೬ ರಂದು ಹೋರಾಟ ಸಮಿತಿ ನೇತೃತ್ವದಲ್ಲಿ ನಡೆಯುತ್ತಿದ್ದ ಧರಣಿಯ ಸರದಿ **ಜಿಲ್ಲಾ ವಕೀಲರ ಸಂಘ**ಕ್ಕೆ ಬಂದಿದ್ದು ಈ ಸಂಘ ದಿನದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ಎಲ್ಲಾ ತರದಿಂದಲೂ ಸಿದ್ಧತೆ ಮಾಡಿಕೊಂಡು ಇವರು ವ್ಯಕ್ತಪಡಿಸಿದ ಹುಮ್ಮಸ್ಸು ಮಾತ್ರ ಹೋರಾಟದ ಮನಸ್ಸುಗಳಿಗೆ ಸ್ಫೂರ್ತಿ ನೀಡಿದಂತಾಗಿತ್ತು. ಈ ಸರಧಿ ಧರಣಿಯನ್ನು ನಡೆಸಲು ವಿವಿಧ ಸಂಘ ಸಂಸ್ಥೆಗಳು ಪೈಪೋಟಿಗಿಳಿದಿದ್ದು ವಿಶೇಷತೆ. ಧರಣಿಗೆ ಮುನ್ನ ವಕೀಲರು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ವಕೀಲರ ಭವನದಿಂದ ಆರಂಭಗೊಂಡ ಮೆರವಣಿಗೆ ಗಾಂಧಿ ವೃತ್ತದ ಮೂಲಕ ಸಾಗಿ ಜಿಲ್ಲಾಧಿಕಾರಿ ಕಛೇರಿ ಬಳಿ ಮುಕ್ತಾಯವಾಯಿತು. ಮೆರವಣಿಗೆಯುದ್ದಕ್ಕೂ ವಕೀಲರು ತಮಟೆ ಭಾರಿಸುತ್ತಾ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿ ಕಛೇರಿ ಮುಂಭಾಗದಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ನಿರಂತರ ತಮಟೆ ಭಾರಿಸಿ ಮನದೊಳಗಿನ ಸಿಟ್ಟನ್ನು ಹೊರಹಾಕಿದರು.[೧೨] ಈ ಸಂದರ್ಭದಲ್ಲಿ ಹಲವಾರು ವಕೀಲರು ಮಾತನಾಡಿ ಮುಂದಿನ ಸಚಿವ ಸಂಪುಟದಲ್ಲಿ ಮಾನ್ಯ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರು ಯೋಜನೆ ಒಪ್ಪಿಗೆ ಪಡದೇ ಜಿಲ್ಲೆಗೆ ಬರಬೇಕು ಇಲ್ಲದಿದ್ದರೆ ಜಿಲ್ಲೆಯ ಯಾವುದೇ ಸ್ಥಳಕ್ಕೂ ಬಂದರೆ ಅಡ್ಡಿಪಡಿಸುತ್ತೇವೆ ಎಂಬುದಾಗಿ ಹೇಳಿದರು.

ನವ್ಹೆಂಬರ್ ೯, ೨೦೦೬ರ ದಿನದ ಸರಧಿ ಧರಣಿಯ ನೇತೃತ್ವ ಚಿತ್ರದುರ್ಗ ಜಿಲ್ಲಾ ಬಿ.ಜೆ.ಪಿ. ಪಕ್ಷದ ನೇತೃತ್ವಕ್ಕೆ ವಹಿಸಿ ಕೊಡಲಾಯಿತು. ಭದ್ರಾ ಮೇಲ್ದಂಡೆಗಾಗಿ ಚಿತ್ರದುರ್ಗದಲ್ಲಿ ನಡೆಯುತ್ತಿದ್ದ ಸರಧಿ ಧರಣಿಯ ಸಂದರ್ಭದಲ್ಲಿ ಬಿಜೆಪಿ ಪಕ್ಷ ರಾಜ್ಯದ ಅಧಿಕಾರ ನಡೆಸುತ್ತಿದ್ದರೂ ಕೂಡ ಚಿತ್ರದುರ್ಗದಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಯೋಜನೆ ಜಾರಿಗೆ ಒತ್ತಾಯಿಸಿತು. ಧರಣಿಯನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಸುರೇಶ ಈಗಿನ ಸಮ್ಮಿಶ್ರ ಸರ್ಕಾರ ಭದ್ರಾ ಮೇಲ್ದಂಡೆ ಯೋಜನೆಯನ್ನು ಜಾರಿಗೊಳಿಸುತ್ತದೆ ಎಂದು ಜನತೆ ಆಸೆಗಣ್ಣಿನಿಂದ ಎದುರು ನೋಡುತ್ತಿದ್ದಾರೆ. ಸರ್ಕಾರ ಈ ಜನರ ಬವಣೆಯನ್ನು ಅರ್ಥಮಾಡಿಕೊಂಡು ನಂಬಿಕೆಯನ್ನು ಹುಸಿ ಮಾಡದೇ ಯೋಜನೆ ಜಾರಿಗೊಳಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು. ಮಾಜಿ ಅಧ್ಯಕ್ಷ ಎಂ.ಗಿರಿಜಾಪತಿ ಮಾತನಾಡಿ ನವ್ಹೆಂಬರ್ ೧೦ ರಂದು ನಡೆಯುವ ಸಚಿವ ಸಂಪುಟದಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳದಿದ್ದರೆ ಪಕ್ಷ ರಾಜಕಾರಣ ಮರೆತು ಎಲ್ಲರೂ ಒಕ್ಕೊರಲಿನಿಂದ ಬೀದಿಗಳಿದು ಹೋರಾಟ ಮಾಡಬೇಕಾಗುತ್ತದೆ.[೧೨] ಎಂದು ಎಚ್ಚರಿಕೆ ನೀಡಿದರು.

ಇದೇ ದಿನ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರನಲ್ಲಿ ಈ ಯೋಜನೆಗೆ ಒತ್ತಾಯಿಸಿ ಪ್ರತಿಭಟನೆಯನ್ನು ಮಾಡಿರುವುದನ್ನು ಕೂಡ ನೋಡಬಹುದಾಗಿದೆ. ಮುಖ್ಯಮಂತ್ರಿಗಳಿಗೆ ಮಾದಾರ ಚೆನ್ನಯ್ಯ ಗುರುಪೀಠ ಉದ್ಘಾಟನೆಗೆ ಆಹ್ವಾನ ಇದ್ದು ಅವರು ಜಿಲ್ಲೆಗೆ ಆಗಮಿಸುವುದಾದರೆ ಈ ಯೋಜನೆ ಜಾರಿಗೆ ಸಚಿವ ಸಂಪುಟದ ಒಪ್ಪಿಗೆ ಪಡೆದೇ ಬರಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಖಂಡಿತ ಎಂದು ಅಲ್ಲಿನ ರೈತ ಸಂಘ ಹಾಗೂ ಹಸಿರು ಸೇನೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು. ಸರ್ಕಾರ ಜಾರಿಗೆ ಒಲವು ತೋರಿದ್ದು ಪಕ್ಕದ ಜಿಲ್ಲೆಗಳ ಒತ್ತಡಕ್ಕೆ ಮಣಿದು ಯೋಜನೆ ಜಾರಿ ತಡಮಾಡುತ್ತಿದೆ. ಶೀಘ್ರ ಜಾರಿಗೊಳಿಸಬೇಕೆಂದು ಆಗ್ರಹಪಡಿಸಿದರು.

ಚಿತ್ರದುರ್ಗ ನೀರಾವರಿ ಹೋರಾಟ ಸಮಿತಿ ವತಿಯಿಂದ ನಡೆಯುತ್ತಿದ್ದ ಧರಣಿಯ ೧೫ನೇ ದಿನದ ನೇತೃತ್ವ ಕಾಂಗ್ರೇಸ್ ಪಕ್ಷಕ್ಕೆ ನೀಡಲಾಗಿತ್ತು. ಆ ದಿನದ ನೇತೃತ್ವ ವಹಿಸಿಕೊಂಡ ಚಿತ್ರದುರ್ಗ ಜಿಲ್ಲಾ ಕಾಂಗ್ರೇಸ್ ಘಟಕ. ತನ್ನ ಕಾರ್ಯಕರ್ತರೊಂದಿಗೆ ನಗರದ ಗಾಂಧಿ ವೃತ್ತದಿಂದ ಮೆರವಣಿಗೆ ಪ್ರಾರಂಭಿಸಿ ನಗರದ ಬೀದಿ ಬೀದಿಗಳಲ್ಲಿ ಸಾಗಿ ಯೋಜನೆ ಜಾರಿಗಾಗಿ ಘೋಷಣೆಗಳನ್ನು ಕೂಗುತ್ತಾ ಜಿಲ್ಲಾಧಿಕಾರಿ ಕಛೇರಿ ಬಳಿಗೆ ಬಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೇಸ್ ಅಧ್ಯಕ್ಷ ಆರ್. ಮಂಜುನಾಥ್ ಈ ಜಿಲ್ಲೆಯ ಅಳಿವು-ಉಳಿವು ಭದ್ರಾ ಮೇಲ್ದಂಡೆ ಯೋಜನೆ ಜಾರಿಯಲ್ಲಿ ಅವಲಂಬಿಸಿದೆ. ಯೋಜನೆ ಜಾರಿಯಾಗದಿದ್ದರೆ ಜಿಲ್ಲೆಗೆ ಭವಿಷ್ಯವೇ ಇಲ್ಲ. ಸುವರ್ಣ ಕರ್ನಾಟಕದ ಹಬ್ಬದ ಆಚರಣೆಯ ಸಂದರ್ಭದಲ್ಲಿಯೂ ಕೂಡ ಜಿಲ್ಲೆಯ ಜನತೆ ಬೊಗಸೆ ನೀರಿಗೆ ಪರದಾಡುತ್ತಿದ್ದಾರೆ. ಇದಕ್ಕೆ ಮೂಲಕಾರಣ ಯೋಜನೆ ಜಾರಿಗೆಗೊಳ್ಳದಿರುವುದು. ನವ್ಹೆಂಬರ್ ೧೦ರ ಸಚಿವ

ಸಂಪುಟದಲ್ಲಿ ಭದ್ರೆ ಜಾರಿಗೆ ಒಪ್ಪಿಗೆ ದೊರೆಯದಿದ್ದರೆ ಹೋರಾಟದ ಸ್ವರೂಪ ಬದಲಾಯಿಸಬೇಕಾಗುತ್ತದೆ ಎಂಬ ವಿಷಯವನ್ನು ನಿ.ಹೊ.ಸಮಿತಿ ಹೇಳಿದೆ. ಸಮಿತಿ ಕೈಗೊಳ್ಳುವ ಎಲ್ಲಾ ತೀರ್ಮಾನವನ್ನು ಕಾಂಗ್ರೆಸ್ ಸಂಪೂರ್ಣ ಬೆಂಬಲ ನೀಡಿ ಅದರಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತದೆ ಎಂಬುದಾಗಿ ಹೇಳಿದರು. ಪಕ್ಷದ ಕಾರ್ಯದರ್ಶಿ ಆರ್.ಕೆ. ನಾಯ್ಡು ಮಾತನಾಡಿ ಚುನಾವಣೆ ಸಂದರ್ಭದಲ್ಲಿ ಜನಪ್ರತಿನಿಧಿಗಳು ಆಶ್ವಾಸನೆ ನೀಡುತ್ತಾ ಬಂದಿದ್ದಾರೆಯೇ ಹೊರತು ಅವರು ಜಯಗಳಿಸಿದ ನಂತರ ಇದರ ಬಗ್ಗೆ ಮರೆತು ಬಿಟ್ಟು ಸರ್ಕಾರಕ್ಕೆ ಯಾವುದೇ ಒತ್ತಡ ತರುವುದಿಲ್ಲ. ಕೇವಲ ಮಲೆನಾಡಿಗರ ಮಾತನ್ನೇ ಕೇಳುತ್ತಿರುವ ಸರ್ಕಾರಗಳು ಬರಪೀಡಿತ ಪ್ರದೇಶಗಳನ್ನು ಮರೆತು ವರ್ಗ ರಾಜಕಾರಣ ಮಾಡುತ್ತಿವೆ. ಈ ಕಾರಣದಿಂದ ಉಗ್ರ ಹೋರಾಟವೇ ಮೂಲಮಂತ್ರ ಎಂಬ ಕಿಚ್ಚನ್ನು ಹೊರಹಾಕಿದರು. ಈ ದಿನ ಆರ್ಯ, ವೈಶ್ಯ ಸಂಘ, ರಾಷ್ಟ್ರೀಯ ಕಿಸಾನ್ ಸಂಘ ಹೋರಾಟಕ್ಕೆ ಬೆಂಬಲ ಸೂಚಿಸಿದವು ಎಂಬುದಾಗಿ ನೀರಾವರಿ ಹೋರಾಟ ಸಮಿತಿಯ ಖಜಾಂಚಿಯಾದ ಕೆ.ಆರ್. ದಯಾನಂದರವರನ್ನು ಭೇಟಿಯಾದ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಮಾಹಿತಿ ನೀಡಿದರು.

ಈ ರೀತಿಯ ಹೋರಾಟಗಳನ್ನು ಗಮನಿಸಿದ ಸರ್ಕಾರ ದಿನಾಂಕ ೧೦ ನವ್ಹೆಂಬರ್ ೨೦೦೬ ರಂದು ಯೋಜನೆಯನ್ನು ಕೆ.ಸಿ.ರೆಡ್ಡಿ ವರದಿಯನ್ವಯ ಜಾರಿಗೆ ಸಚಿವ ಸಂಪುಟ ಸಂಪೂರ್ಣ ಒಪ್ಪಿಗೆ ನೀಡಿತು. ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯನ್ನೊಳಗೊಂಡು ಜಿಲ್ಲೆಯ ಸಮಸ್ತ ನಾಗರಿಕರು, ಹೋರಾಟಗಾರರು, ಸಂಘ ಸಂಸ್ಥೆಗಳು ಹರ್ಷ ವ್ಯಕ್ತಪಡಿಸಿದ್ದನ್ನು ಇತಿಹಾಸದಲ್ಲಿ ದಾಖಲಿಸಬಹುದಾಗಿದೆ. ಸುಮಾರು ೩೫ ವರ್ಷಗಳಿಂದ ಬರಪೀಡಿತ ಜನತೆಯ ಹೋರಾಟಕ್ಕೆ ಸಂದ ಪ್ರತಿಫಲ ಇದಾಗಿತ್ತು ಎಂಬುದಾಗಿ ಅಂದು ಸಚಿವ ಸಂಪುಟ ಒಪ್ಪಿಗೆ ಪಡೆದ ಕೆಲವೇ ನಿಮಿಷಗಳಲ್ಲಿ ದುರ್ಗದ ಜನತೆಗೆ ವಿಷಯ ತಿಳಿದ ತಕ್ಷಣ ಭದ್ರೆಯೇ ತಮ್ಮ ಎದುರಿಗೆ ಹರಿಯುತ್ತಿದ್ದಾಳೆ ಎನ್ನುವ ರೀತಿಯಲ್ಲಿ ಹರ್ಷ ವ್ಯಕ್ತಪಡಿಸಿದರು. ಆದರೆ ಭದ್ರೆ ಮಾತ್ರ ಇನ್ನೂ ಕೂಡ ಬಂದಿಲ್ಲ. ಹೋರಾಟಗಳು ನಿಂತಿಲ್ಲ. ಇನ್ನೂ ಹೋರಾಟಗಳು ನಡೆಯುತ್ತಲೆ ಇವೆ. ಈ ಸಂಬಂಧವಾಗಿ ನವ್ಹೆಂಬರ್ ೧೧, ೨೦೦೬ರಂದು ಹಿರಿಯೂರಿನಲ್ಲಿ ಭದ್ರಾ ಮೇಲ್ದಂಡೆ ಕಾಮಗಾರಿ ಆರಂಭಿಸುವಂತೆ ವಿದ್ಯಾರ್ಥಿಗಳಿಂದ ಪತ್ರ ಚಳವಳಿಯನ್ನು ಆರಂಭಿಸಲಾಯಿತು. ತಾಲ್ಲೂಕಿನ ಸಮಸ್ತ ವಿದ್ಯಾರ್ಥಿಗಳ ಬಳಗ ಅಸಂಪ್ಷನ್ ಶಾಲೆ ಆವರಣದಲ್ಲಿ ಒಟ್ಟುಗೂಡಿ ಭದ್ರೆಯನ್ನು ಆದಷ್ಟು ಬೇಗ ಬರಪೀಡಿತ ಪ್ರದೇಶಕ್ಕೆ ಹರಿಸಬೇಕು ಎಂಬುದಾಗಿ ಒತ್ತಾಯಿಸಿದರು.

ಈ ವಿಚಾರವಾಗಿಯೇ ಚಿತ್ರದುರ್ಗದಲ್ಲಿ ಜನತಾ ವಾಹಿನಿ ಪತ್ರಿಕೆಯ ವತಿಯಿಂದ ಜನ ಪ್ರತಿನಿಧಿಗಳ ಸಭೆಯನ್ನು ಕರೆಯಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಸಂಸದರಾದ

ಎನ್.ವೈ.ಹನುಮಂತಪ್ಪ ವಹಿಸಿಕೊಂಡಿದ್ದರು. ಈ ಸಭೆಗೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಶಾಸಕರಾದ ಜಿ.ಹೆಚ್. ತಿಪ್ಪಾರೆಡ್ಡಿ, ಚಿತ್ರದುರ್ಗ ಶಾಸಕರು, ಮೊಳಕಾಲ್ಮೂರು ಶಾಸಕರಾದ ಎನ್.ವೈ.ಗೋಪಾಲಕೃಷ್ಣ, ಹೊಸದುರ್ಗದ ಶಾಸಕರಾದ ಬಿ.ಜಿ.ಗೋವಿಂದಪ್ಪ, ಹೊಳಲ್ಕೆರೆ ಶಾಸಕ ಎ.ವಿ.ಉಮಾಪತಿ, ದಾವಣಗೆರೆ ಜಿಲ್ಲೆಯ ಸಂಸದರಾದ ಜಿ.ಎಂ. ಸಿದ್ದೇಶ್ ಮುಂತಾದವರು ಆಗಮಿಸಿದ್ದರು. ಈ ಎಲ್ಲಾ ಜನಪ್ರತಿನಿಧಿಗಳಿಂದ ಹೊರಬಂದ ಮಾತೇನೆಂದರೆ, ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಸರ್ಕಾರ ಒಪ್ಪಿಗೆ ನೀಡಿದೆ. ಆದರೆ ಹೋರಾಟ ಇಲ್ಲಿಯೇ ನಿಲ್ಲಿಸದೆ ಭದ್ರೆ ನಮ್ಮ ಜಿಲ್ಲೆಗಳಿಗೆ ಹರಿದು ಬರುವವರೆಗೂ ಹೋರಾಟ ನಿಲ್ಲಿಸಬಾರದು ಎಂಬುದಾಗಿ ಘೋಷಿಸಿದರು.

ಚಿತ್ರದುರ್ಗದಲ್ಲಿ ಜಿಲ್ಲಾ ನೀರಾವರಿ ಹೋರಾಟ ಸಮಿತಿ ವತಿಯಿಂದ ನಡೆದ ಸರಧಿ ಧರಣಿಯ ಪೂರ್ಣ ಮಾಹಿತಿಯನ್ನು ಸಮಿತಿಯ ಕಾರ್ಯಾಧ್ಯಕ್ಷರಾದ ಎಂ. ಜಯಣ್ಣ, ಹೋರಾಟ ಸಮಿತಿ ಸಂಚಾಲಕರಾದ ಡಾ. ಬಂಜಿಗೆರೆ ಜಯಪ್ರಕಾಶ್, ಪತ್ರಕರ್ತ ಚಿಕ್ಕಪ್ಪನಹಳ್ಳಿ ಷಣ್ಮುಖ, ಖಜಾಂಚಿ ಕೆ.ಆರ್.ದಯಾನಂದ ಹಾಗೂ ಮಾಜಿ ಸಂಸದರಾದ ಪಿ. ಕೋದಂಡ ರಾಮಯ್ಯನವರನ್ನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿದ ಸಂದರ್ಭದಲ್ಲಿ ಅವರು ಧರಣಿಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ನನಗೆ ನೀಡಿರುತ್ತಾರೆ. ಅವರ ಮಾಹಿತಿಯ ಆಧಾರದ ಮೇಲೆ ಈ ಮೇಲಿನ ಎಲ್ಲಾ ವಿಚಾರವನ್ನು ಕ್ರೂಢೀಕರಿಸಿ ಚರ್ಚಿಸಿದ್ದೇನೆ.

ಭದ್ರಾ ಮೇಲ್ದಂಡೆ ವಿಚಾರವಾಗಿ ಹಿರಿಯೂರಿನಲ್ಲಿ ಸುಮಾರು ಒಂದು ವರ್ಷಕ್ಕೂ ಹೆಚ್ಚು ದಿನ ತಾಲ್ಲೂಕು ರೈತ ಸಂಘದ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಯುತ್ತಲೇ ಇದೆ. ಅಂದರೆ **೧೩ ಜೂನ್, ೨೦೦೭ ರಿಂದ** ಪ್ರಾರಂಭವಾದ ಈ ಧರಣಿ ಸತ್ಯಾಗ್ರಹ **೨೫ ಅಗಸ್ಟ್ ೨೦೦೮** ಇಂದಿಗೂ ನಿಲ್ಲಿಸಿಲ್ಲ. ಈ ಧರಣಿಯ ಮುಖ್ಯ ಉದ್ದೇಶವೆಂದರೆ ವಾಣಿ ವಿಲಾಸ ಜಲಾಶಕ್ಕೆ ಭದ್ರಾ ಮೇಲ್ದಂಡೆ ಯೋಜನೆಯ 'ಎ' ಸ್ಕೀಂನಲ್ಲಿ ೮ ಟಿ.ಎಂ.ಸಿ. ನೀರನ್ನು ಹರಿಸಬೇಕೆಂಬುದಾಗಿದೆ.

ಈ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಯಲು ಮುಖ್ಯ ಕಾರಣ ಕೆ.ಸಿ.ರೆಡ್ಡಿ ವರದಿಯಲ್ಲಿ ಎಲ್ಲಿಯೂ ಕೂಡ ವಾಣಿ ವಿಲಾಸ ಜಲಾಶಯಕ್ಕೆ ನೀರು ಕೊಡುವ ಮಾಹಿತಿ ಇಲ್ಲದೆ ಇರುವುದು. ಹಾಗೂ ಈ ಜಲಾಶಯಕ್ಕೆ 'ಬಿ' ಸ್ಕೀಂನಲ್ಲಿ ನೀರು ಬರುತ್ತದೆ ಎಂದು ಹೇಳುತ್ತಿರುವ ಸರ್ಕಾರದ ಮಾತಿಗೆ, ಹಿರಿಯೂರು ಭಾಗದ ರೈತರು ಇಲ್ಲಿ ನಮಗೆ 'ಎ' ಸ್ಕೀಂನಲ್ಲಿಯೇ ನೀರು ಕೊಡಿ ಎಂದು ಧರಣಿ ಕುಳಿತಿದ್ದಾರೆ. ಆದರೆ ಸರ್ಕಾರ ಮಾತ್ರ ಮೌನವಾಗಿಯೇ ಮುಂದುವರೆಯುತ್ತಿದೆ ಎಂಬುದು ಶೋಚನೀಯ. ಈ ಧರಣಿ ಸತ್ಯಾಗ್ರಹದ ಬಗ್ಗೆ ಈ ಮುಂದಿನಂತೆ ಚರ್ಚಿಸಲಾಗಿದೆ.

ಏಷ್ಯಾ ಖಂಡದಲ್ಲಿಯೇ ಮೊದಲ ಅತೀ ದೊಡ್ಡ ಯೋಜನೆಯಾದ ವಾಣಿ ವಿಲಾಸ ಸಾಗರ ಯೋಜನೆ ಮೈಸೂರಿನ ದಿವಾನರಾಗಿದ್ದ ಕೆ. ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ಹಿರಿಯೂರು ತಾಲ್ಲೂಕಿನ ಮಾರಿಕಣಿವೆ ಗ್ರಾಮದ ಹತ್ತಿರ (೧೮೯೭–೧೯೦೭) ನಿರ್ಮಾಣವಾಯಿತು. ಇಂತಹ ಇತಿಹಾಸ ಹೊಂದಿರುವ ಈ ಜಲಾಶಯ ನಿರ್ಮಾಣವಾಗಿ ಇಂದಿನವರೆಗೆ ಕೇವಲ ಒಂದು ಭಾರಿ ಮಾತ್ರ ತುಂಬಿ ಹರಿದಿದೆ. ಕೇವಲ ಹೆಸರಿಗೆ ಮಾತ್ರ ದೊಡ್ಡ ಯೋಜನೆ ಎಂದು ಕರೆಸಿಕೊಂಡರೂ ಹೆಚ್ಚಿನ ಪ್ರಮಾಣದಲ್ಲಿ ಇದಕ್ಕೆ ನೀರೆ ಬರುವುದಿಲ್ಲ. ಈ ಯೋಜನೆ ಕೇವಲ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಕೆಲವು ಪ್ರದೇಶಕ್ಕೆ ಸೀಮಿತವಾದ ನೀರಾವರಿ ಯೋಜನೆಯಾಗಿದೆ. ಈ ಜಲಾಶಯ ಚಿತ್ರದುರ್ಗ ನಗರ ಮತ್ತು ಹಿರಿಯೂರು ನಗರಕ್ಕೆ ಕುಡಿಯುವ ನೀರಿಗೆ ಮುಖ್ಯ ಆಧಾರವಾಗಿದೆ. ಏಕೆಂದರೆ ಈ ಭಾಗದಲ್ಲಿ ಅಂತರ್ ಜಲಮಟ್ಟ ಕುಸಿದು ಕೊಳವೆ ಬಾವಿಗಳಿಂದ ಫ್ಲೋರೈಡ್‌ಯುಕ್ತ ನೀರು ಬರುತ್ತಿದ್ದು ಜನತೆ ಸಾಕಷ್ಟು ನೋವುಗಳನ್ನು ಅನುಭವಿಸಬೇಕಾಗಿದೆ. ಮಳೆಗಾಲದಲ್ಲಿ ತುಂಬಿ ಹರಿಯುತ್ತಿರುವ ಎಲ್ಲಾ ಜಲಾಶಯಗಳು ಅವುಗಳಿಂದ ಎಷ್ಟೋ ನೀರನ್ನು ಹೊರಬಿಡಲಾಗುತ್ತದೆ. ಆದರೆ ವಾಣಿವಿಲಾಸ ಜಲಾಶಯಕ್ಕೆ ನೀರು ಬರದೆ ನೀರಿನ ಮಟ್ಟ ತಳಮಟ್ಟಕ್ಕೆ ಹೋಗಿದೆ. ಈ ಎಲ್ಲಾ ಕಾರಣದಿಂದ ಭದ್ರಾ ಮೇಲ್ದಂಡೆ ಯೋಜನೆಯಡಿ ವಾಣಿ ವಿಲಾಸ ಜಲಾಶಯಕ್ಕೆ ೮ ಟಿ.ಎಂ.ಸಿ. ನೀರನ್ನು 'ಎ' ಸ್ಕೀಂನಲ್ಲಿ ಬಿಟ್ಟರೆ ಚಿತ್ರದುರ್ಗ ನಗರ, ಹಿರಿಯೂರು ನಗರ ಹಾಗೂ ಸುತ್ತಮುತ್ತಲ ಹಳ್ಳಿಗಾಡುಗಳಿಗೆ ಕುಡಿಯುವ ನೀರನ್ನು ನಿಭಾಯಿಸಬಹುದು ಎಂಬುದು ಪ್ರತಿಭಟನಾಕಾರರ ಬೇಡಿಕೆಯಾಗಿದೆ. ಹಾಗಾಗಿ ಹಿರಿಯೂರು ಘಟಕದ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಹಿರಿಯೂರಿನಲ್ಲಿ ಪ್ರಾರಂಭವಾಗಿ ಒಂದು ವರ್ಷ ಮೂರು ತಿಂಗಳಿಗೂ ಮಿಗಿಲಾಗಿದೆ. ಈ ವಿಷಯವಾಗಿ ಹಿರಿಯೂರು ನಗರವನ್ನು ಮೂರು ದಿನ ಸಂಪೂರ್ಣ ಬಂದ್ ಮಾಡಿ ರಾಷ್ಟ್ರೀಯ ಹೆದ್ದಾರಿ ತಡೆ ಮಾಡಿ ಯಶಸ್ವಿಯಾಗಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಯ 'ಎ' ಸ್ಕೀಂನಲ್ಲಿ ವಾಣಿ ವಿಲಾಸ ಜಲಾಶಯಕ್ಕೆ ೮ ಟಿ.ಎಂ.ಸಿ. ನೀರು ಹರಿಸುವಂತೆ ದಿನಾಂಕ ೯, ಆಗಸ್ಟ್ ೨೦೦೭ ರಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರವನ್ನು ಸಂಪೂರ್ಣ ಬಂದ್ ಆಚರಿಸಿದರು. ಈ ಸಂದರ್ಭದಲ್ಲಿ ಎಲ್ಲಾ ಅಂಗಡಿ ಮುಂಗಟ್ಟುಗಳು, ಶಾಲಾ ಕಾಲೇಜುಗಳು ಮುಚ್ಚಿದ್ದು ಕೇವಲ ಒಂದೆರಡು ಔಷಧಿ ಅಂಗಡಿಗಳು ಮಾತ್ರ ತೆರೆದಿದ್ದನ್ನು ಬಿಟ್ಟರೆ ಹಿರಿಯೂರಿನ ಸಮಸ್ತ ನಾಗರೀಕರು ಯಾವುದೇ ಅಂಗಡಿ ಮುಂಗಟ್ಟುಗಳನ್ನು ತೆರೆಯದೆ ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ಪ್ರತಿಭಟನಾ ಸ್ಥಳಕ್ಕೆ ಮಾಜಿ ಸಂಸದ ಕೋದಂಡರಾಮಯ್ಯ ಹಾಗೂ ಚಿತ್ರದುರ್ಗ ತಾಲ್ಲೂಕಿನ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಅವರು ಆಗಮಿಸಿದ್ದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಕೋದಂಡರಾಮಯ್ಯ, ಕೆ.ಸಿ.ರೆಡ್ಡಿಯವರು ಭದ್ರಾ ಮೇಲ್ದಂಡೆ ಕುರಿತು ನೀಡಿರುವ ವರದಿಯನ್ನು

ಒಪ್ಪಲು ಸಾಧ್ಯವಿಲ್ಲ ವಾಣಿ ವಿಲಾಸ ಜಲಾಶಯಕ್ಕೆ ೮ ಟಿ.ಎಂ.ಸಿ. ನೀರು ಹರಿಸಲು ಯಾವ ತಜ್ಞರ ಅವಶ್ಯಕತೆಯೂ ಇಲ್ಲ. ಮುಖ್ಯಮಂತ್ರಿಗಳು ತಿಳಿಸಿರುವಂತೆ ಆಗಸ್ಟ್ ೩೦ರವರೆಗೆ ಮುಖ್ಯ ಇಂಜಿನಿಯರ್ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿ ವರದಿ ನೀಡಲು ಸಮಯಾವಕಾಶ ನೀಡೋಣವೆಂದು, ಬೇಡಿಕೆ ಈಡೇರದಿದ್ದರೆ ಉಗ್ರ ಹೋರಾಟ ನಡೆಸೋಣ ಎಂದು ಮಾಜಿ ಸಂಸದ ಕೋದಂಡರಾಮಯ್ಯ ಕರೆ ನೀಡಿದರು.

ಜಲಸಂಪನ್ಮೂಲ ಸಚಿವ ಈಶ್ವರಪ್ಪನವರು ವಾಣಿವಿಲಾಸ ಜಲಾಶಯಕ್ಕೆ 'ಎ' ಸ್ಕೀಂನಲ್ಲಿ ನೀರು ಕೊಡಲು ನೀರು ಇಲ್ಲ ಎಂದು ಹೇಳಿದ್ದರು. ಅವರನ್ನು ಟೀಕಿಸುತ್ತಾ ಕೋದಂಡರಾಮಯ್ಯ, ಈಶ್ವರಪ್ಪನವರು ಹಿಂದಿನ ಸರ್ಕಾರಗಳ ಪ್ರಸ್ತಾಪವನ್ನು ನೋಡುವುದು ಒಳಿತು. ವಾಣಿ ವಿಲಾಸ ಜಲಾಶಯಕ್ಕೆ ಹೇಗೆ ನೀರು ಕೊಡಬಹುದು ಎನ್ನುವುದನ್ನು ನಾನು ತೋರಿಸುತ್ತೇನೆ ಇಲ್ಲವಾದರೆ ರಾಜಕೀಯದಿಂದ ನಿವೃತ್ತಿಯಾಗುತ್ತೇನೆ ಎಂದು ಅವರು ಘೋಷಿಸಿದರು.

ತುಂಗಾದಲ್ಲಿ ೧೨೦, ಭದ್ರಾದಲ್ಲಿ ೮೨ ಟಿ.ಎಂ.ಸಿ. ನೀರು ಇದ್ದು ಇದರಲ್ಲಿ ಶಿವಮೊಗ್ಗ ದಾವಣಗೆರೆ ಜಿಲ್ಲೆಗಳಿಗೆ ಭದ್ರಾದ ೬೧ ಹಾಗೂ ತುಂಗಾದ ೨೪ ಟಿ.ಎಂ.ಸಿ. ಮಾತ್ರ ಉಪಯೋಗಿಸಿಕೊಳ್ಳುವ ಬಚಾವತ್ ವರದಿಯಲ್ಲಿ ತಿಳಿಸಿದೆ. ಭದ್ರಾದಲ್ಲಿ ಉಳಿಯುವ ೨೧ ಟಿ.ಎಂ.ಸಿ ನೀರು ಈ ಭಾಗಕ್ಕೆ ಬರಲೇಬೇಕು. ತುಂಗಾದಲ್ಲಿ ಉಳಿಯುವ ೯೦ ಟಿ.ಎಂ.ಸಿ. ನೀರನ್ನು ನೆರೆಯ ಜಿಲ್ಲೆಗಳಿಗೆ ಹರಿಸುವ ಬದಲು ಉತ್ತರ ಕರ್ನಾಟಕಕ್ಕೆ ಒಯ್ಯುವುದಾಗಿ ಸರ್ಕಾರ ಹೇಳುತ್ತಿರುವುದು ಯಾವ ನ್ಯಾಯ. ದಾವಣಗೆರೆ ಜಿಲ್ಲೆಯವರಿಗೆ ಅರೆ ನೀರಾವರಿಗೆ ಅನುಮತಿ ನೀಡಲಾಗಿದ್ದರೂ ಕಬ್ಬು, ಭತ್ತ ಬೆಳೆಯುತ್ತಿದ್ದಾರೆ. ಹೀಗಾಗಿ ನೀರಿನ ಕೊರತೆ ಉಂಟಾಗಿದೆ ಎಂಬುದಾಗಿ ಕೋದಂಡರಾಮಯ್ಯ ವಿವರಿಸುತ್ತಾ ಕೆ.ಸಿ. ರೆಡ್ಡಿಯವರು ತಮ್ಮ ಹುಟ್ಟೂರಿನ ವ್ಯಾಮೋಹದಿಂದ ವಾಣಿವಿಲಾಸ ಜಲಾಶಯಕ್ಕೆ ಬರಬೇಕಾಗಿದ್ದ ೫ ಟಿ.ಎಂ.ಸಿ. ನೀರನ್ನು ಕೊಳವೆ ಮಾರ್ಗದ ಮೂಲಕ ೯೦೦ ಕೋಟಿ ರೂಪಾಯಿ ವೆಚ್ಚದಲ್ಲಿ ಕೋಲಾರದ ಕ್ಯಾಸೆಂಬಳ್ಳಿಗೆ ಒಯ್ಯುವ ಯತ್ನ ಮಾಡಿದ್ದಾರೆ. ಇವರು ಎಂತಹ ತಜ್ಞರು ಎಂದು ಪ್ರಶ್ನಿಸಿದರು. ಈ ಒಂದು ಹಿರಿಯೂರು ಬಂದ್ ಪ್ರತಿಭಟನೆಯಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ. ಯಶೋಧರ ಮನವಿ ಪತ್ರವನ್ನು ಓದಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ಮಂಜುನಾಥ್, ಚಿತ್ರದುರ್ಗ ಕ್ಷೇತ್ರದ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ, ಕೆಪಿಸಿಸಿ ಸದಸ್ಯ ಜಿ.ಎಸ್. ಮಂಜುನಾಥ, ಬಿಜೆಪಿ ಕಾರ್ಯಕಾರಿಣಿ ಸದಸ್ಯ ವೈ.ಎಸ್. ಅಶ್ವಥ್‌ಕುಮಾರ್, ಕಮ್ಯೂನಿಷ್ಟ ಪಕ್ಷದ ಶ್ರೀನಿವಾಸ್, ರೈತ ಸಂಘದ ಅಧ್ಯಕ್ಷ ಕೆ. ಸುಬ್ರಹ್ಮಣ್ಯಂ, ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯ ಕಾರ್ಯಾಧ್ಯಕ್ಷ ಎಂ.ಜಯಣ್ಣ, ಬಿ.ಎಚ್. ಮಂಜುನಾಥ್ ದೊರೆಸ್ವಾಮಿ ಖಂಡರ್, ಭಕ್ತ ರಾಮೇಗೌಡ, ಹಿರಿಯೂರು ತಾಲ್ಲೂಕು ನೀರಾವರಿ ಹೋರಾಟ ಸಮಿತಿ ಮುಖಂಡ ಎಂ.ಡಿ.ರವಿ, ರಾಮಕೃಷ್ಣಪ್ಪ,

ಎಸ್. ಆರ್. ತಿಪ್ಪೇಸ್ವಾಮಿ, ಡಾ. ಎಂ.ಎನ್. ಶ್ರೀಪತಿ ಮುಂತಾದ ಮುಖಂಡರನ್ನೊಳಗೊಂಡ ಪ್ರತಿಭಟನಾಕಾರರು, ತಾಲ್ಲೂಕು ಕಛೇರಿಗೆ ತೆರಳಿ ಉಪವಿಭಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಲು ಬಂದ ಚಿತ್ರದುರ್ಗ ಕ್ಷೇತ್ರದ ಶಾಸಕ ತಿಪ್ಪಾರೆಡ್ಡಿಗೆ ಪ್ರತಿಭಟನಾಕಾರರು ಅಡ್ಡಿ ಪಡಿಸಿದರು. ಅಂದರೆ ಇಲ್ಲಿನ ಜನ ಪ್ರತಿನಿಧಿಗಳು ವಿಧಾನ ಸಭೆ ಅಧಿವೇಶನದಲ್ಲಿ ಬಾಯಿ ಒಲಿದುಕೊಂಡವರಂತೆ ತೆಪ್ಪಾಗಿರುತ್ತಾರೆ. ಇಲ್ಲಿ ಮೈಕ್ ಸಿಕ್ಕ ತಕ್ಷಣ ಭಾಷಣ ಬಿಗಿಯುತ್ತಾರೆ. ನೀವು ಇಲ್ಲಿ ಮಾತನಾಡುವ ಬದಲು ನಿಮಗೆಂದೆ ಇರುವ ವಿಧಾನ ಸಭೆಯಲ್ಲಿ ವಾಣಿ ವಿಲಾಸ ಜಲಾಶಯಕ್ಕೆ ನೀರಿನ ಅವಶ್ಯಕತೆ ಎಷ್ಟಿದೆ ಎಂಬುದರ ಬಗ್ಗೆ ಮಾತನಾಡಿ ಅಲ್ಲಿ ಹೋರಾಟ ನಡೆಸಿ[೧೩] ಅಲ್ಲಿ ಮಾತನಾಡದೆ ಸುಮ್ಮನೆ ಕುಳಿತವರಿಗೆ ಇಲ್ಲಿ ಮಾತನಾಡಲು ಬಿಡುವುದಿಲ್ಲ ಎಂದು ದಿಕ್ಕಾರ ಕೂಗಿದರು.

ಕಾಂಗ್ರೇಸ್ ಶಾಸಕರ ಮಾತಿಗೆ ಅಡ್ಡಿಪಡಿಸುತ್ತಿದ್ದಾರೆ ಎಂದು ಕೆಲವು ಕಾಂಗ್ರೆಸ್ ಮುಖಂಡರು ಧಿಕ್ಕಾರ ಕೂಗುತ್ತಿದ್ದವರ ಜೊತೆ ಮಾತಿನ ಚಕಮಕಿ ನಡೆಸಿದರು. ಆಗ ಅಲ್ಲಿಯೇ ಇದ್ದ ಪೋಲಿಸರು ಎರಡೂ ಕಡೆಯವರನ್ನು ಸಮಾಧಾನ ಪಡಿಸಿದರು. ತಿಪ್ಪಾರೆಡ್ಡಿ ತಮ್ಮ ಮಾತನ್ನು ಮುಂದುವರೆಸುತ್ತಾ ನಾನು ಭದ್ರಾ ಮೇಲ್ದಂಡೆ ಯೋಜನೆಯ ವಿರೋಧಿಯಲ್ಲ ಈ ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಇಷ್ಟು ದಿನ ನಡೆಯುತ್ತಿದ್ದ ಧರಣಿ ಸತ್ಯಾಗ್ರಹದ ಸ್ಥಳಕ್ಕೆ ಎರಡು ಮೂರು ಬಾರಿ ಬಂದು ಭೇಟಿ ಕೊಟ್ಟಿದ್ದೇನೆ.

ಸಭೆಗೆ ಬರದಿರುವ ಜನಪ್ರತಿನಿಧಿಗಳಿಗೆ ಧಿಕ್ಕಾರ ಕೂಗುವ ಬದಲು ಸಭೆಗೆ ಬೆಂಬಲ ಸೂಚಿಸಿದವರಿಗೆ ಧಿಕ್ಕಾರ ಕೂಗುವುದು ಯಾವ ನ್ಯಾಯ, ತಿಪ್ಪಾರೆಡ್ಡಿಯವರ ಹೋರಾಟದ ಫಲವಾಗಿ ಶಾಂತಿ ಸಾಗರಕ್ಕೆ ನೀರು ಬಂದು ಚಿತ್ರದುರ್ಗಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಬರುತ್ತಿದೆ. ಇಲ್ಲಿ ರಾಜಕೀಯ ಮಾಡುವುದು ಬೇಡ ರೈತ ಸಂಘಕ್ಕೆ ಬೆಂಬಲ ನೀಡೋಣ ಎಂದು ಹೇಳುತ್ತಾ, ಮುಂದಿನ ದಿನಗಳಲ್ಲಿ ಒಗ್ಗಟ್ಟಿನಿಂದ ಹೋರಾಟ ಮಾಡಿದರೆ ಮಾತ್ರ ನಮಗೆ ಪ್ರತಿಫಲ ಸಿಗುತ್ತದೆ. ಇಲ್ಲದಿದ್ದರೆ ನಮಗೆ ಇದೇ ಗತಿ ಎಂಬ ಮಾತನ್ನು ಹೇಳಿದರು.[೧೪]

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ರೈತ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯಂ, ಸುಮಾರು ೬೦ ದಿನಗಳಿಂದ ನಡೆಯುತ್ತಿರುವ ಹೋರಾಟದ ಸಂದರ್ಭದಲ್ಲಿ ಯಾವುದೇ ಕಪ್ಪು ಚುಕ್ಕೆ ಬಂದಿರಲಿಲ್ಲ. ಆದರೆ ಇಂದು ಅದಕ್ಕೆ ಪ್ರೋತ್ಸಾಹಿಸುವುದು ಬೇಡ. ನಮ್ಮ ಹೋರಾಟಕ್ಕೆ ಬರುವ ಎಲ್ಲರನ್ನೂ ಆಹ್ವಾನಿಸೋಣ ಗಟ್ಟಿನಿಂದ ಹೋರಾಟ ಮಾಡೋಣ ಎಂದು ಹೇಳಿದರು.

ಒಟ್ಟಿನಲ್ಲಿ ಹಿರಿಯೂರು ಬಂದ್ ಯಾವುದೇ ಅಹಿತಕರ ಘಟನೆಗೆ ಹಿಡು ಮಾಡದೆ ಶಾಂತ ರೀತಿಯಿಂದ ಯಶಸ್ವಿಯಾಯಿತು. ಈ ಒಂದು ಬಂದ್‌ಗೆ ಹಲವಾರು ಸಂಘ ಸಂಸ್ಥೆಗಳು

[illegible]

[illegible]

[illegible]

[illegible]

ಬೆಂಬಲ ನೀಡಿದವು. ಅಂದರೆ, ಮಹಿಳಾ ಸ್ವ-ಸಹಾಯ ಸಂಘಗಳು, ಜೀವವಿಮಾ ನಿಗಮ, ಲಾರಿ ಮಾಲೀಕರ ಸಂಘ, ಕಿಸಾನ್ ಸಂಘ, ದಲಿತ ಸಂಘರ್ಷ ಸಮಿತಿ, ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ, ಆಟೋಚಾಲಕರ ಸಂಘ, ಕನ್ನಡ ಹಿತರಕ್ಷಣಾ ವೇದಿಕೆ, ಆರ್ಯ ವೈಶ್ಯ ಸಂಘ, ಹೋಟೆಲ್ ಮಾಲೀಕರ ಸಂಘ, ಇಂತಹ ಹಲವಾರು ಸಂಘಗಳು ಹಿರಿಯೂರ್ ಬಂದ್ ಯಶಸ್ವಿಯಾಗಲು ಬೆಂಬಲ ನೀಡಿದ್ದವು ಎಂದು ಹೇಳಬಹುದಾಗಿದೆ.

ವಾಣಿ ವಿಲಾಸ ಜಲಾಶಯಕ್ಕೆ ನೀರು ಹರಿಸಬೇಕೆಂದು ನಡೆಯುತ್ತಿದ್ದ ಹೋರಾಟದ ಹಿನ್ನಲೆಯಲ್ಲಿ ಹೋರಾಟವನ್ನು ನಿಲ್ಲಿಸುವ ಉದ್ದೇಶದಿಂದ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ವಿ.ವಿ. ಸಾಗರಕ್ಕೆ ನೀರು ಹರಿಸುವ ವಿಚಾರವಾಗಿ ಅದರ ಸಾದಕ ಬಾದಕಗಳ ಬಗ್ಗೆ ಅಧ್ಯಯನ ಮಾಡಲು ಅಂತರ್ ರಾಜ್ಯ ಜಲ ವಿವಾದ ವಿಭಾಗದ ಮುಖ್ಯ ಇಂಜಿನಿಯರ್ ಬಂಗಾರಸ್ವಾಮಿಯವರನ್ನು ನೇಮಕ ಮಾಡಿ ವಾಣಿವಿಲಾಸ ಜಲಾಶಯದ ವೀಕ್ಷಣೆಗೆ ಕಳುಹಿಸಿದರು. ಅವರು ಜಲಾಶಯಕ್ಕೆ ಭೇಟಿ ನೀಡಿ ಅದರ ಸಾಧ್ಯತೆ ಬಗ್ಗೆ ರೈತ ಮುಖಂಡರಲ್ಲಿ ಚರ್ಚಿಸುತ್ತಾ ಜಿಲ್ಲೆಯಲ್ಲಿ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿಗೆ ತೀವ್ರ ತೊಂದರೆ ಉಂಟಾಗುವ ಸಂಭವ ಇದ್ದು ತಕ್ಷಣ ಯೋಜನೆ ಜಾರಿಗೊಳಿಸದಿದ್ದರೆ ಜನ ಗುಳಿ ಹೋಗಬೇಕಾಗುತ್ತದೆ ಎಂಬ ಅಂಶವನ್ನು ಗಮನಿಸಿದ ಬಂಗಾರಸ್ವಾಮಿಯವರು, ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಜಲಾಶಯಕ್ಕೆ ಭದ್ರಾ ಮೇಲ್ದಂಡೆ ಯೋಜನೆಯ 'ಎ' ಸ್ಕೀಂನಲ್ಲಿ ಸಂಪರ್ಕ ಕಾಲುವೆ ಮೂಲಕ ೬.೯ ಟಿ.ಎಂ.ಸಿ. ನೀರು ಹರಿಸಲು ಸಾಧ್ಯವಾದ ಸಂಪೂರ್ಣ ಅಂದಾಜು ಪಟ್ಟಿ ತಯಾರಿಸುವ ಸಿದ್ಧತೆ ನಡೆದಿದೆ. 'ಭದ್ರಾ' 'ಎ' ಸ್ಕೀಂನಲ್ಲಿ ನಾಲೆಯನ್ನು ವಿಸ್ತರಿಸಿ ಅಜ್ಜಂಪುರದಿಂದ ಹೊಸದುರ್ಗ ತಾಲ್ಲೂಕಿನ ಕೋಡಿ ಹಳ್ಳದವರೆಗೆ ಸುರಂಗ ಮಾರ್ಗದ ಮೂಲಕ ನೀರು ಹರಿಸಿ ವೇದಾವತಿ ನದಿಗೆ ಸಂಪರ್ಕ ಕಲ್ಪಿಸಲು ಯೋಜಿಸಲಾಗುವುದು[೧೫] ಎಂದು ಬಂಗಾರಸ್ವಾಮಿ ಭರವಸೆ ನೀಡಿದರು.

ವಾಣಿ ವಿಲಾಸ ಜಲಾಶಯಕ್ಕೆ ಭೇಟಿ ನೀಡಿದ ಬಂಗಾರಸ್ವಾಮಿಯವರು ಜಲಾಶಯದ ಬಿಗಿ ಭದ್ರತೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಸುಮಾರು ೧೦೦ ವರ್ಷ ಇತಿಹಾಸವಿರುವ ಈ ಜಲಾಶಯದ ಉಳುವಿಗೆ ಹೋರಾಟ ಮಾಡುತ್ತಿರುವುದಕ್ಕೆ ನನಗೆ ಮೆಚ್ಚುಗೆಯಾಗಿದೆ. ನಿಮ್ಮ ಹೋರಾಟದಲ್ಲಿ ಅರ್ಥವಿದೆ. ರೈತರ ಪರವಾಗಿ ಸಂಪೂರ್ಣ ಶ್ರಮಿಸುವುದಾಗಿ ಹೇಳಿದರು. ಇವರ ಮಾತನ್ನು ಕೂಡ ಆ ಸಂದರ್ಭದಲ್ಲಿ ನಾವು ಸ್ಮರಿಸಬಹುದಾಗಿದೆ.

ಇಂತಹ ಆಶ್ವಾಸನೆಗಳು ಸಾಕಷ್ಟು ಪ್ರಮಾಣದಲ್ಲಿ ಬರುತ್ತಲೇ ಇದ್ದರೂ ಕೂಡ ಯಾವುದೇ ರೀತಿಯಲ್ಲಿ ಅವು ಫಲ ನೀಡಲೇ ಇಲ್ಲ. ಆದರೆ ರೈತ ಸಂಘದವರು ಹೋರಾಟವನ್ನು ಮಾತ್ರ ನಿಲ್ಲಿಸಲಿಲ್ಲ. ದಿನನಿತ್ಯವೂ ಕೂಡ ಹೋರಾಟ ನಡೆಯುತ್ತಲೇ ಇತ್ತು. ಸರ್ಕಾರ ಮಾತ್ರ ಯಾವುದೇ

ನಿರ್ಧಾರ ತೆಗೆದುಕೊಳ್ಳದೇ ಬರೀ ಆಶ್ವಾಸನೆಗಳನ್ನು ನೀಡುತ್ತಾ ಬಂದಿತು. ಆದ್ದರಿಂದ ಮತ್ತೊಮ್ಮೆ ಹಿರಿಯೂರು ಬಂದ್ ಹಾಗೂ ರಸ್ತೆ ತಡೆಯನ್ನು ರಾಜ್ಯರೈತ ಸಂಘದ ನೇತೃತ್ವದಲ್ಲಿ ಕೈಗೊಳ್ಳಲಾಯಿತು.

ವಾಣಿವಿಲಾಸ ಸಾಗರಕ್ಕೆ ಶಾಶ್ವತ ನೀರಿಗಾಗಿ ಆಗ್ರಹಿಸಿ ನಡೆಸುತ್ತಿದ್ದ ಧರಣಿಗೆ ಸರ್ಕಾರ ಸ್ಪಂಧಿಸದ ಹಿನ್ನಲೆಯಲ್ಲಿ ದಿನಾಂಕ ೧೭, ಏಪ್ರಿಲ್ ೨೦೦೮ ರಂದು ಹಿರಿಯೂರು ಬಂದ್‌ಗೆ ವ್ಯಾಪಕ ಬೆಂಬಲ ದೊರೆಯಿತು. ಕಳೆದ ೩೨೦ ದಿನಗಳಿಂದ ಕರ್ನಾಟಕ ರಾಜ್ಯ ರೈತ ಸಂಘ ಹಿರಿಯೂರು ಘಟಕ ಹಾಗೂ ವಿವಿಧ ಸಂಘಟನೆಗಳು ಈ ಬಂದ್‌ಗೆ ಕರೆ ನೀಡಿದ್ದವು.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಪಟ್ಟಣದ ನಾಗರಿಕರು, ವರ್ತಕರು, ಚಲನಚಿತ್ರಗಳ ಮಾಲೀಕರು, ಹೋಟೆಲ್ ಮಾಲೀಕರು ಬಂದ್‌ಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.

ಬಂದ್ ಹಿನ್ನೆಲೆಯಲ್ಲಿ ಖಾಸಗಿ ವಾಹನಗಳ ಸಂಚಾರ ಸ್ಥಗಿತಗೊಂಡಿದ್ದರ ಪರಿಣಾಮವಾಗಿ ವಿವಿದೆಡೆ ಹೋಗುವ ಪ್ರಯಾಣಿಕರಿಗೆ ತೊಂದರೆಯಾಯಿತು. ಹೋಟೆಲ್‌ಗಳು ಸಂಪೂರ್ಣವಾಗಿ ಬಂದ್ ಆಗಿದ್ದರಿಂದ ಪ್ರಯಾಣಿಕರು ಕುಡಿಯುವ ನೀರಿಗೆ ಪರದಾಡಬೇಕಾಯಿತು. ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ವಿವಿಧ ಗ್ರಾಮಗಳಿಂದ ಬಂದ ರೈತ ಸಂಘ ಹಾಗೂ ವಿವಿಧ ಸಂಘ ಸಂಸ್ಥೆಗಳ ಕಾರ್ಯಕರ್ತರು ರಸ್ತೆ ತಡೆ ನಡೆಸಿದರು. ಈ ಸಂದರ್ಭದಲ್ಲಿ ಸುಬ್ರಹ್ಮಣ್ಯಂಸ್ವಾಮಿ, ಪಿ.ಆರ್.ವಿಶ್ವನಾಥಯ್ಯ, ದೊರೆಸ್ವಾಮಿ ಖಂಡರ್, ತಿಪ್ಪೇಸ್ವಾಮಿ, ರಘುನಾಥ್ ಅಂಜಿನಪ್ಪ, ಡಿ.ಸಿ.ಮಂಜು, ಪಿಲಾಲಿ ಮಂಜು ಮುಂತಾದ ರೈತ ಮುಖಂಡರು ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು, ಕಾರ್ಯಕರ್ತರು ಹಾಜರಿದ್ದು ಬಂದ್‌ನ್ನು ಯಶಸ್ವಿಗೊಳಿಸಿದರು. ಹಿರಿಯೂರಿನ ಬಂದ್ ಉದ್ದೇಶಿಸಿ ಮಾತನಾಡಿದ ಜಿಲ್ಲಾ ರೈತ ಸಂಘದ ಮುಖಂಡ ಶಿವಕುಮಾರ್ ವಿ.ವಿ.ಸಾಗರಕ್ಕೆ ೧೦೦ ವರ್ಷಗಳ ಇತಿಹಾಸವಿದೆ. ಮೈಸೂರು ಅರಸರು ಈ ಭಾಗದ ಜನರ ಸುಖ ಶಾಂತಿಗಾಗಿ ಜಲಾಶಯ ನಿರ್ಮಿಸಿದರು. ಆದರೆ ಕಳೆದ ೫೦ ವರ್ಷಗಳಿಂದ ಜನಪ್ರತಿನಿಧಿಗಳು ಈ ಜಲಾಶಯದ ಅಭಿವೃದ್ಧಿಗೆ ಮುಂದಾಗದಿರುವುದು ವಿಷಾದನೀಯ. ತಮ್ಮ ಸ್ವಾರ್ಥ ರಾಜಕೀಯಕ್ಕಾಗಿ ರೈತಾಪಿ ವರ್ಗವನ್ನು ಬಳಸಿಕೊಳ್ಳುತ್ತಿರುವ ಸ್ವಾರ್ಥ ರಾಜಕಾರಣಿಗಳು ಅಭಿವೃದ್ಧಿ ಕಾರ್ಯಗಳ ಬಗ್ಗೆ ಚಿಂತಿಸದಿರುವುದನ್ನು ಖಂಡಿಸಿದರು. ಮತ್ತೋರ್ವ ರೈತ ಮುಖಂಡ ಕಸವನಹಳ್ಳಿ ರಮೇಶ್ ಮಾತನಾಡಿ ವಾಣಿವಿಲಾಸ ಸಾಗರದಲ್ಲಿ ನೀರು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು ಅಂತರ್ ಜಲಮಟ್ಟ ಕುಸಿಯುತ್ತಿದೆ. ಜನತೆ ಹಾಹಾಕಾರಕ್ಕೆ ಒಳಗಾಗಿದ್ದಾರೆ. ಇದು ಹೀಗೆಯೇ ಮುಂದುವರೆದರೆ ಇಲ್ಲಿನ ಜನತೆ ಸಾಕಷ್ಟು ತೊಂದರೆಗೆ ಈಡಾಗಬೇಕಾಗುತ್ತದೆ. ಆದ್ದರಿಂದ ಈ ಹೋರಾಟವನ್ನು ಬಲಯುತವಾಗಿ ಮುನ್ನಡೆಸಬೇಕಾಗಿದ್ದರಿಂದ ಮನೆಗೊಬ್ಬ ಹೋರಾಟಗಾರರಂತೆ ಒಟ್ಟುಗೂಡಬೇಕು ಎಂಬುದಾಗಿ ಕರೆ ಕೊಟ್ಟರು. ಬಂದ್ ಸಂದರ್ಭಧಲ್ಲಿ ಯಾವುದೇ ಅಹಿತಕರ ಘಟನೆ ನಡೆಯದೆ

ಶಾಂತಿ ರೀತಿಯಲ್ಲಿ ಮುಕ್ತಾಯವಾಯಿತು ಎಂದು ಹೇಳಬಹುದಾಗಿದೆ.

ಇಷ್ಟೆಲ್ಲಾ ಹೋರಾಟಗಳು, ಧರಣಿಗಳು, ಸತ್ಯಾಗ್ರಹಗಳು, ಚಳವಳಿಗಳು, ರಸ್ತೆ ತಡೆಗಳು ನಡೆದರೂ ಕೂಡ ಭದ್ರಾ ಜಲಾಶಯದಿಂದ ನೀರು ಮಾತ್ರ ಬಂದಿಲ್ಲ. ಇದಕ್ಕೆ ಹೋರಾಟವನ್ನು ಹಿರಿಯೂರು ಜನತೆ ನಿಲ್ಲಿಸಿಲ್ಲ. ಸರ್ಕಾರ ಈ ವಿಚಾರವಾಗಿ ಹಲವಾರು ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದೆ. ಅದು ಯಾವಾಗ ಈ ಭಾಗಕ್ಕೆ ನೀರು ಹರಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯು ದ್ವಿಮುಖ ಹೋರಾಟಕ್ಕೆ ಒಳಗೊಂಡಂತ ಯೋಜನೆಯಾಗಿದೆ. ಅಂದರೆ ಈ ಮೇಲೆ ಚರ್ಚಿಸಿದಂತೆ ಯೋಜನೆ ಜಾರಿಗಾಗಿ ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಬಳ್ಳಾರಿ ಜಿಲ್ಲೆಗಳ ಜನತೆ ಹೋರಾಟ ನಡೆಸುತ್ತಿದ್ದಾರೆ. ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ ಜಿಲ್ಲೆಯ ಜನತೆ ಈ ಯೋಜನೆಯನ್ನು ನಿಲ್ಲಿಸುವ ನಿಟ್ಟಿನಲ್ಲಿ ಹೋರಾಟ ನಡೆಸುತ್ತಿದ್ದಾರೆ. ಅಂತಹ ಕೆಲವೊಂದು ಉದಾಹರಣೆಗಳನ್ನು ಈ ಮುಂದಿನಂತೆ ನೋಡಬಹುದಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಪ್ರಸ್ತಾವನೆ ಹೊರಬಂದಂದಿನಿಂದ ಇಂದಿನವರೆಗೂ ಕೂಡ ಮಲೆನಾಡ ಜನತೆ, ವಿರೋಧ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಅಂದರೆ ಭದ್ರಾ ಮೇಲ್ದಂಡೆ ಯೋಜನೆ ಕಾರ್ಯ ಸಾಧುವಲ್ಲ. ಇದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಅಂದರೆ ಮಾಗುಂಡಿ ಬಳಿ ಅಣೆಕಟ್ಟನ್ನು ಕಟ್ಟಿದರೆ ಕಳಸಬಾಳೆಹೊನ್ನೂರುಗಳಂತಹ ಐತಿಹಾಸಿಕ ಸ್ಥಳಗಳು ಮುಳುಗಿ ಜನತೆ ನಷ್ಟಕ್ಕೆ ಹೊಳಗಾಗುತ್ತಾರೆ. ಸಾವಿರಾರು ಎಕರೆ ಕಾಡು ಮುಳುಗುತ್ತದೆ. ಇಂತಹ ಹಲವಾರು ಸಮಸ್ಯೆಗಳನ್ನು ಇಟ್ಟುಕೊಂಡು ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ದಾವಣಗೆರೆ ಜಿಲ್ಲೆಯ ಜನಪ್ರತಿನಿಧಿಗಳನ್ನೊಳಗೊಂಡ ಹಲವಾರು ಮುಖಂಡರು ಈ ಯೋಜನೆಯನ್ನು ಜಾರಿಯಾಗದ ರೀತಿಯಲ್ಲಿ ವಿರೋಧಿಸುತ್ತಾ ಬಂದಿದ್ದಾರೆ. ಇಂತಹ ವಿರೋಧಿಗಳ ನಡುವೆಯೂ ಕೂಡ ಇಂದು ಈ ಯೋಜನೆಗೆ ಚಾಲನೆ ದೊರೆತಿದೆ.

ಅಡಿಟಿಪ್ಪಣಿಗಳು

೧. ವಿರೂಪಾಕ್ಷಿ ಪೂಜಾರಹಳ್ಳಿ – ಜಲಸಂಬಂಧಿ ಚಳವಳಿ, ಪುಟ ೧೭.

೨. ಜನತಾವಾಹಿನಿ ಪತ್ರಿಕೆ ವಾರ್ತೆ – ೬ ಆಗಷ್ಟ್ ೧೯೯೮.

೩. ಪ್ರಜಾವಾಣಿ ಪತ್ರಿಕೆ ವಾರ್ತೆ – ೧೧ ನವ್ಹೆಂಬರ್ ೧೯೯೮.

೪. ಕನ್ನಡ ಪ್ರಭ ಪತ್ರಿಕೆವಾರ್ತೆ – ೨೭ ಅಕ್ಟೋಬರ್ ೨೦೦೬.

೫. ಪ್ರಜಾವಾಣಿ ಪತ್ರಿಕೆ ವಾರ್ತೆ – ೩೦ ಅಕ್ಟೋಬರ್ ೨೦೦೬.

೬. ಕನ್ನಡ ಪ್ರಭ ಪತ್ರಿಕೆ ವಾರ್ತೆ – ೨೬ ನವ್ಹೆಂಬರ್ ೨೦೦೬.

೭. ಕನ್ನಡ ಪ್ರಭ ಪತ್ರಿಕೆ ವಾರ್ತೆ – ೦೩ ನವ್ಹೆಂಬರ್ ೨೦೦೬.

೮. ಪ್ರಜಾ ಪ್ರಗತಿ ಪತ್ರಿಕೆ ವರದಿ – ೦೪ ನವ್ಹೆಂಬರ್ ೨೦೦೬.

೯. ಕನ್ನಡ ಪ್ರಭ ಪತ್ರಿಕೆ ವರದಿ – ೦೫ ನವ್ಹೆಂಬರ್ ೨೦೦೬.

೧೦. ಕನ್ನಡ ಪ್ರಭ ಪತ್ರಿಕೆ ವರದಿ – ೦೬ ನವ್ಹೆಂಬರ್ ೨೦೦೬.

೧೧. ಕನ್ನಡ ಪ್ರಭ ಪತ್ರಿಕೆ ವರದಿ – ೦೭ ನವ್ಹೆಂಬರ್ ೨೦೦೬.

೧೨. ಕನ್ನಡ ಪ್ರಭ ಪತ್ರಿಕೆ ವರದಿ – ೦೮ ನವ್ಹೆಂಬರ್ ೨೦೦೬.

೧೩. ಪ್ರಜಾವಾಣಿ ಪತ್ರಿಕೆ ವರದಿ – ೧೦ ಆಗಸ್ಟ್ ೨೦೦೬.

೧೪. ವಿಜಯಕರ್ನಾಟಕ ಪತ್ರಿಕೆ ವರದಿ – ೧೦ ಆಗಸ್ಟ್ ೨೦೦೬.

೧೫. ಪ್ರಜಾವಾಣಿ ಪತ್ರಿಕೆ ವಾರ್ತೆ – ೧೮ ಸೆಪ್ಟೆಂಬರ್ ೨೦೦೭.

ಅಧ್ಯಾಯ : ಐದು

ಭದ್ರಾ ಮೇಲ್ದಂಡೆ ಯೋಜನೆಯ ಪ್ರದೇಶಗಳು ಹಾಗೂ ಜನರು
(ಸಮಸ್ಯೆಗಳು ಮತ್ತು ಪರಿಹಾರಗಳು)

ಅಧ್ಯಾಯ : ಐದು

ಭದ್ರಾ ಮೇಲ್ದಂಡೆ ಯೋಜನೆಯ ಪ್ರದೇಶಗಳು ಹಾಗೂ ಜನರು (ಸಮಸ್ಯೆಗಳು ಮತ್ತು ಪರಿಹಾರಗಳು)

ಯಾವುದೇ ಜಲಾಶಯ ಅಥವಾ ಅಣೆಕಟ್ಟು ಇಂತಿಷ್ಟು ಪ್ರದೇಶಕ್ಕೆ ಸೀಮಿತವಾಗಿರುತ್ತದೆ. ಅದೇ ರೀತಿ ಭದ್ರಾ ಮೇಲ್ದಂಡೆ ಯೋಜನೆಯೂ ಕೂಡ ತನ್ನದೇ ಆದಂತಹ ಪ್ರದೇಶಗಳ ವ್ಯಾಪ್ತಿಯನ್ನು ಒಳಗೊಂಡಿದೆ. ಈ ಯೋಜನೆಗೆ ಸಂಬಂಸಿದಂತೆ ಇದರ ಪರಿಮಿತಿಗೆ ಒಳಪಡುವ ಪ್ರದೇಶಗಳೆಂದರೆ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಮತ್ತು ಕಡೂರು ತಾಲ್ಲೂಕುಗಳು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಚಳ್ಳಕೆರೆ ಹಾಗೂ ಮೊಳಕಾಲ್ಮೂರು ತಾಲ್ಲೂಕುಗಳು ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು, ತುಮಕೂರು ಜಿಲ್ಲೆಯ ಉತ್ತರ ಭಾಗ ಹಾಗೂ ಕೋಲಾರ ಜಿಲ್ಲೆ ಈ ಯೋಜನೆಯ ಪರಿಮಿತಿಗೆ ಒಳಪಡುವಂತಹ ಪ್ರದೇಶಗಳ ೧೨,೧೫,೦೦೦/-ಎಕರೆ ಭೂಮಿಗೆ ನೀರನ್ನೊದಗಿಸಿ ನೀರಾವರಿ ಹಾಗೂ ಪ್ರಮುಖ ನಗರ ಮತ್ತು ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.

ಈ ಮೇಲಿನ ಜಿಲ್ಲೆಗಳ ತಾಲ್ಲೂಕಿಗೆ ಒಳಪಡುವ ಕೆಲವು ಹಳ್ಳಿಗಳಿಗೆ ಕುಡಿಯುವ ನೀರು ಹಾಗೂ ಕೆರೆಗಳನ್ನು ತುಂಬಿಸಬಹುದಾದ ಅಂದಾಜನ್ನು ಈ ಕೆಳಗಿನಂತಡ ವಿವರಿಸಲಾಗಿದೆ.

ತರೀಕೆರೆ ತಾಲ್ಲೂಕಿನಲ್ಲಿ ಕುಡಿಯುವ ನೀರನ್ನು ಒದಗಿಸಬಹುದಾದ ಹಳ್ಳಿಗಳು

೧. ತ್ಯಾಗದ ಬಾಜೀಹಳ್ಳಿ	೨. ಅನ್ನೇಹಳ್ಳಿ	೩. ಕೆಂಚಾಪುರ
೪. ಗುಲಮನೆ	೫. ಕೆಂಚನಹಳ್ಳಿ	೬. ಬಜ್ರಾಪುರ
೭. ಹೊಸಹಳ್ಳಿ	೮. ನಂದಿ	೯. ಸುಣ್ಣದಹಳ್ಳಿ
೧೦. ದೇವರ ಕಲ್ಲು	೧೧. ಗೊಲ್ಲರಹಟ್ಟಿ	೧೨. ಗಿರಿಮರಡಿ
೧೩. ಚಟ್ನಿಹಳ್ಳಿ	೧೪. ಕೋರನಹಳ್ಳಿ	೧೫. ಬೆಟ್ಟದ ತಾವರೆಕೆರೆ
೧೬. ನೆರ್ಲಕೆರೆ	೧೭. ಮಿಡಿಹಳ್ಳಿ	೧೮. ಹುಣಸಗಟ್ಟ
೧೯. ನರಸಿಪುರ	೨೦. ಸಿಕ್ಕಿ	೨೧. ತಿಮ್ಮಾಪುರ
೨೨. ರಂಗಾಪುರ	೨೨. ಹತ್ತಿಮೋಗಿ	

ತರೀಕೆರೆ ತಾಲ್ಲೂಕಿನಲ್ಲಿ ತುಂಬಬಹುದಾದ ಕೆರೆಗಳು

೧. ಹೊಸಹಳ್ಳಿ ಕೆರೆ	೨. ಹಟ್ಟಿಮೋಗಿ ಕೆರೆ	೩. ಜಂಬದಹಳ್ಳಿ ಜಲಾಶಯ

[illegible]

ಕಡೂರು ತಾಲ್ಲೂಕಿನಲ್ಲಿ ಕುಡಿಯುವ ನೀರು ಒದಗಿಸಬಹುದಾದ ಹಳ್ಳಿಗಳು

೧. ಅಜ್ಜಂಪುರ
೨. ಕಟ್ಟಿಗೇನಳ್ಳಿ
೩. ಅಂಚಿನ ವಲಯ
೪. ಆಸ್ಗಂದಿ
೫. ಚಿಕ್ಕಬೇಲದ ಕೆರೆ
೬. ಬೈರರಂಗನ ಹಳ್ಳಿ
೭. ಚಿಕ್ಕನಹಳ್ಳಿ
೮. ಸಾನೇಹಳ್ಳಿ
೯. ಹೊಚಿಹಳ್ಳಿ
೧೦. ಕಲ್ಲದೇವರು ಹಳ್ಳಿ
೧೧. ಕುಂಕನೋಡು
೧೨. ವಡ್ಡರಹಟ್ಟಿ
೧೩ ಗಂಗೇನಳ್ಳಿ

ಕಡೂರು ತಾಲ್ಲೂಕಿನಲ್ಲಿ ತುಂಬಬಹುದಾದ ಕೆರೆಗಳು

೧. ಮೂಡಿಗೆರೆ ಕೆರೆ
೨. ಕೋಡಿಗೆರೆ ಕೆರೆ
೩. ಚಿಕ್ಕಬಸುರ ಕೆರೆ
೪. ಯಳಂಬಳಸಿ ಕೆರೆ
೫. ವಡ್ಡನಟ್ಟಿ ಕೆರೆ

ಹೊಸದುರ್ಗ ತಾಲ್ಲೂಕಿನಲ್ಲಿ ಕುಡಿಯುವ ನೀರು ಒದಗಿಸಬಹುದಾದ ಹಳ್ಳಿಗಳು

೧. ಮುಗಲೆ
೨. ಕೊಲ್ಲಾಪುರ
೩. ಬೇಗೋರು
೪. ಅಂತರಗಟ್ಟೆ
೫. ದಾಸರಹಳ್ಳಿ
೬. ಗುಮ್ಮನಹಳ್ಳಿ
೭. ಅಂಬರದ ಗೇರೆ
೮. ಆದರಿಕಟ್ಟೆ
೯. ಸಾಣಿಹಳ್ಳಿ
೧೦. ಕಬ್ಬಿನಗೆರೆ
೧೧. ಬೆಲ್ಲನಕೆರೆ
೧೨. ಚಿಕ್ಕಗೊಬ್ಬಿ
೧೩. ಅನೀವಾಳ

ಹೊಸದುರ್ಗ ತಾಲ್ಲೂಕಿನಲ್ಲಿ ತುಂಬುವ ಕೆರೆಗಳು

೧. ಮುಗುಲ ಕೆರೆ
೨. ಕೋಡಿಹಳ್ಳಿಕೆರೆ
೩. ಬೇಗೂರು ಕೆರೆ

ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಕುಡಿಯುವ ನೀರು ಒದಗಿಸಬಹುದಾದ ಹಳ್ಳಿಗಳು

೧. ಭಟ್ಟರಳ್ಳಿ
೨. ಗಾಲಾಪುರ
೩. ಚಿಕ್ಕನಲ್ಲೂರು
೪. ಅಡಿಗೆರೆ
೫. ಅರೇಹಳ್ಳಿ
೬. ಬಸ್ಲೇರಿ
೭. ದೊಡ್ಡಬಸೂರು
೮. ಚಿಕ್ಕಬಸೂರು
೯. ಹೊಸನಂಡನಹಳ್ಳಿ
೧೦. ಬಲದಹಳ್ಳಿ
೧೧. ಕೋಡಿಹಳ್ಳಿ
೧೨. ಮೊಚೇರಿ
೧೩. ಮೊಲದೇವನ ಹಳ್ಳಿ
೧೪. ಚಿಕ್ಕನಂಗು
೧೫. ಸುರಪುರ
೧೬. ಯಲ್ಲಗೊಂಡನಹಳ್ಳಿ
೧೭. ಸಾಂದರಹಳ್ಳಿ
೧೮. ಬೈಕೀನಹಳ್ಳಿ

ಬೆಳ್ಳಾರ ಕಾಲುವೆಗೆ ಸೇರಿದ ಹಳ್ಳಿಗಳು

೧. ಕಿಮ್ಮನಹಳ್ಳಿ	೨. ಗಂಟನಹಳ್ಳಿ	೩. ಬಡಕಿಗೂಡು
೪. ಬ್ಯೋರನ ಕಣಿವೆ	೫. ಹೊಯಿಸಲಕಟ್ಟೆ	೬. ಲಕ್ಕೇನಹಳ್ಳಿ
೭. ಗೊಲ್ಲರ ಹಟ್ಟಿ		

ಶಿರಾ ತಾಲ್ಲೂಕಿನಲ್ಲಿ ಕುಡಿಯುವ ನೀರು ಒದಗಿಸಬಹುದಾದ ಹಳ್ಳಿಗಳು ಮತ್ತು ಕೆರೆಗಳು

೧. ಬುಕ್ಕಪಟ್ನ	೨. ಹೊಸಹಳ್ಳಿ	೩. ಹೊಳೆರಾಮಲಿಂಗಾಪುರ
೪. ಹೊಸಪಾಳ್ಯೆ	೫. ಜಾನಕಲ್ಲು	೬. ಮಾದೇನಹಳ್ಳಿ
೭. ಸಾಕಿಹಳ್ಳಿ	೮. ಗೋರಹಳ್ಳಿ	೯. ಹೈಲದೂರ ಕಾವಲು
೧೦. ರಂಗನಾಥಪುರ	೧೧. ಚಿತ್ರದೇವರಹಟ್ಟಿ	೧೨. ಬೆಟ್ಟಗಾನಹಳ್ಳಿ
೧೩. ಕಳ್ಳಂಬೆಳ್ಳ	೧೪. ಕಂಚಿನಾಗಹಳ್ಳಿ	೧೫. ಚಿಕ್ಕದಾಸರಹಳ್ಳಿ
೧೬. ಬಸವಂತ ಹಳ್ಳಿ	೧೭. ಚಿಕ್ಕನಹಳ್ಳಿ	೧೮. ಕಡಪಗೆರೆ
೧೯. ಯಲ್ಲೂರು	೨೦. ಹುಲ್ಲೇನಹಳ್ಳಿ	೨೧. ಜಂಜರಾಮನಹಳ್ಳಿ
೨೨. ಗುಮ್ಮಾನಳ್ಳಿ	೨೩. ಗೊಲ್ಲರಹಳ್ಳಿ	೨೪. ಶಿರಾ
೨೫. ಗುಜಾಗಾರಹಳ್ಳಿ	೨೬. ತಾವರಕೆರೆ	೨೭. ಜವಗೊಂಡನಹಳ್ಳಿ
೨೮. ದೊಡ್ಡಅಗ್ರಹಾರ	೨೯. ವಡ್ಡೇನಹಳ್ಳಿ	೩೦. ಗಂಚಿಮರೊಡ್ಡಳ್ಳಿ
೩೧. ಕುಣಗಟ್ಟೇನಹಳ್ಳಿ	೩೨. ಹೊನ್ನೇನಹಳ್ಳಿ	೩೩. ಹೋಬಳನಹಳ್ಳಿ
೩೪. ಯರಮುದನಹಳ್ಳಿ	೩೫. ಕಲ್ಲಕೆರೆ	೩೬. ಅಂತಪುರ
೩೭. ಸೊರೆಕುಂಟೆ	೩೮. ಪಂಜರಾಸಳ್ಳಿ	೩೯. ಹಂಡನಹಳ್ಳಿ
೪೦. ಗೀತೇಂದ್ರನಳ್ಳಿ	೪೧. ಮೊಗೆನಹಳ್ಳಿ	೪೨. ಹುಯಲದೊರೆ

ಪಟ್ಟನಾಯಕಹಳ್ಳಿ ವ್ಯಾಪ್ತಿಗೆ ಒಳಪಡುವ ಕೆರೆಗಳಿಗೆ ತುಂಬಿಸಬಹುದಾದ ನೀರು

೧. ಗೊಲ್ಲರಹಟ್ಟಿ ಕೆರೆ	೨. ಚೆಂಗಾವರ ಕೆರೆ	೩. ದೇವರಹಟ್ಟಿ ಕೆರೆ
೪. ಇಕ್ಕನೂರು ಕೆರೆ	೫. ಗೋವಿಂದನಹಳ್ಳಿಕೆರೆ	೬. ಭೀಮಕೊಂಡನಹಳ್ಳಿಕೆರೆ
೭. ಕೊಂಗಲೋಡು ಕೆರೆ	೮. ಗೌಡಗೆರೆ ಕೆರೆ	೯. ಹೊಸಹಳ್ಳಿಕೆರೆ
೧೦. ಹೊಸೂರು ಕೆರೆ		

ಚಿತ್ರದುರ್ಗ ನಾಲೆಯಿಂದ ಕುಡಿಯುವ ನೀರು ಒದಗಿಸಬಹುದಾದ ಹಳ್ಳಿಗಳು

೧. ವಾಣಿ ವಿಲಾಸಪುರ	೨. ಬ್ರಹ್ಮಗಿರಿ	೩. ಕಟ್ಟಿನಹಟ್ಟಿ

೪. ಕೌವಂಡಿ	೫. ಸೂರಗೊಂಡನಹಳ್ಳಿ	೬. ಹುಲಿಕುಂಟೆ
೭. ಗೊತಾಲ್	೮. ಗೊನಾತಕೊಂಡಳ್ಳಿ	೯. ಗಿಡದನಹಳ್ಳಿ
೧೦. ಮೇಟಿಕುರ್ಕೆ	೧೧. ಕರೀಬೇನಹಳ್ಳಿ	೧೨. ಮಲ್ಲಪ್ಪನಹಳ್ಳಿ
೧೩. ಸಾಲಬೋಮನಹಳ್ಳಿ	೧೪. ವದ್ದಿಗೆರೆ	೧೫. ಕಾಗಿಪುರ
೧೬. ಗೊಲ್ಲಿನಕಟ್ಟೆ	೧೭.ಜಂಪಣ್ಣನಾಯಕನಕೋಟೆ	೧೮.ಕಸವನಹಳ್ಳಿ
೧೯.ಕಲ್ಲೇನಹಟ್ಟಿ	೨೦. ಕಳಗಲ್ಲಹಟ್ಟಿ	೨೧. ರಾಮಜೋಗಿಹಟ್ಟಿ
೨೨. ಗೊಲ್ಲರಹಳ್ಳಿ	೨೩. ಹೊಳೆದ್ಯಾಮವ್ವನಹಳ್ಳಿ	೨೪. ಹಳೆಕಲ್ಲೇನಹಳ್ಳಿ
೨೫. ಬಲ್ಲೇನ ಹಳ್ಳಿ	೨೬. ಮಂಚೇಕಟ್ಟೆ	೨೭. ಲಂಬಾಣಿಹಟ್ಟಿ
೨೮. ಪೇರುರೂಹಟ್ಟಿ	೨೯. ಪಂಪೇನಹಟ್ಟಿ	೩೦. ಹಳೆಪಂಪೇನಹಟ್ಟಿ
೩೧. ಕೋಡಿಹಟ್ಟಿ	೩೨. ಬೊಗ್ಗಲುರಂಗವ್ವನ ಹಟ್ಟಿ	೩೩. ಹಾಯಕಲ್ಲು
೩೪. ತುರುವನೂರು	೩೫. ಮುಸ್ತೂರು	೩೬. ಹೊಸಹಳ್ಳಿ

ಚಿತ್ರದುರ್ಗ ನಾಲೆಯಿಂದ ತುಂಬುವ ಕೆರೆಗಳು

೧. ಬ್ರಹ್ಮಗಿರಿ ಕೆರೆ	೨. ಕೊಡಗಿಕೆರೆ	೩. ಕೌವಂಡಿ ಕೆರೆ
೪. ಕಾಲವಟ್ಟಿಕೆರೆ	೫. ಕಾಸಂಪುರ ಕೆರೆ	೬. ಕಲ್ಲಹಳ್ಳಿಕೆರೆ
೭. ದೊಡ್ಡಗಟ್ಟ ಕೆರೆ

ಹಿರಿಯೂರು ತಾಲ್ಲೂಕಿನಲ್ಲಿ ಕುಡಿಯುವ ನೀರು ಒದಗಿಸಬಹುದಾದ ಹಳ್ಳಿಗಳು

೧. ಹೇಮದಾಳ್	೨. ಹರ್ತಿಕೋಟೆ	೩. ಕಲಗ ವಿಭಾಗ
೪. ಯರಬಳ್ಳಿ	೫. ಗೊಲ್ಲಹಳ್ಳಿ

ಹಿರಿಯೂರು ತಾಲ್ಲೂಕಿನಲ್ಲಿ ತುಂಬಿಸುವ ಕೆರೆಗಳು

೧. ಹೇಮದಾಳ್ ಕೆರೆ	೨. ಉಪ್ಪಿನ ಕಟ್ಟೆ ಕೆರೆ	೩. ಹರ್ತಕೋಟೆ ಕೆರೆ
೪. ಕರಿದೀ ಕೆರೆ

ಚಳ್ಳಕೆರೆ ತಾಲ್ಲೂಕಿನಲ್ಲಿ ಕುಡಿಯುವ ನೀರು ಒದಗಿಸಬಹುದಾದ ಹಳ್ಳಿಗಳು

೧. ಹಗರಿ	೨. ಹೊಸರಾಮ ಜೋಗಿಹಳ್ಳಿ	೩. ಹಳೇರಾಮಜೋಗಿಹಳ್ಳಿ
೪. ಗೊಲ್ಲರ ಹಟ್ಟಿ	೫. ಸೊಂಡಿಕೆರೆ	೬. ಜೋಡಿಪುರ
೭. ಪಲಪುಗೆರೆ	೮. ಮಾದೂರು	೯. ಚಿಕ್ಕಮಾದೂರು
೧೦. ಕುರುಡನಹಳ್ಳಿ	೧೧. ಲಂಬಾಣಿಹಟ್ಟಿ	೧೨. ಸೋಮಗುದ್ದು

೧೩. ಹಾಮಾಪುರ ೧೪. ಬಂಡಿಹಟ್ಟಿ ೧೫. ಗೊಲ್ಲರಹಟ್ಟಿ
೧೬. ಕೊದರ ಹಟ್ಟಿ ೧೭. ಕವಲುಹಟ್ಟಿ ೧೮. ನೇರ್ಲಗುಂಟೆ
೧೯. ಉಪ್ಪಾರಹಳ್ಳಿ ೨೦. ಗೊಲ್ಲರಹಳ್ಳಿ ೨೧. ಗೌಡಗೆರೆ
೨೨. ಬೀಮಗೊಂಡನಹಳ್ಳಿ ೨೩. ಜೋಗಿ ಹಟ್ಟಿ ೨೪. ಗುಂಡುಕಲ್ಲಮ್ಮನ ಹಳ್ಳಿ

ಚಳ್ಳಕೆರೆ ತಾಲ್ಲೂಕಿನಲ್ಲಿ ತುಂಬುವ ಕೆರೆಗಳು

೧. ಚಿಕ್ಕಮಂದೂರು ಕೆರೆ ೨. ಸಾನೇ ಹಳ್ಳಿ ೩. ಹಗರಿ
೪. ಸಿದ್ದಾಪುರ ೫. ಚಳ್ಳಕೆರೆ ೬. ನಗರಂಗೆರೆ
೭. ಬುಕೇನಹಟ್ಟಿ ೮. ಗೊಲ್ಲರ ಹಟ್ಟಿ ೯. ನಾಯಕನಹಟ್ಟಿ
೧೦. ರೀಕಲ್‌ಕೆರೆ

ಹೊಳಲ್ಕೆರೆ ತಾಲ್ಲೂಕಿನಲ್ಲಿ ಕುಡಿಯುವ ನೀರು ಒದಗಿಸಬಹುದಾದ ಹಳ್ಳಿಗಳು

೧. ಚೆನ್ನ ಸಮುದ್ರ ೨. ಕಮ್ಮನ ಹಳ್ಳಿ ೩. ಜಕ್ಕನಹಳ್ಳಿ
೪. ಗುಂಡ ಸಮುದ್ರ ೫. ಕೊಡ್ಲಪ್ಪನ ಹಳ್ಳಿ ೬. ಗಂಗ ಸಮುದ್ರ
೭. ರಾಮಗಿರಿ ೮. ಗುಣ ಸಮುದ್ರ ೯. ತಾಳಿಕಟ್ಟೆ
೧೦. ಗೊಲ್ಲರಹಟ್ಟಿ ೧೧. ವಡೇರಹಳ್ಳಿ ೧೨. ಹೊಸೂರು
೧೩. ದಾಸಿಕಟ್ಟೆ ೧೪. ರಂಗಾಪುರ ೧೫. ಲಂಬಾಣೀಹಟ್ಟಿ
೧೬. ಗುಂಡೇರಿ ೧೭. ಬೊಮ್ಮನ ಕಟ್ಟೆ ೧೮. ಕಾಲವಹಟ್ಟಿ
೧೯.ಹೊಳಲ್ಕೆರೆ

ಹೊಳಲ್ಕೆರೆ ತಾಲ್ಲೂಕಿನಲ್ಲಿ ತುಂಬಿಸುವ ಕೆರೆಗಳು

೧. ಗಂಗ ಸಮುದ್ರದ ಕೆರೆ ೨. ತಾಳಿಕಟ್ಟೆ ಕೆರೆ
೩. ಗುಂಡೇರಿ ಕೆರೆ ೪. ಹೊಳಲ್ಕೆರೆ

ಈ ಮೇಲಿನ ತಾಲ್ಲೂಕುಗಳು, ಹಳ್ಳಿಗಳು ಹಾಗೂ ಕೆರೆಗಳಿಗೆ ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ನೀರನ್ನು ಒದಗಿಸುವುದರ ಮೂಲಕ ಬಯಲು ನಾಡಿನ ಬರವನ್ನು ನೀಗಿಸಬಹುದಾಗಿದೆ ಎಂಬುದು ಚಿತ್ರದುರ್ಗ ನೀರಾವರಿ ಹೋರಾಟ ಸಮಿತಿಯ ಅಧ್ಯಯನ ತಂಡದ ಸೂಕ್ತ ಸಲಹೆಗಳಾಗಿದ್ದವು. ಆದರೆ ಈ ಬಗ್ಗೆ ಸುಮಾರು ೮ ತಜ್ಞರ ಸಮಿತಿಗಳು ಅಧ್ಯಯನ ನಡೆಸಿ ಕೊನೆಯ ಸಮಿತಿಯಾದ ಕೆ.ಸಿರೆಡ್ಡಿ ನೇತೃತ್ವದ ಸಮಿತಿ ಇಂದು ಕಾರ್ಯರೂಪಕ್ಕೆ ಬಂದಿದ್ದು ಇದರ ಪ್ರಕಾರ ಯೋಜನೆಯ 'ಎ' ಸ್ಕಿಂ ವರದಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಹಾಗೂ ಕಡೂರು ತಾಲ್ಲೂಕುಗಳು, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕನ್ನು ಬಿಟ್ಟು ಉಳಿದ ೫

ತಾಲ್ಲೂಕುಗಳಿಗೆ ನೀರಾವರಿಯನ್ನು ಕಲ್ಪಿಸುವುದು. ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಉದ್ದೇಶವಾಗಿದೆ. ಒಟ್ಟಿನಲ್ಲಿ ಭದ್ರ ಮೇಲ್ದಂಡೆ ಯೋಜನೆಯ 'ಎ' ಸ್ಕೀಂ ನಲ್ಲಿ ಮೇಲಿನ ಪ್ರದೇಶಗಳು ಲಾಭ ಪಡೆಯಲಿದ್ದು, ಉಳಿದ ಪ್ರದೇಶಗಳು ಅಂದರೆ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ, ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕುಗಳ ಯೋಜನೆಯ 'ಬಿ' ಸ್ಕೀಂನಲ್ಲಿ ನೀರನ್ನು ಪಡೆಯಬಹುದು ಎಂದು ಹೇಳಬಹುದಾಗಿದೆ.

ಈ ಬಯಲು ನಾಡಿನ ಜನರ ಸ್ಥಿತಿ ಗತಿಯ ಬಗ್ಗೆ ನೋಡುವುದಾದರೆ ಕಳೆದ ೧೦೦ ವರ್ಷಗಳ ಇತಿಹಾಸದಲ್ಲಿ ಸುಮಾರು ೬೦ ವರ್ಷಕ್ಕೂ ಹೆಚ್ಚು ಬಾರಿ ಇಲ್ಲಿನ ಜನ ಬರಗಾಲವನ್ನು ಎದುರಿಸಿರುವುದು ಶೋಚನೀಯ. ಕಳೆದ ೧೦ ವರ್ಷದ ಇತಿಹಾಸಲ್ಲಿ ಕೇವಲ ೩ ವರ್ಷ ಮಾತ್ರ ಮಳೆಯಾಗಿದೆ. ಇಂತಹ ಬರದ ಬೇಗೆಯಲ್ಲಿ ಇಂದು ಚಿತ್ರದುರ್ಗ ಹಾಗೂ ಇತರೆ ನೆರೆಯ ಪ್ರದೇಶದ ಜನರು ನರಳುತ್ತಿದ್ದಾರೆ, ಇವರ ಮುಖ್ಯ ಕಸುಬು ವ್ಯವಸಾಯವಾಗಿದ್ದು ೧೦೦ಕ್ಕೆ ೮೦ ಕ್ಕೂ ಹೆಚ್ಚು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಆದರೆ ಬಯಲು ನಾಡಿನ ಮಳೆ ಹಾವು ಏಣಿ ಆಟ ವಾಡುತ್ತಿದೆ. ಈ ಕಾರಣದಿಂದ ರೈತರು ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ ಹೋಗುತ್ತಿದ್ದಾರೆ. ಪ್ರಾಚೀನ ಕಾಲದಲ್ಲಿ ಜನತೆಯ ಕಲ್ಯಾಣಕ್ಕಾಗಿ ರಾಜ ಮಹಾರಾಜರು ಕೆರೆ ಕಟ್ಟೆಗಳನ್ನು ಕಟ್ಟಿಸಿದ್ದರು, ಅವು ಇಂದು ಕಡಿಮೆ ಮಳೆಯ ಪ್ರಮಾಣದಿಂದ ಬತ್ತಿ ಹೋಗಿವೆ ಇದರ ಜೊತೆಗೆ ಬಾವಿಗಳೂ ಕೂಡ ಒಣಗಿ ಹೋಗಿವೆ. ಅಂತರ್ ಜಲಮಟ್ಟ ಕ್ಷೀಣಿಸಿ ಜನರು ಕುಡಿಯುವ ನೀರು ಸಿಗದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಿಕ್ಕ ಕಡಿಮೆ ನೀರು ಕೂಡ ಪ್ಲೋರೈಡ್ ಯುಕ್ತ ನೀರಾಗಿದೆ ಇದರಿಂದ ಹೆಚ್ಚಿನ ರೀತಿಯಲ್ಲಿ ಕಾಯಿಲೊಳು ಜನರಿಗೆ ಅಂಟಿಕೊಳ್ಳುತ್ತಿವೆ. ಹಿಂದಿನ ದಿನಗಳಲ್ಲಿ ಅಂತರ್‌ಜಲ ಕೇವಲ ೨೦-೩೦ ಅಡಿಯ ಆಳದಲ್ಲಿ ಸಿಗುತ್ತಿದ್ದು ಇಂದು ೪೦೦-೫೦೦ ಅಡಿ ಆಳಕ್ಕೋದರು ನೀರು ಸಿಗುವುದು ಕಷ್ಟವಾಗಿದೆ, ಈ ಪ್ರದೇಶಗಳಿಗೆ ಯಾವುದೇ ನದಿಗಳ ಆಧಾರ ಇಲ್ಲ, ಇದ್ದರೂ ಕೂಡ ಅವು ಮಳೆಗಾಲದಲ್ಲೂ ಹರಿಯುವುದು ಕಷ್ಟವಾಗಿದೆ. ಏಕೆಂದರೆ ಚಿತ್ರದುರ್ಗ ಜಿಲ್ಲೆಯ ಅತಿ ಮುಖ್ಯ ನದಿಯಲ್ಲಿ ಒಂದಾದ ವೇದಾವತಿ ನದಿ ಬತ್ತಿ ಹೋಗಿದೆ. ನನ್ನ ೨೫ ವರ್ಷಗಳ ಅನುಭವದಲ್ಲಿ ಕೇವಲ ಒಂದು ಭಾರಿ ಮಾತ್ರ ಈ ನದಿ ತುಂಬಿ ಹರಿದಿರುವುದನ್ನು ನೋಡಿದ್ದೇವೆ. ಸರ್ಕಾರದ ದಾಖಲೆಗಳು ಮತ್ತು ನಮ್ಮ ಹಿರಿಯರಿಂದ ಈ ಬಗ್ಗೆ ಮಾಹಿತಿ ಹೊರತೆಗೆದರೆ ವೇದವತಿ ನದಿಗೆ ಅಡ್ಡಲಾಗಿ ಕಟ್ಟಿರುವ ವಾಣಿ ವಿಲಾಸ ಜಲಾಶಯ ನಿರ್ಮಾಣವಾಗಿ ಅಂದಿನಿಂದ ಇಂದಿನವರೆಗಿನ ಇತಿಹಾಸದಲ್ಲಿ ಕೇವಲ ಒಂದೇ ಒಂದು ಭಾರಿ ಮಾತ್ರ ತುಂಬಿರುವುದು ಬೆಳಕಿಗೆ ಬರುತ್ತದೆ, ಈ ಒಂದು ಜಲಾಶಯ ಹೆಸರಿಗೆ ಮಾತ್ರ ದೊಡ್ಡ ನೀರಾವರಿ ಯೋಜನೆ ಎಂದು ಕರೆಸಿಕೊಂಡರೂ ಕೂಡ ಕೇವಲ ಚಿತ್ರದುರ್ಗ ಮತ್ತು ಹಿರಿಯೂರು ನಗರಗಳಿಗೆ ಕುಡಿಯುವ ನೀರನ್ನು ಒದಗಿಸುವುದರಲ್ಲಿ ವಿಫಲವಾಗಿದೆ. ಒಟ್ಟಿನಲ್ಲಿ ಚಿತ್ರದುರ್ಗ, ತುಮಕೂರು, ಕೋಲಾರ,

ಬಳ್ಳಾರಿ ಜಿಲ್ಲೆಗಳು ಬಯಲು ನಾಡಿನಿಂದ ಕೂಡಿದ್ದು, ಉತ್ತಮ ಭೂಮಿಯನ್ನು ಹೊಂದಿದ್ದರೂ ಕೂಡ ಮಳೆಯನ್ನೇ ಅವಲಂಬಿಸಿ ಬದುಕನ್ನೆ ಸಾಗಿಸುವಂತಾಗಿದ್ದು. ಮಳೆ ಬರಲಿಲ್ಲ ಎಂದರೆ ರೈತರು ಭೂಮಿಯಲ್ಲಿ ಪಟ್ಟ ಶ್ರಮ ಸಂಪೂರ್ಣ ವ್ಯರ್ಥವಾಗುತ್ತದೆ. ಅಂದರೆ ಭೂಮಿಯನ್ನು ಉಳುಮೆ ಮಾಡಿ ಸಾಲಮಾಡಿ ಬೀಜ ಗೊಬ್ಬರ ಔಷಧಿ ತಂದು ಜಮೀನಿಗೆ ಹಾಕಿರುತ್ತಾರೆ. ಮಳೆ ಬಾರದೆ ಬೆಳೆ ನಾಶವಾದಾಗ ಸಾಲಗಾರನಾಗಿ ವಾಪಾಸ್ ಕೊಡಲು ಸಾಧ್ಯವಾಗದೆ ಸಾವಿಗೆ ಕಾರಣವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಜೀವನ ಸಾಗಿಸುತ್ತಿರುವ ಬಯಲು ನಾಡ ಜನತೆಯ ಹಾಹಾಕಾರ. ಸರ್ಕಾರಕ್ಕೆ ಏಕೆ ಅರ್ಥವಾಗುತ್ತಿಲ್ಲ ಎಂಬುದು ಪ್ರತಿಯೊಬ್ಬರಿಗೂ ತಿಳಿದಂತ ವಿಷಯವಾಗಿದೆ. ಈ ಪ್ರದೇಶದಲ್ಲಿ ಮಳೆ ಕಡಿಮೆ ಬರುವುದು ಬರೀ ಕೃಷಿಕರಿಗೆ ಮಾತ್ರ ಅನ್ವಯವಾಗುತ್ತಿಲ್ಲ. ಇಡೀ ಮಾನವ ಕುಲಕ್ಕೆ ಇದು ತೊಂದರೆಯಾಗಿದೆ. ಏಕೆಂದರೆ ಜನತೆಗೆ ಅತೀ ಮುಖ್ಯವಾಗಿಬೇಕಾಗಿರುವ ಗಾಳಿ, ನೀರು ಆಹಾ ಸಿಗದಿದ್ದಾಗ ಎಷ್ಟು ತೊಂದರೆ ಅನುಭವಿಸುತ್ತಾನೆ ಎಂದರೆ ಅದನ್ನು ಹೇಳಲು ಅಸಾಧ್ಯವಾಗುತ್ತದೆ. ಈ ಕಾರಣದಿಂದ ಸರ್ಕಾರ ಸರಿಯಾದ ರೀತಿಯಲ್ಲಿ ಸಮಸ್ತ ಜನರ ನೋವನ್ನು ಅರ್ಥ ಮಾಡಿಕೊಂಡು ಅವರ ಬರದ ಬವಣೆಯನ್ನು ನಿವಾರಿಸುವುದರೊಂದಿಗೆ ನೋವಿನಲ್ಲಿ ಬದುಕುತ್ತಿರುವ ಜನತೆಗೆ ಪರಿಹಾರ ನೀಡಲೇಬೇಕಾಗುತ್ತವೆ. ಇಂದು ಪ್ರಜಾಪ್ರಭುತ್ವ, ಸಮಾನತೆ, ಸ್ವಾತಂತ್ರದ ವ್ಯವಸ್ಥೆಯಲ್ಲಿ ನಮ್ಮ ಸಂವಿಧಾನ ಸೃಷ್ಠಿಯಾಗಿದೆ. ಈ ಕಾರಣಕ್ಕಾಗಿ ಸಮಾನತೆಯನ್ನು ಕಾಪಾಡುವುದು ಸರ್ಕಾರದ ಆದ್ಯ ಕರ್ತವ್ಯವಾದ್ದರಿಂದ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ಹೋಲಿಸಿದರೆ ಚಿತ್ರದುರ್ಗ ಜಿಲ್ಲೆ ೨ನೇ ಬರಗಾಲ ಪೀಡಿತ ಪ್ರದೇಶವಾಗಿದೆ. ಇದನ್ನು ಅರಿತುಕೊಂಡ ಉತ್ತಮ ವ್ಯವಸ್ಥೆ ಕಲ್ಪಿಸಿಕೊಡುವುದು ಸರ್ಕಾರದ ಮೇಲೆ ನಿಂತಿದೆ. ಈ ನಿಟ್ಟಿನಲ್ಲಿ ಯಾವ ರೀತಿ ಮುಂದಿನ ದಿನಗಳಲ್ಲಿ ಸರಿ ಪಡಿಸುವುದು ಎಂಬುದನ್ನು ಕಾದು ನೋಡಬೇಕಾಗಿದೆ.

ಭದ್ರ ಮೇಲ್ದಂಡೆ ಯೋಜನೆಯ ಸಮಸ್ಯೆಗೆ ಸಂಬಂಧಿಸಿದಂತೆ ೨ ರೀತಿಯ ಸಮಸ್ಯೆಗಳ ಸುಳಿಯಲ್ಲಿ ಈ ಯೋಜನೆ ಸಿಲುಕಿಕೊಂಡಿದೆ. ಮೊದಲನೆಯವಾಗಿ ಬಯಲುಪ್ರದೇಶದ ಜನ ಬರದ ಬೇಗೆಯಲ್ಲಿ ಬೆಂದು ನೀರಿಗಾಗಿ ಹೋರಾಟ, ಚಳವಳಿ, ರಸ್ತೆ ತಡೆ, ಸತ್ಯಾಗ್ರಹಗಳನ್ನು ಮಾಡುತ್ತಿದ್ದಾರೆ. ಮತ್ತೊಂದು ಕಡೆ ಅಂದರೆ ಎರಡನೆಯದಾಗಿ ಮಲೆನಾಡು ಜನ ಭದ್ರ ಜಲಶಯದ ನೀರನ್ನು ಈಗಾಗಲೇ ಉಪಯೋಗಿಸಿಕೊಳ್ಳುತ್ತಿರುವವರು. ತಮ್ಮಲ್ಲಿರುವ ನೀರು ಬೇರೆ ಕಡೆ ಹರಿದರೆ ನಮಗೆ ತೊಂದರೆಯಾಗುತ್ತದೆ ಎಂಬ ನಿಟ್ಟಿನಲ್ಲಿ ಯೋಜನೆಯ ಜಾರಿಗೆ ವಿರೋಧವಾಗಿ ಹೋರಾಟ ನಡೆಸುತ್ತಿರುವುದರ ಪರಿಣಾಮವಾಗಿ ಭದ್ರ ಮೇಲ್ದಂಡೆ ಜಾರಿಯಾಗುವುದಕ್ಕೆ ಸುಮಾರು ೪೦ ವರ್ಷಗಳನ್ನು ತೆಗೆದುಕೊಳ್ಳಬೇಕಾಯಿತು. ಹೀಗಾಗುವುದಕ್ಕೆ ಸಮಸ್ಯೆಗಳನ್ನು ಹುಡುಕುತ್ತಾ ಹೊರಟರೆ ನೂರಾರು ಸಮಸ್ಯೆಗಳು ನಮ್ಮ ಕಣ್ಣು ಮುಂದೆ ಬಂದು ನಿಲ್ಲುತ್ತವೆ. ಇಂತಹ ಸಮಸ್ಯೆಗಳನ್ನು ಈ ಭಾಗದಲ್ಲಿ ತೋರಿಸಲು ಪ್ರಯತ್ನಿಸಿದ್ದೇನೆ.

ಮೊದಲನೆಯದಾಗಿ ಬರದ ಬೇಗೆಯಲ್ಲಿ ಬೇಯುತ್ತಿರುವ ಚಿತ್ರದುರ್ಗ ಹಾಗೂ ಇತರೆ ನೆರೆಯ ಜಿಲ್ಲೆಗಳ ಸಮಸ್ಯೆಗಳನ್ನು ನೋಡುವುದಾದರೆ.

೧. ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯ ಜನ ಕೃಷಿಯನ್ನು ಹಾಗೂ ಹೈನುಗಾರಿಕೆಯನ್ನು ಅವಲಂಬಿಸಿದ್ದು, ಇದಕ್ಕೆ ಅತಿಮುಖ್ಯವಾಗಿ ಬೇಕಾಗಿರುವುದು ನೀರಿನ ಅವಶ್ಯಕತೆ. ಆದರೆ ಇಲ್ಲಿ ನೀರಿನ ಅಂಶ ಕಡಿಮೆ ಇರುವುದು

೨. ಈ ಪ್ರದೇಶಗಳಲ್ಲಿ ವಾರ್ಷಿಕ ಮಳೆ ಕಡಿಮೆಯಾಗಿರುವುದು

೩. ಮಳೆಯ ಪ್ರಮಾಣ ಕಡಿಮೆಯಾಗಿರುವುದರ ಪರಿಣಾಮವಾಗಿ ಇಲ್ಲಿನ ಕೆರೆಗಳು, ಕಟ್ಟೆಗಳು ಬಾವಿಗಳು ನೀರಿಲ್ಲದೆ ಬತ್ತಿಹೋಗಿರುವುದು.

೪. ಅಂತರರ್ಜಲದ ಮಟ್ಟ ಕುಸಿದಿರುವುದು ಅಂದರೆ ೨೦ ವರ್ಷಗಳ ಹಿಂದೆ ೩೦-೪೦ ಅಡಿ ಆಳದಲ್ಲಿ ಸಿಗುತ್ತಿದ್ದ ನೀರು ಇಂದು ೪೦೦-೫೦೦ ಅಡಿ ಆಳಕ್ಕೋದ್ದರು ನೀರು ಸಿಗುವುದು ಕಷ್ಟವಾಗಿದೆ.

೫. ಯಾವುದೇ ನದಿಗಳ ಜಾಲ ಇಲ್ಲದಿರುವುದು.

೬. ಅಂತರ್ಜಲ ಕಡಿಮೆಯಾಗಿದ್ದರ ಪರಿಣಾಮವಾಗಿ ಕುಡಿಯುವ ನೀರಿಗೂ ಪರದಾಡುವಂತ ಸ್ಥಿತಿ ಬಂದೊಂದಗಿದೆ. ಕೊಳವೆ ಬಾವಿಗಳಲ್ಲಿ ಸಿಗುತ್ತಿರುವ ನೀರು ಪ್ಲೋರೈಡ್ ಯುಕ್ತ ನೀರಾಗಿದ್ದು ಆ ನೀರನ್ನು ಕುಡಿದು ಜನತೆ ರೋಗಗಳಿಗೆ ತುತ್ತಾಗಿದ್ದಾರೆ. ಇದರಿಂದ ಜನರು ಆತಂಕದಲ್ಲಿ ಮುಳುಗಿದ್ದಾರೆ.

೭. ಕೃಷಿಯಲ್ಲಿ ಅಭಿವೃದ್ಧಿಯಾಗದೆ ಇರುವುದರಿಂದ ಇಲ್ಲಿನ ವ್ಯಾಪಾರಿಗಳು, ಹೂಡಿಕೆದಾರರು, ಸಂಕಷ್ಟಕ್ಕೆ ಈಡಾಗಿದ್ದಾರೆ.

೮. ಮುಂದಿನ ೧೦ ವರ್ಷಗಳಲ್ಲಿ ಈ ಪ್ರದೇಶಗಳು ಮರಳುಗಾಡಾಗುವ ಸಂಭವ.

೯. ಮಳೆಯಿಲ್ಲದೆ ಹಸಿರು ಇಲ್ಲದೆ ಈ ಭಾಗದ ಜಾನುವಾರುಗಳು ನಶಿಸಿ ಹೋಗುತ್ತಿವೆ.

೧೦. ಕೃಷಿ ಚಟುವಟಿಕೆ ಕಡಿಮೆಯಾಗುತ್ತಿರುವುದರಿಂದ ಜನರು ವಲಸೆ ಹೋಗುತ್ತಿರುವುದು.

ಇಂತಹ ನೂರಾರು ಸಮಸ್ಯೆಗಳಿಗೆ ಬಯಲು ನಾಡು ಜನರು ತುತ್ತಾಗಿದ್ದಾರೆ. ಈ ಸಮಸ್ಯೆಗಳು ನೀಗಬೇಕಾದರೆ ಭದ್ರಾ ಮೇಲ್ದಂಡೆ ಜಾರಿಯಾಗಿ ನೀರು ಹರಿದಾಗ ಮಾತ್ರ ಸಾಧ್ಯ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಮತ್ತೊಂದು ಪ್ರದೇಶದ ಜನತೆ ತಮ್ಮಲ್ಲಿರುವ ನೀರನ್ನು ಬೇರೆ ಕಡೆ ಹರಿಸಿದರೆ ತಮಗೆ ಪೂರ್ಣ ಪ್ರಮಾಣದಲ್ಲಿ ನೀರು ದೊರಕುವುದಿಲ್ಲವೆಂದು ಹಾಗೂ ತಮ್ಮ ತೋಟಗಳು,

ಭೂಮಿಗಳು ಹಾಗೂ ಊರುಗಳನ್ನು ಕಳೆದುಕೊಳ್ಳುತ್ತೇವೆ ಎಂದು ಈ ಯೋಜನೆಗೆ ತಡೆಯೊಡ್ಡುತ್ತಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಯ ಜಾರಿಯ ಪ್ರಸ್ತಾವನೆ ಸಂದರ್ಭದಲ್ಲಿ ಮಲೆನಾಡು ಜನತೆ ಪರಿಸರವಾದಿಗಳನ್ನು ಮುಂದಿಟ್ಟುಕೊಂಡು ಕೆಲವೊಂದು ಕಾರಣಗಳನ್ನು ಮುಂದಿಟ್ಟುಕೊಂಡು ವಿರೋಧಿಸುತ್ತಾ ಬಂದಿದ್ದಾರೆ. ಅಂತಹ ಕಾರಣಗಳೆಂದರೆ

ಭದ್ರಾ ಜಲಾಶಯದ ಎದುರು ಮಾಗುಂಡಿ ಬಳಿ ಅಣೆಕಟ್ಟನ್ನು ಕಟ್ಟುವುದರಿಂದ ಇದರ ಮಟ್ಟ ೨೫೧೮ ಅಡಿ ಉದ್ದ ಇದರಿಂದ ಸಂಗ್ರಹವಾಗುವ ಹಿನ್ನೀರು ಭದ್ರ ಕಣಿವೆಯ ಹಲವು ಭಾಗಗಳನ್ನು ನೀರಿನಲ್ಲಿ ಮುಳುಗಿಸುತ್ತದೆ. ಮಾಗುಂಡಿ ಬಳಿ ೨೭ ಮೀಟರ್ ಅಗಲದ ಕಾಲುವೆ ಆರಂಭವಾಗುತ್ತದೆ. ಆರಂಭದಲ್ಲಿ ಫಲವತ್ತಾದ ಕೃಷಿ ಭೂಮಿಯನ್ನು ಹಾದು ಹೋಗುವ ಈ ಕಾಲುವೆ ೫೫ ಕಿ.ಮೀ. ಕ್ರಮಿಸಿದ ನಂತರ ರಾಜ್ಯ ರಕ್ಷಿತ ಅರಣ್ಯವನ್ನು ಪ್ರವೇಶಿಸುತ್ತದೆ. ಹಲಸೂರು, ಮಾಗುಂಡಿ, ಗಂಗೆ ಗೌರಿ, ತೇಗದ ಗುಡ್ಡ, ಮತ್ತೋಡಿ ಹೆಬ್ಬೆ ಗಿರಿ, ಲಕ್ಕವಳ್ಳಿ ಹಾಗೂ ತ್ಯಾಗದ ಭಾಗಿ ಅರಣ್ಯ ಪ್ರದೇಶವನ್ನು ಹಾಯ್ದು ೧೮೯ ಕಿ.ಮೀ. ಕ್ರಮಿಸಿ ಅರಣ್ಯ ಪ್ರದೇಶದಿಂದ ಹೊರಬರುತ್ತದೆ. ಹೀಗೆ ಕಾಲುವೆ ಹಾದು ಹೋಗುವ ೧೩೭ ಕಿ.ಮೀಗಳಷ್ಟು ಪ್ರದೇಶ ಭದ್ರಾ ಅಭಯಾರಣ್ಯಕ್ಕೆ ಸೇರಿದ್ದು, ಈ ಯೋಜನೆಯಡಿ ಮುಳುಗಡೆಯಾಗುವ ಪ್ರದೇಶ ಅಣೆಕಟ್ಟು ನಿರ್ಮಾಣವಾಗುವ ಸ್ಥಳ ಹಾಗೂ ಕಾಲುವೆ ಹಾದು ಹೋಗುವ ಮಾರ್ಗ ಎಲ್ಲವೂ ಸದಾ ಹಸಿರಿನಿಂದ ಕೂಡಿರುವ ಸ್ವಭಾವಿಕ ಸಸ್ಯವರ್ಗದ ಅರಣ್ಯ ಪ್ರದೇಶ. ಯೋಜನೆ ಕಾರ್ಯಗತವಾದಲ್ಲಿ ಪ್ರತಿ ವರ್ಷ ೨೫ ಕೋಟಿ ರೂಪಾಯಿ ವೆಚ್ಚದ ಬೊಂಬು, ಮರಮುಟ್ಟು, ಉರುವಲು ಸೌದೆನಾಶವಾಗುತ್ತದೆ. ಮೈಸೂರು ಕಾಗದ ಕಾರ್ಖಾನೆ, ಬೆಂಕಿಕಡ್ಡಿ ಕಾರ್ಖಾನೆ, ಪ್ಲೈವುಡ್ ಕಾರ್ಖಾನೆಗಳು ಈ ಕಾಡಿನ ಮರಮುಟ್ಟುಗಳನ್ನೆ ಅವಲಂಬಿಸಿವೆ. ಈ ಯೋಜನೆ ಸ್ವಚ್ಛಂದವಾಗಿ ಜೀವಿಸುತ್ತಿರುವ ಪ್ರಾಣಿ ಪಕ್ಷಿಗಳ ಬದುಕನ್ನು ಬಲಿತೆಗೆದುಕೊಳ್ಳಲಿದೆ. ಉದಾ.ಅಪರೂಪದ ಸಂಗತಿಗಳೆಂದರೆ ಬಾನೆಟ್ ಮೆಕಾಕ್, ಹುಲಿ, ಚಿರತೆ, ಕಾಡು ಬೆಕ್ಕು, ನರಿ, ಕರಡಿ, ಪುನಗಿನ ಬೆಕ್ಕು, ಕಂದುಕಾಲಿನ ಬೆಕ್ಕು, ಇನ್ನು ಹಲವಾರು ಪ್ರಾಣಿಗಳು, ಪಕ್ಷಿ ಸಂಕುಲ, ಏಷ್ಯಾಟಿಕ್ ಆನೆಗಳಿಗೆ ಭದ್ರಾ ಅರಣ್ಯ ಸೂಕ್ತ ವಾಸ ಸ್ಥಾನವಾಗಿದೆ. ಇವೆಲ್ಲಾ ಯೋಜನೆ ಜಾರಿಯಾದರೆ ನಾಶವಾಗುತ್ತದೆ ಹಾಗೂ ಕಾಫಿ, ಟೀ, ಯಾಲಕ್ಕಿ, ಕೊಕೊ ಹಾಗೂ ಮೆಣಸಿನ ತೋಟಗಳು ನಾಶವಾಗುತ್ತವೆ. ಮಲೆನಾಡಿನ ಹಳ್ಳಿಗಳಾದ ಮಾವಿನಕೆರೆ, ಕಳಸ,ಹೊರನಾಡು ಹಳುವಳ್ಳಿ ಅಂಬಿನಕೊಡಿಗೆ, ಹೆಮ್ಮಕ್ಕಿ, ಇಡಕಸಿ, ಕಳಗೂರು, ಸಂಸೆ, ಮರಸಣಿಗೆ ಮತ್ತು ಯಡೂರುಗಳೊಂದಿಗೆ ಮೂಡಿಗೆರೆ, ನರಸಿಂಹರಾಜಪುರ ತಾಲ್ಲೂಕಿನ ಹಲವಾರು ಹಳ್ಳಿಗಳು ಮುಳುಗಡೆಯಾಗುತ್ತದೆ. ಅಷ್ಟೇ ಪ್ರಮಾಣದ ಕುಟುಂಬಗಳು ಹಾಗೂ ಕಾರ್ಮಿಕರು ಅನಾಥರಾಗುತ್ತಾರೆ. ಈ ರೀತಿಯ ನೂರಾರು ಸಮಸ್ಯೆಗಳು ಭದ್ರಾಮೇಲ್ದಂಡೆ ಯೋಜನೆ ಜಾರಿಯಾದಲ್ಲಿ ಸೃಜಿಸುವುದು ಸಹಜ ಎಂಬುದಾಗಿ ಯೋಜನೆ ವಿರೋಧಿ ಜನರು ಪ್ರಾರಂಭದಲ್ಲಿ ವಿರೋಧಿಸಿದರು.

[illegible]

ಸಧ್ಯದ ಸಂದರ್ಭದಲ್ಲಿ ಯೋಜನೆಯ ರೂಪರೇಷೆಗಳನ್ನು ಬದಲಾಯಿಸಿದ್ದು ಕೆ.ಸಿ. ರೆಡ್ಡಿಯವರ ವರದಿಯಲ್ಲಿ ಕೇವಲ ಕೆಲವೇ ನಷ್ಟವಾಗುತ್ತದೆ ಎಂಬುದಾಗಿ ತಿಳಿದು ಬಂದಿದ್ದೂ ಕೂಡ ವಿರೋಧ ಮಾತ್ರ ನಿಂತಿಲ್ಲ. ಮತ್ತೊಂದು ರೀತಿಯ ಸಮಸ್ಯೆಗಳನ್ನು ಮುಂದಿಡುತ್ತಿದ್ದಾರೆ. ಈ ಯೋಜನೆಯಿಂದ ಕಡೂರು ಹಾಗೂ ತರೀಕೆರೆ ತಲ್ಲೂಕುಗಳು ನೀರಾವರಿ ಉಪಯೋಗ ಪಡೆದರೂ ಕೂಡ ನಷ್ಟವನ್ನು ಹೆಚ್ಚಿನ ರೀತಿಯಲ್ಲಿ ಅನುಭವಿಸಬೇಕಾಗುತ್ತದೆ. ಏಕೆಂದರೆ ತರೀಕೆರೆ ತಾಲ್ಲೂಕಿನಲ್ಲಿ ಕಾಲುವೆ ಹಾದು ಹೋಗುವಾಗ ಅಜ್ಜಂಪುರದ ಬಳಿ ೬.೯ ಕಿ.ಮೀ ಸುರಂಗ ಮಾರ್ಗದಲ್ಲಿ ಹೋಗಬೇಕಾಗುತ್ತದೆ. ಈಗಾಗಲೇ ಇದೇ ತರಹದ ಭಾಗೂರು ನವಿಲೆ ಸುರಂಗ ಕಾಲುವೆಯಿಂದ ಆಗುತ್ತಿರುವ ನಷ್ಟದ ಅನುಭವ ತರೀಕೆರೆ ಜನತೆಯ ಕಣ್ಣು ಮುಂದೇ ಇದೆ. ಭಾಗೂರು ನವಿಲೆ ಕರ್ನಾಟಕದಲ್ಲಿ ಗಮನ ಸೆಳೆದ ರೈತ ಚಳವಳಿಯಾಗಿದೆ. ಇದಕ್ಕೆ ಕಾರಣಗಳನ್ನು ನೋಡಿದಾಗ ಹಾಸನ ಜಿಲ್ಲೆಯ "ಗೊರೂರಿನಲ್ಲಿ ಹೇಮಾವತಿ ನದಿಗೆ ಅಣೆಕಟ್ಟು ಕಟ್ಟಿ ಅದರ ನೀರನ್ನು ಬಯಲು ಪ್ರದೇಶವಾದ ತುಮಕೂರು, ಮಂಡ್ಯ, ತಿಪಟೂರುಗಳಿಗೆ ನೀರುಣಿಸುವ ಯೋಜನೆ ೧೯೭೬ರಲ್ಲಿ ಪ್ರಾರಂಭವಾಯಿತು."[೧] ಗೊರೂರಿನಿಂದ ಚೆನ್ನರಾಯ ಪಟ್ಟಣ ತಾಲ್ಲೂಕಿನ ಬಾಗೂರುವರೆಗೆ ಬಂದ ಕಾಲುವೆ ಮುಂದೆ ಸಾಗಲು ಏರು ಪ್ರದೇಶ ಎದುರಾದಾಗ ಬಾಗೂರಿನಿಂದ ೧೦.ಕಿ.ಮೀ. ದೂರದ ನವಿಲೆಯವರೆಗೆ ಸುರಂಗವನ್ನು ತೋಡಲು ತಿರ್ಮಾನಿಸಲಾಯಿತು. ಆಗ ಆ ಪ್ರದೇಶದ ರೈತರು ತಮ್ಮೂರಿಗೂ ನದಿಯ ನೀರು ಸಿಗುತ್ತದೆ ಎಂದು ಸಂತಸಗೊಂಡರು. ನೆಲದಲ್ಲಿ ೧೫೦ ರಿಂದ ೩೦೦ ಅಡಿಗಳ ಆಳದಲ್ಲಿ ತೋಡಲಾಗಿರುವ ಈ ಸುರಂಗವು ಎರಡು ಲಾರಿಗಳು ಎದುರು ಬದುರು ಬಂದಲ್ಲಿ ಆರಾಮವಾಗಿ ಸಾಗಿ ಹೋಗುವಷ್ಟು ಅಗಲ ಮತ್ತು ಎತ್ತರ ಹೊಂದಿದೆ. "ಸುಮಾರು ೩೦ ವರ್ಷ ನಡೆದ ಈ ಕಾಮಗಾರಿ ೧೯೯೧ರಲ್ಲಿ ಮುಗಿಯುವ ಹೊತ್ತಿಗೆ ರೈತರ ಕನಸು ನನಸಾಗುವ ಬದಲು ಈ ೧೦.ಕಿ.ಮೀ ವ್ಯಾಪ್ತಿಯ ರೈತರ ಬದುಕಿನಲ್ಲಿ ದುರಂತದ ಛಾಯೆ ಕವಿಯ ತೊಡಗಿತು".

"ಬಾಗೂರು-ನವಿಲೆ ನಡುವಿನ ೧೦ಕಿ.ಮೀ ಉದ್ದಕ್ಕೂ ಸಮೃದ್ಧ ತೆಂಗಿನ ತೋಟಗಳು ಒಣಗಲಾರಂಬಿಸಿದವು. ವರ್ಷಕ್ಕೆ ನೂರಾರು ಕಾಯಿ ಕೊಡುತ್ತಿದ್ದವು ಹತ್ತಕ್ಕೆ ಇಳಿದವು"[೨] ಮೊದಮೊದಲು ತಮ್ಮ ಮರಗಳಿಗೆ ರೋಗ ಬಾದೆಯಿದೆ ಎಂದು ಔಷಧಿಗಳನ್ನು ಮೊರೆ ಹೋದರು. ನಂತರ ನೀರು ಕಮ್ಮಿ ಇದೆ ಎಂದು ಕೊಳವೆ ಬಾವಿಗಳನ್ನು ತೋಡಿಸಿದರು. ಅವೂ ಕೂಡ ಬತ್ತಲಾರಂಭಿಸಿದವು. ವಾಸ್ತವವಾಗಿ ಆ ಪ್ರದೇಶದ ಅಂತರ್ಜಲವೆಲ್ಲ ಸುರಂಗ ಮಾರ್ಗದಲ್ಲಿ ಹೇಮಾವತಿ ನದಿಯ ನೀರಿನ ಜೊತೆಗೆ ತುಮಕೂರಿನತ್ತ ಸಾಗಿಹೋಗಿತ್ತು. ಕ್ರಮೇಣ ಅಲ್ಲಿದ್ದ ೧೫ ಸಣ್ಣ, ದೊಡ್ಡ ಕೆರೆಗಳೂ ಹಾಗೂ ಹಲವಾರು ಬಾವಿಗಳು ಬತ್ತಿಹೋದವು" ಮರಗಿಡಗಳಿರಲಿ ಕುಡಿಯಲೂ ನೀರಿಲ್ಲದೆ ಅಲ್ಲಿನ ಜನತೆ ಪರದಾಡಬೇಕಾಯಿತು. ಇದರ ಪರಿಹಾರಕ್ಕಾಗಿ ಅಲ್ಲಿನ ಜನರು ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆ ಮಾಡಿದರು. ಹಾಸನ ನಗರವನ್ನು ಬಂದ್ ಮಾಡಿದರು. ಆದರೂ ಕೂಡ ಪರಿಹಾರ ಒದಗಿಲ್ಲ.

ಇಂತಹ ಒಂದು ದುರಂತ ತರೀಕೆರೆ ಜನತೆಯ ಕಣ್ಣು ಮುಂದೆ ಇರುವುದರಿಂದ ನಮಗೂ ಆ ಪರಿಸ್ಥಿತಿ ಬಂದೊದಗಬಹುದು ಎಂದು ಭೀತಿಯಿಂದ ಭದ್ರಾ ಮೇಲ್ದಂಡೆ ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ಹಾಗೆಯೇ ಈ ಯೋಜನೆ ಜಾರಿಯಾದಲ್ಲಿ ಕಡೂರು ತಾಲ್ಲೂಕಿನ ಮೂಲಕ ಕಾಲುವೆ ಹೋಗುವುದರಿಂದ ಕಾಲುವೆ ೨೭ ಮೀಟರ್ ಅಗಲದ ಜಮೀನನ್ನು ತೆಗೆದುಕೊಳ್ಳುತ್ತದೆ. ಕಡೂರಿನ ಈಗಾಗಲೇ ಬೆಳೆದುನಿಂತು ಪಸಲು ಕೊಡುತ್ತಿರುವ ಅಡಿಕೆ ತೋಟಗಳು ನಾಶವಾಗುತ್ತವೆ. ಹಾಗೂ ಪಲವತ್ತಾದ ಭೂಮಿನಾಶವಾಗುತ್ತದೆ ಎಂದು ಕಡೂರು ತಾಲ್ಲೂಕು ಜನತೆಯೂ ಕೂಡ ಯೋಜನೆಯನ್ನು ವಿರೋಧಿಸುತ್ತಿದ್ದಾರೆ.

ಇಂತಹ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡು ಭದ್ರ ಮೇಲ್ದಂಡೆ ಯೋಜನೆ ೪೦ ವರ್ಷಗಳಾದರೂ ಕೂಡ ಜಾರಿಯಾಗಲು ಸಾಧ್ಯವಾಗುತ್ತಿಲ್ಲ. ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ನೀಗಿಸಲು ಸರ್ಕಾರ ಸರಿಯಾದ ರೀತಿಯಲ್ಲಿ ಪರಿಹಾರ ಒದಗಿಸುವುದಾಗಿದೆ. ಅಂದರೆ ಬಯಲು ನಾಡುಗಳಿಗೆ ಯೋಜನೆ ಜಾರಿಗೊಳಿಸಿ ಅವರ ಬಹುದಿನದ ಕನಸನ್ನು ನನಸು ಮಾಡುವುದು. ಈ ಯೋಜನೆ ಜಾರಿಯಾದರೆ ಬಯಲು ನಾಡು ಹಸಿರಿನಿಂದ ಕೂಡಿ ಅಭಿವೃದ್ಧಿಯ ಮಟ್ಟಕ್ಕೆ ಏರಬಹುದು. ಉತ್ತಮ ಕೈಗಾರಿಕೆಗಳು ಸೃಷ್ಟಿಯಾಗಬಹುದು. ಜನರು ತಮ್ಮ ಬಡತನದ ಬೇಗೆಯಿಂದ ಹೊರಬರಬಹುದು. ಉತ್ತಮವಾದ ವಾಣಿಜ್ಯ ವ್ಯಾಪಾರ ಹೆಚ್ಚಬಹುದು. ಒಟ್ಟಿನಲ್ಲಿ ಯೋಜನೆ ಜಾರಿ ಚಿತ್ರದುರ್ಗ ಹಾಗೂ ಇತರೆ ನೆರೆ ಜಿಲ್ಲೆಗಳಿಗೆ ನೀರು ಒದಗಿಸುವುದರಿಂದ ಉತ್ತಮ ಬದುಕನ್ನು ನಿರ್ಮಿಸಬಹುದಾಗಿದೆ.

ಈ ಯೋಜನೆ ಜಾರಿಯಾಗಲು ಅಡೆ ತಡೆಗಳಿರುವ ಕೆಲವು ಸಮಸ್ಯೆಗಳನ್ನು ನಿವಾರಿಸಬೇಕೆಂದರೆ ವೈಜ್ಞಾನಿಕ ಮಾಪನದ ಅಳವಡಿಕೆ ಉತ್ತಮವಾಗಿದೆ. ಹಾಗೆಯೇ ಊರು, ಭೂಮಿ, ತೋಟಗಳನ್ನು ಕಳೆದುಕೊಳ್ಳುವಂತ ಜನತೆಗೆ ಪರಿಹಾರ ನೀಡುವುದರ ಮೂಲಕ ಅಂದರೆ ಆಸ್ತಿ ಕಳೆದುಕೊಳ್ಳುವಂತವರಿಗೆ ಹಣ ನೀಡುವುದರ ಮೂಲಕ ಅಥವಾ ಬೇರೆ ಕಡೆ ಜಮೀನು ನೀಡುವುದರ ಮೂಲಕ ಅಥವಾ ಸರ್ಕಾರದ ಉದ್ದೇಶಗಳನ್ನು ನೀಡುವುದರ ಮೂಲಕ ಪರಿಹಾರ ಒದಗಿಸಿ ಯೋಜನೆ ಜಾರಿಗೊಳಿಸುವುದು ಸೂಕ್ತ ಎಂಬುದು ಹಲವಾರು ತಜ್ಞರ ಅಭಿಪ್ರಾಯವಾಗಿದೆ.

ಅಡಿಟಿಪ್ಪಣಿಗಳು

೧. ತಬಂಡ ವಿಜಯ ಪೂಣಚ್ಚ, ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ ೪, ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೮೫೨

೨. ಅದೇ ಪುಟ ೮೫೭

ಅಧ್ಯಾಯ : ಆರು

ಸಮಕಾಲೀನ ಸ್ಥಿತಿ–ಗತಿ

ಅಧ್ಯಾಯ : ಆರು

ಸಮಕಾಲೀನ ಸ್ಥಿತಿ–ಗತಿ

೧೯೬೮ರಲ್ಲಿ ಪ್ರಸ್ತಾಪಿಸಲಾದ ಭದ್ರಾ ಮೇಲ್ದಂಡೆ ಯೋಜನೆಗೆ ೨೭.೦೮.೨೦೦೮ ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆ ನೀಡಿತು. ಸುಮಾರು ೪೦ ವರ್ಷಗಳ ಹೋರಾಟದ ಇತಿಹಾಸ ಹೊಂದಿರುವ ಈ ಯೋಜನೆ ಇಲ್ಲಿಯವರೆಗೆ ಅಧಿಕಾರಕ್ಕೆ ಬಂದ ರಾಜ್ಯದ ಎಲ್ಲಾ ಸರ್ಕಾರಗಳೂ ಕೂಡ ಆಶ್ವಾಸನೆ ನೀಡುತ್ತಲೇ ಬರುತ್ತಿದ್ದವು. ಈ ವಿಚಾರವಾಗಿ ಹಲವಾರು ತಜ್ಞರ ನೇತೃತ್ವದಲ್ಲಿ ಸುಮಾರು ೮ ಸಮಿತಿಗಳನ್ನು ರಚಿಸಿ ಅವು ಕೂಡ ಚರ್ಚೆಗೆ ಒಳಗಾಗಿ ವಿರೋಧಗಳಿಗೆ ಗುರಿಯಾದವು. ನಂತರ ಧರ್ಮಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರ ೨೪.೦೧.೨೦೦೫ ರಲ್ಲಿ ನೀರಾವರಿ ತಜ್ಞ ಕೆ. ಸಿ. ರೆಡ್ಡಿಯವರ ನೇತೃತ್ವದಲ್ಲಿ ಮತ್ತೊಂದು ತಜ್ಞರ ಸಮಿತಿ ರಚಿಸಲಾಯಿತು. ಈ ಸಮಿತಿ ಈ ಹಿಂದಿನ ಎಲ್ಲಾ ಸಮಿತಿಗಳ ವರದಿಗಳನ್ನು ಆಧಾರವಾಗಿಟ್ಟುಕೊಂಡು ಯೋಜನೆಯ ಸಾಧಕ–ಬಾಧಕಗಳ ಬಗ್ಗೆ ಸುಮಾರು ಒಂದು ವರ್ಷದವರೆಗೆ ಅಧ್ಯಯನ ನಡೆಸಿ ವರದಿಯನ್ನು ರಚಿಸಿ ೧೫.೦೭.೨೦೦೬ ರಂದು ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿತು. ಈ ವರದಿಯ ಆಧಾರದ ಮೇಲೆ ಇಂದು ಯೋಜನೆಯ 'ಎ' ಸ್ಕೀಂ ಜಾರಿಗೆ ಒಪ್ಪಿಗೆ ದೊರೆತಿದ್ದು ಸರ್ವೆಕಾರ್ಯ ನಡೆಯುತ್ತಿದೆ.

ಕೆ.ಸಿ.ರೆಡ್ಡಿ ವರದಿಯ ಪ್ರಕಾರ ಯೋಜನೆಯ ರೂಪರೇಷೆಗಳನ್ನು ನೋಡಿದಾಗ, ಭದ್ರಾ ಮೇಲ್ದಂಡೆ ಯೋಜನೆಯ ಅನುಷ್ಠಾನಕ್ಕಾಗಿ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡುವ ಮಾಗುಂಡಿ ಹಾಗೂ ತೇಗೂರು ಗುಡ್ಡ ಜಲಾಶಯ ನಿರ್ಮಾಣವನ್ನು ಕೈಬಿಟ್ಟು "ಶಿವಮೊಗ್ಗದ ಮಂಡಗದ್ದೆ ಸಮೀಪವಿರುವ ಮುತ್ತಿನಕೊಪ್ಪದ ತುಂಗಾ ನದಿಯ ಬಲದಂಡೆಯಲ್ಲಿ ೧೫ ಟಿ.ಎಂ.ಸಿ. ನೀರನ್ನು ೧೫.ಕಿ.ಮೀ. ಉದ್ದದ ತಿರುವು ಕಾಲುವೆಯಲ್ಲಿ ಎರಡು ಹಂತಗಳಲ್ಲಿ ಅಂದರೆ ಮೊದಲ ಹಂತದಲ್ಲಿ ೩೮.೧೫ ಮೀ. ಹಾಗೂ ಎರಡನೇ ಹಂತದಲ್ಲಿ ೪೦.೦೫ ಮೀ. ಒಟ್ಟು ೭೮.೨೦ (ಸುಮಾರು ೨೫೭ ಅಡಿ) ಮೇಲಕ್ಕೆ ಎತ್ತುವುದರ ಮೂಲಕ ಭದ್ರಾ ಜಲಾಶಯಕ್ಕೆ ಹರಿಸಲಾಗುವುದು. ನಂತರ ತುಂಗಾ ನದಿಯಿಂದ ಲಿಫ್ಟ್ ಮಾಡಿದ ೧೫ ಟಿ.ಎಂ.ಸಿ. ನೀರನ್ನು ಅಜ್ಜಂಪುರದವರೆಗೂ ನೀರಿನ ಯಾವುದೇ ಬಳಕೆ ಇಲ್ಲದೆ ೪೦.೫ ಕಿ.ಮೀ. ಉದ್ದದ ಕಾಲುವೆಯಲ್ಲಿ ಮೂರು ಹಂತದಲ್ಲಿ ಅಂದರೆ ಮೊದಲ ಹಂತದಲ್ಲಿ ೨೯.೫ ಮೀ. ಎರಡನೆಯ ಹಂತದಲ್ಲಿ

[illegible]

[illegible]

[illegible]

[illegible]

೨೯.೮ ಮೀ. ಹಾಗೂ ಮೂರನೇ ಹಂತದಲ್ಲಿ ೨೭.೨ ಮೀ. ಒಟ್ಟು ೮೮.೫ ಮೀಟರ್ (ಸುಮಾರು ೨೮೦ ಅಡಿ) ಲಿಫ್ಟ್ ಮಾಡಿ ನಂತರ ೬.೯ ಕಿ.ಮೀ. ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ. ಹೀಗೆ ಭದ್ರೆ ಬಯಲು ಸೀಮೆ ತಲುಪಬೇಕಾಗಿದೆ."[1] ಕೆ.ಸಿ.ರೆಡ್ಡಿ ವರದಿಯ ಪ್ರಕಾರ ಸುಮಾರು ೫೩೦ ಅಡಿಗಳಷ್ಟು ಲಿಫ್ಟ್ ಪಡೆದು ಸುಮಾರು ೬೨.೪ ಕಿ.ಮೀ. ಹಾದಿಯನ್ನು ಸವೆಸಬೇಕಾಗುತ್ತದೆ ಅಲ್ಲಿಂದ ನೀರನ್ನು ಉದ್ದೇಶಿತ ಭಾಗಕ್ಕೆ ಹರಿಸಲಾಗುತ್ತದೆ. ನಂತರ ಈ ನೀರನ್ನು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಒಂದು ಕೆರೆಗೆ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ೩ ಕೆರೆಗಳಿಗೆ ಹಿರಿಯೂರು ತಾಲ್ಲೂಕಿನ ೧೫ ಕೆರೆಗಳಿಗೆ, ಚಿತ್ರದುರ್ಗ ತಾಲ್ಲೂಕಿನ ೫ ಕೆರೆಗಳಿಗೆ ಮತ್ತು ಚಳ್ಳಕೆರೆ ತಾಲ್ಲೂಕಿನ ೯ ಕೆರೆಗಳಿಗೆ, ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ೪೧ ಕೆರೆಗಳಿಗೆ, ಕೋಲಾರ ಜಿಲ್ಲೆಯ ೧೯ ಕೆರೆಗಳಿಗೆ ಸೇರಿದಂತೆ ಒಟ್ಟು ೧೫೬ ಕೆರೆಗಳ ಹೂಳೆತ್ತಬೇಕಾಗುತ್ತದೆ. ತುಮಕೂರು ಮತ್ತು ಕೋಲಾರ ಜಿಲ್ಲೆಗಳ ೧೧೯ ಕೆರೆಗಳನ್ನು ಭರ್ತಿ ಮಾಡಿ ಕುಡಿಯುವ ನೀರನ್ನು ಪೂರೈಸುವುದರೊಂದಿಗೆ ಅಂತರ್ಜಲ ಮಟ್ಟದ ಸುಧಾರಣೆಗಾಗಿ ೫.೬ ಟಿ.ಎಂ.ಸಿ. ನೀರನ್ನು ನಿಗದಿಪಡಿಸಲಾಗಿದ್ದರೂ ತುಮಕೂರು ಮತ್ತು ಕೋಲಾರ ಜಿಲ್ಲೆಗಳ ಕೆರೆ ಭರ್ತಿ ಮಾಡಲು ೫.೬ ಟಿ.ಎಂ.ಸಿ. ನೀರು ಬಳಸಲು ವಿವರವಾದ ಅಧ್ಯಯನದ ನಂತರ ಸುವರ್ಣಮುಖಿ ನದಿತನಕ ವೇದಾವತಿ ಕಣಿವೆಯಲ್ಲಿ ೨ ರಿಂದ ೩ ಟಿ.ಎಂ.ಸಿ. ಸಾಮರ್ಥ್ಯದ ಬ್ಯಾರೇಜು ನಿರ್ಮಿಸಬೇಕು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕೆ.ಸಿ.ರೆಡ್ಡಿ ವರದಿಯ ಪ್ರಕಾರ ಚಿಕ್ಕಮಗಳೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಿಗೆ ೨,೫೪,೦೨೩ ಎಕರೆ ಭೂಮಿಗೆ ನೀರಾವರಿ ವ್ಯವಸ್ಥೆ ಕಲ್ಪಿಸುವುದು ಹಾಗೂ ತುಮಕೂರು ಮತ್ತು ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವುದಾಗಿದೆ.

ಈ ವರದಿಯಂತೆ ಅಂದಾಜು ವೆಚ್ಚವನ್ನು ನೋಡಿದಾಗ "ತುಂಗಾ ನದಿಯಿಂದ ೧೫ ಟಿ.ಎಂ.ಸಿ. ನೀರು ಹರಿಸಲು ೧೨೫ ಕೋಟಿ. ರೂ.ಗಳು ನೀರನ್ನು ಮೇಲಕ್ಕೆ ಎತ್ತುವುದಕ್ಕಾಗಿ ೭೮೩ ಕೋಟಿ. ರೂ.ಗಳು., ಭದ್ರಾ ಕಾಲುವೆಯ ಆಧುನೀಕರಣಕ್ಕೆ ೪೭೧ ಕೋಟಿ ರೂ.ಗಳು, ತುಂಗಾ, ಗೊಂದಿ ಮತ್ತು ವಿಜಯನಗರ ಕಾಲುವೆಗಳ ಆಧುನೀಕರಣಕ್ಕೆ ೨೦೩ ಕೋಟಿ. ರೂ.ಗಳು ಚಿತ್ರದುರ್ಗ ನಾಲೆಗೆ ನೀರನ್ನು ಮೇಲಕ್ಕೆ ಹೆತ್ತಿ ಹರಿಸುವುದಕ್ಕೆ ೧೦೦ ಕೋಟಿ.ರೂ.ಗಳು ವೇದಾವತಿ ನದಿಗೆ ನೀರು ಹರಿಸಲು ೧೦೦ ಕೋಟಿ. ರೂ.ಗಳು, ತುಮಕೂರು ಕೋಲಾರ ಜಿಲ್ಲೆಗಳ ಕೆರೆಗಳಿಗೆ ನೀರು ಶೇಖರಿಸಲು ೯೦೦ ಕೋಟಿ.ರೂ.ಗಳು ಮತ್ತು ಕೆರೆಗಳ ಹೂಳು ತೆಗೆಯಲು ೭೨೦ ಕೋಟಿ. ರೂ.ಗಳನ್ನು ಖರ್ಚು ಮಾಡುವುದು ಸೇರಿದಂತೆ ಒಟ್ಟು ೪೧೫೦ ಕೋಟಿ.ರೂಗಳ ಬೃಹತ್ ಅಂದಾಜು ವೆಚ್ಚವನ್ನು ಈ ಯೋಜನಾ ವರದಿಯಲ್ಲಿ ಅಡಕಗೊಳಿಸಲಾಗಿದ್ದು, ೧೬೦ ಮೆಗಾವ್ಯಾಟ್ ವಿದ್ಯುತ್ ಅಗತ್ಯವಿದೆ ಎಂದು ತಿಳಿಸಲಾಗಿದೆ."[2]

ಹಾಗೂ ಮೇಲ್ಕಂಡ ಎಲ್ಲಾ ಕಾಮಗಾರಿಗಳ ಅನುಷ್ಠಾನವನ್ನು ಕರ್ನಾಟಕ ನೀರಾವರಿ ನಿಯಮವೇ ಕಾರ್ಯ ನಿರ್ವಹಿಸಬೇಕೆಂದು ಸೂಚಿಸಲಾಗಿದೆ.

ಒಟ್ಟಿನಲ್ಲಿ ಕೆ.ಸಿ.ರೆಡ್ಡಿ ವರದಿಯಂತೆ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರ ೧೦ ನವ್ವೆಂಬರ್ ೨೦೦೬ ರಂದು ನಡೆದ ಸಚಿವ ಸಂಪುಟ ಜಾರಿಗೆ ಅನುಮೋದನೆ ನೀಡಿತ್ತು. ಆದರೆ ಯಾವುದೇ ಹಣ ಮೀಸಲಿಟ್ಟಿರಲಿಲ್ಲ. ಅಷ್ಟರಲ್ಲಿ ಸರ್ಕಾರ ಅಧಿಕಾರ ಕಳೆದುಕೊಂಡು ಮತ್ತೊಮ್ಮೆ ನೆನಗುದಿಗೆ ಬಿತ್ತು. ನಂತರ ಅಧಿಕಾರಕ್ಕೆ ಬಂದ ಹೊಸ ಸರ್ಕಾರ ೨೭.೦೮.೨೦೦೮ ರಂದು ನಡೆದ ಸಚಿವ ಸಂಪುಟದ ಸಭೆ ಸರ್ವಾನುಮತದಿಂದ ಯೋಜನೆ ಜಾರಿಗೆ ಅನುಮೋದನೆ ನೀಡಿದ್ದು ಯೋಜನೆಯ ವೆಚ್ಚವನ್ನು ವರ್ಷಕ್ಕೆ ಇಷ್ಟು ಎಂದು ತೆಗೆದಿಡಲಾಗಿದೆ.

"೨೭.೦೮.೨೦೦೮ರಂದು ನಡೆದ ಯುಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ನೇತೃತ್ವದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ ಪರಿಸ್ಕೃತ ಯೋಜನೆಯ 'ಎ' ಸ್ಕೀಂ ಅಂದಾಜು ಮೊತ್ತ ೫,೯೮೫ ಕೋಟಿಗೆ ರೂ.ಗಳಿಗೆ ಅನುಮೋದನೆ ದೊರೆತಿದ್ದು, ಮೊದಲ ಹಂತದಲ್ಲಿ ನೀರಾವರಿ ಕಾಮಗಾರಿಗಳ ಅಂದಾಜು ಮೊತ್ತ ೩೩೮೮ ಕೋಟಿ ರೂಪಾಯಿ (ಚಿಕ್ಕ ಮಗಳೂರು ಮತ್ತು ಚಿತ್ರದುರ್ಗ) ಎರಡನೇ ಹಂತದ ಕುಡಿಯುವ ನೀರು ಮತ್ತು ಕೆರೆಗಳ ಪುನಶ್ಚೇತನ ಕಾಮಗಾರಿಗಳಿಗೆ ಅಂದಾಜು ಮೊತ್ತ ೨೫೯೭ ಕೋಟಿ (ತುಮಕೂರು ಮತ್ತು ಕೋಲಾರ) ರೂಪಾಯಿ ನಿಗದಿ ಪಡಿಸಲಾಗಿದೆ. ಇದರಂತೆ ೨೦೦೮–೦೯ನೇ ಸಾಲಿಗೆ ೩೧೪ ಕೋಟಿ, ೨೦೦೯–೧೦ನೇ ಸಾಲಿನಲ್ಲಿ ೮೫೯ ಮತು ೩೪೦ ಕೋಟಿ ಸೇರಿದಂತೆ ೧,೧೯೯ ಕೋಟಿ ರೂ., ೨೦೧೦–೧೧ನೇ ಸಾಲಿಗೆ ಕ್ರಮವಾಗಿ ೧೧೪೬–೫೭೦ ಸೇರಿದಂತೆ ೧೭೧೬ ಕೋಟಿ ರೂ., ೨೦೧೧–೧೨ನೇ ಸಾಲಿಗೆ ೬೫೬–೧೦೬೧ ಕೋಟಿ ರೂ. ಸೇರಿದಂತೆ ೧೭೧೭ ಕೋಟಿ.ರೂ., ೨೦೧೨–೨೦೧೩ನೇ ಸಾಲಿಗೆ ೪೧೭–೬೨೨ ಕೋಟಿ ಸೇರಿದಂತೆ ೧೦೩೯ ಕೋಟಿ ರೂ. ಹಣವನ್ನು ಯೋಜನೆಗೆ ಬಿಡುಗಡೆ ಮಾಡಲಾಗುವುದು ಎಂಬುದಾಗಿ ಸಚಿವ ಸಂಪುಟ ನಿರ್ಧರಿಸಲಾಗಿದೆ."[೩]

ಒಟ್ಟಿನಲ್ಲಿ ಈ ಒಂದು ಯೋಜನೆಯ ಕಾಮಗಾರರಿಗೆ ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಯೋಜನೆಯನ್ನು ಇನ್ನು ೫ ವರ್ಷಗಳಲ್ಲಿ ಮುಗಿಸಿ, ಭದ್ರೆ ನೀರು ಬಯಲು ನಾಡಿಗೆ ಪರಿಯುತ್ತದೆ ಎಂಬುದಾಗಿ ಸರ್ಕಾರ ಹೇಳುತ್ತಿದೆ ಅದು ಯಾವ ರೀತಿ ಕಾರ್ಯ ಸಾಧ್ಯವಾಗುತ್ತದೆ ಎಂಬುದನ್ನು ಕಾದುನೋಡಬೇಕಾಗಿದೆ.

ಸಧ್ಯದ ಪರಿಸ್ಥಿತಿಯಲ್ಲಂತೂ ಭದ್ರಾ ಮೇಲ್ದಂಡೆ ಯೋಜನೆಯು ಬಯಲು ನಾಡ ಜನತೆಗೆ ಅವಶ್ಯಕತೆಯಾಗಿದೆ. ಏಕೆಂದರೆ ವರ್ಷದಲ್ಲಿ ಒಂದೆರಡು ಬಾರಿ ಮಾತ್ರ ಮಳೆಯಾಗುತ್ತಿದ್ದು

ಕೃಷಿಯಲ್ಲಿ ಕುಂಟಿತವಾಗಿದೆ. ಈ ಕಾರಣದಿಂದ ಕೆಲವು ಜನ ಜಮೀನಿನಲ್ಲಿ ಕೆಲಸವಿಲ್ಲದೆ ಸೋಮಾರಿಗಳಾಗುತ್ತಿದ್ದರೆ ಮತ್ತೆ ಕೆಲವು ಜನ ತಮ್ಮ ಜಮೀನನ್ನು ಕಬ್ಬಿಣ ಅದಿರು ತೆಗೆಯುವ ಕಂಪನಿಗಳಿಗೆ ಕಡಿಮೆ ಹಣಕ್ಕೆ ಕೊಟ್ಟು ತಮ್ಮ ಜಮೀನನ್ನು ಹಾಳು ಮಾಡಿಕೊಳ್ಳುತ್ತಿದ್ದಾನೆ. ಮತ್ತೆ ಕೆಲವು ಜನ ಗಣಿಗಳಲಿ ಕೊಡುವ ೫೦ ಅಥವಾ ೧೦೦ ರೂ.ಗಳಿಗೆ ದಿನವಿಡಿ ದುಡಿಯುತ್ತಿದ್ದಾರೆ. ಈ ಜನರಿಗೆ ಮುಂದೊಂದು ದಿನ ಪರಿಸರ ನಾಶವಾಗುತ್ತದೆ ಎಂದು ಗೊತ್ತಿದ್ದರೂ ಕೂಡ ವಿದಿ ಇಲ್ಲದ ಪರಿಸ್ಥಿತಿಯಾಗಿದೆ. ಇಂತಹ ಅಂಶವನ್ನು ಸರ್ಕಾರ ಗಮನದಲ್ಲಿ ಇಟ್ಟುಕೊಂಡು ಭದ್ರಾ ಮೇಲ್ದಂಡೆ ಯೋಜನೆಯಡಿ ನೀರನ್ನು ಹರಿಸುವುದರ ಮೂಲಕ ಜನತೆಯ ಬರದ ಬವಣೆ ನಿವಾರಣೆಯಾಗಿ ಕೃಷಿಯಲ್ಲಿ ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ ಇದರಿಂದ ಆರ್ಥಿಕ ಗುಣಮಟ್ಟ ಸುಧಾರಿಸಬಹುದು ಎಂಬುದು ನನ್ನ ಅಭಿಲಾಶೆಯಾಗಿದೆ.

ಅಡಿಟಿಪ್ಪಣಿಗಳು

೧. ಭದ್ರಾ ಮೇಲ್ದಂಡೆ ಯೋಜನೆ 'ಎ' ಸ್ಕೀಂ., ಕೆ.ಸಿ.ರೆಡ್ಡಿ ವರದಿ, ಪುಟ. ೧೫.

೨. ಅದೇ ಪುಟ ೧೮.

೩. ಪ್ರಜಾವಾಣಿ ವಾರ್ತೆ, ಸೆಪ್ಟೆಂಬರ್ ೯, ೨೦೦೮.

ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

ಪ್ರತಿ ಅಧ್ಯಯನವು ತನ್ನದೇ ಆದ ಫಲಿತಗಳನ್ನು ಕಂಡುಕೊಳ್ಳುತ್ತದೆ. ಈ ಫಲಿತಗಳು ಈ ಮುಂಚಿನ ಅಧ್ಯಯನಗಳ ಫಲಿತಕ್ಕಿಂತ ಭಿನ್ನವಾಗಿರುತ್ತವೆ. ಆದರೆ ಇವುಗಳೇ ಅಂತಿಮ ಅಲ್ಲ. ಇದೇ ವಿಷಯವನ್ನು ವ್ಯಾಪ್ತಿ ವಿಸ್ತರಿಸಿಕೊಂಡಾಗ, ಅಧ್ಯಯನದ ಶಿಸ್ತು ಬದಲಾದಾಗ, ಅಧ್ಯಯನದ ಧೋರಣೆಗಳು ಬದಲಾದಾಗ ಅದರ ಫಲಿತಗಳು ಬೇರೆ ಆಗುತ್ತವೆ. ಈ ಎಲ್ಲ ವಿಚಾರಗಳನ್ನು ಇಟ್ಟುಕೊಂಡು ಈ ಸಂಶೋಧನ ಸಂಪ್ರಬಂಧ ಕಂಡುಕೊಂಡ ಅಧ್ಯಯನದ ಫಲಿತಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ನದಿಗಳು ಆದಿ ಕಾಲದಿಂದಲೂ ಕೂಡ ಮಾನವರಿಗೆ ತುಂಬಾ ಉಪಯುಕ್ತತೆಯನ್ನು ನೀಡುತ್ತಾ ಬಂದಿವೆ. ಆದಿ ಮಾನವ ತನ್ನ ಪ್ರಾರಂಭದ ಬದುಕನ್ನು ಮೊದಲು ಪ್ರಾರಂಭಿಸಿದ್ದು ನದಿ ದಡಗಳಲ್ಲಿಯೇ. ಪಂಚ ಭೂತಗಳಲ್ಲಿ ಒಂದಾದ ನೀರು ಇಡೀ ಮನುಕುಲಕ್ಕೆ ಜೀವನಾಧಾರವಾದುದಾಗಿದೆ. ಪ್ರಪಂಚದ ಯಾವುದೇ ನಾಗರೀಕತೆಗಳು ಉಗಮವಾಗಿರುವುದು ನದಿಗಳ ದಡದಲ್ಲಿಯೇ. ಅಲೆ ಮಾರಿಯಾಗಿದ್ದ ಮಾನವ ನದಿಯ ಅಕ್ಕಪಕ್ಕಗಳಲ್ಲಿ ನೆಲೆ ನಿಂತು ತನ್ನ ಜೀವನ ರೂಪಿಸಿಕೊಂಡ. ಹಾಗೆ ನದಿಯ ಉಪಯೋಗದ ಬಗ್ಗೆ ಆಲೋಚಿಸಿದ. ಪ್ರಯೋಗ ನಡೆಸಿದ ಕೊನೆಗೆ ಯಶಸ್ಸನ್ನೂ ಕೂಡ ಕಂಡ. ಜನಸಂಖ್ಯೆ ಹೆಚ್ಚಾದಂತೆ ಮಾನವನ ಆಸೆಗಳು ಹೆಚ್ಚಾದಂತೆ ನೀರಿನ ವಿಚಾರವಾಗಿ ಅದರ ಉಪಯೋಗಕ್ಕಾಗಿ ಕದನಗಳು, ಚಳವಳಿಗಳು ನಡೆದವು. ಈ ತರಹದ ಚಳವಳಿಗಳು ಇವತ್ತಿನ ಕತೆಯಲ್ಲ. ರಾಮಾಯಣ, ಮಹಾಭಾರತದ ಕಾಲದಿಂದಲೂ ನಡೆಯುತ್ತಾ ಬಂದಿವೆ, ಇಂದಿಗೂ ನಡೆಯುತ್ತಿವೆ. ನದಿಗಳಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಿ ನೀರನ್ನು ನಿಲ್ಲಿಸುವುದರಿಂದ ನದಿಯ ಮುಂದಿನ ಜನತೆಗೆ ಅನ್ಯಾಯವಾಗುತ್ತದೆ ಹಾಗೂ ಇದರ ಉಪಯೋಗ ನಿಲ್ಲುವುದರಿಂದ ಅವರು ಅಣೆಕಟ್ಟು ಕಟ್ಟಿದವರ ವಿರುದ್ಧ ಹೋರಾಟ ಮಾಡಲು ಮುಂದಾಗುತ್ತಾರೆ. ಏಕೆಂದರೆ ನದಿಗಳು ಒಂದು ರಾಜ್ಯದಲ್ಲಿ ಹುಟ್ಟಿ ಹರಿಯುವಿಕೆಯನ್ನು ಪ್ರಾರಂಭಿಸಿ ಮತ್ತೊಂದು ಪಕ್ಕದ ರಾಜ್ಯದಲ್ಲಿ ಹರಿದಾಗ ಆ ನದಿ ಎರಡೂ ರಾಜ್ಯಗಳಿಗೂ ಅನ್ವಯವಾಗುತ್ತದೆ. ಇಂಥ ವಿಚಾರದಲ್ಲಿ ಕೃಷ್ಣ ನದಿ, ಕಾವೇರಿ ನದಿ, ತುಂಗಭದ್ರಾ ನದಿಗಳನ್ನು ಉದಾಹರಣೆಗಾಗಿ ನೋಡಬಹುದು. ಅಂದರೆ ಕೃಷ್ಣ ನದಿ ಮಹಾರಾಷ್ಟ್ರದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಹರಿಯುವುದರ ಮೂಲಕ ಆಂಧ್ರ ಪ್ರದೇಶವನ್ನು ಸೇರುತ್ತದೆ. ಇದುಈ ಮೂರು

ರಾಜ್ಯಗಳಿಗೂ ಸೇರಿದುದಾಗಿದೆ. ಅದೇ ರೀತಿ ಕಾವೇರಿ ನದಿ ಕರ್ನಾಟಕದಲ್ಲಿ ಹುಟ್ಟಿ ತಮಿಳುನಾಡಿನಲ್ಲಿ ಹರಿಯುತ್ತದೆ. ಈ ನದಿಗಳಿಗೆ ಅಣೆಕಟ್ಟನ್ನು ಕಟ್ಟಿ, ನೀರಿನ ಹಂಚಿಕೆಯಲ್ಲಿ ಮೈಮನಸ್ಸು ಬಂದು ಹೋರಾಟಗಳು ನಡೆದವು. ಹಾಗೂ ಇಂದಿಗೂ ನಡೆಯುತ್ತಿವೆ. ಇದು ಅಂತರ ರಾಜ್ಯ ಜಲವಿವಾಹಕ್ಕೆ ಸಂಬಂಧಿಸಿದ್ದಾಗಿದೆ. ಆದರೆ ರಾಜ್ಯದ ಒಳಗಡೆಯೂ ಕೂಡ ನೀರಿಗಾಗಿ ಹೋರಾಟ ನಡೆಯುತ್ತಿರುವುದು ಶೋಚನೀಯ. ಇಂಥ ವಿಚಾರದಲ್ಲಿ ಭದ್ರಾ ನದಿಯ ನೀರಿನ ಹಂಚಿಕೆಯಲ್ಲಿ ಸಮಸ್ಯೆಗಳು ಬಂದು ತಮ್ಮ ರಾಜ್ಯದಲ್ಲಿ ತಾವೇ ಆಯ್ಕೆ ಮಾಡಿ ಅಧಿಕಾರ ಕೊಟ್ಟ ಸರ್ಕಾರದ ವಿರುದ್ಧವೇ ಹೋರಾಟ ಮಾಡಿರುವುದು ಖೇದಕರ ಸಂಗತಿ.

ಅಂದರೆ ಭದ್ರಾ ನದಿಗೆ ಅಡ್ಡಲಾಗಿ ಕಟ್ಟಲಾದ ಭದ್ರಾ ಅಣೆಕಟ್ಟಿನ ಮುಖ್ಯ ಉದ್ದೇಶ ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಹಾಗೂ ತುಮಕೂರು ಜಿಲ್ಲೆಗಳ ಒಣಭೂಮಿಗೆ ನೀರನ್ನೊದಗಿಸಿ ನೀರಾವರಿ ಸೌಕರ್ಯ ನೀಡುವುದು ಮತ್ತು ಜನತೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರನ್ನೊದಗಿಸುವುದಾಗಿತ್ತು. ಆದರೆ ಭದ್ರಾ ಅಣೆಕಟ್ಟು ನಿರ್ಮಾಣವಾಗಿ ಇಂದಿನವರೆಗೂ ಕೇವಲ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳು ಮಾತ್ರ ಉಪಯೋಗವನ್ನು ಪಡೆಯುತ್ತಿವೆ. ಭದ್ರಾ ನದಿ ನೀರಿನಿಂದ ಉಳಿದ ಬಯಲು ಪ್ರದೇಶದ ಜಿಲ್ಲೆಗಳು ವಂಚಿತವಾದವು. ಇದನ್ನರಿತ ಕರ್ನಾಟಕ ಸರ್ಕಾರ ೧೯೬೮ರಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಪ್ರಸ್ತಾವನೆ ನೀಡಿತು ಇದರ ಉದ್ದೇಶ ಭದ್ರಾ ಅಣೆಕಟ್ಟಿನ ಮೇಲ್ಭಾಗದಲ್ಲಿ ಮತ್ತೊಂದು ಅಣೆಕಟ್ಟನ್ನು ಕಟ್ಟಿ ನೀರನ್ನು ಸಂಗ್ರಹಿಸಿ ಇದರ ಮೂಲಕ ಚಿತ್ರದುರ್ಗ ಹಾಗೂ ಇತರೆ ನೆರೆಯ ಜಿಲ್ಲೆಗಳ ಭೂಮಿಗೆ ನೀರನ್ನೊದಗಿಸುವುದಾಗಿತ್ತು. ಆದರೆ ಈ ಯೋಜನೆ ಕಾರ್ಯ ಸಾದುವಲ್ಲ. ಇದರಿಂದ ಸಾಕಷ್ಟು ಹಾನಿ ಸಂಭವಿಸುತ್ತದೆ ಎಂಬುದಾಗಿ ಮಲೆನಾಡು ಜನತೆ ಪರಿಸರ ವಾದಿಗಳನ್ನು ಮುಂದಿಟ್ಟುಕೊಂಡು ವಿರೋಧವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಸ್ವಲ್ಪ ಮನಸ್ಸು ಮಾಡಿದ್ದರೆ ಯೋಜನೆ ಜಾರಿಯಾಗುವ ಎಲ್ಲಾ ಸಾಧ್ಯತೆಗಳು ಇದ್ದವು. ಆದರೆ ಕೆಲವು ವೈಯಕ್ತಿಕ ಕಾರಣದಿಂದ ಯೋಜನೆಯನ್ನು ನೆನೆಗುದಿಗೆ ಬಿಟ್ಟರು ಎಂಬುದು ಹಲವಾರು ತಜ್ಞರ ಅಭಿಪ್ರಾಯ. ಇದು ಎಷ್ಟರ ಮಟ್ಟಿಗೆ ಸರಿ ಎಂಬುದು ಅವರಿಗೆ ಗೊತ್ತು. ನಂತರ ಅಧಿಕಾರಿಕ್ಕೆ ಬಂದ ಎಲ್ಲಾ ರಾಜಕೀಯ ಪಕ್ಷಗಳು ಯೋಜನೆಯ ಬಗ್ಗೆ ಪ್ರಸ್ತಾಪ ನೀಡುತ್ತಲೇ ಬಂದವು. ಮತ್ತು ಯೋಜನೆಯ ಸಾಧಕ ಬಾಧಕಗಳ ಬಗ್ಗೆ ತಜ್ಞರ ಸಮಿತಿಗಳನ್ನು ರಚಿಸುತ್ತಲೇ ಮುನ್ನಡೆದವು. ಆದರೆ ಭದ್ರೆ ಮಾತ್ರ ಬಯಲು ನಾಡಿಗೆ ಹರಿಯಲಿಲ್ಲ. ಬರಗಾಲದಲ್ಲಿ ಬೆಂದ ಜನತೆ ಭದ್ರೆಗಾಗಿ ಕಾದು ಕುಳಿತರು ಆದರೆ ಭದ್ರೆ ಮಾತ್ರ ಬರಲಿಲ್ಲ. ಇದನ್ನರಿತ ನೊಂದ ಜನ ನೀರಿಗಾಗಿ ಹೋರಾಟದ ಹಾದಿ ಹಿಡಿದರು. ಸಂಘ ಸಂಸ್ಥೆಗಳನ್ನು ಕಟ್ಟುವುದರ ಮೂಲಕ ಜನತೆಯನ್ನು ಒಗ್ಗೂಡಿಸಿದರು. ಚಳವಳಿಗಳನ್ನು ಮಾಡಿದರು. ಪಟ್ಟಣಗಳು ಬಂದ್ ಆಚರಿಸಿದರು. ರಸ್ತೆ ತಡೆ ಮಾಡಿದರು, ಧರಣಿಗೆ ಕೂತರು, ಈ ಎಲ್ಲಾ ಪ್ರಯತ್ನದ ಫಲವಾಗಿ ಇಂದು ಭದ್ರಾ ಮೇಲ್ದಂಡೆ ಯೋಜನೆ ಜಾರಿಯ ಹಂತಕ್ಕೆ ಬಂದು ನಿಂತಿದೆ.

[illegible]

ಅಂದರೆ ಈ ಅಧ್ಯಯನದಲ್ಲಿ, ಕಂಡುಕೊಂಡ ಮುಖ್ಯ ಫಲಿತವೆಂದರೆ ಯಾವುದೇ ಒಂದು ವ್ಯವಸ್ಥೆ ಜಾರಿಯಾಗಬೇಕೆಂದರೆ ಹೋರಾಟ ಮುಖ್ಯ ಪಾತ್ರ ವಹಿಸುತ್ತದೆ ಎಂಬುದು. ಒಂದು ವೇಳೆ ಬಯಲು ನಾಡ ಜನರು ಹೋರಾಟದ ಹಾದಿ ಹಿಡಿಯದೇ ಇದ್ದಿದ್ದರೆ ಇನ್ನೂ ಕೂಡ ಯೋಜನೆ ನೆನೆಗುದಿಗೆ ಬಿಡಲಾಗುತ್ತಿತ್ತು. ಈ ಮಧ್ಯ ಹಲವಾರು ರಾಜಕೀಯ ನಾಯಕರ ಓಟ್ ಬ್ಯಾಂಕಾಗಿ ಭದ್ರಾ ಮೇಲ್ದಂಡೆ ಯೋಜನೆ ರೂಪಗೊಂಡಿತ್ತು. ಇವರು ನೊಂದ ಜನತೆಗೆ ಆಶ್ವಾಸನೆ ನೀಡಿ ಓಟುಗಳನ್ನು ಪಡೆದು ಕೊನೆಗೆ ಯಾವುದೇ ಚಕಾರ ಎತ್ತದೆ ಐದು ವರ್ಷ ಪೂರ್ಣಗೊಳಿಸುತ್ತಿದ್ದರು. ಭದ್ರಾ ಮೇಲ್ದಂಡೆ ಯೋಜನೆ ಜಾರಿಗಾಗಿ ಸುಮಾರು ೪೦ ವರ್ಷಗಳಿಂದಲೂ ಹೋರಾಟ ನಡೆಸುತ್ತಾ ಬಂದಿದು. ಈ ಹೋರಾಟ ೧೯೯೬ರ ನಂತರ ತೀವ್ರವಾಯಿತು. ಆದರೆ ಇಂದೂ ಕೂಡ ಹೋರಾಟ ನಡೆಯುತ್ತಿದ್ದರೂ ಯಾವುದೇ ಅಹಿತಕರ ಘಟನೆಗೆ ಒಳಗಾಗದೆ ಶಾಂತ ರೀತಿಯಲ್ಲಿ ನಡೆಯುತ್ತಿದೆ. ಈ ಹೋರಾಟದಲ್ಲಿ ಯಾವುದೇ ಪಕ್ಷ ಬೇಧವಿಲ್ಲದೆ ಜಾತಿ ಬೇಧವಿಲ್ಲದೆ ಎಲ್ಲಾ ರಾಜಕೀಯ ಪಕ್ಷದವರು, ಸಮುದಾಯದವರು, ಮಠಮಾನ್ಯಗಳು, ಸಂಘಸಂಸ್ಥೆಗಳು, ವಿದ್ಯಾರ್ಥಿಗಳು, ಮಹಿಳೆಯರು, ಮಕ್ಕಳು, ಉದ್ದಿಮೆದಾರರು, ರೈತರು, ಸಾಹಿತಿಗಳು, ರಾಜಕೀಯ ಮುಖಂಡರು, ಮಠಾಧೀಶರು, ನೌಕರರು, ಭದ್ರಾ ನೀರಿಗಾಗಿ ಪಕ್ಷ ಬೇಧ ಮರೆತು ಜಾತಿಬೇಧ ಮರೆತು ಹೋರಾಟ ಮಾಡಿರುವುದನ್ನು ಕಾಣಬಹುದು. ಅದರಲ್ಲೂ ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿ ಈ ಹೋರಾಟದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡು ಭದ್ರಾ ನೀರು ಹರಿಯುವವರೆಗೆ ಹೋರಾಟ ನಿಲ್ಲಿಸುವುದಿಲ್ಲ ಎಂಬುದಾಗಿ ಪಣತೊಟ್ಟಿದೆ. ಈ ಮಧ್ಯ ಮಲೆನಾಡು ಜನರು ಭದ್ರೆಯಲ್ಲಿ ನೀರೇ ಇಲ್ಲ. ಭದ್ರಾ ಜಲಾಶಯ ತುಂಬುವುದೇ ಕಷ್ಟವಾಗುತ್ತಿದೆ ಎಂದು ಹೇಳುತ್ತಿದ್ದರು. ಆಗ ಚಿತ್ರದುರ್ಗ ಜಿಲ್ಲಾ ನೀರಾವರಿ ಹೋರಾಟ ಸಮಿತಿಯ ವತಿಯಿಂದ ಈ ನಾಲ್ಕು ವರ್ಷದಿಂದ ಜಲಾಶಯಕ್ಕೆ ಭಾಗೀನ ಅರ್ಪಿಸುತ್ತಿದೆ. ಅಂದಿನಿಂದ ಇಂದಿನವರೆಗೂ ಜಲಾಶಯ ಪ್ರತಿವರ್ಷವೂ ತುಂಬಿ ಹರಿಯುತ್ತಿದೆ. ಇಂಥ ಹಲವಾರು ಫಲಿತಗಳು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಒಟ್ಟಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆ ನಲವತ್ತು ವರ್ಷಗಳ ನಂತರ ಜಾರಿಗೆ ಸಂಪೂರ್ಣ ಒಪ್ಪಿಗೆ ಪಡೆದಿದೆ. ಯೋಜನೆಯ ಕಾಮಗಾರಿಗೆ ಹಣ ಬಿಡುಗಡೆಯಾಗಿ ಟೆಂಡರ್ ಕರೆಯಲಾಗಿದೆ. ಸರ್ಕಾರ ಆದಷ್ಟು ಶೀಘ್ರವಾಗಿ ಯೋಜನೆಯ ಕಾಮಗಾರಿ ಮುಗಿಸಿ ಭದ್ರೆಯನ್ನು ಬಯಲು ನಾಡಿಗೆ ಹರಿಸಿದರೆ ಬರದ ಬೇಗೆಯಲ್ಲಿ ಬೆಂದು ನೊಂದ ಜನ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವಲ್ಲಿ ಪ್ರಯತ್ನಿಸುತ್ತಾರೆ. ಅಲ್ಲದೇ ಬಯಲು ನಾಡಲ್ಲಿ ಹಸಿರಿಲ್ಲದೆ ಜಾನುವಾರುಗಳು ಕ್ಷೀಣಿಸುತ್ತಿದ್ದು ಅವುಗಳ ಉಪಯೋಗ ಕಡಿಮೆಯಾಗಿದೆ. ಭದ್ರೆ ಬಯಲು ನಾಡಲ್ಲಿ ಹರಿಯುವುದರಿಂದ ಈ ಪ್ರದೇಶಗಳಲ್ಲಿ ಹಸಿರಾಗಿ ಜಾನುವಾರುಗಳು ವೃದ್ಧಿಸಿ ನಾಡಿಗೆ ಉಪಯೋಗದ ಆದಿ ಹಿಡಿಯುವುದರಲ್ಲಿ ಅನುಮಾನವಿಲ್ಲ. ಇನ್ನೂ ಮುಂದಿನ ದಿನಗಳಲ್ಲಿ ಎಷ್ಟು ಬೇಗ ಬಯಲು ನಾಡಿಗೆ ಭದ್ರೆ ನೀರು ಹರಿಯುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

[illegible]

[illegible]

ಅನುಬಂಧಗಳು

ವಕ್ತೃ ವಿವರ

ಹೆಸರು	ವಯಸ್ಸು	ವೃತ್ತಿ	ಸ್ಥಳ
೧. ಕೋದಂಡರಾಮಯ್ಯ	೬೦	ಮಾಜಿ ಸಂಸದರು	ಬೆಂಗಳೂರು.
೨. ಬಸವರಾಜಪ್ಪ	೫೫	ಮಾಜಿ ಶಾಸಕರು	ಹೊಸದುರ್ಗ
೩. ಪಾಲನೇತ್ರ	೫೦	ಅಭಿಯಂತರರು ಕ.ನೀ.ನಿ. ಬೆಂಗಳೂರು.	ಬೆಂಗಳೂರು.
೪. ಪುಟ್ಟರಾಜ	೪೦	ಸಹಾಯಕ ಅಭಿಯಂತರರು ಭದ್ರಾ ಮೇಲ್ದಂಡೆ ಯೋಜನೆ ಕಛೇರಿ, ಚಿತ್ರದುರ್ಗ	ಚಿತ್ರದುರ್ಗ
೫. ಕಣಮಪ್ಪ	೪೦	ಸಹಾಯಕ ಅಭಿಯಂತರರು ಭದ್ರಾ ಮೇಲ್ದಂಡೆ ಯೋಜನೆ ಕಛೇರಿ, ಶಿವಮೊಗ್ಗ	ಹಿರಿಯೂರು
೬. ಬಸವರಾಜಪ್ಪ	೫೫	ಪ್ರಧಾನ ಕಾರ್ಯದರ್ಶಿ, ರಾಜ್ಯ ರೈತ ಸಂಘ, ಶಿವಮೊಗ್ಗ	ಶಿವಮೊಗ್ಗ
೭. ಎಂ. ಜಯಣ್ಣ	೪೬	ವಕೀಲರು ಹಾಗೂ ಅಧ್ಯಕ್ಷರು ನೀರಾವರಿ ಹೋರಾಟ ಸಮಿತಿ, ಚಿತ್ರದುರ್ಗ.	ಚಿತ್ರದುರ್ಗ
೮. ಡಾ. ಬಂಜಗೆರೆ ಜಯಪ್ರಕಾಶ್	೪೪	ಪರಿಸರವಾದಿ ಹಾಗೂ ಸಂಚಾಲಕರು, ನಿ.ಹೋ.ಸಮಿತಿ	ಬಂಜಗೆರೆ
೯. ಚಿಕ್ಕಪ್ಪನಹಳ್ಳಿ ಷಣ್ಮುಖ	೪೭	ಪತ್ರಕರ್ತರು ಹಾಗೂ ಸಂಚಾಲಕರು, ನಿ.ಹೋ.ಸಮಿತಿ	ಚಿಕ್ಕಪ್ಪನಹಳ್ಳಿ
೧೦. ಕೆ.ಆರ್.ದಯಾನಂದ	೪೨	ಅಭಿಯಂತರರು ಹಾಗೂ ಖಜಾಂಚಿ, ನಿ.ಹೋ.ಸಮಿತಿ	ಚಿತ್ರದುರ್ಗ

೧೧.	ಕಸವನಹಳ್ಳಿ ರಮೇಶ್	೪೦	ಅಧ್ಯಕ್ಷರು, ರಾಜ್ಯ ರೈತ ಸಂಘ ಹಿರಿಯೂರು.	ಹಿರಿಯೂರು
೧೨.	ಈರಣ್ಣ ಎಂ.	೫೦	ಕಾರ್ಯದರ್ಶಿ, ರಾ.ರೈ.ಸಂಘ	ಹಿರಿಯೂರು
೧೩.	ಪುಟ್ಟಲಿಂಗಪ್ಪ	೫೦	ಮುಖಂಡರು, ರಾ.ರೈ.ಸಂಘ	ವಾಣಿವಿಲಾಸಪುರ
೧೪.	ಈಚಘಟ್ಟ ಸಿದ್ಧವೀರಪ್ಪ.	೫೨	ಮುಖಂಡರು, ರಾ.ರೈ.ಸಂಘ	ಈಚಘಟ್ಟ

ಪರಾಮರ್ಶನ ಗ್ರಂಥಗಳು

೧. ಅನಂತರಾಮರಾವ್. ಕೆ. : ಸುವರ್ಣ ಕರ್ನಾಟಕ ದರ್ಶನ (೫೦ ಸಂವತ್ಸರಗಳು) ವಿದ್ಯಾ ಪಬ್ಲಿಷಿಂಗ್ ಹೌಸ್, ಮಂಗಳೂರು – ೨೦೦೬.

೨. ಅನಂತರಾಮು.ಟಿ.ಆರ್.: ಸರಸ್ವತೀ ನದಿ, ಪುರಾಣ, ಇತಿಹಾಸ, ವಿಜ್ಞಾನ, ನವಕರ್ನಾಟಕ ಪ್ರಕಾಶನ – ೨೦೦೫.

೩. ಅನಂತರಾಮು.ಟಿ.ಆರ್.: ನಮ್ಮ ಜಲಸಂಪನ್ಮೂಲಗಳು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ – ೧೯೯೫.

೪. ಅನಂತರಾಮು.ಟಿ.ಆರ್.: ಕಾವೇರಿ ಹರಿದು ಬಂದ ದಾರಿ, ದಿಕ್ಸೂಚಿ ಪ್ರಕಾಶನ, ಬೆಂಗಳೂರು, ೧೯೯೭.

೫. ಆದ್ಯ ರಾಮಾಚಾರ್ಯ: ಪುಣ್ಯ–ಪ್ರವಾಹ, ಗಂಗಾ, ಸಿಂಧೂ, ಸರಸ್ವತಿ, ಯಮುನಾ, ಗೋದಾವರಿ, ಬ್ರಹ್ಮಪುತ್ರ, ಕೃಷ್ಣ, ನರ್ಮದಾ, ಕಾವೇರಿ, ವರದರಾಜ ಪ್ರಕಾಶನ, ಬೆಂಗಳೂರು– ೨೦೦೩.

೬. ಅವಲಮೂರ್ತಿ ಎ.ಓ.: ಅದ್ಭುತ ದ್ರವ ನೀರು, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ ಬೆಂಗಳೂರು – ೨೦೦೨.

೭. ಅವಲಮೂರ್ತಿ ಎ.ಓ: ಬದಲಿ ಶಕ್ತಿ ಮೂಲಗಳು. ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ ೧೯೯೮.

೮. ಆರ್ಕೆ ಮಣಿಪಾಲ್ : ಸಾಮಾಜಿಕ ಚಳವಳಿಗಳು, ನವಕರ್ನಾಟಕ ಪ್ರಕಾಶನ–೧೯೯೭.

೯. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ಒಂದು, ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ ೧೯೮೪.

೧೦. ಕಾವೇರಿ ವಿವಾದದ ಜಲ ಅಥವಾ ವಿಭೇದದ ಜಾಲ? ಪ್ರಕಟಣೆ; ಕರ್ನಾಟಕ ವಿಮೋಚನ ರಂಗ ೧೯೯೨.

೧೧. ಕಾವೇರಿ ಜಲ ವಿವಾದ ನೀರಿಗಾಗಿ ಶತಮಾನ ತೀರದ ಬವಣೆ, ಪ್ರಕಟಣೆ ನೀರಾವರಿ ಇಲಾಖೆ ಬೆಂಗಳೂರು.

೧೨. ಗಂಗಾಧರ ಬ. ದೊಡಕುಂಡಿ: ಕುಡಿಯುವ ನೀರು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ೧೯೯೦.

೧೩. ಗಾಯಿತ್ರಿ ಮೂರ್ತಿ : ನೀರು, ನವಕರ್ನಾಟಕ ಪ್ರಕಾಶನ, ಬೆಂಗಳೂರು ೧೯೯೪.

೧೪. ಗಿರಿಜ. ಟಿ. : ಚಿತ್ರದುರ್ಗ ಜಿಲ್ಲಾ ದರ್ಶಿನಿ, ರೇಖಾ ಪ್ರಕಾಶನ, ದಾವಣಗೆರೆ.

೧೫. ಗಿರಿಜಿ. ಟಿ. : ಭಾರತದ ನದಿಗಳು, ನಿಹಾರಿಕಾ ಪ್ರಕಾಶನ, ದಾವಣಗೆರೆ ೨೦೦೭.

೧೬. ಗೋವಿಂದಯ್ಯ.ಟಿ. : ಕರ್ನಾಟಕ ನೀರಾವರಿ ಅರ್ಥಶಾಸ್ತ್ರ, ಸಮಾಜವಿಜ್ಞಾನಗಳ ಸಂಶೋಧನಾ ಸಂಸ್ಥೆ, ಬೆಂಗಳೂರು.

೧೭. ಗೋವಿಂದಯ್ಯ. ಟಿ: ಆತಂಕದ ಹಂತದಲ್ಲಿ ಕರ್ನಾಟಕ ಅಂತರ್ಜಲ ಮತ್ತು ಗ್ರಾಮೀಣ ಅಭಿವೃದ್ಧಿ, ಸಮಾಜ ವಿಜ್ಞಾನಗಳ ಸಂಶೋಧನ ಸಂಸ್ಥೆ, ಬೆಂಗಳೂರು, ೧೯೯೫.

೧೮. ಗೋವಿಂದಯ್ಯ. ಟಿ. : ರಾಜಕೀಯ ಸುಳಿಯಲ್ಲಿ ಆಲಮಟ್ಟಿ ಅಣೆಕಟ್ಟು, ಸಮಾಜವಿಜ್ಞಾನಗಳ ಸಂಶೋಧನ ಸಂಸ್ಥೆ, ಬೆಂಗಳೂರು.

೧೯. ಗೋವಿಂದಯ್ಯ. ಟಿ: ಅಂತರ್ಜಲ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೦. ಗೋಪಾಲಕೃಷ್ಣ ಹೆಗಡೆ, ಅಘನಾಶಿನಿ, ಐ.ಓ.ಎಚ್.ಪ್ರಕಾಶನ, ಗಾಂಧಿನಗರ, ಬೆಂಗಳೂರು.

೨೧. ಚಂದ್ರಪೂಜಾರಿ. ಎಂ.: ಸಮುದಾಯ ಮತ್ತು ಸಹಭಾಗಿತ್ವ, ಕೆರೆ ನೀರಾವರಿ ನಿರ್ವಹಣೆಯಲ್ಲಿ ಸಹಭಾಗಿತ್ವ., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಚಂದ್ರಶೇಖರ್. ಹೆಚ್. ಕರ್ನಾಟಕದಲ್ಲಿ ಜಲಸಂಪತ್ತು ಮತ್ತು ನೀರಾವರಿ, ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

೨೩. ಜಗನ್ನಾಥ ಪ್ರಕಾಶ.ಎನ್.: ಕೋಲಾರ ಶಿರಿಸಂಪುಟ, ಅಂತರಗಂಗೆ ಪ್ರಕಾಶನ, ಬೆಂಗಳೂರು ೨೦೦೧.

೨೪. ಜ್ಞಾನಗಂಗೋತ್ರಿ, ಕಿರಿಯರ ವಿಶ್ವಕೋಶ ೧, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ೧೯೭೦.

೨೫. ಅದೇ ಸಂಪುಟ ೭ – ೧೯೭೪

೨೬. ದೊರೈಸ್ವಾಮಿ ಆರ್.: ರಾಷ್ಟ್ರೀಯ ಜಲನೀತಿ ೨೦೦೭, ಪ್ರಗತಿ ಮತ್ತು ಜಲಸ್ಪಂದನ ಸಂಸ್ಥೆಗಳು, ಬೆಂಗಳೂರು, ೨೦೦೪.

೨೭. ದೊರೈಸ್ವಾಮಿ. ಆರ್. ಮತ್ತು ಭವಾನಿಶಂಕರ್, ಬಿ.ಎಸ್. : ನೀರಾವರಿ ನೀತಿ ಸುಧಾರಣೆಗಳು, ನೈಸರ್ಗಿಕ ಸಂಪನ್ಮೂಲಗಳು ಸಹಭಾಗಿತ್ವ ನಿರ್ವಹಣೆ ಸಂಸ್ಥೆ, ಬೆಂಗಳೂರು.

೨೮. ನಾಗೇಶ್.ಎಚ್.ವಿ.: ಸಾಮಾಜಿಕ ಚಳವಳಿಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯.

೨೯. ನಾರಾಯಣ. ಎಂ. ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಬದಲಾವಣೆ, ಚೇತನ್ ಬುಕ್ ಹೌಸ್, ಮೈಸೂರು ೨೦೦೪.

೩೦. ನಿರಂಜನ, ಎಚ್.ಎಸ್. ಆರಾಧ್ಯ, ಎಸ್.ರವಿ, ಚಂದ್ರರೆಡ್ಡಿ : ನಮ್ಮ ಪರಿಸರ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ೧೯೯೦.

೩೧. ನಾ. ಡಿಸೋಜ, ಜೋಗ ಜಲಪಾತ, ಮೊದಲ ನೂರು ವರ್ಷಗಳು, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು ೨೦೦೩.

೩೨. ನಂಜಣ್ಣವರ. ಎಸ್.ಎಸ್. ಕರ್ನಾಟಕ ಭೂಗೋಳಶಾಸ್ತ್ರ, ದಿಕ್ಸೂಚಿ ಪ್ರಕಾಶನ, ಬೆಂಗಳೂರು ೧೯೯೯.

೩೩. ಪೋಲಿಸ್ ಪಾಟೀಲ. ಆರ್.ಎಲ್., ನೀರಾವರಿ ಮತ್ತು ರೈತರ ಅಭಿವೃದ್ಧಿ, ಜ್ಞಾನಪ್ರಕಾಶನ, ಪುರ, ಹೂವಿನಹಡಗಲಿ ತಾಲ್ಲೂಕು.

೩೪. ಪಾಟೀಲ.ಸಿ.ಡಿ.: ದ್ರವ ಬಂಗಾರ ನೀರು; ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೭.

೩೫. ಯದುಪತಿ ಪುಟ್ಟಿ; ಮಳೆ, ವಿಶ್ವೇಶ್ವರಯ್ಯ ತಾಂತ್ರಿಕೆ, ವಿಶ್ವವಿದ್ಯಾಲಯ, ಬೆಳಗಾವಿ. ೨೦೦೩.

೩೬. ರಾಜರಾಮ ಹೆಗಡೆ: ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಕನ್ನ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೭. ಬಾಗೂರು ಆರ್. ನಾಗರಾಜಪ್ಪ : ಹೊಸದುರ್ಗದ ಸುತ್ತ, ಅಭಿವ್ಯಕ್ತಿ ವೇದಿಕೆ, ಹೊಸದುರ್ಗ, ೧೯೮೪.

೩೮. ಲಯೀಖ್ ಫತೇ ಆಲಿ: ನಮ್ಮ ಪರಿಸರ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.

೩೯. ವೆಂಕಟರೆಡ್ಡಿ ಎಂ.: ಕರ್ನಾಟಕದಲ್ಲಿ ನೀರಾವರಿ ಅಭಿವೃದ್ಧಿ: ಸಮಸ್ಯೆಗಳು ಮತ್ತು ಸಂಧಿಗ್ದಗಳು, ಕನ್ನಡ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೦. ಶರ್ಮ.ಎ.ಅರ್.; ಸಾಮಾಜಿಕ ಚಳವಳಿ ಮತ್ತು ಬದಲಾವಣೆ. ಅಖಿಲಾ ಏಜೆನ್ಸೀಸ್. ಮೈಸೂರು–೨೦೦೭

೪೧. ಶೇಷನಾರಾಯಣ: ನಮ್ಮ ನದಿಗಳು ಮತ್ತು ಸಮಸ್ಯಗಳು. ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು ೨೦೦೬

೪೨. ಶೇಷನಾರಾಯಣ: ಕಾವೇರಿ ಒಂದು ಚಿಮ್ಮು ಒಂದು ಹೊರಳು. ಭಾಗ್ಯ ಲಕ್ಷ್ಮೀ ಪ್ರಕಾಶನ, ಬೆಂಗಳೂರು. ೨೦೦೭

೪೩. ಶ್ರೀ ಪಡ್ರೆ :ಹನಿಗೂಡಿಸುವ ಹಾದಿಯಲ್ಲಿ. ಉಳಿವಿಗೆ ಜನಾಂದೋಲನ ಮಾರ್ಗದರ್ಶಿ ಪ್ರಕಾಶನ, ಮಂಗಳೂರು ೨೦೦೧

೪೪. ಶ್ರೀ ಪಡ್ರೆ :ನೆಲ, ಜಲ, ಉಳಿಸಿ, ಪ್ರಕಾಶಕರು ದ.ಕ.ಪರಿಸರ ಪಕ್ಷ ಕೃಷಿಕರ ವೇದಿಕೆ

೪೫. ಶಿವಚಿತ್ತಪ್ಪ. ಒಡೆಯರ್ ಡಿ.ಹೆಗಡೆ.: ಪರಿಸರ ಪದಕೋಶ ಲಕ್ಷ್ಮಿ ಪ್ರಿಂಡಿಂಗ್ ಅಂಡ್ ಪಬ್ಲಿಷಿಂಗ್ ಹೌಸ್. ೨೦೦೭

೪೬. ಶೇಖರ ಇಡ್ಯ : ನೇತ್ರಾವತಿ. ಏಬಿ.ಎಚ್ ಪ್ರಕಾಶನ ಗಾಂಧಿನಗರ ಬೆಂಗಳೂರು ೧೯೮೩.

೪೭. ವಾಸುದೇವರಾವ್ : ಕರ್ನಾಟಕದ ನದಿಗಳು, ಸ್ವಪ್ನ ಬುಕ್ ಹೌಸ್, ೨೦೦೩.

೪೮. ಶಾಸ್ತ್ರೀ. ಜಿ.ವಿ. ಸಂಪೂರ್ಣ ಭಾರತ ದರ್ಶನ, ಪಾರು ಪ್ರಕಾಶನ, ಗದಗ, ೨೦೦೧.

೪೯. ಶ್ರೀಧರ ಆಡಿಗ : ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕೃಷಿ ವಿಕಾಸ್ ಪಬ್ಲಿಕೇಷನ್ಸ್, ಬೆಂಗಳೂರು ೨೦೦೬.

೫೦. ವಿರೂಪಾಕ್ಷಿ ಪೂಜಾರಹಳ್ಳಿ : ಜಲಸಂಬಂಧಿ ಚಳವಳಿಗಳು, ಭಾಗ ಎರಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೫೧. ವಿರೂಪಾಕ್ಷಿ ಪೂಜಾರಹಳ್ಳಿ : ಚಿನ್ನಹಗರಿ ಸಿರಿ, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ, ೨೦೦೬.

೫೨. ವಿದ್ಯಾನಂದ ಶೆಣೈ : ಭಾರತ ದರ್ಶನ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು ೨೦೦೩.

೫೩. ವೆಂಕಟರಾವ್.ಆರ್. ಒಕ್ಕಲಿಗನ ಕೂಗು, ಪ್ರಕಾಶಕರು, ಗಾಂಧಿ ದುನಿಯಾ, ಹೈದ್ರಬಾದ್,

೫೪. ಸೂರ್ಯಕಾಂತ, ವಿಶ್ವವಿಖ್ಯಾತ, ಒಳನಾಡ ಜಲರಾಶಿ, ನವಕರ್ನಾಟಕ ಪ್ರಕಾಶನ, ೧೯೯೧.

೫೫. ಸಿದ್ದರಾಮ ಪೋಲಿಸ್ ಪಾಟೀಲ.ಬಿ.ಇ. : ಭೂಗರ್ಭಜಲ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ ೧೯೯೬.

೫೬. ಶೇಷಗಿರಿ ರಾವ್: ಕಿರಿಯರ ಕರ್ನಾಟಕ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೫೭. ತಂಬಂಡ ವಿಜಯ್ ಪೂಣಚ್ಚ, ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ–೪, ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೫೮. ಸಂ. ಡಾ. ಸೂರ್ಯನಾಥ್ ಕಾಮತ್., ಪಿ.ವಿ.ಕೃಷ್ಣಮೂರ್ತಿ, ಇತಿಹಾಸ ದರ್ಶನ, ಸಂಪುಟ ೧೦, ೧೯೯೫, ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು.

೫೯. ಸಂ. ಲೋಕೇಶ್ ಅಗಸನಕಟ್ಟೆ, ತರಳುಬಾಳು ಹುಣ್ಣಿಮೆ, ಸ್ಮರಣ ಸಂಚಿಕೆ, ೨೦೦೫, ಚಿತ್ರದುರ್ಗ.

೬೦. ಸಿದ್ಧನಗೌಡ.ಕೆ., ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಎಂ.ಫಿಲ್. ನಿಬಂಧ.

೬೧. ಎಂ. ವೆಂಕಟೇಶ್., ನೀರಾವರಿ ನಿರ್ವಹಣೆಯಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳ ಪಾತ್ರ, (ಭದ್ರಾ ಅಚ್ಚುಕಟ್ಟು ಪ್ರದೇಶದ ಒಂದು ಅಧ್ಯಯನ). ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಿದ ಪಿಎಚ್.ಡಿ. ಮಹಾಪ್ರಬಂಧ.

ದಿನ ಪತ್ರಿಕೆಗಳು.

ಕನ್ನಡ ಪ್ರಭ, ಸಂಯುಕ್ತಕರ್ನಾಟಕ, ಪ್ರಜಾವಾಣಿ, ವಿಜಯಕರ್ನಾಟಕ, ಜನವಾಹಿನಿ, ಪ್ರಜಾಪ್ರಗತಿ, ಸಂಜೆವಾಣಿ, ಉದಯವಾಣಿ, ಡೆಕನ್ ಹೆರಾಲ್ಡ್.


ವರದಿಗಳು

೧. ಜಿ.ಎಸ್. ಪರಮಶಿವಯ್ಯ : ಭದ್ರಾ ಮೇಲ್ದಂಡೆ ಯೋಜನೆ, ಪರ್ಯಾಯ ಯೋಜನೆ ವಾಸ್ತವಾಂಶಗಳು, ೨೦೦೩.

೨. ಎಸ್.ಜಿ.ಬಾಳೇಕುಂದ್ರಿ, ಕೃಷ್ಣಾ ಕಣಿವೆಯ ನೀರಿನ ಅತ್ಯುತ್ತಮ ಬಳಕೆ, ಶಿವಕಮಲ ಬಾಳೇಕುಂದ್ರಿ ಪ್ರತಿಷ್ಠಾನ(ರಿ), ೧೭೮೫.

೩. ಭದ್ರಾ ಮೇಲ್ದಂಡೆ ಯೋಜನೆ 'ಎ' ಸ್ಕೀಂ, ಕೆ.ಸಿ.ರೆಡ್ಡಿ ವರದಿ, ೨೦೦೬.

೪. ತುಂಗಾ ಮತ್ತು ಭದ್ರಾ ನದಿಗಳ ಹುಟ್ಟು ಪಾತ್ರ ಹಾಗೂ ಜಲಚರಗಳ ಕುರಿತ ವಿಶ್ಲೇಷಣಾತ್ಮಕ ಅಧ್ಯಯನ, ಅಪ್ರಕಟಿತ ವರದಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.



LEGEND

1	Command Area Chitradurga Branch Canal	
2	Bhadra Wild life Sanctuary	
3	Reservoir	
4	Rising Main, Open Channel	
5	Dam, Tunnel	
6	Canal, Pipeline Jack Well, Delivery Chamber	

Proposal :-

STAGE-I :-
LINK CANAL (Tunga to Bhadra)
Lift From Tunga in 2 Stages To Bhadra Reservoir (15TMC)

STAGE-II :-
UPPER BHADRA MAIN CANAL
Lift From Bhadra Reservoir in 3 Stages to Chitradurga Branch Canal (21.5tmc)

STAGE-III :-
CHITRADURGA BRANCH CANAL
Chitradurga Branch Canal & Its Distributory Network
Khariff Area-1,02,803 Ha (Khariff Semidry)
Stabilisation of Existing M I Tanks in the Command Area of Chitradurga Branch Canal (Chikmagalur and Chitradurga Districts)

STAGE-IV :-
WATER SUPPLY SCHEME TO TUMKUR AND KOLAR DISTRICT
Water Supply Scheme to Sira, Koratagere and Madhugiri Taluks of Tumkur dist.and Kolar Taluk of Kolar Dist.

WATER ALLOCATION


1.	Irrigation Facility to Chikmagalur and Chitradurga Dist.	13.88 TMC
2.	Stabilisation of Existing M I Tanks in the Command Area of Chitradurga Branch Canal (Chikmagalur and Chitradurga Districts)	2.02 TMC
3.	Water Supply Scheme to Sira, Koratagere and Madhugiri Taluks of Tumkur Dist. and Kolar Taluk of Kolar Dist.	5.60 TMC
	Total	21.50 TMC

KARNATAKA NEERAVARI NIGAM LIMITED
(A GOVT. OF KARNATAKA UNDERTAKING)

INDEX MAP SHOWING UPPER BHADRA PROJECT 'SCHEME-A' AND WATER SUPPLY SCHEME TO TUMKUR AND KOLAR DISTRICTS

SCALE: 10 0.0 10 20 30 40 50KM
5.0 1:10,00,000 1CM=10KM

ಕೃಪೆ: ಕೆ.ಸಿ. ರೆಡ್ಡಿ ವರದಿ




ಭದ್ರಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಭದ್ರ ಜಲಾಶಯ (ಲಕ್ಕವಳ್ಳಿ)



ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಆಗ್ರಹಿಸಿ ವಿದ್ಯಾರ್ಥಿಗಳು ಹೋರಾಟಕ್ಕೆ ಕೈ ಜೋಡಿಸಿರುವುದು




ಚಿತ್ರದುರ್ಗದಲ್ಲಿ ನಡೆದ ಹೋರಾಟವನ್ನು ಉದ್ದೇಶಿಸಿ ಮಾತನಾಡುತ್ತಿರುವ ಶಾಸಕ ತಿಪ್ಪಾರೆಡ್ಡಿ ಮತ್ತಿತರರು



ಹಿರಿಯೂರಿನಲ್ಲಿ ನಡೆಯುತ್ತಿರುವ ಸರಧಿ ಉಪವಾಸ ಸತ್ಯಾಗ್ರಹ ಸ್ಥಳಕ್ಕೆ ಭೇಟಿ
ನೀಡಿರುವ ಸಚಿವೆ ಶೋಭಾ ಕರಂದ್ಲಾಜೆ (೨೦೦೭)



ಪ್ರತಿಭಟನೆಗೆ ಬೆಂಬಲ ನೀಡಿದ ಮಹಿಳೆಯರು ಮತ್ತು ಮಕ್ಕಳು (೨೦೦೬)



ಹಿರಿಯೂರಿನಲ್ಲಿ ಯೋಜನೆಗೆ ಆಗ್ರಹಿಸಿ ರಸ್ತೆ ತಡೆ ಚಳವಳಿ (೨೦೦೮)



೧೦ ಆಗಸ್ಟ್ ೨೦೦೭ರಂದು ಭದ್ರಾ ಮೇಲ್ದಂಡೆ ಯೋಜನೆಗೆ ಆಗ್ರಹಿಸಿ ಹಿರಿಯೂರು ಬಂದ್ ಸಂದರ್ಭದಲ್ಲಿ ಮೆರವಣಿಗೆಯಲ್ಲಿ ಸಾಗಿದ ಜನಸ್ತೋಮ



ಬಂದ್ ಸಂದರ್ಭದಲ್ಲಿ ಹಿರಿಯೂರಿನ ಅಂಗಡಿ ಮುಗ್ಗಟ್ಟುಗಳು ಮುಚ್ಚಿರುವುದು



೧೦ ಆಗಸ್ಟ್ ೨೦೦೭ರಂದು ಭದ್ರಾ ಮೇಲ್ದಂಡೆ ಯೋಜನೆಗೆ ಆಗ್ರಹಿಸಿ ಹಿರಿಯೂರು ಬಂದ್ ಸಂದರ್ಭದಲ್ಲಿ ತಾಲ್ಲೂಕುವಿಭಾಗಾಧಿಕಾರಿಗಳಿಗೆ ಮನವಿ ನೀಡುತ್ತಿರುವುದು



ನಡೆದ ಭದ್ರಾ ಮೇಲ್ದಂಡೆ ಯೋಜನಗೆ ಆಗ್ರಹಿಸಿ ಚಳ್ಳಕೆರೆಯಲ್ಲಿ ವಿವಿಧ ಸಂಘಟನೆಗಳು
ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸುತ್ತಿರುವುದು (೨೦೦೬)



ನಡೆದ ಚಿತ್ರದುರ್ಗದಲ್ಲಿ ಸರಧಿ ಧರಣೆ ನೇತೃತ್ವ ವಹಿಸಿಕೊಂಡು ಪ್ರತಿಭಟನೆಗಳಿಂದ
ಜಿಲ್ಲಾ ವಕೀಲರ ಸಂಘ (೨೦೦೬)




ನಡೆದ ಧರಣಿನಿರತ ವಾಕಿಂಗ್ ಫ್ರೆಂಡ್ಸ್ ಗ್ರೂಪ್ (೨೦೦೬)



ಭದ್ರಾ ಮೇಲ್ದಂಡೆ ಯೋಜನೆಗೆ ಆಗ್ರಹಿಸಿ ಹಿರಿಯೂರಿನಲ್ಲಿ ಸರದಿ ಉಪವಾಸ ಸತ್ಯಾಗ್ರಹಕ್ಕೆ ಕೂತಿರುವ ಜನತೆ



ಹಿರಿಯೂರು ಬಂದ್ ಮಾಡಲು ಸಮಾಲೋಚನೆ ನಡೆಸುತ್ತಿರುವ ರೈತ ಸಂಘ
ಹಾಗೂ ವಿವಿಧ ಸಂಘ ಸಂಸ್ಥೆಯ ಸದಸ್ಯರು



೧೦ ಆಗಸ್ಟ್ ೨೦೦೭ರಂದು ಹಿರಿಯೂರು ಬಂದ್ ಸಂದರ್ಭದಲ್ಲಿ ಜನತೆಯನ್ನು ಉದ್ದೇಶಿಸಿ
ಮಾತನಾಡುತ್ತಿರುವ ಮಾಜಿ ಸಂಸದ ಕೋದಂಡರಾಮಯ್ಯ










ಚಿತ್ರದುರ್ಗದಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಕಚೇರಿ ಉದ್ಘಾಟಿಸುತ್ತಿರುವ
ನೀರಾವರಿ ಸಚಿವ ಈಶ್ವರಪ್ಪ ಹಾಗೂ ಸಚಿವ ಬಸವರಾಜ ಹೊರಟ್ಟಿ (೨೦೦೬)



ಹಿರಿಯೂರಿನಲ್ಲಿ ಧರಣಿನಿರತ ರೈತ ಸಂಘ (೨೦೦೬)



೧೭.೦೯.೨೦೦೭ರಂದು ಹಿರಿಯೂರಿನಲ್ಲಿ ವಾಣಿ ವಿಲಾಸ ಜಲಾಶಯಕ್ಕೆ ನೀರು ಹರಿಸುವ ಬಗ್ಗೆ ರೈತ ಸಂಘದೊಂದಿಗೆ
ಅಂತಾರಾಜ್ಯ ಜಲವಿವಾದ ವಿಭಾಗದ ಮುಖ್ಯ ಎಂಜಿನಿಯರ್ ಬಂಗಾರಸ್ವಾಮಿ ಸಮಾಲೋಚನೆ ನಡೆಸುತ್ತಿರುವುದು